ಸಂವಾದ

[redacted] - ಆಗಸ್ಟ್ ೨೦೦೫ ರೂ. ೨೦

ಮಹಿಳೆ ಮತ್ತು ಸಾಂಸ್ಕೃತಿಕ ಭ್ರೂಣ ಹತ್ಯೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೩ ಸಂಚಿಕೆ ೯-೧೦
ಜುಲೈ-ಆಗಸ್ಟ್ ೨೦೦೫

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ|| ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...

❑ ಪತ್ರಗಳು ೩
❑ ವಿಶೇಷಾಂಕ ಪತ್ರಗಳು ೪
❑ ಅಂತರಂಗ ೫
❑ ಸಂಪಾದಕರೊಂದಿಗೆ ಸಂವಾದ ೬
○ ಸುಜಾತ ಲಕ್ಷ್ಮೀಪುರ
❑ ಮಹಿಳೆ ಮತ್ತು ಸಾಂಸ್ಕೃತಿಕ ಭ್ರೂಣಹತ್ಯೆ ೮
○ ಡಾ|| ವಸು
❑ ಅಮೇರಿಕ ಒಂದು ದಗಾಕೋರ ರಾಷ್ಟ್ರ? ೧೨
○ ಡಿ.ರಾಯ್, ಜಯ

❑ ಪ್ರಾಥಮಿಕ ಶಿಕ್ಷಣ - ಇಂಗ್ಲೀಷ್ ಕಲಿಕೆ ೧೪
○ ನಾ. ದಿವಾಕರ್
❑ ಇಂಗ್ಲೀಷ್ ಕಲಿಕೆಯೆಂಬ ಮಾಯಾಜಿಂಕೆ ೧೬
○ ಶಿವ ಸುಂದರ್
❑ ಧರೆಗೆ ದೊಡ್ಡವರು: ಒಂದು ಓದು ೧೯
○ ಮಾಯಣ್ಣ ಸ್ವಾಮಿ.ಕೆ
❑ ಕೃಷಿ-ಮಾರುಕಟ್ಟೆಯಲ್ಲಿ ಬಾಲಕಾರ್ಮಿಕರು ೨೨
○ ವಿಠೋಬ ಭೀಮಣ್ಣ, ಶಿವರಾಜ ಬಿ.ಕೆ
❑ ಶೂನ್ಯ ಬಂಡವಾಳ-ಸಮೃದ್ಧ ಬೆಳೆ ೨೬
○ ಸ್ವಾಮಿ ಆನಂದ್.ಆರ್
❑ ಹಿಂದುತ್ವ ಮತ್ತು ದಲಿತ ಪರಿಕಲ್ಪನೆ ೩೨
○ ವಾಸುದೇವ ಬೆಳ್ಳೆ
❑ ಕಾರ್ಖಾನೆ ಕಾಯಿದೆ
೩೩
○ ಜಿ.ಪಾಂಡು ನಾಯಕ್

❑ ದಲಿತ ಶರಣ-ವಚನಕಾರರು ೩೬
○ ಶಂಕರ ಮ.ಪಾಟೀಲ
❑ ಜಾಗತೀಕರಣ ಮತ್ತು ದೇಶೀದಂಗೆ ೪೦
○ ಡಾ|| ಅರವಿಂದ ಮಾಲಗತ್ತಿ
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್
❑ ಹೊಸ ಪುಸ್ತಕ ೪೯
❑ ಸಮುದಾಯ ಮತ್ತು ಜನತಂತ್ರ ೫೦
○ ಕೆ.ವಿ. ಸುಬ್ಬಣ್ಣ
❑ ಬುದ್ಧಾಯಣ ೫೮
○ ಸಿ.ಎಚ್. ರಾಜಶೇಖರ್

ಕವನಗಳು : ❑ ಬೆಳಗು-ಬೆರಗು ೩ ❑ ಹತ್ತರ ನೋಟುಗಳು ೨೫

ಮುಖಪುಟ ಕಲೆ - ವಿನ್ಯಾಸ : ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

‘ಶಬ್ಧವಿಲ್ಲದ ಯುದ್ಧ’ ದ ರಾಕ್ಷಸ

ಪ್ರೀತಿಯ ಇಂದೂಧರ ಅವರೇ,

ಪ್ರೊ. ಬರಗೂರು ರಾಮಚಂದ್ರಪ್ಪ ನವರ ‘ಶಬ್ಧವಿಲ್ಲದ ಯುದ್ಧ’ ಓದಿದೆ. ಜಾಗ ತೀಕರಣ ಎಷ್ಟು ವಿಷಮಯವಾದುದು ಎಂಬುದರ ಅರಿವಾಗಬೇಕಾದರೆ ಈ ಲೇಖನ ವನ್ನು ಓದಬೇಕು, ಎಲ್ಲವನ್ನು ಮುಕ್ತತೆಗೆ ಒಡ್ಡುವ ಮೂಲಕ ಮನುಷ್ಯನ ಅಂತರಂಗ ವನ್ನೇ ಬಲಿತೆಗೆದುಕೊಳ್ಳುವ ರಾಕ್ಷಸನಾಗಿ ಜಾಗತೀಕರಣ ನಮ್ಮ ಎದುರು ನಿಂತಿದೆ.

ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹೀಗೆ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅದು ತನ್ನ ಕದಂಬ ಬಾಹುಗಳನ್ನು ಚಾಚಿದೆ, ಕೃಷಿ ಕ್ಷೇತ್ರ ಕೂಡ ಇದರ ಕೆನ್ನಾಲಿಗೆಗೆ ಸಿಕ್ಕು ತತ್ತರಿಸಿ ಹೋಗಿದೆ ಈಗಾಗಲೇ ರೈತ ಸಾಲಕ್ಕಾಗಿ ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾನೆ, ಜಾಗತೀಕರಣದಿಂದಾಗಿ ಇಡೀ ಹಳ್ಳಿಗಳೇ ಆತ್ಮಹತ್ಯೆ ಮಾಡಿಕೊಂಡರೆ ಆಶ್ಚರ್ಯ ಪಡಬೇಕಾಗಿಲ್ಲ

ಜಾಗತೀಕರಣವು ಪ್ರಶ್ನೆಗಳನ್ನು ಹತ್ತಿಕ್ಕುವ ಉಪಾಯದ ವ್ಯವಸ್ಥೆ, ಮುಕ್ತ ಆರ್ಥಿಕ ಪದ್ಧತಿಯಲ್ಲಿ ಪ್ರಶ್ನೆಗಳನ್ನು ಅಪ್ರಸ್ತುತಗೊಳಿಸಲಾಗುತ್ತದೆ. ಸ್ಪರ್ಧೆಯನ್ನು ಪ್ರಸ್ತುತಗೊಳಿಸಿ, ಅದನ್ನೇ ಆದರ್ಶವೆಂದು ಸಾರಲಾಗುತ್ತದೆ. ಸ್ಪರ್ಧೆ ಎಂದರೆ ಸೃಜನಶೀಲ ಸ್ಪರ್ಧೆಯಲ್ಲ. ಮಾರುಕಟ್ಟೆಯ ಸ್ಪರ್ಧೆ, ಸ್ಪರ್ಧೆಯಲ್ಲಿ ಲಾಭಕೋರತನವೇ ಮಾರ್ಗ ಮತ್ತು ಗುರಿ. ಇದರ ಫಲವಾಗಿ ಮನಸ್ಸೇ ಮಾರುಕಟ್ಟೆಯಾಗುವ ಅಪಾಯ ಉಂಟಾ ಗುತ್ತದೆ. ಮನಷ್ಯರನ್ನು ಅಳೆಯುವ ಮಾನ ದಂಡ ಆದಾಯವಾಗುತ್ತದೆ’ ಎಂಬ ಬರಗೂರರ ಮಾತು ಸೂರ್ಯ ಪ್ರಕಾಶದಷ್ಟೆ ನಿಚ್ಚಳವಾಗಿದೆ.

ಶಿವರಾಂ ಗೋಣಿಬೀಡು, ಹಾಸನ,

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ ಉದ್ಯಮಿಗಳಿಗೆ	ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಒ. /ಡಿ.ಡಿ. ಮಾತ್ರ ಕಳುಹಿಸಬೇಕು.

ಯಾರು ಜಾತಿವಾದಿಗಳಲ್ಲ?

ಪ್ರಿಯ ಸಂಪಾದಕರೇ,

‘ದಲಿತ ಡೈರಿ’ಯಲ್ಲಿ ‘ಜಾತಿಗಣ ರಾಜ್ಯ’ಗಳನ್ನು ಕುರಿತಂತೆ ಚಂದ್ರಭಾನ್ ಪ್ರಸಾದ್ ಅವರು ಬರೆದ ಲೇಖನಕ್ಕೆ ಹಿರಿಯ ಗಾಂಧೀವಾದಿ ದೊರೆಸ್ವಾಮಿ ಅವರ ಪ್ರತಿಕ್ರಿಯೆ ಗಮನಿಸಿದೆ. ಜಾತಿ ಇಂದು ಎಲ್ಲಾ ವೈಚಾರಿಕ ವೈಜ್ಞಾನಿಕ ವಲಯಗಳನ್ನು ನುಂಗಿ ಹಾಕುತ್ತಿ ರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಪ್ರಗತಿಪರರು ಹೋರಾಟಗಾರರು ಅನಿಸಿ ಕೊಂಡವರು ಕೂಡ ಜಾತಿ ಆಧಾರದ ಮೇಲೆ ಚರ್ಚಿಸುವುದು ಪ್ರತಿಕ್ರಿಯಿಸುವುದನ್ನು ನಾನು ಗಮನಿಸಿದ್ದೇನೆ.

ದಲಿತ ಚಳುವಳಿಗಳು ಕೂಡ ಇಂದು ಜಾತಿ ಗೂಡುಗಳಾಗಿವೆ. ಚಳುವಳಿಗಳ ನಾಯಕರೆನಿಸಿಕೊಂಡವರೇ ಪರಸ್ಪರ ಜಾತಿ ಕಾರಣಕ್ಕಾಗಿ ಕಾಲೆಳೆಯುವ ಕೆಲಸದಲ್ಲಿ ತೊಡಗಿರುವದನ್ನು ಕಣ್ಣಾರೆ ಕಂಡಿದ್ದೇನೆ. ಪರಿಸ್ಥಿತಿ ಹೀಗಿರುವಾಗ ಕೇವಲ ಮೇಲ್ಜಾತಿ ಜನರನ್ನು ಮಾತ್ರ ಜಾತಿವಾದಿಗಳೆಂದು ಗುರುತಿಸುವುದು ಸರಿಯಾದುದಲ್ಲ ಎಂದೇ ನನ್ನ ಅನ್ನಿಸಿಕೆ.

ದಲಿತರೊಳಗೇ ಇರುವ ಅವಕಾಶ ವಂಚಿತರು ತಮ್ಮ ಪಾಲಿನ ಹಕ್ಕಿಗಾಗಿ ಒಳಮೀಸಲಾತಿ ಕೇಳಿ ಹೋರಾಟ ಆರಂಭ ಮಾಡಿದಾಗ ಇದೇ ಜನರು ಒಳಮೀಸಲಾತಿ ಯನ್ನೇ ವಿರೋಧಿಸಿದರು. ಹೀಗೆ ವಿರೋಧಿ ಸಿದವರೆಲ್ಲಾ ದಲಿತರಲ್ಲಿ ಫಲಾನುಭವಿಗಳೇ ಆಗಿದ್ದಂಥವರು!

ಕೆ.ಬಿ. ಶಂಕರ ನಾರಾಯಣ,
ದಾವಣಗೆರೆ

‘ಥ್ರಿಲ್’ ಆಯಿತು

ಸನ್ಮಾನ್ಯ ಹೊನ್ನಾಪುರ ರವರೇ,

ಜೂನ್ ತಿಂಗಳ ಸಂವಾದ ನೋಡಿ ನಿಜಕ್ಕೂ ‘ಥ್ರಿಲ್’ ಆಯಿತು. ಒಂದು ಪತ್ರಿಕೆ ಓದುಗರಿಗೆ ಎಷ್ಟೆಲ್ಲ ಅರಿವನ್ನು ನೀಡಬಹುದು ಎಂಬುದಕ್ಕೆ ‘ಸಂವಾದ’ ಒಂದು ಉದಾಹರಣೆ, ಇಂಗ್ಲೀಷ್ ಕಲಿಕೆ ಕುರಿತು ತಮ್ಮ ಸಂಪಾದಕೀಯ ಕನ್ನಡಿಗರ ಕಣ್ಣು ತೆರೆಸುವಂತಿದೆ. ಬರಗೂರು ರಾಮ ಚಂದ್ರಪ್ಪನವರ ಲೇಖನವಂತೂ ಜಾಗತೀ ಕರಣದ ವಿರಾಟ್ ರೂಪವನ್ನು ಕಣ್ಣೆದುರು ನಿಲ್ಲಿಸಿತು. ಪದ್ಮಾಲಯ ನಾಗರಾಜ್ ಅವರ ಅದ್ವೈತದ ಸಮನ್ವಯ ಶಂಕರಾಚಾರ್ಯರ ಡೊಂಗಿತನವನ್ನ ಎತ್ತಿ ತೋರಿಸಿತು.

–ಆರ್. ತಿಪ್ಪೆರುದ್ರಪ್ಪ ದಾವಣಗೆರೆ.

ಪತ್ರಾಗಾರ



ಶೂನ್ಯ ಬಂಡವಾಳ- ಸಮೃದ್ಧ ಬೆಳೆ

ಮಾನ್ಯ ಸಂಪಾದಕರಲ್ಲಿ,

ಮೈಸೂರಿನಲ್ಲಿ ನಡೆದ ಪಾಳೇಕರರ ತರಬೇತಿ ಶಿಬಿರದಲ್ಲಿ ಪಾಲ್ಗೊಳುವ ಅವಕಾಶ ತಪ್ಪಿದ್ದರಿಂದ ತುಂಬ ನೊಂದು ಕೊಂಡಿದ್ದ ನನಗೆ ಸಂವಾದದಲ್ಲಿ ಆ ಕುರಿತ ಲೇಖನ ಮಾಲೆ ಆರಂಬಿಸಿದ್ದು ನೋಡಿ ನಿಧಿಸಿಕ್ಕಿದಂತಾಗಿದೆ. ನನಗಿರುವ ಕೇವಲ ಆರು ಎಕರೆ ಹೊಲದಲ್ಲಿ ಈ ಪದ್ಧತಿಯನ್ನು ಅಳವಡಿಸಿಕೊಳ್ಳವ ಬಗೆಗೆ ನನಗೆ ತುಂಬ ಆಸಕ್ತಿ ಇದೆ. ಲೇಖನದಲ್ಲಿ ಹೆಸರಿಸಿರುವ ಬನ್ನೂರು ಕೃಷ್ಣಪ್ಪ ಅವರು ಈ ನಿಟ್ಟಿನಲ್ಲಿ ನನಗೆ ಸಹಕರಿಸಬಹುದೇ ತಿಳಿಸಿರಿ. ಈ ಕುರಿತು ವಿವರ ಹಾಗೂ ಪ್ರಾತ್ಯಕ್ಷಿಕೆಗೆ ಮೈಸೂರು ಸುತ್ತ ಮುತ್ತಲಿನಲ್ಲಿ ಯಾರನ್ನು ಸಂಪರ್ಕಿಸಬೇಕೆಂದು ತಿಳಿಸಿದರೆ ತುಂಬ ಅನುಕೂಲವಾಗುತ್ತದೆ. ಲೇಖನ ಮಾಲೆ ಆರಂಬಿಸಿರುವ ಸ್ವಾಮಿ ಆನಂದ್ ಅವರಿಗೆ ಧನ್ಯವಾದಗಳು.

ಕೆ. ವಿ. ಬಿ. ಆರಾಧ್ಯ,
ಕೃಷ್ಣರಾಜ ನಗರ.

(ಮತ್ತಷ್ಟು ವಿವರಗಳು ಬೇಕಿದ್ದರೆ ಮೈಸೂರಿನಲ್ಲೇ ಇರುವ ಲೇಖಕ ಸ್ವಾಮಿ ಆನಂದ್ ಅವರನ್ನು ಸಂಪರ್ಕಿಸಬಹುದು, ಅವರ ಜಂಗಮ ವಾಣಿ: ೯೪೪೮೪೭೨೭೪೮)

ಸುಭಾಷ್ ಪಾಳೇಕರ್: ಬೆಳಗು – ಬೆರಗು

ಅವಸರದ ಹಸಿರು ಕ್ರಾಂತಿಯ ಹರಿಕಾರರು
ಇವಳೆದೆಯ ಸಿಗಿಸಿಗಿದು ಬೆದೆಯರಿಯದೆ
ಬಿತ್ತಿದರು ತೊಡೆ ಸಡಿಲಿಸಿ ಕಣ್ಣೊಡೆದು
ಮೊಳಕೆಬಾರದ ನಿರ್ಬೀಜ ಕಾಳುಗಳ

ಬೋರ್ಕೊರೆದು ಹೀರಿಯಂತರ್ಜಲ ಹನಿಸಿ
ಮೂಟೆ ಗಟ್ಟಲೆ ರಸಗೊಬ್ಬರ ಕೀಟನಾಶಕ ಚೆಲ್ಲಿ
ಮುಲುಗುಟ್ಟುವ ಜೀವ ಸಂಕುಲ ಕೊಂದು
ಮೊದಲಗಿತ್ತಿಗೆ ನೋವು ಬಸುರು ನಿಲ್ಲಲಿಲ್ಲ

ದಂಡುಗಟ್ಟಿ ದೌಡಾಯಿಸಿ ಬಂದವು ಜಾಗತಿಕ
ಜಂತುಗಳು ಐಟಿ, ಬಿಟಿ ಕಂಪನಿಗಳು
‘ಇವಳು ಹೊಟ್ಟೆ ಚರಂಡಿ ಗಾರು ಕುಕ್ಕಿದರಯ್ಯಾ?’
ತೆಪ್ಪರಿಸಿಕೊಳಲಿಲ್ಲ ಹಸಿಬಾಣಂತಿ ಸನ್ನಿತ

‘ಬೇರು ಸತ್ತಮರವನೆತ್ತಿ ನಿಲ್ಲಿಸು ಮಗೂ
ಕೊಂಬೆ ರೆಂಬೆಗಳಿರಲಿ ಎಂದಿನಂತೆ ‘ ಕೊರಗಿ
ಹಂಬಲಿಸಿದಳು ತಾಯಿ ಕುವರ ವಿದ್ಯಾಧರಗೆ
ಧನ್ವಂತರಿ ಸಹಜ ಕೃಷಿಕಾರ ಓ ಗೊಟ್ಟು ಬಂದ

ತಿಪ್ಪೆ ಗೊಬ್ಬರ ಬೆರಸಿ ಮದ್ದನುಣಬಡಿಸಿ
ಗಂಜಳವ ಕುಡಿಸಿ ನೇಮ ಪಥ್ಯವ ಹಿಡಿಸಿ
ಮುಂಗಾರಿನ ಮಳೆನೀರಿನಲಿ ಮೈತೊಳೆಸಿ
ಹೊಸ ಹೋರಿಗಳನ್ನೂಡಿ ನವಿರಾಗಿ ನೇಗಿಲಾಡಿಸಿ
ಹಂಟೆ ಕುಂಟೆಯನ್ನೊಡೆದು ಹಸನಾಗಿಸಿ ಮೇಲ್ಮೈ
ನಮ್ಮಜ್ಜ ನಿಮ್ಮಜ್ಜ ಮುತ್ತಜ್ಜರ ಬೀಜ ಬಿತ್ತೆ
ಕಾಲೂರಿತು ಮಳೆ ಕತ್ತೆತ್ತಿತು ಬೆಳೆ ತೆನೆಯೊಡೆಯಿತು
ನೋಡಾ !
ಸುಭಾಷ್ ಪಾಳೇಕರರ ಬೆಳಗು ಬೆರಗು
ನಾಡ ಒಳಗು ಹೊರಗೂ !

ಪ್ರೊ. ಶಿವರಾಮಯ್ಯ
ಬೆಂಗಳೂರು

ಸಾಂಸ್ಕೃತಿಕ ಆಕರಗಳನ್ನು ಮರುಶೋಧಿಸುವತ್ತ...

ಪ್ರಿಯ ಸಂಪಾದಕರಾದ ಶ್ರೀ ಇಂದೂಧರ ಹೊನ್ನಾಪುರ - ರವರಿಗೆ ವಂದನೆಗಳು.

'ಸಂವಾದ' ವಾರ್ಷಿಕ ವಿಶೇಷಾಂಕ ತಲುಪಿದೆ. ಜನವರಿಯಲ್ಲೇ ಬರುವ ನಿರೀಕ್ಷೆಯಲ್ಲಿದ್ದರಿಂದ ಉಂಟಾದ ಕಾತರ, ಚಡಪಡಿಕೆ ಫೆಬ್ರವರಿ ಆರಂಭದಲ್ಲಿ ವಿಶೇಷಾಂಕ ಬಂದ ನಂತರವೇ ತಣಿದದ್ದು. ನಿಜಕ್ಕೂ ಅದೊಂದು ಸಮಗ್ರತೆಯ ವಿಶೇಷಾಂಕ. ದಲಿತ ಸಂಬಂಧಿ ವಿಚಾರಧಾರೆಯನ್ನು, ಅಸ್ತಿತ್ವದ ಕುರುಹನ್ನು ಸಾಂಸ್ಕೃತಿಕವಾಗಿ ಸಾರುವ 'ಸಂವಾದ' ತನ್ನ ವಾರ್ಷಿಕ ವಿಶೇಷಾಂಕದಲ್ಲಿ ಎಲ್ಲಾ ಶೋಷಿತ ಸಮುದಾಯಗಳ ಒಕ್ಕೊರಲ ದನಿಯಾಗಿ ಮೂಡಿಬಂದಿರುವುದು ವಿಶೇಷ. ಆ ಗಟ್ಟಿ ದನಿಯೊಳಗೆ ನನ್ನವೂ ಕೆಲ ಮಾತುಗಳಿಗೆ, ನನ್ನದೊಂದು ಕತೆಗೆ ಅವಕಾಶ ನೀಡಿದಕ್ಕೆ ಕೃತಜ್ಞನಾಗಿದ್ದೇನೆ.

'ಸಂವಾದ' ನಿಜಕ್ಕೂ ಚೆನ್ನಾಗಿ ಬರುತ್ತಿದೆ. ಒಂದು ಪತ್ರಿಕೆಯನ್ನ ಕಟ್ಟಲು ಸಶಕ್ತ ಅಭಿಪ್ರಾಯಗಳ ಜರೂರತ್ತಿದೆಯಾದರೂ ಆ ನಿಟ್ಟಿನಲ್ಲಿ ನಾನಿನ್ನೂ ಶಕ್ತನಲ್ಲ. ವಿಶೇಷಾಂಕದ ಲೇಖನಗಳಲ್ಲಿ ಡಾ॥ ರಹಮತ್ ತರೀಕೆರೆ, ಡಾ॥ ಜಿ.ಆರ್., ಪ್ರೊ॥ ಶ್ರೀಧರ್, ಡಾ॥ ಬಂಜಗೆರೆ, ಪ್ರೊ॥ ಎಸ್.ಎಸ್. ಹಿರೇಮಠ, ಪ್ರೊ॥ ಮಲ್ಲೇಪುರಂ ರಂತಹ ಹಿರಿಯ ವಿದ್ವಾಂಸರು 'ಸಂವಾದ' ನೋಟಕ್ಕೆ ಒಂದು ವೈಶಾಲ್ಯತೆಯನ್ನು, ಖಚಿತತೆಯನ್ನು ಕಂಡುಕೊಳ್ಳಲು ನೆರವಾಗಿದ್ದಾರೆ.

ಆದರೂ ನಮ್ಮ ಈ ಹೊತ್ತಿನ ಚರ್ಚೆಗಳು ವೈದಿಕ-ವೈದಿಕೇತರ ಸಾಂಸ್ಕೃತಿಕ ಪರಿವೇಶಗಳಲ್ಲಿಯೇ ನಡೆಯುತ್ತಿವೆ. 'ಒಂದು ಪೂರ್ಣ ದಲಿತತ್ವ'ದ ಕಡೆಗೆ ಸಾಗುವಂತೆ 'ದಲಿತ ಸಾಂಸ್ಕೃತಿಕ ಆಕರ'ಗಳನ್ನು ಮರುಶೋಧಿಸುವ, ಆ ಮೂಲಕವೇ ಚಿಂತನಾಕ್ರಮವನ್ನು ರೂಢಿಸುವ ಕಡೆಗೂ ಕೊಂಚ ಚಿಂತಿಸಬಹುದು ಅಲ್ಲವೇ ? 'ಸಂವಾದ' ಎಂಬುದು ಕೇವಲ ಸಾಂಸ್ಕೃತಿಕ ವಿರುದ್ಧ ನೆಲೆಗಳ ಸಂವಾದಿಯಾಗದೇ ಒಂದು ಸಾಂಸ್ಕೃತಿಕ ಅನನ್ಯತೆಯ ಪರವಾಗಿ ವಕ್ತಾರನೂ ಆಗಬೇಕಾದ್ದು ಈ ಹೊತ್ತಿನ ಜರೂರತ್ತೇ ಎಂದು ನನ್ನ ಭಾವನೆ.

ಈ ಹಿನ್ನೆಲೆಗೆ ಕನ್ನಡನಾಡಿನ ಚಿಂತಕರ ಬಹುದೊಡ್ಡ ಪಡೆಯೇ ನಿಮ್ಮೊಂದಿಗಿದೆ. ಒಂದು ಪೀಳಿಗೆಯ ಹಸಿವನ್ನ ಮನಗಂಡು ನೀವು ನೀಡುತ್ತಿರುವ ಈ ಸಾಮಗ್ರಿ ನಿಜಕ್ಕೂ ಸಮಗ್ರ, ಸತ್ವಪೂರ್ಣ. ನಮ್ಮೆಲ್ಲರ ಹಸಿವನ್ನು ತಣಿಸುತ್ತಿರುವ 'ಬೌದ್ಧಿಕ ಬಾಣಸಿಗ'ರಾದ ನಿಮ್ಮೊಂದಿಗೆ ಒಂದು ಪೀಳಿಗೆಯೇ ಜೊತೆಗೆ ನಿಲ್ಲುತ್ತದೆ. ಈ ನಿಲುವು, ನೀವು ತೊಡಗಿರುವ ಪರ್ಯಾಯ ರಾಜಕಾರಣದ ಚಟುವಟಿಕೆಗಳಿಗೂ ಪೂರಕವಾಗಿ ಪ್ರೋತ್ಸಾಹಿಸಲಿ ಎಂದು ಆಶಿಸುತ್ತೇನೆ.

ಹೆಚ್ಚು ಬರೆಯಲು ಶಕ್ತನಲ್ಲ.

'ಸಂವಾದ' ಸಶಕ್ತಗೊಳ್ಳ ಬೇಕಿರುವ ನೆಲೆಯಲ್ಲಿ ಸಂಭಾವನೆ ನೀಡುವಂತಹ ಔಪಚಾರಿಕ ಕ್ರಮ ಅಗತ್ಯವಿಲ್ಲ ಎಂದು ನನ್ನ ಭಾವನೆ. ನಿಮ್ಮ ಪತ್ರದಲ್ಲಿ ತಿಳಿಸಿರುವಂತೆ, ನೀವು ಉದ್ದೇಶಿಸಿರುವ ಸಂಭಾವನೆ, ನನಗೆ ಕಳುಹಿಸುವುದು ಬೇಡ.

ವಂದನೆಗಳೊಂದಿಗೆ,

ಆನಂದ್ ಋಗ್ವೇದಿ, ದಾವಣಗೆರೆ

ಸಾರ್ಥಕ ಶ್ರಮ

ಪ್ರಿಯ ಇಂದೂಧರ ಅವರಿಗೆ ವಂದನೆಗಳು.

ನಿಮ್ಮ ಪತ್ರ ತಲುಪಿತು. ಹಾಗೆ ನೋಡಿದರೆ 'ಸಂವಾದ'ದ ವಾರ್ಷಿಕ ವಿಶೇಷಾಂಕ ತಲುಪಿದ ಮೇಲೆ ನಾನೇ ನಿಮಗೆ ಮೊದಲು ಬರೆಯಬೇಕಾಗಿತ್ತು; ಅಂದುಕೊಂಡಿದ್ದೆ ಕೂಡಾ, ಇರಲಿ, ನಿಸ್ಸಂದೇಹವಾಗಿಯೂ ನಿಮ್ಮ ಶ್ರಮ ಸಾರ್ಥಕವಾಗಿದೆ. ಒಟ್ಟಾರೆ ವಿಚಾರಪೂರ್ಣವಾದ, ಸಂಗ್ರಹ ಯೋಗ್ಯವಾದ ವಿಶೇಷಾಂಕವನ್ನು ನೀವು ಕನ್ನಡಿಗರಿಗೆ ನೀಡಿದ್ದೀರಿ. ಸೂಕ್ಷ್ಮ ಸಂವೇದನೆ ಹಾಗೂ ಮಾನವೀಯ ಕಾಳಜಿಯಿರುವ ಎಲ್ಲರೂ 'ಸಂವಾದ'ವನ್ನು ಖಂಡಿತ ಇಷ್ಟ ಪಡುತ್ತಾರೆ ಎಂಬ ನಂಬಿಕೆ ನನಗಂತೂ ಇದೆ.

ಮುಂದಿನ 'ಸಂವಾದ'ದ ನಿರೀಕ್ಷೆಯಲ್ಲಿ ನಿಮ್ಮ

ಸಿ. ವೆಂಕಟೇಶ, ವಿದ್ಯಾರಣ್ಯ

'ಸಂವಾದ'ದ ಹೆಮ್ಮೆ ನಮ್ಮದೇ!

ಪ್ರಿಯ ಹೊನ್ನಾಪುರರವರೇ,

ವಿಶೇಷಾಂಕ ನೋಡಿದ ಮೇಲೆ ನಿಮ್ಮ ಸಂಪಾದಕೀಯ ನಮ್ಮದೇ ಅನ್ನಿಸಿತು. ಈ ವರ್ಷ ಪ್ರಕಟವಾಗಿರುವ ಬಹುತೇಕ ಎಲ್ಲ ವಿಶೇಷಾಂಕಗಳನ್ನು ಗಮನಿಸಿದ್ದೇವೆ. ಅಪಾರ ಪ್ರಸಾರ ಸಂಖ್ಯೆ ಹೊಂದಿದ್ದು, ಅರ್ಧಕ್ಕರ್ಧ ಬರಿ ಜಾಹಿರಾತಿನಿಂದಲೇ ತುಂಬಿರುವ ಬಣ್ಣ ಬಣ್ಣದ ಈ ವಿಶೇಷಾಂಕಗಳನ್ನೆಲ್ಲ 'ಸಂವಾದ'ದ ಮುಂದೆ ನೀವಾಳಿಸಿ ಎಸೆಯ ಬೇಕು. ಅಷ್ಟು ಅದ್ಭುತವಾಗಿ– ಮೈದುಂಬಿ ಬಂದಿದೆ 'ಸಂವಾದ'!

ಲೇಖನಗಳ ಆಯ್ಕೆಯಲ್ಲಿ ಹಾಗೂ ವಿನ್ಯಾಸದಲ್ಲಿ ನೀವು ಗೆದ್ದಿದ್ದೀರಿ.ಅನಂತ ಮೂರ್ತಿ ಅವರ ಸಂದರ್ಶನ ಕಣ್ಣೆದುರೇ ನಡೆದಂತಿದೆ 'ಅನುಭವದ ಗಣಿಯಿಂದ' ಬಂದ ಒಡಲಾಳದ ನೋವುಗಳು ಕಣ್ಣು ತುಂಬಿಸಿದವು. ಸಮಕಾಲೀನ ಸಂದರ್ಭಕ್ಕೆ ಹಿಡಿದ ಕನ್ನಡಿಯಂತೆ ಸಂವಾದ ಕಾಣಿಸಿತು. ನಿಮ್ಮ ಶ್ರಮ ನಿಜಕ್ಕೂ ಸ್ತುತ್ಯರ್ಹವಾದುದು. 'ಸ್ಫೂರ್ತಿಧಾಮ'ದ ಪ್ರೋತ್ಸಾಹ ಕೂಡ!

ಅನಂತ ವರ್ಣೇಕರ್,
ಬೆಳಗಾವಿ.

ಪರ್ಯಾಯರಾಜಕಾರಣ ಗಟ್ಟಿಗೊಳ್ಳಲಿ

ಸನ್ಮಾನ್ಯ ಇಂದೂಧರ ಹೊನ್ನಾಪುರ ಅವರಿಗೆ ಗೌರವಪೂರ್ವಕ ವಂದನೆಗಳು

ಪರ್ಯಾಯರಾಜಕಾರಣದ ಬಗ್ಗೆ " ಸಂವಾದ " ಗಟ್ಟಿ ನಿಲುವು ತಳೆಯುತ್ತಿರುವುದು ಸರಿಯಾದ ದಿಶೆಯಲ್ಲಿದೆ. ಒಂದು ಮಾತು, ಈ ಪರ್ಯಾಯ ರಾಜಕಾರಣವೆಂಬುದು ಈ ನೆಲಕ್ಕೆ ಹೊಸದಲ್ಲ. ಈ ಹಿಂದಿನ ಪ್ರಯತ್ನಗಳು, ಮುಂಚೂ ಣಿಯ ನಾಯಕರ ಅತಿಯಾದ ಸ್ವಕೇಂದ್ರಿತ ಪ್ರಜ್ಞೆಯಿಂದಲೇ ಮುರಿದು ಬಿದ್ದವು.

ಈಗ ದೇವನೂರರಂಥಹವರು ಸಾರಥ್ಯ ವಹಿಸಿದ್ದಾರೆ. ಕರ್ನಾಟಕದ ಅಸಂಖ್ಯಾತ ಜನ ಈ ಹೊಸಪಕ್ಷದ ಪ್ರತಿ ಹೆಜ್ಜೆಯನ್ನು ಗಮನಿಸುತ್ತಿದ್ದಾರೆ. ಈ ಸಾರಿಯ ಈ ರಥಯಾತ್ರೆ ದನಿಯಿಲ್ಲದ ದೇವರುಗಳಿಗೆ ಬಿಲ್ವಪತ್ರೆಯನ್ನಾದರೂ ಒದಗಿಸಿಕೊಟ್ಟರೆ ಸಾಕು. ಅತೀ ತತ್ವಗಳ ಭಾರದಿಂದ, ಬುದ್ಧಿಜೀವಿಗಳ ಕೊನೆಯಿಲ್ಲದ ತರ್ಕದಿಂದ ಅರೋಗ್ಯಕರವಾದ ದೂರದಲ್ಲಿದ್ದಷ್ಟು ಪರ್ಯಾಯ ರಾಜಕಾರಣ ನೆಮ್ಮದಿಯಿಂದ ಇದ್ದೀತು.

ಅಷ್ಟೇ ಅಲ್ಲ, ಸರಕಾರದ ಸವಲತ್ತುಗಳನ್ನು ಸದ್ದಿಲ್ಲದೆ ಬಳಸಿಕೊಂಡು, ಬೆಣ್ಣೆಯಲ್ಲಿ ನೂಲೆಳೆದಂತೆ ವರ್ತಿಸುವ 'ನಾಜೂಕು ದಲಿತ'ರ ವರ್ಗವೊಂದು ಇದೀಗ ಸೃಷ್ಟಿಯಾಗು ತ್ತಿದೆ. ದಲಿತೇತರರಿಗಿಂತ ದಲಿತರೊಳಗೇ ಇರುವ ಈ ವರ್ಗವೇ ಹೆಚ್ಚು ಅಪಾಯಕಾರಿ. ಇವರು ಹೋರಾಟಕ್ಕೆ ಇಳಿಯರು. ಊರೂರು ತಿರುಗರು. ಆದರೆ ಪರ್ಯಾಯ ಶಕ್ತಿ ಯೆಂದು ಫಲಕೊಡುವ ವೇಳೆಗೆ ಅದಕ್ಕೆ ಹಾಜರಾಗುತ್ತಾರೆ. ವಾಸ್ತವವಾಗಿ ದಲಿತೇತರರಿಗೆ ಇಂತಹ ನುಣ್ಣನೆಯ ವರ್ತನೆಗೆ ಒಳಗೊಳಗೆ ಅಂಜಿಕೆ. ಪಾಪಪ್ರಜ್ಞೆಯಾದರೂ ಇರುತ್ತದೆ.

ಈ ನವದಲಿತರಿಗೆ ಅದೂ ಇರುವುದಿಲ್ಲ. ಆದುದರಿಂದ ನನ್ನ ಅನಿಸಿಕೆಯೆಂದರೆ ಪರ್ಯಾಯ ರಾಜಕಾರಣ ಹೆಜ್ಜೆಗಳು ದಲಿತೋದ್ಧಾರದ ಮಾತಾಡುವ ಮೇಲ್ವರ್ಗಗಳನ್ನು ಎಚ್ಚರಿಕೆಯಿಂದ ನೋಡುವಷ್ಟೇ ಈ ನಾಜೂಕು ದಲಿತರನ್ನು ಎಚ್ಚರಿಕೆಯಿಂದ ನೋಡಿ, ತನ್ನ ಕಾರ್ಯಗಳನ್ನು ನಿರೂಪಿಸಿಕೊಂಡರೆ ಒಳಿತು. ಈ ದಿಶೆಯಲ್ಲಿ ಈ 'ಪರ್ಯಾಯ'ಕ್ಕೆ ನನ್ನ ಶುಭ ಹಾರೈಕೆ ಹಾಗೇ ನನ್ನಂಥಹ ಅನೇಕರದ್ದೂ . ಸಂವಾದ ಹೀಗೇ ಗಟ್ಟಿಯಾಗಿ ಬರುತ್ತಿರಲಿ.

ವಿಶೇಷಸಂಚಿಕೆ ಯಾವ ದೃಷ್ಟಿಯಿಂದ ನಿಕಷಕ್ಕೊಳ ಪಡಿಸಿದರೂ ಒಂದು ಸಂಗ್ರಹಯೋಗ್ಯ ಕೈಪಿಡಿ. ಶ್ರಮ, ಶ್ರದ್ಧೆ ಎರಡೂ ಎದ್ದು ತೋರುತ್ತವೆ.

ಲಲಿತಾ ಸಿದ್ದಬಸಯ್ಯ, ತುಮಕೂರು

ಸಂಪಾದಕೀಯ



ಹಿಂಸೆಯ ಕರಾಳ ಮುಖಗಳು

'ಸೂರ್ಯ ಮುಳುಗದ ದೇಶ' ಇಂಗ್ಲೇಂಡ್ ಇಂದು ಥಥ್ಥರ ನಡುಗುತ್ತಿದೆ. ಪ್ರತಿ ಕ್ಷಣವೂ ಜೀವವನ್ನು ಕೈಯಲ್ಲಿ ಹಿಡಿದು ಬದುಕುವ ಸ್ಥಿತಿ ಅಲ್ಲಿನ ಜನಗಳದ್ದಾಗಿದೆ. ಜುಲೈ ೭ ಮತ್ತು ೨೧ರ ಭಯೋತ್ಪಾದಕ ಘಟನೆಗಳನಂತರ ಇಡೀ ದೇಶ ಭಯದ ಸಾಮೂಹಿಕ ಸನ್ನಿಗೆ ಒಳಗಾಗಿದೆ. ಅಮೇರಿಕಾದ ದೌರ್ಜನ್ಯಕ್ಕೆ ವಿನಾಕಾರಣ ಕೈ ಜೋಡಿಸುವ ಮೂಲಕ ಬ್ಲೇರ್ ಮಾಡಿದ ತಪ್ಪಿಗೆ ಇಂದು ಇಂಗ್ಲೇಂಡ್‌ನ ಶ್ರೀಸಾಮಾನ್ಯ ಜೀವ ತೆರಬೇಕಾಗಿದೆ!

ಹಿಂಸೆ ತನ್ನ ಕರಾಳ ಮುಖವನ್ನು ಹಿಂಸೆಯ ಮೂಲಕವೇ ತೋರಿಸುತ್ತದೆ. ಅಮೇರಿಕಾದ ಬಂಡವಾಳಶಾಹಿ ಮೂಲಭೂತವಾದ ಮತ್ತು ಮುಸ್ಲಿಂ ಮೂಲ ಭೂತವಾದಿ ಭಯೋತ್ಪಾದಕರಲ್ಲಿ ಈ ವಿಚಾರ ದಲ್ಲಿ ಬಿನ್ನಾಭಿಪ್ರಾಯವಿಲ್ಲ. ಆದರೆ ಇಬ್ಬರೂ ಪರಸ್ಪರ ಎದುರಾಳಿಗಳು! ಒಬ್ಬರ ನಾಶದಲ್ಲಿ ಇನ್ನೊಬ್ಬರ ಸೌಖ್ಯವಿದೆ ಎಂದು ನಂಬಿದವರು!

'ಬಿತ್ತಿದಂತೆ ಬೆಳೆ' ಎಂಬದು ಕನ್ನಡದ ಗಾದೆ. ಇದು ಅಮೇರಿಕಾ ಹಾಗೂ ಆ ದೇಶದ ಬಾಲಬಡುಕರಂತೆ ವರ್ತಿಸುತ್ತಿರುವ ಇಂಗ್ಲೇಂಡ್ ಹಾಗೂ ಯೂರೋಪಿನ ಇತರೆ ರಾಷ್ಟ್ರಗಳಿಗೆ ನೇರವಾಗಿ ಅನ್ವಯಿಸುತ್ತದೆ. ಅಮೇರಿಕಾ ತನ್ನ ವ್ಯಾಪಾರ ಉದ್ದೇಶಗಳಿಗೆ ಇಡೀ ಜಗತ್ತನ್ನೇ ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ಬಯಸುತ್ತಿದೆ. ಅದಕ್ಕಾಗಿ ಕೆಲವು ದೇಶಗಳಲ್ಲಿ ಅರಾಜಕತೆ – ಹಾಹಾಕಾರಗಳನ್ನು ಹುಟ್ಟಿ ಹಾಕುತ್ತದೆ. ಅಂತರ್ಯುದ್ಧಗಳನ್ನು ಸೃಷ್ಟಿಸುತ್ತದೆ. ಅನ್ನ–ನೀರಿನಲ್ಲಿ ವಿಷ ಬೆರೆಸುತ್ತದೆ. ಸಾಮಾಜಿಕ ಬಹಿಷ್ಕಾರ ಹಾಕುತ್ತದೆ. ಯಾವುದಕೂ ಬಗ್ಗದಿದ್ದರೆ ಸೈನಿಕರನ್ನು ನುಗ್ಗಿಸಿ ಬಾಂಬು ಬಂದೂಕುಗಳಿಂದ ಸದೆ ಬಡಿದು ಅಮೇರಿಕಾ ಪ್ರಣೀತ 'ಪ್ರಜಾಪ್ರಭುತ್ವ'ವನ್ನು ಸ್ಥಾಪನೆ ಮಾಡುತ್ತದೆ.

ಎಂಥ ದುಷ್ಟರೂ ನಾಚುವಂತ ಅಮೇರಿಕಾದ ಈ ದೌರ್ಜನ್ಯಕ್ಕೆ ಪ್ರಜ್ಞಾವಂತ ರಾಷ್ಟ್ರವಾದ ಇಂಗ್ಲೇಂಡ್ ಸಹ ಬೆನ್ನೆಲುಬಾಗಿ ನಿಂತಿದ್ದು ಈಚಿನ ವಿಪರ್ಯಾಸ. ಇಂಗ್ಲೇಂಡ್ ಹಾಗೂ ಯೂರೋಪಿನ ಹಲವು ದೇಶಗಳು ಜ್ಞಾನ ವಿಕಾಸದ ಹಾದಿಯಲ್ಲಿ ಜಗತ್ತಿಗೆ ನೀಡಿದ ಕೊಡುಗೆ ಕಡಿಮೆ ಏನಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ ವಿಚಾರಗಳಲ್ಲಿ ಹೊಸ ಅಲೋಚನೆಗಳು, ಆಧುನಿಕ ಆವಿಷ್ಕಾರಗಳು ಜಗತ್ತಿಗೆ ಪರಿಚಯವಾದದ್ದು ಯೂರೋಪಿನ ಮೂಲಕವೇ. ಸಮಾಜವಾದ ಎಡಪಂಥೀಯ ವಿಚಾರಧಾರೆಗಳೂ ಪ್ರಸಾರವಾದದ್ದು ಇಲ್ಲಿಂದಲೇ. ಅದರೆ ಇಂದು ಅದೇ ರಾಷ್ಟ್ರಗಳು ಅಮೇರಿಕಾದಂತ ಲಾಭಕೋರ ಹೊಟ್ಟೆಬಾಕ ದೇಶದ ಅಡಿಯಾಳಿನಂತೆ ವರ್ತಿಸುತ್ತಿವೆ.

ಸೆಪ್ಟಂಬರ್ ೧೧ರಂದು ವಿಶ್ವ ವಾಣಿಜ್ಯ ಕಟ್ಟಡಗಳ ಮೇಲೆ ನಡೆದ ಭೀಕರ ಧಾಳಿಯನಂತರ ಮುಸ್ಲಿಂ ಭಯೋತ್ಪಾದಕರ ಗುರಿ ಈಗ ಲಂಡನ್ ಮೇಲೆ ನೆಟ್ಟಿದೆ. ಇದು ಯಾವುದೇ ಪ್ರೇರಣೆ ಇಲ್ಲದೆ ನಡೆದ ಧಾಳಿಯಲ್ಲ. ಅಪಘಾನಿಸ್ಥಾನ ಹಾಗೂ ಇರಾಕ್ ಮೇಲೆ ಆಮೇರಿಕಾ ನಡೆಸಿದ ಗೂಂಡಾಗಿರಿಗೆ ಇಂಗ್ಲೇಂಡ್ ನೀಡಿದ ಬೆಂಬಲಕ್ಕೆ ಸಿಕ್ಕಿದ ಬಳುವಳಿ! ಇಡೀ ಜಗತ್ತಿನಲ್ಲಿ ಇಂದು ಮೂಲಭೂತವಾದ ವ್ಯಾಪಕಗೊಳ್ಳಲು ಅಮೇರಿಕಾವೇ ನೇರ ಕಾರಣ. ಯಾರನ್ನೂ ಸ್ವಾಭಿಮಾನದಿಂದ ಬದುಕಲು ಬಿಡದ ಅಮೇರಿಕಾ ಪಾಳೇಗಾರಿಕೆ ಇಂದು ಜಗತ್ತಿನ ಬಹುತೇಕ ಸ್ವಾಭಿಮಾನಿ ರಾಷ್ಟ್ರಗಳನ್ನು ಕೆರಳಿಸಿದೆ. ವಿಶೇಷವಾಗಿ ಮುಸ್ಲಿಂ ರಾಷ್ಟ್ರಗಳಂತೂ ಕುದಿಯುತ್ತಿವೆ. ಇದು ಮೂಲ ಭೂತನಾದಿಗಳ ಪಾಲಿಗೆ ವರವಾಗಿದೆ. ಹಾಗಾಗಿಯೇ ಬಿನ್‌ಲ್ಯಾಡನ್‌ನ ಸಂತತಿ ಈಗ ವ್ಯಾಪಕವಾಗಿ ಹಬ್ಬುತ್ತಿದೆ. ಬಹುತೇಕ ಮುಸ್ಲಿಂಮರ ಮನಸ್ಸಿನಲ್ಲಿ ತಮ್ಮ ಅಧೋಗತಿಗೆ ಅಮೇರಿಕವೇ ಕಾರಣ ಎಂಬ ಭಾವನೆ ಬೆಳೆಯುತ್ತಿದೆ.

ಕೊರಿಯಾ, ವಿಯಟ್ನಾಂ, ಅಪಘಾನಿಸ್ಥಾನ, ಇಂಡೊನೇಷಿಯಾ, ನಿಕರಾಗುವ, ಚಿಲಿ, ಕಾಂಬೋಡಿಯಾ – ಹೀಗೆ ಎಲ್ಲ ದೇಶಗಳ ಆತ್ಮಗೌರವ ಸ್ವಾಭಿಮಾನಗಳನ್ನು ಅಮೇರಿಕಾ ನಾಶಗೊಳಿಸಿದೆ. ಅಮೇರಿಕಾದ ವಿರುದ್ಧ ಸೆಡ್ಡು ಹೊಡೆದು ಸ್ವಾಭಿಮಾನದಿಂದ ಬದುಕುಳಿದ ಏಕೈಕ ರಾಷ್ಟ್ರ ಕ್ಯೂಬಾ ಮಾತ್ರ. ಕ್ಯೂಬಾ ಅಧ್ಯಕ್ಷ ಫಿಡಲ್ ಕ್ಯಾಸ್ಟ್ರೋ ಅವರ ಮುಂದೆ ಮಾತ್ರ ಅಮೇರಿಕಾದ ಯಾವುದೇ ಆಟ ನಡೆಯಲಿಲ್ಲ. ಕ್ಯೂಬಾ ಕ್ರೈಸ್ತರ ದೇಶವಾದ ಕಾರಣಕ್ಕೆ ಅದರ ಮೇಲೆ ಮಿಲಿಟರಿ ಕಾರ್ಯಾಚರಣೆ ನಡೆಸಿ ಅದನ್ನು ಸರ್ವ ನಾಶಮಾಡಲು ಅಮೇರಿಕಾ ಪ್ರಯತ್ನಿಸಿಲ್ಲ ಎಂದು ಮುಸ್ಲಿಂ ಮೂಲಭೂತವಾದಿಗಳು ಆಪಾದಿಸುವುದೂ ಉಂಟು!.

ಅಮೇರಿಕಾದ ಭಯೋತ್ಪಾದನೆ ಹಾಗೂ ದಗಾಕೋರತನಕ್ಕೆ (ಇದೇ ಸಂಚಿಕೆಯ ೧೨ನೇ ಪುಟವನ್ನು ನೋಡಿ) ಮುಸ್ಲಿಂ ಮೂಲ ಭೂತ ವಾದಿಗಳು ಕಂಡುಕೊಂಡಿರುವ ಪರಿಹಾರ ಪ್ರತಿ–ಭಯೋತ್ಪಾದನೆ. ಮೂಲಭೂತವಾದಿಗಳ ಭಾಷೆಯಲ್ಲಿ ಧರ್ಮಯುದ್ಧ – ಜೆಹಾದ್! ಇಂದು ಇಂಗ್ಲೇಡ್ ಆಗಲಿ ಅಮೇರಿಕವಾಗಲಿ ಚಳಿಯಲ್ಲಿ ಕೂಡ ಬೆವರುವುದು ಈ ಜೆಹಾದ್‌ಗೆ ಮಾತ್ರ!. ನೊಂದವರ – ದುಃಖಿತರ ನೆರವಿಗಾಗಿ ನಡೆಸಬೇಕಾದ ಜೆಹಾದ್ ಇಂದು ಧರ್ಮದ್ರೋಹಿಗಳ ಪಾಲಾಗಿದೆ! ಕ್ರೈಸ್ತ ಧರ್ಮವಾಗಲಿ, ಮುಸ್ಲಿಂ ಧರ್ಮವಾಗಲಿ ಈ ಬಗೆಯ ದಗಾಕೋರತನವನ್ನ, ಭಯೋತ್ಪಾದನೆಯನ್ನ ಎಲ್ಲೂ ಭೋಧಿಸಿಲ್ಲ. ಪ್ರೋತ್ಸಾಹಿಸಿಲ್ಲ. ಎರಡೂ ಧರ್ಮಗಳು ನೊಂದವರಿಗೆ ಸಾಂತ್ವನ ನೀಡಿವೆ. ಜೀವನದ ಪರಮ ಮೌಲ್ಯಗಳನ್ನು – ಸಮಾನತೆ, ಸ್ವಾತಂತ್ರ್ಯ, ಸ್ವಾಭಿಮಾನವನ್ನು – ಬೋಧಿಸಿವೆ. ಅದರೆ ಇಂದು ಅವು ಬುಷ್ – ಲ್ಯಾಡನ್‌ನಂತ ಧರ್ಮ ದ್ರೋಹಿಗಳು ಹಾಗೂ ಮಾನವ ದ್ರೋಹಿಗಳ ಆಡೊಂಬಲವಾಗಿವೆ.

ಜಗತ್ತಿನ ಶಾಂತಿಪ್ರಿಯ ಜನರು ಈ ಎರಡೂ ದುಷ್ಟಶಕ್ತಿಗಳನ್ನು ತಿರಸ್ಕರಿಸಿದರೆ ಮಾತ್ರ ಪ್ರಪಂಚ ನೆಮ್ಮದಿಯಿಂದ ದಿನ ಕಳೆಯ ಬಹುದಾಗಿದೆ.

* * *

ಪ್ರಿಯ ಓದುಗರೇ, 'ಸಂವಾದ' ಜುಲೈ ಸಂಚಿಕೆ ಪ್ರಕಟವಾಗಲಿಲ್ಲ ಪತ್ರಿಕೆ ಸಿದ್ಧಪಡಿಸಿ, ಮುದ್ರಣಕ್ಕೆ ಕಳುಹಿಸಬೇಕಾದ ವ್ಯಕ್ತಿಯೊಬ್ಬ ಕೈ ಕೊಟ್ಟಿದ್ದರಿಂದಾಗಿ ಜುಲೈ ಸಂಚಿಕೆ ಹೊರಬರಲಿಲ್ಲ.

'ಸಂವಾದ' ಬಹುತೇಕ ಅಂಚೆ ಮೂಲಕವೇ ಎಲ್ಲರಿಗೂ ಮುಟ್ಟುತ್ತದೆ. ಅಂಚೆ ಇಲಾಖೆ ಪತ್ರಿಕೆಯನ್ನು ಪೋಸ್ಟ್ ಮಾಡಲು ನಮಗೆ ಒಂದು ದಿನವನ್ನು ನಿಗದಿ ಮಾಡಿರುತ್ತದೆ. ಆ ದಿನದೊಳಗಾಗಿ ಪತ್ರಿಕೆ ಸಿದ್ದಪಡಿಸಿ ಅಂಚೆಗೆ ಹಾಕದಿದ್ದರೆ ಮತ್ತೆ ಮುಂದಿನ ತಿಂಗಳಿನ ಅದೇ ದಿನಕ್ಕಾಗಿ ನಾವು ಕಾಯಬೇಕಾಗುತ್ತದೆ. ಹಾಗಾಗಿ ನಮ್ಮ ಕೈ ಮೀರಿದ ಕಾರಣದಿಂದಾಗಿ ಜುಲೈ ಸಂಚಿಕೆ ನಿಮ್ಮ ಕೈ ಸೇರಲಿಲ್ಲ.

'ಸಂವಾದ'ಕ್ಕಾಗಿ ಕಾತರಿಸುವ ನೂರಾರು ಓದುಗರು ಪತ್ರಿಕೆ ಬಾರದಿರುವ ಬಗ್ಗೆ ಪತ್ರ ಬರೆದು, ದೂರವಾಣಿ ಮಾಡಿ ಕಾಳಜಿ ವ್ಯಕ್ತ ಪಡಿಸಿದ್ದೀರಿ. ನಿಮ್ಮ ಅಭಿಮಾನಕ್ಕೆ 'ಸಂವಾದ' ಋಣಿಯಾಗಿದೆ. ಮುಂದೆ ಹೀಗಾಗದಂತೆ ಎಚ್ಚರ ವಹಿಸುತ್ತೇವೆ.

ಜುಲೈ ಪತ್ರಿಕೆ ಬಾರದ ಕಾರಣಕ್ಕಾಗಿ ಈ ಸಂಚಿಕೆಯಲ್ಲಿ ಹೆಚ್ಚು ಪುಟಗಳನ್ನು ನೀಡಿದ್ದೇವೆ. ನಿಮ್ಮ ಸಲಹೆ–ಸಹಕಾರವನ್ನು ಎಂದಿನಂತೆ ಬಯಸುತ್ತೇವೆ.

○ ಇಂದೂಧರ ಹೊನ್ನಾಪುರ



ದೋಚುವವರ ಶಿಕ್ಷಣ ನೀತಿ

ಸಂಪಾದಕರೊಡನೆ ಸಂವಾದ

○ ಸುಜಾತ ಲಕ್ಷ್ಮೀಪುರ

ಶಿಕ್ಷಣ ಮಾನವನ ಮೂಲಭೂತ ಅಗತ್ಯ. ಶಿಕ್ಷಣ ಮಾನವನ ಆಜನ್ಮಸಿದ್ಧ ಹಕ್ಕು. ಶಿಕ್ಷಣವೆನ್ನುವುದು ಕೇವಲ ಅಕ್ಷರ ಕಲಿಯೂವುದಲ್ಲ, ಶಿಕ್ಷಣಕ್ಕೂ ವ್ಯಕ್ತಿತ್ವಕ್ಕೂ-ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಉತ್ತಮ ಶಿಕ್ಷಣವ್ಯವಸ್ಥೆಯಿಂದ ಮಾತ್ರ ಉನ್ನತ ವ್ಯಕ್ತಿತ್ವದ ಪ್ರಜೆಗಳು ರೂಪುಗೊಂಡು ಆರೋಗ್ಯಕರ ವಾತಾವರಣದ ಸಮಾಜ ನಿರ್ಮಾಣ ವಾಗುತ್ತದೆ. ಶಿಕ್ಷಣವ್ಯವಸ್ಥೆ ದೇಶದ ಆರ್ಥಿಕ, ಸಾಮಾಜಿಕ ಪ್ರಗತಿಗೆ ನೆರವಾಗುತ್ತದೆ. ಶಿಕ್ಷಣ ವ್ಯಕ್ತಿಗಳನ್ನು ಸುಶಿಕ್ಷಿತ, ಸುಸಂಸ್ಕೃತರನ್ನಾಗಿ ಮಾಡಿ, ದೇಶದ ಸರ್ವತೋಮುಖ ಅಭಿವೃದ್ಧಿಗೆ, ಸುರಕ್ಷಿತ ಸಮಾಜದ ರಚನೆಗೆ ಕಾರಣವಾಗುವ ಪ್ರಮುಖ ಸಾಧನ.

ಇದನರಿತೆ, ಸ್ವಾತಂತ್ರ್ಯನಂತರ ಭಾರತದ ಕೇಂದ್ರ ಹಾಗೂ ರಾಜ್ಯ ಸರಕಾರ ಶಿಕ್ಷಣದ ಸಾರ್ವತ್ರೀಕರಣದ ಬಗ್ಗೆ ಕಾಳಜಿ ವ್ಯಕ್ತಪಡಿಸಿ, ಸಾಕ್ಷರತಾ ಆಂದೋಲನವನ್ನು ಹಮ್ಮಿಕೊಂಡು, ಜಾತಿ-ವರ್ಗ ಭೇದವಿಲ್ಲದೆ, ಎಲ್ಲ ಮಕ್ಕಳಿಗೂ ಅಕ್ಷರ ಕಲಿಸುವ ಪ್ರಯತ್ನದಲ್ಲಿ ತೊಡಗಿದೆ. ಶಿಕ್ಷಣ ವಲಯಕ್ಕೆ ಮೊದಲ ಆದ್ಯತೆ ನೀಡಿದೆ. ಇದು ಸರಕಾರದ ಕರ್ತವ್ಯ ಕೂಡ.

ಶಿಕ್ಷಣದ ಖಾಸಗೀಕರಣ :- ಈಗಾಗಲೇ ಶಿಕ್ಷಣ ಖಾಸಗೀಕರಣಗೊಳ್ಳುವ ಪ್ರಕ್ರಿಯೆ ಬಿರುಸಿನಿಂದ ಸಾಗಿದ್ದು, ಶಿಕ್ಷಣ ಖಾಸಗೀಕರಣ ಗೊಂಡಷ್ಟೂ ವ್ಯಾಪಾರೀಕರಣಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಶಿಕ್ಷಣ ಇಂದು ಬೇರೆ ವಾಣಿಜ್ಯೋದ್ಯಮಗಳಂತೆ ಅಧಿಕ ಲಾಭದ ಉದ್ಯಮವಾಗಿ ಪರಿಣಮಿಸಿದೆ. ಶಿಕ್ಷಣ ಉಳ್ಳವರ ಪಾಲಾಗಿ, ಶಿಕ್ಷಣದ ಖಾಸಗೀಕರಣದಲ್ಲಿ ತೊಡಗಿದ ಬಂಡವಾಳಗಾರರು ಶಿಕ್ಷಣವನ್ನು ವ್ಯಾಪಾರವನ್ನಾಗಿಸಿ 'ಲಾಭ ನಷ್ಟದ ಎಣಿಕೆಯಲ್ಲಿ ತೊಡಗಿದ್ದು, ಶಿಕ್ಷಣವನ್ನು ವ್ಯಾಪಾರವನ್ನಾಗಿಸಿ, ಲಾಭ- ನಷ್ಟದ ಎಣಿಕೆಯಲ್ಲಿ ತೊಡಗಿದ್ದು ಶಿಕ್ಷಣದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಯೋಜನ ಮತ್ತು ಪರಿಣಾಮದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ.

ಶಿಕ್ಷಣದ ಖಾಸಗೀಕರಣದಿಂದಾಗಿ ಶಿಕ್ಷಣವು ದುಬಾರಿಯಾಗುತ್ತಿರುವುದಲ್ಲದೆ, ಕಾನ್ವೆಂಟ್ ಅಥವಾ ಪ್ರೈವೇಟ್ ಸ್ಕೂಲ್‌ಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು ಪ್ರೈವೇಟ್ ಸ್ಕೂಲ್ ಗಳಲ್ಲಿ ಮಾತ್ರ ಉತ್ತಮ ದರ್ಜೆಯ ಶಿಕ್ಷಣ ಮತ್ತು ಅಂಥ ವಿದ್ಯಾರ್ಥಿಗಳಿಗೆ ಮಾತ್ರ ಅಧಿಕೃತ ಮನ್ನಣೆ ಎಂಬ ತಪ್ಪು ಅಭಿಪ್ರಾಯಗಳು ಜನಸಾಮಾನ್ಯರಲ್ಲಿ ಮೊಳೆಯುವಂತಾಗಿದೆ. ಇದರಪರಿಣಾಮ, ಹಣವಿಲ್ಲದವರು, ಅನುಕೂಲವಿಲ್ಲದವರು, ಸಾಲ-ಸೂಲ ಮಾಡಿಯಾದರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕೆಂದು, ಆರ್ಥಿಕವಾಗಿ ಇನ್ನಷ್ಟು ದುರ್ಗತಿಗೆ ಇಳಿದಾದರೂ, ತಮ್ಮ ಮಕ್ಕಳನ್ನು ಕಾನ್ವೆಂಟ್‌ಗಳಲ್ಲಿ, ಪ್ರೈವೇಟ್ ಸ್ಕೂಲ್‌ಗಳಲ್ಲಿ ಓದಿಸಲು ಬಯಸುತ್ತಿದ್ದಾರೆ. ಇದರೊಂದಿಗೆ ಹೋಣೆಗೇಡಿ ಸರಕಾರಗಳಿಂದ ಸರಕಾರಿ ಶಾಲೆಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು ಪರೋಕ್ಷವಾಗಿ ಖಾಸಾಗಿ ಶಿಕ್ಷಣ ಸಂಸ್ಥೆಗಳ ಕಡೆ ವಿದ್ಯಾರ್ಥಿಗಳು ಮುನ್ನುಗ್ಗುವಂತಹ ವಾತಾವರಣವನ್ನು ಸೃಷ್ಟಿಮಾಡುತ್ತಿವೆ. ಶಿಕ್ಷಣ ಪ್ರಸಾರ, ನಿರ್ವಹಣೆಗಳ ಹೊಣೆ ಹೊತ್ತ ಸರ್ಕಾರದ ಧುರೀಣರು ಖಾಸಾಗಿ ವಿದ್ಯಾ ಸಂಸ್ಥೆಗಳ ಅಧೀನರಾಗಿ ವರ್ತಿಸುತ್ತಾ, ತಮ್ಮ ಮತ್ತು ಖಾಸಾಗಿ ಸಂಸ್ಥೆಗಳ ಹಿತಸಾಧನೆಗೆ ಶಿಕ್ಷಣ ಕ್ಷೇತ್ರವನ್ನು ಭ್ರಷ್ಟಗೊಳಿಸುತ್ತಿದ್ದಾರೆ. ಶೈಕ್ಷಣಿಕ ವಲಯದಲ್ಲಿ ಜನವಿರೋಧಿ, ಪ್ರಗತಿಹೀನ ನೀತಿಗಳನ್ನು ರಚಿಸಿ, ಕಾರ್ಯಗತಗೊಳಿಸಲು ತವಕಿಸುತ್ತಿದ್ದಾರೆ. ಇದರ ಜೊತೆಗೆ ಶಿಕ್ಷಣದಲ್ಲಿ ' ರಾಜಕೀಯ ' ತಾಂಡವವಾಡುತ್ತಿದೆ.

ಶಿಕ್ಷಣದಲ್ಲಿ ರಾಜಕೀಯ : ಶಿಕ್ಷಣ ಕ್ಷೇತ್ರದಲ್ಲಿ ಎಂದಿಗಿಂತಲೂ ಇದು ರಾಜಕೀಯ ಚಟುವಟಿಕೆಗಳು ತ್ವರಿತವಾಗಿ ಸಾಗಿದೆ, ಇತರ ಕ್ಷೇತ್ರಗಳಂತೆ ಶಿಕ್ಷಣ ಕ್ಷೇತ್ರದಲ್ಲೂ ರಾಜಕೀಯ ವ್ಯಕ್ತಿಗಳು ತಮ್ಮ 'ರಾಜಕೀಯ 'ವನ್ನು ಆರಂಭಿಸಿ, ಸಿಕ್ಕಷ್ಟು ದೋಚಿಕೊಂಡು, ಶೈಕ್ಷಣಿಕ ವ್ಯವಸ್ಥೆಯನ್ನು ಹೊಲಸು ಮಾಡುತ್ತಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ಆರಿಸಲ್ಪಟ್ಟ ಪ್ರಜಾಪ್ರತಿನಿಧಿಗಳು ಪ್ರಜೆಗಳ ಹಿತ ಚಿಂತನೆ ಮಾಡದೆ, ಸ್ವಹಿತ-ಸಂಬಂಧು ಬಾಂಧವರ ಹಿತ ಸಾಧನೆಗೆ ತೊಡಗುವುದು ವಿಪರ್ಯಾಸವೇ ಸರಿ ! ಅದು ಇಂದಿನ ನಮ್ಮ ಸಹಜ ಸ್ಥಿತಿ ಕೂಡ ಆಡಳಿತದಲ್ಲಿ, ರಾಜಕೀಯದಲ್ಲಿ ಇರುವ ವ್ಯಕ್ತಿಗಳಲ್ಲಿ ಬಹುತೇಕ ಸ್ವಾರ್ಥಸಾಧನೆ ಅತಿಯಾಗಿದ್ದು, ನೈತಿಕ ಮತ್ತು ಮಾನವೀಯತೆಯ ಅಭಾವವಿರುವುದರಿಂದ, ಅವರು ಪ್ರಗತಿಪರ, ವೈಜ್ಞಾನಿಕ ಶಿಕ್ಷಣ, ಸಮಾನ ಶಿಕ್ಷಣ ನೀತಿಗಳನ್ನು ಬದಿಗೊತ್ತಿ ತಮ್ಮ ಲಾಭಕ್ಕಾಗಿ ಅಂಧರಂತೆ ಅವೈಜ್ಞಾನಿಕ ನೀತಿಗಳನ್ನು ಶಿಕ್ಷಣ ವಲಯದಲ್ಲಿ ಜಾರಿಗಳಿಸುತ್ತಿದ್ದಾರೆ.

ಶಿಕ್ಷಣ ಅಧಿಕಪ್ರಮಾಣದಲ್ಲಿ ಖಾಸಗೀಕರಣಗೊಂಡಂತೆ, ಖಾಸಗಿ ವಿದ್ಯಾ ಸಂಸ್ಥೆಗಳ ಸ್ಥಾಪನೆಯ ಹೆಚ್ಚಳದೊಂದಿಗೆ ರಾಜಕೀಯ ವ್ಯಕ್ತಿಗಳು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಮಾಡಲು ಹೆಚ್ಚು ಹೆಚ್ಚಾಗಿ ಮುಂದಾಗಿರುವುದು; ಅವರ ಸೇವೆಯ ಫಲದಿಂದಾಗಿ ಇಂದು ಶಿಕ್ಷಣ ದುಬಾರಿಯಾಗಿರುವುದು ವಾಸ್ತವ ಸಂಗತಿ. ಇದರಿಂದಾಗಿ ಸಮಾನ ಶಿಕ್ಷಣ ನೀತಿ ಬೀದಿಪಾಲಾಗಿದೆ. ಹಣವಂತರು ಮಾತ್ರ 'ಶಿಕ್ಷಣ' ಕೊಳ್ಳುವಂತಾಗಿ, ಆರ್ಥಿಕವಾಗಿ ಹಿಂದುಳಿದವರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಪ್ರಜಾಸತಾತ್ತಕ ಮೌಲ್ಯಗಳನ್ನು ನಾಶಮಾಡಿ, ಸರ್ವಾಧಿಕಾರತ್ವದಿಂದ ಮೆರೆಯುವ ರಾಜಕೀಯ ವ್ಯಕ್ತಿಗಳ ಕಾರ್ಯವೈಖರಿ ಹೇಗೆ ತಾನೇ ಸಮಾಜಪರವಾಗಿರಲು ಸಾಧ್ಯ? ಆ ಕಾರಣ, ರಾಜಕೀಯ ವ್ಯಕ್ತಿಗಳನ್ನು ಶಿಕ್ಷಣ ವಲಯದಂತಹ ವ್ಯಕ್ತಿಗಳು ವ್ಯಕ್ತಿತ್ವ ನಿರ್ಮಾಣ ಮಾಡುವ, ದೇಶದ ಭವಿಷ್ಯ ರೂಪಿಸುವ ಪ್ರಭಾವಕಾರಿವಲಯದಿಂದ ದೂರವಿಡಬೇಕು.

ಶಿಕ್ಷಣದಲ್ಲಿ ಖಾಸಗೀಕರಣ ಮತ್ತು ರಾಜಕೀಯದಿಂದಾಗಿ ತಾಂತ್ರಿಕ ಮಹಾವಿದ್ಯಾಲಯಗಳು, ವೈದ್ಯಕೀಯ ವಿದ್ಯಾಲಯಗಳು ಬಂಡ ವಾಳಗಾರರ ಸ್ವತ್ತಾಗಿ, ಡೊನೇಶನ್, ಕ್ಯಾಪಿಟೇಶನ್ ಭೂತಗಳಿಂದಾಗಿ ಉನ್ನತ ಶಿಕ್ಷಣವಂತೂ ಬಡವರ ಪಾಲಿಗೆ ಕನಸಿಗೂ ಎಟುಕದ ಎತ್ತರಸ್ಥಿತಿಯಲ್ಲಿದೆ. ಈಗಲೂ ನಡೆಯುತ್ತಿರುವ ಸಿ.ಇ.ಟಿ. ಪರೀಕ್ಷೆಗಳ ಕದನ, ಖಾಸಗಿ ವಿದ್ಯಾಸಂಸ್ಥೆಗಳಲ್ಲಿರುವ ಮೆರಿಟ್ ಮತ್ತು ಪೇಮೆಂಟ್ ಸೀಟುಗಳ ಚೆಲಾವಣೆಯಿಂದ ಶಿಕ್ಷಣ ಪಡೆಯುವುದೇ ದುಸ್ತರವಾಗಿದೆ. ಶಿಕ್ಷಣ ಕ್ಷೇತ್ರ ಅಪ್ಪಟ ಮಾರುಕಟ್ಟೆಯಾಗಿದ್ದು ದುಡ್ಡು ಸುರಿಯುವವರಿಗೆ ಮಾತ್ರ ಶಿಕ್ಷಣ ಎಂಬಂತಾಗಿದೆ.

ಉನ್ನತ ಶಿಕ್ಷಣ ನೀಡುವ ವಿಷಯದಲ್ಲಿ ಸರಕಾರದ ನೀತಿ ಪ್ರಗತಿಗೆ ವಿರುದ್ಧವಾಗಿದ್ದು, ಪ್ರಾಥಮಿಕ 'ಶಿಕ್ಷಣ ನೀಡಿಕೆ ಮಾತ್ರ ತನ್ನ ಜವಾಬ್ದಾರಿ, ಉನ್ನತ ಶಿಕ್ಷಣವಲ್ಲ ' ಎಂದು ಸರ್ಕಾರ ಜಾರಿಗೊಳ್ಳುತ್ತಿರುವುದು ಕರ್ತವ್ಯಹೀನ ದೃಷ್ಟಿಯಾಗಿದೆ. ಇದು ಶಿಕ್ಷಣದ ಬಗ್ಗೆ ಇರಬೇಕಾದ ಪೂರ್ಣದೃಷ್ಟಿ ಆಗಿಲ್ಲದೆ, ಖಾಸಗೀಕರಣಕ್ಕೆ, ಶಿಕ್ಷಣದ ರಾಜಕೀಕರಣಕ್ಕೆ ಪೂರಕವಾದ ನೀತಿ ಆಗಿದೆ. ಉನ್ನತ ಶಿಕ್ಷಣದಿಂದಾಗಿ ದೇಶದ ಆರ್ಥಿಕತೆಗೆ ನೆರವಾಗುವುದಿಲ್ಲ ಎಂದು ಸರ್ಕಾರದ ನಿಲುವು ಅವೈಜ್ಞಾನಿಕವಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಉನ್ನತ ಶಿಕ್ಷಣ ಖಾಸಗಿ ಒಡೆತನದಲ್ಲಿದ್ದು ವಿದ್ಯಾ ಮಾರುಕಟ್ಟೆಯಲ್ಲಿ ಹಣವುಳ್ಳವರು

ಶಿಕ್ಷಣದಲ್ಲಿ ಖಾಸಗೀಕರಣ ಮತ್ತು ರಾಜಕೀಯ ದಿಂದಾಗಿ ತಾಂತ್ರಿಕ ಮಹಾವಿದ್ಯಾಲಯಗಳು, ವೈದ್ಯಕೀಯ ವಿದ್ಯಾಲಯಗಳು ಬಂಡವಾಳಗಾರರ ಸ್ವತ್ತಾಗಿ, ಡೊನೇಶನ್, ಕ್ಯಾಪಿಟೇಶನ್ ಭೂತಗಳಿಂದಾಗಿ ಉನ್ನತ ಶಿಕ್ಷಣವಂತೂ ಬಡವರ ಪಾಲಿಗೆ ಕನಸಿಗೂ ಎಟುಕದ ಎತ್ತರ ಸ್ಥಿತಿಯಲ್ಲಿದೆ. ಈಗಲೂ ನಡೆಯುತ್ತಿರುವ ಸಿ.ಇ.ಟಿ. ಪರೀಕ್ಷೆಗಳ ಕದನ, ಖಾಸಗಿ ವಿದ್ಯಾಸಂಸ್ಥೆಗಳಲ್ಲಿರುವ ಮೆರಿಟ್ ಮತ್ತು ಪೇಮೆಂಟ್ ಸೀಟುಗಳ ಚೆಲಾವಣೆಯಿಂದ ಶಿಕ್ಷಣ ಪಡೆಯುವುದೇ ದುಸ್ತರವಾಗಿದೆ. ಶಿಕ್ಷಣ ಕ್ಷೇತ್ರ ಅಪ್ಪಟ ಮಾರುಕಟ್ಟೆಯಾಗಿದ್ದು, ದುಡ್ಡು ಸುರಿಯುವವರಿಗೆ ಮಾತ್ರ ಶಿಕ್ಷಣ ಎಂಬಂತಾಗಿದೆ.

ಕೊಂಡುಕೊಳ್ಳುವ ಸರಕಾಗಿದೆ. ಶಿಕ್ಷಣ ಪದ್ದತಿ :- ಶಿಕ್ಷಣದ ಖಾಸಗೀಕರಣದಿಂದ, ಶಿಕ್ಷಣದಲ್ಲಿ ರಾಜಕೀಯ ಹಸ್ತಕ್ಷೇಪದಿಂದಾಗಿ ನಮ್ಮ ಶಿಕ್ಷಣ ಪದ್ಧತಿ ದುಃಸ್ಥಿತಿಗಿಳಿದಿದೆ. ಶೈಕ್ಷಣಿಕ ನೀತಿ ನಿಯಮಗಳು ಅವೈಜ್ಞಾನಿಕವಾಗಿದ್ದು ಲಾಭದ ಉದ್ಯಮವಾಗಿ ಇಂದು ಶಿಕ್ಷಣ ವ್ಯವಸ್ಥೆ ಪರಿವರ್ತಿತವಾಗುತ್ತಿರುವುದು ವಾಸ್ತವಸಂಗತಿ ಯಾಗಿದೆ.

ನಮ್ಮದು ಕೃಷಿ ಆಧಾರಿತ ದೇಶ, ಗ್ರಾಮ ಆಧಾರಿತ ಆರ್ಥಿಕತೆ ಮತ್ತು ದುಡಿಮೆಆಧಾರಿತ ಶಿಕ್ಷಣವನ್ನು ನೀಡುವುದು ಭಾರತದ ಸಂದರ್ಭಕ್ಕೆ ಉಚಿತವಾದದ್ದು, ಅಲ್ಲದೆ, ನಮ್ಮ ಸಮಾಜದ ಸ್ವರೂಪ ಇತರ ದೇಶಗಳಿಗಿಂತ ಭಿನ್ನವಾಗಿರುವುದರಿಂದ, ನಮ್ಮ ಸಮಾಜದ ಸಂದರ್ಭಕ್ಕೆ ಹೊಂದುವಂತಹ, ಹಾಗೂ ಅರ್ಥಪೂರ್ಣವಗುವಂತಹ ಶಿಕ್ಷಣ ನಮಗೆ ಬೇಕು. ಅಂದರೆ ಕೃಷಿಪ್ರಧಾನ ದೇಶದ ಆರ್ಥಿಕತೆಗೆ ಅನುಗುಣವಾಗಿ ಮಾನವನ ಶ್ರಮವನ್ನ ಬಳಸುವ ಶಿಕ್ಷಣ ಪದ್ಧತಿ ರೂಪುಗೊಳ್ಳಬೇಕು. ಇಂತಹ ಶಿಕ್ಷಣವನ್ನು ಜಾರಿಗೊಳಿಸಬೇಕಾದದ್ದು ಶಿಕ್ಷಣ ಕ್ಷೇತ್ರದ ಅಧಿ ಕಾರದಲ್ಲಿರುವವರ ಕರ್ತವ್ಯ. ಆದರೆ, ಇಂದು ಅನ್ಯ ದೇಶದ ಶಿಕ್ಷಣ ಮಾದರಿಯನ್ನು ಆದರ್ಶವನ್ನಾಗಿ ಪರಿಗಣಿಸಿ, ಅನುಸರಿಸುತ್ತಿರುವ ಮೂರ್ಖತನವನ್ನು ಗುರುತಿಸಬಹುದು.

ಶಿಕ್ಷಣದಲ್ಲಿ ಖಾಸಗೀಕರಣ ಮತ್ತು ರಾಜಕೀಯದಿಂದಾಗಿ ತಾಂತ್ರಿಕ ಮಹಾವಿದ್ಯಾಲಯಗಳು, ವೈದ್ಯಕೀಯ ವಿದ್ಯಾಲಯಗಳು ಬಂಡ ವಾಳಗಾರರ ಸ್ವತ್ತಾಗಿ, ಡೊನೇಶನ್, ಕ್ಯಾಪಿಟೇಶನ್ ಭೂತಗಳಿಂದಾಗಿ ಉನ್ನತ ಶಿಕ್ಷಣವಂತೂ ಬಡವರ ಪಾಲಿಗೆ ಕನಸಿಗೂ ಎಟುಕದ ಎತ್ತರಸ್ಥಿತಿಯಲ್ಲಿದೆ. ಈಗಲೂ ನಡೆಯುತ್ತಿರುವ ಸಿ.ಇ.ಟಿ. ಪರೀಕ್ಷೆಗಳ ಕದನ, ಖಾಸಗಿ ವಿದ್ಯಾಸಂಸ್ಥೆಗಳಲ್ಲಿರುವ ಮೆರಿಟ್ ಮತ್ತು ಪೇಮೆಂಟ್ ಸೀಟುಗಳ ಚೆಲಾವಣೆಯಿಂದ ಶಿಕ್ಷಣ ಪಡೆಯುವುದೇ ದುಸ್ತರವಾಗಿದೆ. ಶಿಕ್ಷಣ ಕ್ಷೇತ್ರ ಅಪ್ಪಟ ಮಾರು ಕಟ್ಟೆಯಾಗಿದ್ದು, ದುಡ್ಡು ಸುರಿಯುವವರಿಗೆ ಮಾತ್ರ ಶಿಕ್ಷಣ ಎಂಬಂತಾಗಿದೆ.

ಅನ್ಯದೇಶದ ಶಿಕ್ಷಣ ಮಾದರಿಗಳನ್ನು ನಮ್ಮಲ್ಲಿ ಜಾರಿಗೊಳಿಸುತ್ತಿರುವುದರಿಂದ ಶಿಕ್ಷಣ ವಲಯದಲ್ಲಿ ನಾನಾ ಸಮಸ್ಯೆಗಳು ಉಲ್ಬಣಗೊಳ್ಳುವಿವೆ. ವ್ಯಕ್ತಿಗಳನ್ನು ಸೃಜನಶೀಲಗೊಳಿಸುವುದು ಶಿಕ್ಷಣದ ಕೆಲಸ, ಆದರೆ ಇಂದು ಶಿಕ್ಷಣ ಕೇವಲ ಮಾಹಿತಿ, ಅಂಕಿ-ಅಂಶಗಳ, ವರದಿಗಳ, ಉರುಹೊಡೆಯುವುದಷ್ಟಕ್ಕೆ ಪ್ರಾಮುಖ್ಯತೆ ನೀಡಿದೆ. ಶಿಕ್ಷಣವೆನ್ನುವುದು- 'ಮಕ್ಕಳ ಮಾನಸಿಕ ಬೆಳವಣಿಗೆಗೆ, ತನ್ನ ಸುತ್ತಲ ಪರಿಸರದೊಂದಿಗೆ ಆರೋಗ್ಯಕರ ಸಂಬಂಧವನ್ನು ಬೆಳೆಸಿಕೊಂಡು, ಸಮಾಜದ ಉನ್ನತಿಗಾಗಿ, ಸಹಬಾಳ್ವೆಗಾಗಿ, ದೇಶದ ಆರ್ಥಿಕ ಪ್ರಗತಿಗಾಗಿ ಸಹಕರಿಸುವಂತೆ, ವ್ಯಕ್ತಿಗಳನ್ನು ಮಾನವೀಯಗೊಳಿಸುವಂತೆ, ನಿಧಾನವಾಗಿ, ಕ್ರಮಬದ್ಧವಾಗಿ ಕ್ರಿಯಾಶೀಲವಾಗುವ ಒಂದು ಕ್ರಿಯಾಶೀಲ ಚಿಂತನಕ್ರಮ.

ಆದರೆ ಶಿಕ್ಷಣ ವ್ಯವಸ್ಥೆ ಹಾಗು ಇಂದಿನ ಶಿಕ್ಷಣ ಪದ್ಧತಿ ನಮ್ಮ ವಿದ್ಯಾರ್ಥಿಗಳಲ್ಲಿ ಸಮಾಜದ ಮೌಲ್ಯ ಪ್ರಜ್ಞೆಯಿಲ್ಲದವರನ್ನಾಗಿ ಮಾಡುತ್ತಿದೆ. ವಿದ್ಯಾರ್ಥಿಗಳ ಮೆದುಳಿಗಷ್ಟೇ ಕೆಲಸ ನೀಡಿ, ದೈಹಿಕ ಕಾರ್ಯವನ್ನು ಹೀನವಾಗಿ,ತುಚ್ಚವಾಗಿ ನೋಡುವ ಮನೋಭಾವ ರೂಪುಗೊಳ್ಳುವಂತೆ ಮಾಡಿದೆ. ಸಾಫ್ಟ್‌ವೇರ್ ಸಂಸ್ಕೃತಿ ಎಲ್ಲೆಡೆ ರಾರಾಜಿಸುತ್ತಾ, ಮಾಹಿತಿ ತಂತ್ರಜ್ಞಾನದ ಪ್ರಾಮುಖ್ಯ ದಿನೇ ದಿನೇ ಹೆಚ್ಚುತ್ತಿದ್ದು ತಂತ್ರಜ್ಞಾನವೇ ಜೀವನವೆಂಬಂತಾಗಿದೆ.

ಕೃಷಿಪ್ರಧಾನ ದೇಶದ ಆರ್ಥಿಕತೆಗೆ ಅನುಗುಣವಾಗಿ ಮಾನವನ ಶ್ರಮವನ್ನ ಬಳಸುವ ಶಿಕ್ಷಣ ಪದ್ಧತಿ ರೂಪುಗೊಳ್ಳಬೇಕು. ಇಂತಹ ಶಿಕ್ಷಣವನ್ನು ಜಾರಿಗೊಳಿಸಬೇಕಾದದ್ದು ಶಿಕ್ಷಣ ಕ್ಷೇತ್ರದ ಅಧಿ ಕಾರದಲ್ಲಿರುವವರ ಕರ್ತವ್ಯ.

ಇಂದಿನ ಶಿಕ್ಷಣ ಕ್ರಮದಿಂದಾಗಿ ಸ್ಥಾವರಗೊಂಡ ವ್ಯಕ್ತಿತ್ವದ ವ್ಯಕ್ತಿಗಳು ತಯಾರಾಗುತ್ತಿದ್ದು, ದುಡಿಮೆ ಆಧಾರಿತ ಶಿಕ್ಷಣದ ಕೊರತೆಯಿಂದಾಗಿ ಕಲಿಕೆಗೂ-ಬದುಕಿಗೂ ಸಂಬಂಧವಿಲ್ಲ ದಾಗಿ ನಿರುದ್ಯೋಗ, ವಂಚನೆ, ಭ್ರಷ್ಟಾಚಾರ, ಆರ್ಥಿಕ ಹಿನ್ನಡೆ ಉಂಟಾಗುತ್ತಿದೆ.

ಶಿಕ್ಷಣ ಮಾಧ್ಯಮ ಮಾತೃಭಾಷೆಯಲ್ಲಿ ಕಲಿಯುವುದ ರಿಂದ ಕಲಿಕೆ ಸುಲಭವಾಗಿ, ಅರ್ಥಪೂರ್ಣವಾಗಿ, ಸಮರ್ಥ ವಾದ ರೀತಿಯಲ್ಲಿ ಫಲನೀಡುತ್ತದೆ ಆದರೆ ಇಂದು 'ಇಂಗ್ಲೀಷ್ ' ಮಾಧ್ಯಮದ ಹುಚ್ಚು ಎಲ್ಲರ ನೆತ್ತಿಗೇರಿದೆ. ಸರ್ಕಾರವೂ ಸಹ ಉಳ್ಳವರ, ಅಧಿಕಾರಸ್ಥರ, ವ್ಯಾಪಾರೋದ್ಯಮಿಗಳ ಮಾತಿಗೆ ತಲೆದೂಗಿ, ವೈಜ್ಞಾನಿಕವಾಗಿ ಚಿಂತಿಸದೆ, ಭಾರತ ದೇಶದ ಯಾರೊಬ್ಬರ ಮಾತೃಭಾಷೆಯೂ ಅಲ್ಲದ 'ಇಂಗ್ಲೀಷ್ ' ಭಾಷೆಯ ಮೂಲಕ ಶಿಕ್ಷಣ ಕಲಿಸುವ ಪದ್ದತಿಯನ್ನು ಹೆಚ್ಚು ಹೆಚ್ಚು ಜಾರಿಗೊಳಿಸುತ್ತಿದೆ. ನಮ್ಮ ಮಕ್ಕಳು ಮನೆಯಲ್ಲಿ ಸಹಜವಾಗಿ ತಾಯಿಭಾಷೆಯನ್ನು ಕಲಿಯುತ್ತಾರೆ,

ಆದರೆ, ಪಾಠಶಾಲೆಯಲ್ಲಿ ಬಲವಂತವಾಗಿ, ಕಷ್ಟಪಡುತ್ತಾ ಪರಕೀಯ ಭಾಷೆಯ ಮೂಲಕ ಶಿಕ್ಷಣ ಕಲಿಯಬೇಕಾಗಿದೆ. ತಾಂತ್ರಿಕ ಶಿಕ್ಷಣವಂತೂ 'ಇಂಗ್ಲೀಷ್' ಇಲ್ಲದಿದ್ದರೆ ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಅಲ್ಲದೆ, 'ಇಂಗ್ಲೀಷ್' ಮಾಧ್ಯಮ ದಲ್ಲಿ ಓದಿದವರು ಮಾತ್ರ ಯಶಸ್ವಿಗಳಾಗುತ್ತಾರೆ, ಉದ್ಯೋಗ ಪಡೆಯುತ್ತಾರೆ ಎಂಬ ಭಾವನೆಗಳನ್ನು ಬಿತ್ತಲಾಗುತ್ತಿದೆ. ಸರ್ಕಾರಿ ಸ್ಕೂಲುಗಳಲ್ಲಿ ಓದಿದ ಹಳ್ಳಿಯ ವಿದ್ಯಾರ್ಥಿಗಳು 'ಇಂಗ್ಲೀಷ್' ಮಾಧ್ಯಮದ ನಗರ ವಿದ್ಯಾರ್ಥಿಗಳ ಜೊತೆ ಸ್ಪರ್ಧೆಗಿಳಿಯಲಾಗದೆ ಹಿಂದುಳಿ ಯುವಂತಾಗಿದೆ ಕೀಳರಿಮೆ ಅನುಭವಿಸು ವಂತಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ಮೂಲಭೂತ ಅಗತ್ಯ. ಹಗೂ ಅದೇ ಸರಿಯಾದದಾರಿ ಎಂದು ಕ್ರಿಯಾಶೀಲ ಮನಸ್ಸುಗಳು ಅಧಿ ಕಾರಸ್ಥರಿಗೆ, ಶಿಕ್ಷಣದ ಧುರೀಣರಿಗೆ ಪಾಠಕಲಿಸಬೇಕಾಗಿದೆ.

ಇಂತಹ ಶೈಕ್ಷಣಿಕ ಸ್ಥಿತಿ ಅಮೂಲಾಗ್ರವಾಗಿ ಬದಲಾಗಬೇಕು. ಶಿಕ್ಷಣ ಕ್ಷೇತ್ರದಲ್ಲೂ ಭ್ರಷ್ಟತೆ ತಡೆಗಟ್ಟಲೂ ಹೆಚ್ಚು ಹೆಚ್ಚು ಸರಕಾರೀಕರಣ ನೆಡೆಯಬೇಕಾಗಿದೆ. ಖಾಸಾಗೀಕರಣದಿಂದ 'ಸಮಾನಶಿಕ್ಷಣ ನೀತಿ' ಮೂಲೆ ಸೇರಿದೆ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಪ್ರಗತಿಪರ ನಿಲುವುಗಳನ್ನು ಸೇರಿಸಿಕೊಳ್ಳಲು, ಸಮಾನತೆಯ ನೆಲೆಗಳನ್ನು ಕಂಡುಕೊಳ್ಳಲು ಶಿಕ್ಷಣ ಮತ್ತು ಬದುಕಿನ ನಡುವೆ ಅರ್ಥಪೂರ್ಣ ಸಂಬಂಧ ಬೆಸೆಯಲು, ಶಿಕ್ಷಣ ವಲಯದಿಂದ 'ರಾಜಕೀಯ ' ವನ್ನು ಖಾಸಗೀಕರಣವನ್ನು ಕ್ರಮೇಣ ನಾಶವಾಗುವಂತೆ ಮಾಡ ಬೇಕಾದದ್ದು ಎಲ್ಲರ ಕರ್ತವ್ಯ. ಅದಕ್ಕೆ ಜನಜಾಗೃತಿ ಬೇಕು. ಅಂಥ ಕೆಲಸವನ್ನು ನಾವೆಲ್ಲ ಮಾಡಬೇಕಾಗಿದೆ.

ನಿರಂಕುಶವಾದಿಗಳಾದ ರಾಜಕೀಯ ವ್ಯವಸ್ಥೆಗಳನ್ನು ಶಿಕ್ಷಣ ವಲಯದಿಂದ ಆಚೆ ಅಟ್ಟಿ, ಸರಕಾರಗಳ ಹೊಣೆಗೇಡಿ ತನಕ್ಕೆ ಬುದ್ಧಿಕಲಿಸುವ ಜವಾಬ್ದಾರಿ ನಮ್ಮ ಮೇಲಿದೆ. ಶಿಕ್ಷಣ ಇಲಾಖೆಯಲ್ಲಿರುವ ಉನ್ನತ ಅಧಿಕಾರಿಗಳು ಹೊಸ ತಾತ್ವಿಕತೆ ಯೊಂದಿಗೆ, ಸರ್ವಜನಮಾನ್ಯಪ್ರಗತಿಪರ ಶೈಕ್ಷಣಿಕ ನೀತಿಗಳನ್ನು ಜಾರಿಗೊಳಿಸಿ, ಇಂದಿನ ಶಿಕ್ಷಣ ಪದ್ಧತಿಯನ್ನು ತಿದ್ದುವ ಕೆಲಸ ಜರೂರು ನಡೆಯಬೇಕು.

ಮಹಿಳೆ

ವೈದಿಕ ಮೌಲ್ಯಗಳಿಂದ ಕೂಡಿದ ಮಹಿಳೆ ಆದರ್ಶವಾಗು ವುದರಿಂದ ಈಗ ನಾವು ಪ್ರಶಿನಿಸಿಕೊಳ್ಳಬೇಕಾಗಿರುವುದು ವೈದಿಕ ಸಮಾಜವೆಂದರೆ ಯಾವುದು? ವೇದಗಳನ್ನು ಬಲ್ಲ ಸಮಾಜ ವೈದಿಕ ಸಮಾಜವೇ? ವೇದಗಳನ್ನು ರಚಿಸಿದ ಸಮಾಜ 1ವೈದಿಕ ಸಮಾಜವೇ? ವೇದಗಳು ರಚಿತವಾದ ಪ್ರಾದೇಶದಲ್ಲಿ ಬರೆದಿದ್ದ ಎಲ್ಲರೂ ವೈದಿಕರೆ? ಕಡೆಯದಾಗಿ ವೇದ ಸಾಹಿತ್ಯದಲ್ಲಿ ಹೇಳಿರುವ ವಿಚಾರಗಳು ಚರಿತ್ರೆಯೆ ಅಥವಾ ಆದರ್ಶಗಳೇ ? ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಮೂಲಕ ಭಾರತದ ಚರಿತ್ರೆಯ ಬಗೆಗಿನ ಭ್ರಮೆಗಳನ್ನು ಇಳಿಸಬೇಕಾಗಿದೆ. ಹಾಗೆಯೇ ಭಾರತದ ಸಾಂಪ್ರದಾಯಿಕ ಮಹಿಳೆಯೆಂಬ ಭ್ರಮಿತ ಬಿಕ್ಕಟ್ಟನ್ನು ತೆಗೆದು ವಿಸ್ತಾರವಾದ ಅಧ್ಯಯನ ಮತ್ತು ವಿಶ್ಲೇಷಣೆಯ ಮೇಲೆ ಮಹಿಳೆಯ ಚರಿತ್ರೆ ಪುನರ್ ನಿರ್ಮಾಣವಾಗಬೇಕಾಗಿದೆ.

○ಡಾ. ವಸು.

ಮಹಿಳೆ ಮತ್ತು ಸಾಂಸ್ಕೃತಿಕ ಭ್ರೂಣ ಹತ್ಯೆ

ಭಾರತೀಯ ಮಹಿಳೆಯನ್ನು ಐತಿಹಾಸಿಕವಾಗಿ ಆಧ್ಯಯನ ಮಾಡುವಾಗ ಯಾವ ನೆಲೆಯಲ್ಲಿ ನಿಂತಿದ್ದೇವೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಈವರೆಗೆ ನಮ್ಮೆಲ್ಲರ ಅರ್ಥಗ್ರಹಿಕೆಗೆ ನಕ್ಕಿರುವ ಭಾರತೀಯ ಮಹಿಳೆಯನ್ನು ಈಗಾಗಲೇ ಬೆಳೆದು ಬಂದಿರುವ ಬರವಣಿಗೆಗಳ ಆಧಾರದ ಮೇಲೆ ಚಿತ್ರಿಸಿಕೊಳ್ಳುತ್ತೇವೆ. ಎಂದರೆ ಈಗಾಗಲೇ ಭಾರತೀಯ ಮಹಿಳೆಯನ್ನುಪಾಶ್ಚಿಮಾತ್ಯ ವಿದ್ವಾಂಸರ ನೆಲೆಯಿಂದ, ಕಾವ್ಯಗಳ ನೆಲೆಯಿಂದ ಸಂದಾರಕರ ನೆಲೆಯಿಂದ, ಪುರುಷಪ್ರಧಾನ ಸಾಂಪ್ರದಾಯಿಕ ಕೌಟುಂಬಿಕ ನೆಲೆಯಿಂದ ಹಾಗೂ ಕಳೆದೆರೆಡು ದಶಕಗಳಲ್ಲಿ ಸ್ತ್ರೀವಾದಿ ಹಿನ್ನೆಲೆಯಿಂದ ನೋಡಲಾಗಿದೆ. ಈ ಎಲ್ಲಾ ಬರವಣಿಗೆಗಳು ಅಭಿಪ್ರಾಯಗಳು. ಗ್ರಹಿಕೆಗಳು ಯಾರೊಬ್ಬರ ಅಧ್ಯಯನದ ಮೇಲೂ ತೀವ್ರ ಪರಿಣಾಮವನ್ನು ಬೀರುತ್ತವೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತದ ಮಹಿಳೆಯನ್ನು ಕುತೂಹಲದಿಂದ ನೋಡಿ ಬಿಂಬಿಸಿದವರು ವಿದೇಶೀಯರು. ಪಾಶ್ಚಾತ್ಯ ಮಹಿಳೆಯ ಮುಂದೆ ಭಾರತೀಯ ಮಹಿಳೆ ವಿಭಿನ್ನವಾಗಿ ಕಂಡಂದರಲ್ಲಿ ಆಶ್ಚರ್ಯವೇನಿಲ್ಲ. ಭಾರಿತೀಯ ಸಂಸ್ಕೃತಿ ಚರಿತ್ರೆಯ ಬಗೆಗೆ ಬರೆದ ಪೌರಾತ್ಯಾವಾದಿ ಬರಹಗಾರರು ಅದರ ಭಾಗವಾಗಿ ತಮ್ಮದೇ ಆದ ದೃಷ್ಟಿಕೋನದಿಂದ ಭಾರತೀಯ ಮಹಿಳೆಯನ್ನು ಚಿತ್ರಿಸಿದರು. ಭಾರತದ ಪ್ರಾಚೀನ ಸಂಸ್ಕೃತಿಯನ್ನು ಸಂಸ್ಕೃತ ಭಾಷಾ ಅಧ್ಯಯನದಿಂದ ಪರಿಬಾವಿಸಿದರು ವೇದಗಳು ಅವರ ಓದಿಗೆ ದೊರೆತಾಗ ಅದ್ಭುತ ಲೋಕವನ್ನು ಕಂಡಂತೆ ಭಾವುಕರಾದರು. ಋಗ್‌ವೇದ ಕಾಲದ ಮಹಿಳೆಗೆ ಹೆಚ್ಚಿನ ಸ್ವಾತಂತ್ರ್ಯವಿತ್ತೆಂದೂ, ಅವರಲ್ಲಿ ವಿದ್ದೆಯನ್ನು ಪಡೆದು ವಿದ್ವಾಂಸರಿದ್ದರು ಎಂತಲೂ, ಸ್ವಯಂವರದ ಉದಾಹರಣೆ ತೆಗೆದುಕೊಂಡು ವಿವಾದದಲ್ಲಿ ಆಕೆಗೆ ಅಯ್ಕೆಯ ಅವಕಾಶವಿತ್ತೆಂದೂ, ರಾಜಕೀಯ ಸಂಸ್ಥೆಗಳಾದ ಸಭಾಸಮಿತಿಗಳಲ್ಲಿ ಪಾಲ್ಗಳ್ಳುತ್ತಿದ್ದರೆಂದೂ ಸ್ಪಷ್ಟಪಡಿಸಿದರು.

ಈ ಎಲ್ಲಾ ಕಾರಣಗಳಿಂದ ಅವಳ ಸ್ಥಾನಮಾನ ಉತ್ತಮವಾಗಿತ್ತೆಂದು ಮಂಡಿಸಿದರು. ಬಹುತೇಕ ಇದೇ ಜಾಡಿನಲ್ಲಿ ಭಾರತದ ರಾಷ್ಟ್ರೀಯವಾದೀ ಇತಿಹಾಸಕಾರರು ಇಂತಹದೇ ಸುಂದರವಾದ ಕಲ್ಪನೆ ಕಟ್ಟಿಕೊಟ್ಟರು. ಎ.ಎಲ್. ಭಾಷ್ಯಂರ "Wonder that was India" ವಿಸ್ತಾರವಾದ ಕೃತಿಯನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು. ಒಟ್ಟಾರೆ ಏಕ ಸಂಸ್ಕೃತಿಯ ಹಿನ್ನಲೆಯಲ್ಲಿ 'ಭಾರತದ ನಾರಿಯನ್ನು' ಗುರುತಿಸಿಕೊಳ್ಳುತ್ತಾ ಬಂದಿದೇರೆ.

ವೈದಿಕ ಮೌಲ್ಯಗಳಿಂದ ಕೂಡಿದ ಮಹಿಳೆ ಆದರ್ಶವಾಗುವುದರಿಂದ ಈಗ ನಾವು ಪ್ರಶ್ನಿಸಿಕೊಳ್ಳಬೇಕಾಗಿರುವುದು ವೈದಿಕ ಸಮಾಜವೆಂದರೆ ಯಾವುದು? ವೇದಗಳನ್ನು ಬಲ್ಲ ಸಮಾಜ ವೈದಿಕ ಸಮಾಜವೇ? ವೇದಗಳನ್ನು ರಚಿಸಿದ ಸಮಾಜ 1ವೈದಿಕ ಸಮಾಜವೇ? ವೇದಗಳು ರಚಿತವಾದ ಪ್ರಾದೇಶದಲ್ಲಿ ಬರೆದಿದ್ದ ಎಲ್ಲರೂ ವೈದಿಕರೆ? ಕಡೆಯದಾಗಿ ವೇದ ಸಾಹಿತ್ಯದಲ್ಲಿ ಹೇಳಿರುವ ವಿಚಾರಗಳು ಚರಿತ್ರೆಯೆ ಅಥವಾ ಆದರ್ಶಗಳೇ ?

ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಮೂಲಕ ಭಾರತದ ಚರಿತ್ರೆಯ ಬಗೆಗಿನ ಭ್ರಮೆಗಳನ್ನು ಇಳಿಸಬೇಕಾಗಿದೆ. ಹಾಗೆಯೇ ಭಾರತದ ಸಾಂಪ್ರದಾಯಿಕ ಮಹಿಳೆಯೆಂಬ ಭ್ರಮಿತ ಬಿಕ್ಕಟ್ಟನ್ನು ತೆಗೆದು ವಿಸ್ತಾರವಾದ ಅಧ್ಯಯನ ಮತ್ತು ವಿಶ್ಲೇಷಣೆಯ ಮೇಲೆ ಮಹಿಳೆಯ ಚರಿತ್ರೆ ಪುನರ್ ನಿರ್ಮಾಣವಾಗಬೇಕಾಗಿದೆ. ಭ್ರಮಿತ ಬಿಕ್ಕಟ್ಟನ್ನು ಒಡೆದು ಪುನರ್ ನಿರ್ಮಾಣವಾದ ಕ್ರಮವನ್ನು "Dconstruction theory" ಎಂದು ಕರೆಯಲಾಗುತ್ತದೆ.

ನಮ್ಮ ಗ್ರಹಿಕೆಗಳನ್ನು ಮತ್ತೆಮತ್ತೆ ಪ್ರಶ್ನಿಸಲೇ ಬೇಕಾಗಿದೆ ಎನ್ನುವುದಕ್ಕೆ ಕೆಲವೊಂದು ಉದಾಹರಣೆಗಳನ್ನು ನೋಡಬೇಕಾಗುತ್ತದೆ. ಋಗ್‌ವೇದ ಕಾಲದ ಮಹಿಳೆಯ ಬಗೆಗೆ ಹೇಳುತ್ತ ಗಾರ್ಗಿ, ಮೈತ್ರೇಯಿ, ಘೋಷಾ ಅಪಾಲರಂತಹ ನಾಲ್ಕು ಮಹಿಳೆಯರನ್ನು ಹೆಸರಿಸಿ ಕ್ರಿ. ಪೂ.1500ರಲ್ಲೇ ಭಾರತದಲ್ಲಿ ಮಹಿಳೆಗೆ ವಿದ್ಯಾಭ್ಯಾಸದಲ್ಲಿ ಅವಕಾಶವಿತ್ತು ಎಂಬ ಹೇಳಿಕೆಗೆ ಬದಲಾಗಿ ಹೀಗೆ ಅರ್ಥೈಸಬೇಕಾಗಿದೆ. ವಿದ್ಯೆಯನ್ನು ಪಡೆದಿರಬಹುದಾದ ನಾಲ್ಕು ಮಹಿಳೆಯರು Excep-

tional Women ಆಗಿರುತ್ತಾರೆ. ಭಾರತದ ಭೂಭಾಗದಾದ್ಯಂತ ಹೆಣ್ಣಿಗೆ ಪಾಠ ಹೇಳಿಕೊಟ್ಟಿಲ್ಲ. ಸಮಕಾಲೀನ ಉದಾಹರಣೆಯೊಂದಿಗೆ ಹೋಲಿಸುವುದಾದರೆ ಇಂದಿರಾ ಗಾಂಧಿ ಭಾರತದ ಪ್ರಾಧಾನಿಯಾಗಿದ್ದರಿಂದ, ಅವರಿಗೆ ಭಾರತದಲ್ಲಿ ಮಹಿಳೆಯರು ರಾಜಕೀಯದಲ್ಲಿ ಪುರುಷರಿಗೆ ಮೇಲ್ಗೈಯಾಗಿದ್ದರು ರಾಜಕೀಯ ಪ್ರಜ್ಞೆ ಜಾಗರುಕವಾಗಿತ್ತೆಂದು ತೀರ್ಮಾನಕ್ಕೆ ಬರುವುದು ಎಷ್ಟು ಅಸಹಜವಾದುದು.

ವಾಸ್ತವದಲ್ಲಿ ಇಂದಿರಾಗಾಂಧಿ ಭಾರತದ ಮಹಿಳೆಯನ್ನು ಪ್ರತಿನಿಧಿಸುವುದೇ ಇಲ್ಲ ಎಂದರೆ ಭಾರತದ ಮಹಿಳೆ ಸಾಮಾಜಿಕವಾಗಿ ಎದುರಿಸುವ ಕಷ್ಟಗಳನ್ನು ಮೀರಿ ಪೂರ್ಣ ವಿಕಾಸಗೊಂಡ ವ್ಯಕ್ತಿ. ಭಾರತದ ಮಹಾಕಾವ್ಯಗಳಲ್ಲಿ ಮೂಡಿ ಬಂದಿರುವ ನಾಯಕಿಯರು ಭಾರತದ ಆದರ್ಶ ನಾರಿಯರಾಗಿ ಬಿಂಬಿತವಾಗಿದ್ದಾರೆ. ಇವರೆಲ್ಲರೂ ಕ್ಷತ್ರಿಯ ಇಲ್ಲವೆ ಬ್ರಾಹ್ಮಣ ಸಮಾಜದ ಮಹಿಳೆಯರು ಮಾತ್ರ ವೈದಿಕ ಸಾಹಿತ್ಯ ಎಲ್ಲಾ ವರ್ಗದ ಬದುಕನ್ನು ಸಮಗ್ರವಾಗಿಯೇನು ಚಿತ್ರಿಸಿಲ್ಲ. ವೈದಿಕ ಸಮಾಜದ ಹೊರಗಿನವರು ರಾಕ್ಷಸರಾಗಿ, ಕುರೂಪಿಗಳಾಗಿ, ಕೋತಿಗಳಾಗಿ, ಚಿತ್ರಿತರಾದರು. ಸೀತಾ, ಸಾವಿತ್ರಿ, ಅಹಲ್ಯೆ, ಅರುಂಧತಿ ಮುಂತಾದವರಿಗೆ ಪ್ರತಿಯಾಗಿ ಶೂರ್ಪಣಕಾ, ಹಿಡಿಂಬಾ, ತಾಟಕೀಯರನ್ನು ಸೃಷ್ಟಿಸಿದರು.

ಭಾರತೀಯ ಸಾಹಿತ್ಯದಲ್ಲಿ ಕಾಣುವ ಮೌಲ್ಯಗಳು ಮೇಲ್ವರ್ಗದ ಮೌಲ್ಯಗಳೇ ಹೊರತು ಜನಸಾಮಾನ್ಯರ ಬದುಕಲ್ಲ. ಒಂದುಕಡೆ ವೈದಿಕ ಸಾಹಿತ್ಯ ಭಾರತೀಯ ನಾರಿಯ ಮೌಲ್ಯದ ಚಿಕ್ಕಟ್ಟನ್ನು ಹಾಕಿದರೆ, ಮತ್ತೊಂದು ಕಡೆ ಭಾರತೀಯ ಸಂಸ್ಕೃತಿಯನ್ನು ಚಿತ್ರಿಸಿದ Orientlist ಬರಹಗಾರರು ಭಾರತ, ಅವರ ಇತಿಹಾಸ ಸಂಸ್ಕೃತಿ, ಕಲೆ, ಸಮಾಜ ಮಹಿಳೆಯನ್ನು ತಮ್ಮ ಕ್ಯಾನ್‌ವಾಸ್‌ನಲ್ಲಿ ಹಿಡಿದಿಡತೊಡಗಿದರು. ಮುಂದೆ ಬಂದು ಮಾರ್ಕ್ಸ್‌ವಾದಿ ಅಧ್ಯಯನಗಳು, ಸ್ತ್ರೀವಾದಿ ಅಧ್ಯಯನಗಳು ಇಂತಹ ಗ್ರಹಿಕೆಗಳನ್ನು ಪ್ರಶ್ನಿಸಲು ಅವಕಾಶ ಕಲ್ಪಿಸಿವೆ.

ಭಾರತದ ಮಹಿಳೆಗೆ ಆಕಾರಕೊಟ್ಟವರಲ್ಲಿ ಸಾಮಾಜಿಕ ಚಳವಳಿಗಾರರ ಪಾತ್ರ ಬಹುದೊಡ್ಡದು. ಭಾರತದ ಚರಿತ್ರೆಯುದ್ದಕ್ಕೂ ಆಕೆಯ ಪರವಾಗಿ ನಿಂತವರು ಸಮಾಜ ಸುಧಾರಕರು. ಬುದ್ಧನಿಂದ ಮೊದಲುಗೊಂಡು ಆಧುನಿಕ ಕಾಲದವರೆಗೆ ಮಹಿಳಾ ಸಮಸ್ಯೆಗಳನ್ನು ಚರ್ಚಿಸುತ್ತಾ ಬಂದಿದ್ದಾರೆ. ಅದರಲ್ಲೂ ಭಕ್ತಿ ಚಳವಳಿಗಳು ಮಹಿಳೆಗೂ ಮೋಕ್ಷಾರ್ಹ ಎನ್ನುವುದನ್ನು ಸಾರುತ್ತಾ ಬಂದಿದೆ. ತಮಿಳುನಾಡಿನ ನಾಯನಾರರು, ಕರ್ನಾಟಕದ ವಚನಕಾರರು, ಉತ್ತರ ಭಾರತದ ಮಧ್ಯಕಾಲೀನ ಸಂತರು, ಸೂಫಿಗಳು ದೇವರು ಭಕ್ತಿಗೆ ಸಮಾನವಾಗಿ, ಒಲಿಯುತ್ತಾನೆಂದು ಕೆಳವರ್ಗದವರು ಹಾಗೂ ಹೆಂಗಸರ ಕೀಳರಿಮೆಯನ್ನು ಹೋಗಲಾಡಿಸಿದರು. ಸಾಮಾಜಿಕ ಡಂಬಾಚಾರಗಳನ್ನು, ಅಡಂಬರಗಳನ್ನು ಹೀಗಳೆದರು. ವಿವಾಹದ ಅನಿವಾರ್ಯತೆಯನ್ನು ಪ್ರಶ್ನಿಸಿದರು.

ಆಧುನಿಕ ಕಾಲದ ಸಾಮಾಜಿಕ ಸುಧಾರಣೆಯನ್ನು ವಿಭಿನ್ನಸ್ತರದಲ್ಲಿ ಅರ್ಥೈಸಬೇಕಾಗುತ್ತದೆ. ಹದಿನೆಂಟನೆಯ ಶತ ಮಾನದ ಆದಿಭಾಗದಿಂದ ಪಾಶ್ಚಿಮಾತ್ಯರು ಭಾರತೀಯರನ್ನು ಕುತೂಹಲದಿಂದ ನೋಡಿದ್ದು ಮಾತ್ರವಲ್ಲದೆ, ಭಾರತೀಯರು ಹಿಂತಿರುಗಿ ತಮ್ಮನ್ನು ನೋಡಿಕೊಳ್ಳುವಂತಾಯಿತು.

> **ಕೆಲವರು ಭಾರತೀ!ೀಯ ಸಾಂಪ್ರದಾಯದ ಶ್ರೇಷ್ಟತೆಯನ್ನು ಎತ್ತಿಹಿಡಿದರೆ, ಮತ್ತೆ ಕೆಲವನು ಬದಲಾವಣೆಯ ಅಗತ್ಯವನ್ನು ಕಂಡುಕೊಂಡರು. ರಾಜಾರಾಂ ಮೋಹನ ರಾಯರು ಭಾರತದ ಮಹಿಳೆಗೆ 'ಸತಿ' ಯಾಗಿ ಸಾಯದೆ ಬದುಕಲು ಅವಕಾಶ ಕಲ್ಪಿಸಿದಗೆ ದಯಾನಂದ ಸರಸ್ವತಿಯವರು ವೇದಕಾಲೀನ ಮಹಿಳೆಯ ಆದರ್ಶಗಳನ್ನೂ ಗುರುತಿಸಿದರು. ಪಾಶ್ಚಿಮಾತ್ಯ ಶಿಕ್ಷಣ, ಚಿಂತನೆ ಇವೆಲ್ಲದರ ಒಟ್ಟಾರೆ ಮೊತ್ತವಾಗಿ ಮಹಿಳೆಯ ಪ್ರಗತಿಯ ಕಡೆ ಚಿಂತಿಸತೊಡಗಿದರು. ಮಾನವತಾವಾದ, ವ್ಯಕ್ತಿ ಸ್ವಾತಂತ್ರ್ಯ, ಉದಾರವಾದಗಳ ಚಿಂತನೆ ಮಹಿಳಾ ಸುದಾರಣೆಗೆ ಅನುವುಮಾಡಿತು. 'ಸತಿ' ಪದ್ಧತಿಯ ನಿರ್ಮೂಲನ, ವಿಧವಾ ವಿವಾಹ, ಬಾಲ್ಯವಿವಾಹದ ವಿರೋಧ ಮಹಿಳಾ ಶಿಕ್ಷಣ ಆದ್ಯ ವಿಷಯಗಳಾಗಿ ಸುಧಾರಕರು ಕೈಗೆತ್ತಿಕೊಂಡರು. ಈ ವಿಚಾರಗಳನ್ನು ವೈಭವೀಕರಿಸದೆ ವಿಕಾಸವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.**

ಕೆಲವರು ಭಾರತೀಯ ಸಂಪ್ರದಾಯದ ಶ್ರೇಷ್ಟತೆಯನ್ನು ಎತ್ತಿಹಿಡಿದರೆ, ಮತ್ತೆ ಕೆಲವನು ಬದಲಾವಣೆಯ ಅಗತ್ಯವನ್ನು ಕಂಡುಕೊಂಡರು. ರಾಜಾರಾಂ ಮೋಹನ ರಾಯರು ಭಾರತದ ಮಹಿಳೆಗೆ 'ಸತಿ'ಯಾಗಿ ಸಾಯದೆ ಬದುಕಲು ಅವಕಾಶ ಕಲ್ಪಿಸಿದರೆ, ದಯಾನಂದ ಸರಸ್ವತಿಯವರು ವೇದಕಾಲೀನ ಮಹಿಳೆಯ ಆದರ್ಶಗಳನ್ನೂ ಗುರುತಿಸಿದರು. ಪಾಶ್ಚಿಮಾತ್ಯ ಶಿಕ್ಷಣ, ಚಿಂತನೆ ಇವೆಲ್ಲದರ ಒಟ್ಟಾರೆ ಮೊತ್ತವಾಗಿ ಮಹಿಳೆಯ ಪ್ರಗತಿಯ ಕಡೆ ಚಿಂತಿಸತೊಡಗಿದರು. ಮಾನವತಾವಾದ, ವ್ಯಕ್ತಿ ಸ್ವಾತ್ರ್ಯ, ಉದಾರವಾದಗಳ ಚಿಂತನೆ ಮಹಿಳಾ ಸುದಾರಣೆಗೆ ಅನುವುಮಾಡಿತು. 'ಸತಿ' ಪದ್ದತಿಯ ನಿರ್ಮೂಲನ, ವಿಧವಾ ವಿವಾಹ, ಬಾಲ್ಯವಿವಾಹದ ವಿರೋಧ ಮಹಿಳಾ ಶಿಕ್ಷಣ ಆದ್ಯ ವಿಷಯಗಳಾಗಿ ಸುಧಾರಕರು ಕೈಗೆತ್ತಿಕೊಂಡರು. ಈ ವಿಚಾರಗಳನ್ನು ವೈಭವೀಕರಿಸದೆ ವಿಕಾಸವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಮೊದಲ ಹಂತದಲ್ಲಿ ಬಂದ ಸುಧಾರಕರು ಚಿಂತಿಸಿದ ಮಹಿಳಾ ಸಮಸ್ಯೆಗಳು 'ಮೇಲ್ವರ್ಗದ ಮಹಿಳೆ'ಯ ವಿಮೋಚನೆಯ ವಿಷಯಗಳಾಗಿದ್ದವು. 'ಸತಿ' ಪದ್ಧತಿ ಉತ್ತರ ಭಾರತದ ಮೇಲ್ವರ್ಗದ ಸಮಾಜದಲ್ಲಿ ವಿಶೇಷವಾಗಿ ಕಂಡು ಬರುತ್ತಿತ್ತು. ಕುಲೀನ ಪದ್ಧತಿ, ವಿಧವೆಯ ಶೋಷಣೆ ಮೇಲ್ವರ್ಗದಲ್ಲಿ ಅಸ್ತಿತ್ವದಲ್ಲಿತ್ತು. ಹಾಗಾಗಿ ಆ ಸಮಸ್ಯೆಗಳು ಮೊದಲು ಗಮನಕ್ಕೆ ಬಂದವು ಸ್ವಾಮಿ ವಿವೇಕಾನಂದರ ಹೊತ್ತಿಗೆ ಬಡಜನ ತೆಯನ್ನು ಗುರತಿಸಿದ ಅವರು ಬಡತನದ ಹಿನ್ನೆಲೆಯಲ್ಲಿ ಭಾರತೀಯ ಮಹಿಳೆಯ ಅಂತಃಶಕ್ತಿಯನ್ನು ಗುರುತಿಸಿದರು. ಸರ್ ಸಯದ್ ಅಹಮತ್ ಖಾನ್‌ರು ಕಡೆಗಣಿಸಲ್ಪಟ್ಟಿದ್ದ ಮುಸ್ಲಿಂ ಸಮಾಜದ ಸ್ತ್ರೀಯರ ಅಸ್ತಿತ್ವಕ್ಕಾಗಿ ಶ್ರಮಿಸಿದರು. ಮಹಿಳೆಯ ಶಿಕ್ಷಣಕ್ಕಾಗಿ ದುಡಿದವರಲ್ಲಿ ಕ್ರೈಸ್ತ ಮಿಷನರಿಗಳ ಪಾತ್ರ ಹಿರಿದು. ಜಾತಿ ವರ್ಗಗಳನ್ನು ಮೀರಿ ಮುಕ್ತವಾಗಿ ಶಿಕ್ಷಣವನ್ನು ನೀಡಲು ಅವರು ಸಮರ್ಥರಾದರು.

ಕಾಂಗ್ರೆಸ್‌ನ ಹುಟ್ಟು ಅದರಲ್ಲೂ ಗಾಂಧೀಜಿಯ ಪ್ರವೇಶ ಸ್ವಾತಂತ್ರ ಚಳವಳಿಗೆ ಆಕೆಯನ್ನು ಇಳಿಸಿತು. ದಂಡಿ ಸತ್ಯಾಗ್ರಹ ಮಹಿಳೆಯರನ್ನು ಬೃಹತ್ ಪ್ರಮಾಣದಲ್ಲಿ ಹೋರಾಟಕ್ಕಿಳಿಯುವಂತೆ ಮಾಡಿತು. ಫೂಲೆ ಹಾಗೂ ಅಂಬೇಡ್ಕರರ ಪ್ರವೇಶ ಈವರೆಗೆ ಸುಧಾರಣೆಗೂ ಸಿಕ್ಕದ ವರ್ಗದ ಕಡೆ ಗಮನ ಹರಿಸುವಂತಾಯಿತು. ರಾಜಾರಾಂ ಮೋಹನರಾಯರಿಂದ ಅಂಬೇಡ್ಕರರವೆಗೆ ಒಂದೊಂದು ವರ್ಗ ಶಿಕ್ಷಣಕ್ಕೆ ತೆರೆದುಕೊಂಡಂತೆ ಆ ವರ್ಗದ ಹೆಣ್ಣು ಮಕ್ಕಳ ಸಮಸ್ಯೆ ಚರ್ಚೆಗೆ ಬರತೊಡಗಿತು.

ಮಾರ್ಕ್ಸ್‌ವಾದಿ ಬರವಣಿಗೆಗಳು, ಸ್ತ್ರೀವಾದಿ ಬರವಣಿಗೆಗಳಲ್ಲೂ ನನಗೆ ಇಂತಹದೇ ಬೆಳವಣಿಗೆ ಕಾಣಬರುತ್ತಿದೆ. ಎಡಪಂತೀಯ ಹೊರಾಟಗಳು, ಮಹಿಳಾ ಚಳುವಳಿಗಳ ಬೆಳವಣಿಗೆಗೆ ಪ್ರೇರಕ ಶಕ್ತಿಯಾದದ್ದು ನಿಜ. ಯಾವುದೇ ಒಂದು ಪ್ರಭಾವವೇ ಕಾರಣವೆಂದು ಹೇಳುವುದು ಅಸಮಂಜಸವಾಗುತ್ತದೆ. ಅಂತರ ರಾಷ್ಟ್ರೀಯ ಮಹಿಳಾ ಹೋರಾಟಗಳು; ಸ್ತ್ರೀವಾದಿ ಚಿಂತನೆ ಬರವಣಿಗೆ ಹಾಗೂ ಚಳವಳಿಗಳು ಭಾರತದ ಮಹಿಳಾ ಹೋರಾಟಗಳಿಗೆ ಬುನಾದಿಯನ್ನು ಹಾಕಿವೆ.

ಈ ಹಿಂದೆ ಆರಂಭಿಸಿದ ಚರ್ಚೆಯನ್ನು ಮುಂದುವರೆಸುವುದಾದರೆ. ಸ್ತ್ರೀವಾದಿ ಬರವಣಿಗೆಯ ಮೊದಲ ಪೀಳಿಗೆ ಮೇಲ್ವರ್ಗದ ಮಹಿಳೆಯರನ್ನು ಪ್ರತಿನಿಸುತ್ತಾರೆ. ಅಷ್ಟೇ ಅಲ್ಲದೆ ಮೇಲ್ವರ್ಗದ ಮಹಿಳೆಯ ಸಮಸ್ಯೆಯನ್ನು ಚರ್ಚಿಸುತ್ತಾ, ಸ್ಪಂಧಿಸುತ್ತಾ ಬಂದಿದ್ದಾರೆ. ಹಿಂದುಳಿದ ವರ್ಗಗಳ ಹೋರಾಟ, ರೈತ ಹೋರಾಟ, ದಲಿತಹೋರಾಟಗಳಿಂದಾಗಿ ಮಹಿಳಾ ಲೇಖಕಿಯರದಾ ವಿಭಿನ್ನ ವರ್ಗಗಳಿಂದ ಪ್ರವೇಶವನ್ನು ಪಡೆದುಕೊಳ್ಳುತ್ತಿದ್ದಾರೆ. ಸ್ತ್ರೀವಾದಿ ಚಿಂತನೆ ಆರಂಭದಲ್ಲಿ ಕಂಡುಕೊಂಡ ತನ್ನ ಐಡೆಂಟಿಗೂ, ಇಂದು ಅದು ಪಡೆದುಕೊಳ್ಳುತ್ತಿರುವ ಚಹರೆಗೂ ಬಹಳ ವ್ಯತ್ಯಾಸ ಕಂಡುಬರುತ್ತದೆ.

ಆರಾಂಭದ ಸ್ತ್ರೀವಾದಿ ಬರವಣಿಗೆಗಳಲ್ಲಿ ಸ್ತ್ರೀವಾದ ಪುರುಷ ದ್ವೇಷವೆಂಬ ಭಾವನೆಯನ್ನು ವ್ಯಕ್ತಪಡಿಸುತ್ತಿತ್ತು. ಸ್ತ್ರೀವಾದಿಗಳೆಂದರೆ ಸಮಾಜವೂ ಅವರನ್ನು ಹಾಗೆ ಕಾಣುತ್ತಿತ್ತು. ಸ್ತ್ರೀವಾದವೆಂದರೆ ಪುರುಷ ವಿರೋಧಿ ಯಲ್ಲ ಸ್ತ್ರೀಪರ ಕಾಳಜಿ ಎಂಬ ಪರಿಕಲ್ಪನೆಯಾಗಿ ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತಿದೆ. ಆದ್ದರಿಂದ ಸರ್ಕಾರದ ಯೋಜನೆಗಳೂ ಮಹಿಳಾಪರವಾಗಿ ಪಾಪ್ಯೂಲರ್ ಟ್ರೆಂಡ್‌ಗಾಗಿ ಮೊದಲು ರೂಪಿತವಾಗುತ್ತದೆ.

ಈ ವರೆಗೆ 'ಭಾರತೀಯ ಮಹಿಳೆ'ಗ್ರಹಿಕೆಗಳನ್ನು ಸಾರವತ್ತಾಗಿಸಿದಂತೆ ಮೌಲ್ಯಗಳ ವಿಚಾರವನ್ನು ಅದೇ ಜಾಡಿನಲ್ಲಿ ಗುರುತಿಸಬೇಕಾಗಿದೆ. ಮೌಲ್ಯಗಳು ಸಾರ್ವತ್ರಿಕ ಸತ್ಯಗಳು ಎಂಬ ಭ್ರಮೆಯನ್ನು ಮೊದಲು ಮುರಿದು ಅವು ಆಯಾ ಪ್ರದೇಶದ ಭೌಗೋಳಿಕ, ಸಾಮಾಜಿಕ, ರಾಜಕೀಯ ಅಗತ್ಯಕ್ಕೆ ಅನುಸಾರವಾಗಿ ಹುಟ್ಟಿರುತ್ತವೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾ ಭಾರತೀಯ ಸಂಸ್ಕೃತಿಯಲ್ಲಿ ಮೌಲ್ಯಗಳು ರೂಪಿತವಾದ ಬಗೆಯನ್ನು ನೋಡಬೇಕಾಗಿದೆ. ಪಿತೃಪ್ರಧಾನ ಕೃಷಿಕ ಸಮಾಜದಲ್ಲಿ ಭೂಮಿಯ ಒಡೆತನ ರಾಜ್ಯದ

ಒಡೆತನದ ಪ್ರಶ್ನೆ ಆರಂಭವಾದಾಗ ಒಡೆತನ ತನ್ನಿಂದ ತನ್ನ ಮಗನಿಗೆ ಹೋಗಬೇಕೆಂಬ ಸ್ವಾರ್ಥ ಹೆಣ್ಣಿನ ಮೇಲಿನ ಹತೋಟಿಗೆ ಕಾರಣವಾಯಿತು. ತನಗೇ ಹುಟ್ಟಿದ ಮಗು ಎಂದು ದೃಢಪಡಿಸಿಕೊಳ್ಳುವ ಸಲುವಾಗಿ ' ' ಪತಿವ್ರತ್ಯದ ' ಮೌಲ್ಯ ತಲೆದೋರಿತು.

ತನಗೆ ಮಾತ್ರವೇ ಮೀಸಲಾಗಿಸಿ ಕೊಳ್ಳುವ ಪ್ರಕ್ರಿಯೆಯಲ್ಲಿ ' ಪತಿವ್ರತಾ ' ಧರ್ಮವನ್ನು ಬಲಗೊಳಿಸುತ್ತಾ ಮುನ್ನಡೆದ ಸಮಾಜ, ಅದರ ಸ್ಥಾಪನೆಗಾಗಿ ಪೂರಕ ಸಾಹಿತ್ಯ, ಆಚರಣೆಗಳನ್ನು ಹುಟ್ಟುಹಾಕಿತು. ವಂಶದ ಮುಂದುವರಿಕೆ ಅದಕ್ಕಾಗಿ ಗಂಡುಮಗುವಿನ ಹಾರೈಕೆ, ಹುಟ್ಟಿನ ಪಾವಿತ್ರತೆಪಿತೃಪ್ರಧಾನ ಸಮಾಜದ ಕೇಂದ್ರ ಆಸಕ್ತಿಯಾಯಿತು. ಆ ಸಮಾಜದ ಎಲ್ಲಾ ವಿಚಾರಗಳು ಇದರ ಸುತ್ತಲೇ ಗಿರಕಿ ಹೊಡೆಯಲಾರಂಭಿಸಿತು. ಗಂಡಿನ ಶ್ರೇಷ್ಠತೆ ಸ್ವೀಕೃತವಾದಂತೆ ಹೆಣ್ಣು ಗಂಡಿನ ನೆರಳಾದಳು. ಇಲ್ಲಿ ಎಲ್ಲಿಯವರೆಗೆ ಹೋಯಿತೆಂದರೆ ಹೆಣ್ಣು ಅಭಿವ್ಯಕ್ತಿ ಅಭಿಪ್ರಾಯದ ಸ್ವಾತಂತ್ರ್ಯವನ್ನು ಕಳೆದುಕೊಂಡಳು. ಚಿಂತನೆಯ ಶಕ್ತಿಯನ್ನು ಕಳೆದುಕೊಂಡು ವಿಕಾಸಗೊಳ್ಳುತ್ತಿದ್ದ ಮನುಕುಲದಲ್ಲಿ ಎರಡನೆ ದರ್ಜೆಯ ಜೀವಿಯಾಗಿ ಕಾಣಿಸಕೊಂಡಳು.

ಆದ್ದರಿಂದಲೇ 'ಆಕೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ' ' ಪುರುಷನ ಪಾಲಿಗೆ ಸಮಾನ' ' ವಿದ್ಯೆಗೆ ಅರ್ಹಳಲ್ಲ 'ಮೋಕ್ಷ ಅವಳಿಗೆಂದೂ ಇಲ್ಲ ' ಇಂತಹ ಮೌಲ್ಯಗಳು (?) ತಲೆದೋರಿದವು. ಮೌಲ್ಯಗಳನ್ನು ನಿರ್ಧರಿಸುವಾಗ ಹೆಣ್ಣುಗಂಡೆಂಬ ತಾರತಮ್ಯಯ ಮಾತ್ರಕೆಲಸಮಾಡದೆ ವರ್ಗದ ಹಿತಾಸಕ್ತಿಗಳು ಪ್ರಮುಖ ಪಾತ್ರ ವಹಿಸಿವೆ. ಆದ್ದರಿಂದಲೇ ಒಂದೇ ತಪ್ಪಿಗೆ ಬೇರೆ ಬೇರೆ ವರ್ಗಕ್ಕೆ ಬೇರೆ ಬೇರೆ ಶಿಕ್ಷೆಗಳನ್ನು ನೀಡಲಾಗುತ್ತಿತ್ತು. ಅನುಲೋಮ ವಿಲೋಮ ಪದ್ಧತಿಯಂತಹ ಅಸಮಾನ ವೈವಾಹಿಕ ಅವಕಾಶ ಲಿಂಗತಾರತಮ್ಯವನ್ನು ಸೂಚಿಸುತ್ತದೆ. ಲಿಂಗತಾರತಮ್ಯ [Genders inequality] ಎಂದರೆ ಕೇವಲ ಹೆಣ್ಣು-ಗಂಡೆಂಬ ಕಾರಣಕ್ಕೆ ತೋರುವ ತಾರತಮ್ಯಾವಲ್ಲ ಅದರ ಜೊತೆಗೆ ಜಾತಿ ವರ್ಗದ ಹಿತಾಸಕ್ತಿಯೂ ಸೇರಿಕೊಂಡಿರುತ್ತದೆ.

ಅನುಲೋಮ ಪದ್ಧತಿಯಲ್ಲಿ ಮೇಲ್ವರ್ಗದ ಪುರುಷ ಕೆಳವರ್ಗದ ಹೆಣ್ಣನ್ನು ವಿವಾಹವಾಗುವ ಅಧಿಕಾರವನ್ನು ನೀಡಲಾಗಿರುತ್ತದೆ. ಅದೇ ಕೆಲವರ್ಗದ ಪುರುಷ ಮೇಲ್ವರ್ಗದ ಮಹಿಳೆಯನ್ನು ವಿವಾಹವಾಗಲು ಅವಕಾಶವಿಲ್ಲವೆನ್ನುವ ಸೂತ್ರ ಯಾರ ಪರವಾದ ಆಲೋಚನೆ ಎನ್ನುವುದನ್ನು ಬಿಡಿಸಿಹೇಳಬೇಕಿಲ್ಲ. ಇಂತಹ ಲಿಂಗತಾರತಮ್ಯಯದ ನೆಲೆಯ ನೀತಿನಿಯಮಗಳು ಧಾರ್ಮಿಕ ಚೌಕಟ್ಟಿನೊಂದಿಗೆ ಜಾರಿಗೆ ಬರುವುದರಿಂದ ಅವುಗಳನ್ನು ಮೀರುವ ಶಕ್ತಿಯನ್ನು ಜನಸಾಮಾನ್ಯ ಕಳೆದುಕೊಳ್ಳುತ್ತಾನೆ. ಈ ಧಾರ್ಮಿಕ ನಿಯಮಗಳೇ ಪ್ರಾಚೀನಭಾರತವನ್ನು ಆಳಿದವೆಂದರೆ ತಪ್ಪಾಗಲಾರದು. ರಾಜ 'ಧರ್ಮ ಪರಿಪಾಲಕ ನಾಗುತ್ತಿದ್ದುದರಿಂದ ಧರ್ಮದ ಚೌಕಟ್ಟಿನ ನಿಯಮಗಳೇವಾಸ್ತವದ ಅರ್ಥದಲ್ಲಿ ರಾಜ್ಯಭಾರ ಮಾಡುತ್ತಿದ್ದವು.

ಆಧುನಿಕ ರಾಜ್ಯಗಳಲ್ಲಿ ಸಂವಿಧಾನ ಮಾಡುವ ಕೆಲಸವನ್ನು, ಕಾಯಿದೆಗಳು ಮಾಡುವ ಕೆಲಸವನ್ನು ಧಾರ್ಮಿಕ ಮೌಲ್ಯಗಳು ನಿರ್ವಹಿಸುತ್ತಿದ್ದವು. ದೃಢ ನಂಬಿಕೆ, ವಿಧೇಯತೆ ಇವುಗಳು ಮೌಲ್ಯಗಳಾಗಿದ್ದು' ಪ್ರಶ್ನಿಸುವ ಗುಣವನ್ನು ಇವು

ಕಲೆ, ಸಾಹಿತ್ಯ, ಸಂಗೀತ, ಶಾಸ್ತ್ರಗಳು ರಾಜಕೀಯ ಯಾವಕ್ಷೇತ್ರದಲ್ಲೂ ಪುರುಷನಂತೆ ತನ್ನ ಸಾಧನೆಯನ್ನು ಮೆರೆಯನು ಸಾಧ್ಯವಾಗಲಿಲ್ಲ, ಅವೆಲ್ಲವೂ ಕೇವಲ ಪುರುಷನ ಕ್ಷೇತ್ರಗಳಾದವು. [Male domain] ಹಾಗಾದರೆ ಮಹಿಳೆಯರ ಸಾಧನೆಯೇನು? ಅವಳ ಚರಿತ್ರೆ ಯಾವುದು? ಪುರುಷನ ವಲಯದಲ್ಲಿ ನಿಂತು ಮಹಿಳೆ ಏನೂ ಮಾಡಲಿಲ್ಲವೆಂದು ಸಾರಿಬಿಡೋಣವೇ ಅಥವಾ ಈ ವರೆಗಿನ ಮೌನವಹಿಸಿದಂತೆ ಮುಂದುವರಿಯಬೇಕೆ? ಬಹುಶಃ ಪುನರ್ ನಿರ್ಮಾಣದ ಬಹುಮುಖ್ಯವಾದ ಗುರಿ ಬಾಯಿಲ್ಲದವರಿಗೆ ಬಾಯಿ ಯಾಗುವುದು, ಕೇಳದ ಕ್ಷೀಣ ಧ್ವನಿಗಳನ್ನು ಆಲಿಸುವುದು-ಚರಿತ್ರೆಯ ಪುನರ್‌ನಿರ್ಮಾಣಕಾರರ ಕೆಲಸವಾಗುತ್ತದೆ.

ಕಸಿದುಕೊಂಡಿದ್ದವು. ಬುದ್ಧ ಪ್ರಶ್ನಿಸಲು ಆರಂಭಿಸಿದಾಗ ಅದು ಮೌಲ್ಯಗಳ ಪ್ರಶ್ನೆಯೂ ಆಗಿತ್ತು. ಮಹಿಳೆಯ ವಿಷಯವನ್ನು ಚರ್ಚಿಸುತ್ತಾ ಮೌಲ್ಯಗಳ ಬಗೆಗೆ ವಿಶೇಷವಾಗಿ ಮಾತಾಡಲು ಕಾರಣ ಮಹಿಳೆಯ ಸುತ್ತ ಮೌಲ್ಯಗಳ ಹೆಸರಿನ ಸರಪಳಿಗಳನ್ನು ಸುತ್ತಲಾಯಿತು. ವಿಪರ್ಯಾಸವೆಂದರೆ ಯಾವ ಸಮಾಜ ಪತಿವ್ರತಾ ಧರ್ಮವನ್ನು ಎತ್ತಿಹಿಡಿಯಿತೋ ಅದೇ ಸಮಾಜವೇಶ್ಯಾವಾಟಿಕೆಯನ್ನು ಘೋಷಿಸಿತು. ಈ ಎರಡರೊಳಗಿನ ಲಿಂಗತಾರತಮ್ಯವನ್ನು ಗ್ರಹಿಸಿದಾಗ ಮಾತ್ರವೇ ಮೌಲ್ಯಗಳ ಹುಸಿತನ ವ್ಯಕ್ತವಾಗುತ್ತದೆ.

' ಗಂಡು ಹೆಣ್ಣನ್ನು ಶೋಷಿಸಿದೆ' ಎಂಬ ಸರಳವಾದ ಹೇಳಿಕೆಯೊಂದಿಗೆ ಸ್ತ್ರೀವಾದಿ ನೆಲೆಯ ವಿಮರ್ಶೆಗಳನ್ನು ಕಾಣುತ್ತೇವೆ. ಹರಿಶ್ಚಂದ್ರ-ಚಂದ್ರಮತಿಯ ಸಂದರ್ಭದ ಲ್ಲಾಗಲಿ, ರಾಮ ಸೀತೆಯರ ಸಂದರ್ಭದಲ್ಲಾಗಲಿ ಅಥವಾ ಇತ್ತೀಚಿನ ಕಥ ಕಾದಂಬರಿಗಳಲ್ಲಾಗಲಿ ಇಂತಹ ತೀರ್ಮಾನ ನೀಡಿದ ವಿಮರ್ಶೆಗಳು ಕಾಣಬರುತ್ತವೆ. ಹೆಣ್ಣು ಶಿಶುಹತ್ಯೆಯಿಂದ 'ಸತಿ' ಪದ್ಧತಿಯವರೆಗೆ ಗಂಡಿನಿಂದ ಹೆಣ್ಣಿನ ಶೋಷಣೆ ಎಂಬ ತೀರ್ಮಾನಕ್ಕೆ ಬರುತ್ತೇವೆ. ಆದರೆ ಅವು ಸರಳವಾದ ತೀರ್ಮಾನಗಳು ಪುರುಷ ಪ್ರಧಾನತೆಯನ್ನು ಒಪ್ಪಿಕೊಂಡಂತಹ ಸಮಾಜದಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನವಾಗಿ ಆ ಮೌಲ್ಯಗಳನ್ನು ಆರೋಪಿಸಿಕೊಳ್ಳುತ್ತಾರೆ.

ಸತಿ ಪದ್ಧತಿಯನ್ನು ಒಪ್ಪಿಕೊಂಡ ಸಮಾಜದಲ್ಲಿ ಹೆಣ್ಣು ಗಂಡನೊಡನೆ ಚಿತೆಗೇರುವಂತೆ ಮಾಡುವಾಗ ಇಡೀ ಸಮಾಜ ಅದಕ್ಕೆ ಮಾನಸಿಕವಾಗಿ ಸಿದ್ದವಾಗಿರುತ್ತದೆ. ಅದನ್ನು ವಿಜೃಂಭಿಸುವ, ವೈಭವೀಕರಿಸುವ ಮಾತುಗಳು ಆ ಪದ್ಧತಿಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. 'ಸತಿ' ಯಾಗುವ ಹೆಣ್ಣನ್ನು ಮನವೊಲಿಸುವ ಅಥವಾ ಬಲಾತ್ಕರಿಸುವ ಕೆಲಸವನ್ನು ಆ ಮನೆಯ ಗಂಡಸರೇ ಮಾಡಿರುತ್ತಾರೆಂದೇನೂ ಅಲ್ಲ-ಅದರಲ್ಲಿ ಮಹಿಳೆಯರು ಭಾಗಿಯಾಗುತ್ತಾರೆ.

ಸತಿ ಪದ್ಧತಿಯನ್ನು ಒಪ್ಪಿಕೊಂಡ ಸಮಾಜದಲ್ಲಿ ಹೆಣ್ಣು ಗಂಡನೊಡನೆ ಚಿತೆಗೇರುವಂತೆ ಮಾಡುವಾಗ ಇಡೀ ಸಮಾಜ ಅದಕ್ಕೆ ಮಾನಸಿಕವಾಗಿ ಸಿದ್ದವಾಗಿರುತ್ತದೆ. ಅದನ್ನು ವಿಜೃಂಭಿಸುವ, ವೈಭವೀಕರಿಸುವ ಮಾತುಗಳು ಆ ಪದ್ಧತಿಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. 'ಸತಿ'ಯಾಗುವ ಹೆಣ್ಣನ್ನು ಮನವೊಲಿಸುವ ಅಥವಾ ಬಲಾತ್ಕರಿಸುವ ಕೆಲಸವನ್ನು ಆ ಮನೆಯ ಗಂಡಸರೇ ಮಾಡಿರುತ್ತಾರೆಂದೇನೂ ಅಲ್ಲ-ಅದರಲ್ಲಿ ಮಹಿಳೆಯರು ಭಾಗಿಯಾಗುತ್ತಾರೆ.

ಇದನ್ನು ಹೆಣ್ಣಿಗೆ ಹೆಣ್ಣು ಶತೃ ಎಂದಾಗಲೀ, ಗಂಡಿನಶೋಷಣೆಗೆ ಹೆಣ್ಣು ಬಲಿಯಾದಳೆಂದಾಗಲೀ ವಿವರಿಸಿದರೆ ಸಾಗರ ತೀರದಲ್ಲಿ ನಿಂತು ಸೂರ್ಯಸಮುದ್ರದಿಂದ ಎದ್ದು ಬಂದ ಎಂದು ಹೇಳಿದಂತಾಗುತ್ತದೆ. ಅದು ಒಂದು ಹೆಣ್ಣಿನ ಶೋಷಣೆಯಲ್ಲ, ಇಡೀ ಸಮಾಜ ತನ್ನನ್ನು ತಾನೇ ಬಲಿಯಾಗಿಸಿಕೊಳ್ಳುತ್ತದೆ. ಏಕೆಂದರೆ ಸತ್ತವಳು ಒಬ್ಬಳಾದರೂ-ಆ ನೋವನ್ನು ಅನುಭವಿಸಿದವರಲ್ಲಿ ಅವಳ ಬಂಧು ಬಳಗವೇ ಭಾಗಿಯಾಗಿರುತ್ತದೆ. ಬಲಿದಾನದವ್ಯಾಖ್ಯಾನದೊಂದಿಗೆ ನೋವಿನಲ್ಲಿ ಸಾರ್ಥಕತೆಯನ್ನು ಹುಡುಕಿ ಕೊಳ್ಳುತ್ತಾರೆ.

ಈ ಹಂತದಲ್ಲಿ ಲೇಖನದ ಶೀರ್ಷಿಕೆಯ ಕತೆ ಗಮನಹರಿಸಬಯಸುತ್ತೇನೆ. ಹೆಣ್ಣೊಬ್ಬಳನ್ನು ಸತಿಯಾಗಿಸುವ ಮೂಲಕ ಅವಳ ಬದುಕು ಪೂರ್ಣ ವಿಕಾಸವಾಗದೆ ಅಲ್ಲಿಗೇ ನಿಂತುಹೋಯಿತು. ವ್ಯಕ್ತಿಯ ವಿಕಾಸವನ್ನು ಅರ್ಥದಲ್ಲೇ ಹೊಸಕಿಹಾಕುವುದು ಭ್ರೂಣ ಹತ್ಯೆಯಲ್ಲದೆ ಮತ್ತೇನು. ಸಂಸ್ಕೃತಿಯ ಪೂರ್ಣ ವಿಕಾಸಕ್ಕೆ ಅದರ ಭಾಗವಾದ ಪ್ರತಿವ್ಯಕ್ತಿಯ ಬೆಳವಣಿಗೆಗೆ ಅವಕಾಶವಿರಬೇಕು. ಮೌಲ್ಯದ 'ಹೆಸರಿನಲ್ಲಿ, ಸಂಪ್ರದಾಯದ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಸಮಾಜದ ಅರ್ಧಭಾಗದ ಬೆಳವಣಿಗೆಯನ್ನು ಹೊಸಕಿಹಾಕುವ ಮೂಲಕ ಸಂಸ್ಕೃತಿಯ ಭ್ರೂಣಹತ್ಯೆಯಾಗಿದೆ. ಪೂರ್ಣ ಬೆಳೆದ ಸಂಸ್ಕೃತಿಯ ಚಿತ್ರಣವನ್ನು ಕಲ್ಪಿಸಿಕೊಳ್ಳುವುದು ನಮಗಿಂದು ಅಸಾಧ್ಯವಾಗಿದೆ.

ಕಲೆ, ಸಾಹಿತ್ಯ, ಸಂಗೀತ, ಶಾಸ್ತ್ರಗಳು ರಾಜಕೀಯ ಯಾವಕ್ಷೇತ್ರದಲ್ಲೂ ಪುರುಷನಂತೆ ತನ್ನ ಸಾಧನೆಯನ್ನು ಮೆರೆಯನು ಸಾಧ್ಯವಾಗಲಿಲ್ಲ, ಅವೆಲ್ಲವೂ ಕೇವಲ ಪುರುಷನ ಕ್ಷೇತ್ರಗಳಾದವು. [Male domain] ಹಾಗಾದರೆ ಮಹಿಳೆಯರ ಸಾಧನೆಯೇನು? ಅವಳ ಚರಿತ್ರೆ ಯಾವುದು? ಪುರುಷನ ವಲಯದಲ್ಲಿ ನಿಂತು ಮಹಿಳೆ ಏನೂ ಮಾಡಲಿಲ್ಲವೆಂದು ಸಾರಿಬಿಡೋಣವೇ ಅಥವಾ ಈ ವರೆಗಿನ ಮೌನವಹಿಸಿದಂತೆ ಮುಂದುವರಿಯಬೇಕೇ? ಬಹುಶಃ ಪುನರ್ ನಿರ್ಮಾಣದ ಬಹುಮುಖ್ಯವಾದ ಗುರಿ ಬಾಯಿಲ್ಲದವರಿಗೆ ಬಾಯಿ ಯಾಗುವುದು, ಕೇಳದ

ಕ್ಷೀಣಧ್ವನಿಗಳನ್ನು ಆಲಿಸುವುದು - ಚರಿತ್ರೆಯ ಪುನರ್ ನಿರ್ಮಾಣಕಾರರ ಕೆಲಸವಾಗುತ್ತದೆ.

ಸಾಧಕ ಮಹಿಳೆಯರು ಎಂದು ಕರೆಯುತ್ತಾ ಇಲ್ಲವೆ ಮಹಿಳಾ ಇತಿಹಾಸವೆಂದು ಹೇಳುತ್ತಾ ಕೆಲವೇ ಕೆಲವು ಆಡಳಿತ ನಡೆಸಿದ ಮಹಿಳೆಯಾರನ್ನೋ, ಇಲ್ಲವೆ ಲೇಖಕಿಯರನ್ನೋ ಹೆಸರಿಸುತ್ತೇವೆ. ಇಲ್ಲದೆ ಸತಿ ಹೋದ ಮಹಿಳೆಯರು ಅವರ ಸಾವಿನ ನೆನಪಿಗೆ ನೆಟ್ಟಕಲ್ಲುಗಳು ರಾಜಕೀಯ, ಸಾಹಿತ್ಯ, ಧರ್ಮ ಚಿಂತನೆ ಇವುಗಳೆಲ್ಲ ಕೇವಲ ಪುರುಷನ ಕಾರ್ಯಕ್ಷೇತ್ರಗಳಾಗಿವೆ. ಅಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸವುದು ಅಥವಾ ಆ ನಿಟ್ಟಿನ ಬೆಳವಣಿಗೆ ಮಾತ್ರವೇ ಮನುಕುಲದ ಅಭಿವೃದ್ದಿಗೆ ಕಾರಣವಾಯಿತೆಂದು ಭಾವಿಸುವುದು ಮತ್ತು ಹಳೆಯ ಜಾಡಿನಲ್ಲೇನೆಡೆದಂತಾಗುತ್ತದೆ.

ಮಹಿಳಾ ಹಿನ್ನೆಲೆಯಿಂದ ಬೆಳವಣಿಗೆಯಿಂದ ಅವಳಿಗಿದ್ದ ಪರಿಮಿತ ಬದುಕಿನಲ್ಲು ಮನುಕುಲದ ಉಳಿವಿಗೆ, ಬೆಳವಣಿಗೆಗೆ ಅವಳ ಕೊಡಿಗೆಯನ್ನು ಗುರುತಿಸುವುದು ಇಂದು ಅಗತ್ಯವಾಗಿದೆ. ಸಾರ್ವತ್ರಿಕವಾಗಿ ಎಲ್ಲಾ ಜಾತಿವರ್ಗದ ಹಿನ್ನೆಲೆಯಲ್ಲಿ ಅವಳಿಗೆ ನೀಡಿದ್ದ ಅವಕಾಶ ಸಂಸಾರವನ್ನು ನಿರ್ವಹಿಸುವ ಕೆಲಸ. ಸಂಸಾರ ನಿರ್ವಹಣೆಕಾಲ ಕಾಲಕ್ಕೆ ವಿಸ್ತರಿಸುತ್ತಾ ನಡೆದಿದೆ. ಬೇರೆ ಬದುಕಿನ ಸಂದರ್ಭದಲ್ಲಿ ಆಹಾರ ಸಂಗ್ರಹಣೆ ಹಾಗೂ ಮಕ್ಕಳ ಪೋಷಣೆ ಪ್ರಧಾನ ಜವಾಬ್ದಾರಿಗಳಾಗಿದ್ದವು. ನೆಲೆನಿಂತ ಬದುಕಿನಲ್ಲಿ ಆಹಾರ ಸಂಗ್ರಹಣೆಯ ಜೊತೆಗೆ ವಿಸ್ತರಿಸಿದ ಕುಟುಂಬಕ್ಕೆ ಆಹಾರ ಬೇಯಿಸುವ ಕೃಷಿ ಮತ್ತಿತರ ಕುಶಲಕರ್ಮಿಗಳ ಸಂಸಾರದಲ್ಲಿ ಪುರುಷನೆ ಎಲ್ಲ ಕೆಲಸದಲ್ಲೂ ಬೆಂಬಲವಾಗಿ ದುಡಿಯುತ್ತಾ ಬಂದಿದ್ದಾನೆ.

ಅವಳಿಗೇ ಮೀಸಲಾದ ಕೆಲಸಗಳೆಂದರೆ ಅಡಿಗೆ ಮತ್ತು ಮಕ್ಕಳ ಪೋಷಣೆ ಒಂದು ಅಥವಾ ಎರಡು ಹೊತ್ತು ಉಣ್ಣುವ ಸಮಾಜದಿಂದ, ಊಟವೇ ಬಹುಮುಖ್ಯ ಆದ್ಯತೆಯಾದ ಸಮಾಜದ ವರೆಗೆ ಅಡುಗೆ ಮನೆಯ ನಿರ್ವಹಣೆಯನ್ನು ಮಹಿಳೆ ಮಾಡಿಕೊಂಡು ಬಂದಿದ್ದಾಳೆ. ಅಡುಗೆ ಮನೆಯಲ್ಲಿ ಅವಳ ಪ್ರತಿಭೆ ಕಮರಿಹೋಯಿತೆಂದು ಹೇಳಿ ಮುಗಿಸುವುದಕ್ಕಿಂತ ನಾಲ್ಕಡಿಯ ಕೋಣೆಯ ಒಳಗಿನ ಅವಳ ಸಾಧನೆಯನ್ನು ಗುರುತಿಸಬೇಕಾಗಿದೆ. ಗಾಣದೆತ್ತಿನಂತೆ ದುಡಿದು ಹೊರತಂದ ಬಸಿದ ಎಣ್ಣೆಯನ್ನು ಬಳಸಿ ಉರಿದ ದೀಪಗಳು ಯಾವುದೆಂದು ಗುರುತಿಸುವುದು ಮಹಿಳಾಚರಿತ್ರೆಯ ಕರ್ತವ್ಯವಾಗಿದೆ.

ಒಂದೆರಡು ಉದಾಹರಣೆಗಳನ್ನು ಗಮನಿಸುವುದಾದರೆ-ಎಲ್ಲಾ ಪ್ರಾದೇಶಿಕವಾದ ವೈವಿಧ್ಯಮಯ ರುಚಿ ಕಟ್ಟಾದ ಆಹಾರ ಆಯಾ ಪ್ರಾದೇಶಿಕ ಮಹಿಳೆಯರ ಸಂಶೋಧನೆಯೇ ಆಗಿದೆ. ಇಂದು ಆಹಾರ ಪದಾರ್ಥವೊಂದು ಮಾರುಕಟ್ಟೆಗೆ ಬಂದರೆ ಅದರ ರುಚಿಗೆ ಪೇಟೆಂಟ್‌ರೈಟನ್ನು ತೆಗೆದುಕೊಳ್ಳುತ್ತಾರೆ. ಸಾಂಪ್ರದಾಯಿಕ ಅಡುಗೆಗಳು, ಅದರ ವಿಶಿಷ್ಟವಾದ ರುಚಿ ಅಡುಗೆ ಮನೆಯಲ್ಲಿ ಹೆಂಗಸರು ನಿರಂತರವಾಗಿ ಮಾಡುತ್ತಾ ಬಂದ ಪ್ರಯೋಗ ಅಥವಾ ಹೊಂದಾಣಿಕೆಯಿಂದ ಕಂಡುಕೊಂಡುದೇ ಆಗಿದೆ. ವರ್ಷಾಕಾಲ ಇಡುವಂತಹ ಉಪ್ಪಿನಕಾಯಿ, ಹಪ್ಪಳ, ಕಡಕ್‌ರೊಟ್ಟಿ ಇತ್ಯಾದಿಗಳು ಶೇಖರಣೆಯ ತಂತ್ರಗಳಾಗಿವೆ. ಆಧುನಿಕ ಕೃತಕ ಸಂಸ್ಕರಣಾ ವಸ್ತುಗಳನ್ನು ಬಳಸದೆ ಸಂಸ್ಕರಿಸುವ ಕಲೆ ಆಕೆಗೆ ತಿಳಿದಿತ್ತು.

ಜಗತ್ತಿನ ಮೊದಲ ವೈದ್ಯೆ ಒಬ್ಬಳು ತಾಯಿ



ವಿವಾಹದ ಸಂಸ್ಥೆಯಿಂದ ರಕ್ಷಣೆಯನ್ನು ಪಡೆದವರೆಂದರೆ – ಆಳುವ ವರ್ಗ ತನ್ನ ಅಧಿಕಾರದಿಂದ ತನ್ನ ಮನೆಯ ಹೆಂಗಸರನ್ನು ರಕ್ಷಿಸಿಕೊಂಡಿತ್ತು. ಧಾರ್ಮಿಕ ಕಾರಣದಿಂದ ಪುರೋಹಿತವರ್ಗ ಒಂದು ರೀತಿಯಲ್ಲಿ ತನ್ನ ಸಮಾಜದ ಹೆಣ್ಣು ಮಕ್ಕಳ ಮೇಲೆ ಉಳಿದವರು ಕೈಮಾಡದಂತೆ ಕಾಪಾಡಿಕೊಂಡಿತು, ಹೆಣ್ಣಿನದೃಷ್ಟಿಯಲ್ಲಿ ಅರಾಜಕತೆ ಸದಾಕಾಲಕ್ಕೂ ತಾಂಡವವಾಡುತ್ತಿತ್ತು.

ಮೊದಲ ಸರ್ಜನ್ ಸೂಲಗಿತ್ತಯರು ತನ್ನ ಅನುಭವದ ಆಧಾರದ ಮೇಲೆ ಪ್ರಥಮ ಚಿಕಿತ್ಸೆ ಮಹಿಳೆಯಾಗಿರುತ್ತಾಳೆ, ತುಳಸಿ, ಅರಿಸಿನ, ಬೆಳ್ಳುಳ್ಳಿ ಇವುಗಳು ಔಷದೀಯ ಗುಣಗಳನ್ನು ಯಾವ ಘೋಷಣೆಗಳೂ ಇಲ್ಲದೆ ಕಂಡುಕೊಂಡಿದ್ದಾಳೆ. ಆಯುರ್ವೇದವೆಂದು ಹೇಳುತ್ತಾ ಎಲ್ಲಾ ಹೆಗ್ಗಳಿಕೆಯನ್ನು ಋಷಿಗಳಿಗೆ ನೀಡುತ್ತೇವೆ. ಪ್ರಕೃತಿಯಲ್ಲಿ ಪ್ರಕೃತಿಯಾಗಿ ಬದುಕಿದ ಜನಸಾಮಾನ್ಯರ ಜ್ಞಾನಕ್ಕೆ ಬೆಲೆ ಕಟ್ಟಲಾದೀತೆ? ಅವರು ಹೆಸರಿಲ್ಲದವರಾಗಿ ಕಳೆದುಹೋಗುತ್ತಾರೆ.

ಪ್ರಾದೇಶಿಕವಾಗಿ ಬಳಸುವ ವಿಶಿಷ್ಟ ಔಷಧಗಳನ್ನು ಸಂಗ್ರಹಿಸಿ ಆಯಾ ಪ್ರದೇಶದ ಮಹಿಳೆಯರ ಕೊಡುಗೆ ಎಂದಾದರೂ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೆರಿಗೆಯ ತಂತ್ರಗಳು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗೊಳ್ಳುತ್ತದೆ. ಆ ತಂತ್ರಗಳಿಗೆ ಕಾರಣರಾದ ಆ ಪ್ರದೇಶದ ಸೂಲಗಿತ್ತಿಯರಿಗೆ ಅದರ ಹೆಗ್ಗಳಿಕೆಯನ್ನು ನೀಡಬೇಕಾಗುತ್ತದೆ. ಸೋಲಿಗರ ಹೆಣ್ಣು ಮಕ್ಕಳು ಕಂಡುಕೊಂಡಿರುವ ವಿಶಿಷ್ಟವಾದ ಹೆರಿಗೆಯ ಕ್ರಮ ಸೋಲಿಗರ ಸಮಾಜವನ್ನು ಉಳಿಸಿದೆ. ಆ ಜನರ ಹೆರಿಗೆ ಆಚರಣೆಗಳಿಗೂ ಶಾಸ್ತ್ರ ಗ್ರಂಥಗಳ ವಿವರಣೆಗೂ ಯಾವ ಸಂಬಂಧವೂ ಇಲ್ಲ. ಅವಳ ಸಾಧನೆಯೆಂದು ಗುರುತಿಸಬೇಕಾಗಿದೆ.

ಮೇಲಿನ ವಾದದ ತಾತ್ಪರ್ಯ ಮಹಿಳೆಯ ಚರಿತ್ರೆ ಸೂಕ್ಷ್ಮ ಕೆಳಸ್ತರದ ಅಧ್ಯಯನದಿಂದ ಸಾಧ್ಯವಾಗುತ್ತದೆ.

ಶಾಸನಗಳಲ್ಲಿ ಕಾಣಿಸಿದ. ಅವಳ ಮನೋವೇದನೆ ಜನಪದ ಹಾಡುಗಳಲ್ಲಿ ನಮಗೆ ದೊರೆಯುತದೆ. ಕೆಳವರ್ಗದ ಮಹಿಳೆಯ ಬದುಕನ್ನು ಅರಿಯಲು ಜನಪದ ಕಥೆಗಳು, ಗ್ರಾಮದೇವತೆಯರ ಕುರಿತು ಹಾಡುಗಳು ಪ್ರಮುಖ ಆಧಾರಗಳಾಗುತ್ತವೆ. ವೇದನೆಗಳು ಮಾತ್ರವಲ್ಲ ಅವಳ ಮೌಲ್ಯಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ರೋಚಕವಾದ ಕಥೆಗಳು ಸೃಷ್ಟಿಯಾಗುತ್ತವೆ.

ಹುಟ್ಟಿನ ಸುತ್ತಲೂ ಹುಬ್ಬುವ ಕಥೆಗಳನ್ನು ಮತ್ತೊಮ್ಮೆ ಅರ್ಥೈಸಬೇಕಾಗಿದೆ. ಮಹಾಭಾರತ ರಾಮಯಣದಿಂದ ಮೊದಲುಗೊಂಡು ನೂರಾರು ಜನಪದ ಕಥೆಗಳವರೆಗೆ ಪವಾಡದ ರೋಚಕ ಕಥೆಗಳು ಕೇಳಿಬರುತ್ತವೆ. ಇಂತಹ ಒಂದು ಉದಾಹರಣೆಯನ್ನು ಇಲ್ಲಿ ವಿಶ್ಲೇಷಿಸುವುದಾದರೆ ಹೆಳವರ ಕಥೆಯೊಂದರಲ್ಲಿ ಏಳುಜನ ಸೋದರರಿಗೆ ಒಬ್ಬಳು ತಂಗಿ ಆಕೆ ನದೀತೀರದಲ್ಲಿ ಕೂದಲನ್ನು ಆರಿಸಿಕೊಳ್ಳುತ್ತಾ ಕುಳಿತಿದ್ದಾಗ ಇದ್ದಕ್ಕಿದ್ದಂತೆ ಬಿಳಿಯ ಕುದುರೆಯೊಂದು ಓಡಿಹೋಗುತ್ತದೆ. ಪ್ರಕರವಾದ ಅದರ ಬೆಳಕಿಗೆ ಮೂರ್ಛೆ ಹೋಗುತ್ತಾಳೆ. ಅನಂತರ ಆಕೆ ಗರ್ಭವತಿಯಾಗಿರುತ್ತಾಳೆ. ಅವಳ ಸೋದರರು ಆಕೆಯನ್ನು ಬೇರೆಯೂರಿಗೆ ಕರೆದುಕೊಂಡು ಹೋಗುತ್ತಾರೆ. ಅವಳಿಗೆ ಹುಟ್ಟುವ ಮಗುವನ್ನು ಅಧಿಕಾರಕ್ಕೆ ತರಲು ಹೋರಾಡುತ್ತಾರೆ.

ಕುದುರೆ, ಹಾವು, ಆನೆ, ಕೋಣ, ಗೂಳಿ, ಹಣ್ಣಿನ ಪ್ರಸಾದ ಎಲ್ಲವೂ ಸಂಕೇತಗಳು ಮಾತ್ರ ಹೇಳಲಾಗದ ಸತ್ಯವನ್ನು ಸಾಂಕೇತಿಕ ಭಾಷೆಯಲ್ಲಿ ಹೇಳಿಕೊಳ್ಳುತ್ತಾರೆ. ಮೇಲ್ವರ್ಗದ ಜನರಿಂದ ನಡೆಯುತ್ತಿದ್ದ ಶೋಷಣೆ, ಅತ್ಯಾಚಾರ ಯಾವುದನ್ನು ವಿರೋಧಿಸುವ ಶಕ್ತಿ ಅವರಿಗಿರಲಿಲ್ಲ. ಹಾಗೆಂದು ಆ ಸಮಾಜ ಅವಳನ್ನು ಬಹಿಷ್ಕರಿಸದೆ ಪವಾಡದ ಕಥೆಯ ಮೂಲಕ ಇಂತಹ ಹುಟ್ಟೊಂದು ಸಾಮಾಜಿಕ ಮನ್ನಣೆಯನ್ನು ಸೃಷ್ಟಿಸಬೇಕಾಗುತ್ತಿತ್ತು. ಕೆಳವರ್ಗದ ಸಮಾಜಕ್ಕೆ ಕಾಡಿದ್ದು'ಪಾವಿತ್ರ್ಯದ'ಪ್ರಶ್ನೆ ಯಲ್ಲ ಉಳಿವಿನ ಪ್ರಶ್ನೆ.

ವಿವಾಹದ ಸಂಸ್ಥೆಯಿಂದ ರಕ್ಷಣೆಯನ್ನು ಪಡೆದವರೆಂದರೆ – ಆಳುವ ವರ್ಗ ತನ್ನ ಅಧಿಕಾರದಿಂದ ತನ್ನ ಮನೆಯ ಹೆಂಗಸರನ್ನು ರಕ್ಷಿಸಿಕೊಂಡಿತ್ತು. ಧಾರ್ಮಿಕ ಕಾರಣದಿಂದ ಪುರೋಹಿತವರ್ಗ ಒಂದು ರೀತಿಯಲ್ಲಿ ತನ್ನ ಸಮಾಜದ ಹೆಣ್ಣು ಮಕ್ಕಳ ಮೇಲೆ ಉಳಿದವರು ಕೈಮಾಡದಂತೆ ಕಾಪಾಡಿಕೊಂಡಿತು, ಜಮೀನ್ದಾರು ಹಳ್ಳಿಯ ಮುಖಂಡರು ತನ್ನ ಮಟ್ಟದಲ್ಲಿ ತನ್ನ ಮನೆಯ ಹೆಂಗಸರಿಗೆನೆರಳು ನೀಡಿತ್ತು ಉಳಿದ ವರ್ಗಗಳಿಗೆ ಆಧುನಿಕ ಪೂರ್ವ ಕಾಲದಲ್ಲಿ ನೂರಕ್ಕೆ ಐವತ್ತು ಭಾಗದ ರಕ್ಷಣೆಯೂ ಇರಲಿಲ್ಲ. ಹೆಣ್ಣಿನದೃಷ್ಟಿಯಲ್ಲಿ ಅರಾಜಕತೆ ಸದಾಕಾಲಕ್ಕೂ ತಾಂಡವವಾಡುತ್ತಿತ್ತು.

ಯುದ್ಧದಲ್ಲಿ ಗೆದ್ದರಾಜನಿಗೆ ಬಳುವಳಿಯಾಗಿ ಸೋತವರು ಚಿನ್ನ ಬೆಳ್ಳಿಯೊಂದಿಗೆ ಹೆಂಗಸರನ್ನು ಕಳುಹಿಸಿ ಕೊಡುತ್ತಿದ್ದರು. ರಾಜಕುಮಾರಿಯೊಬ್ಬಳ ವಿವಾಹದ ಜೊತೆಗೆ ಹತ್ತು ಇಪ್ಪತ್ತು 'ಸಖಿ'ಯರನ್ನು ಕಳುಹಿಸಿ ಕೊಡುತ್ತಿದ್ದರು. ಈ ಹೆಣ್ಣು ಮಕ್ಕಳು ಯಾರು. ಮುಂದಿನ ಇವರ ಅಸ್ತಿತ್ವವೇನು? ಸಾಮರ್ಥ್ಯವಿದ್ದರೆ ರಾಜನೇ ಅವರೆಲ್ಲರನ್ನು ನಿಭಾಯಿಸುತ್ತಿದ್ದ ಇಲ್ಲವೇ ಆತನ ಸೈನಿಕರು, ರಾಜಪರಿವಾರ ' ಬಳಸಿ 'ಕೊಳ್ಳುತ್ತಿತ್ತು. ತಮ್ಮದು ಎನ್ನುವುದು ಏನೂ ಇಲ್ಲದ ಸಮಾಜ ಅದಾಗಿತ್ತು. ಸುಖವಾದ ಸಂಸಾರಿಕ ಬದುಕೂ ಎಲ್ಲರಿಗೂ ಎಂಬುದು ಕನಸಾಗಿತ್ತು ಕರ್ಮ ಸಿದ್ಧಾಂತ ಎಲ್ಲಕ್ಕೂ ಸಾಂತ್ವನ ನೀಡಿತ್ತು. □

ಒಕ್ಕಣ್ಣೋಟ

ಕಳೆದ ಆರು ದಶಕಗಳಿಂದೀಚೆಗೆ ಅಮೇರಿಕಾ ೧೪೦ಕ್ಕೂ ಹೆಚ್ಚು ರಾಷ್ಟಗಳ ಮೇಲೆ ದಾಳಿ ಮಾಡಿದೆ ಹಾಗೂ ಕನಿಷ್ಠ ಪ್ರಪಂಚದ ೧೦೦ ವಿವಿಧ ಭಾಗಗಳಲ್ಲಿ ಮಿಲಿಟರಿ ಸ್ಥಾಪಿಸಿದೆ. ಯುರೋಪ್‌ವೊಂದರಲ್ಲೇ ೭ ಅಣ್ವಸ್ತ್ರ ಸಂಗ್ರಹಣಾಗಾರಗಳನ್ನು ಹೊಂದಿದೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ಜನಪ್ರಿಯ ನಾಯಕರನ್ನೂ ಒಳಗೊಂಡಂತೆ ಕನಿಷ್ಠ ೭೦ ವಿದೇಶಿ ಸರ್ಕಾರಗಳನ್ನು ಉರುಳಿಸಿದೆ. ಅಸಹಿಷ್ಣುವಾದ ಆಳ್ವಿಕೆಗಳ ವಿರುದ್ಧದ ಕನಿಷ್ಠ ೩೦ ಜನಪ್ರಿಯ-ರಾಷ್ಟ್ರೀಯ ಚಳವಳಿ ಗಳನ್ನು ನಿರ್ನಾಮ ಮಾಡಿದೆ. ಇತ್ತೀಚಿಗಿನ ರಷ್ಯಾ ಸೇರಿದಂತೆ ಕನಿಷ್ಠ ೩೦ ವಿದೇಶಿ ರಾಷ್ಟಗಳ ಚುನಾವಣೆಗಳನ್ನು ವಿರೂಪಗೊಳಿಸಿದೆ.

○ ಡಿ.ರಾಯ್ & ಜಯ

ಅಮೇರಿಕಾ ಒಂದು ದಗಾಕೋರ ರಾಷ್ಟ್ರ ?

ಪ್ರಪಂಚದಲ್ಲಿ ನಡೆಯುತ್ತಿರುವ ಕೊಲೆ, ಸುಲಿಗೆ, ದಗಾ, ವಂಚನೆ, ಮಿಲಿಟರಿ ಅಧಿಪತ್ಯ, ಸಮೂಹ ನಾಶ -ಈ ಎಲ್ಲ ಅಂಕಿ ಅಂಶಗಳನ್ನು ಅಮೇರಿಕಾದ ದೈನಂದಿನ ಚಟುವಟಿಕೆಗಳ ಬದಿಯಿಟ್ಟು ನೀವು ನೋಡಿದಾಗ, ಅನಾಗರಿಕ ಮತ್ತು ನಾಚಿಕೆಗೆಟ್ಟ ಕ್ರೂರತೆಗೆ ಅಮೇರಿಕಾಗೆ ಸ್ಪರ್ಧೆಯ ನೀಡುವವರು ಯಾರೂ ಇಲ್ಲವೆಂದು ತಿಳಿಯುತ್ತದೆ.

– ಫ್ರೆಡರಿಕ್ ಡಗ್ಲಸ್

ಪ್ರಪಂಚದಾದ್ಯಂತ ಪ್ರತಿದಿನ ಸರ್ಕಾರ ಅಥವಾ ಶಸ್ತ್ರಸಜ್ಜಿತ ರಾಜಕೀಯ ಗುಂಪುಗಳಿಂದ ಗಂಡಸು, ಹೆಂಗಸು ಅಥವಾ ಮಗು ಸ್ಥಳಾಂತರಗೊಂಡು ಹಿಂಸೆಗೀಡಾಗಿ, ಕೊಲ್ಲಲ್ಪಟ್ಟು ಅಥವಾ ಕಾಣೆಯಾಗುತ್ತದೆ. ಬಹುತೇಕ ವೇಳೆ ಇದಕ್ಕೆ ಅಮೇರಿಕಾವೇ ಕಾರಣ.

–ಅಮ್ನೆಸ್ಟಿ ಇಂಟರ್‌ನ್ಯಾಷನಲ್, ೧೯೯೬

ಫ್ರೆಡರಿಕ್ ಡಗ್ಲಸ್ ಮತ್ತು ಹಲವು ವೇಳೆ ಅಮೇರಿಕಾ ಪರ ವಹಿಸುವ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ವ್ಯಕ್ತಪಡಿಸಿರುವ ಮೇಲಿನ ಮಾತುಗಳಲ್ಲಿ ಅಮೇರಿಕಾದ ಸಂಸ್ಕೃತಿ ಸ್ಫುಟವಾಗಿ ಕಣ್ಣಿಗೆ ರಾಚುತ್ತದೆ. ಬರೇ ಕಳೆದ ಆರು ದಶಕಗಳ ಅವಲೋಕನ ಮಾಡಿದರೆ ಸಾಕು, ಸ್ಥಳೀಯ ಅಮೇರಿಕನ್ ಮೂಲನಿವಾಸಿಗಳ ನರಮೇಧದ ದಾಖಲೆಯಿರಬಹುದು, ಶತಮಾನದುದ್ದಕ್ಕೂ ಕಪ್ಪು ಆಫ್ರಿಕನ್ನರನ್ನು ಹಿಂಸಾತ್ಮಕವಾಗಿ ಶೋಷಿಸಿರುವುದು, ಪೋರ್ಟೋರಿಕಾ, ಹವಾಯಿ, ಸಮಾವೋ, ಕ್ಯೂಬಾಗಳನ್ನು ವಸಾಹತು ಮಾಡಿಕೊಳ್ಳಲು ದಬ್ಬಾಳಿಕೆ, ಫಿಲಿಫೈನ್ಸ್‌ನ್ನು ನುಂಗಿರುವುದು, ಹೈಟಿ, ನಿಕರಾಗುವಾ ಮತ್ತು ಡೊಮಿನಿಕನ್ ರಿಪಬ್ಲಿಕ್‌ಗಳ ಮೇಲೆ ಸರಣಿಯಾಗಿ ಮಿಲಿಟರಿ ಮಧ್ಯಸ್ಥಿಕೆ, ಮೆಕ್ಸಿಕೋದ ಅರ್ಧ ಭಾಗವನ್ನು ದಾಳಿ ನಡೆಸಿ ಬಲವಂತವಾಗಿ ಬಗಲಿಗೆ ಹಾಕಿಕೊಂಡಿರುವುದು -ಎಲ್ಲ ಬರೇ ೧೮೯೦ ಮತ್ತು ೧೯೧೨ರ ನಡುವೆಯಷ್ಟೆ.

ಈಗ ಬರೇ ಕಳೆದ ಆರು ದಶಕಗಳ ದಾಖಲೆಗಳ ಸಾರಾಂಶವನ್ನಷ್ಟೆ ನೋಡೋಣ.

೧೪೦ಕ್ಕೂ ಹೆಚ್ಚು ರಾಷ್ಟಗಳನ್ನು ದಾಳಿ ಮಾಡಿದೆ ಹಾಗೂ ಕನಿಷ್ಠ ಪ್ರಪಂಚದ ೧೦೦ ವಿವಿಧ ಭಾಗಗಳಲ್ಲಿ ಮಿಲಿಟರಿ ಸ್ಥಾಪಿಸಿದೆ. ಯುರೋಪ್‌ವೊಂದರಲ್ಲೇ ೭ ಅಣ್ವಸ್ತ್ರ ಸಂಗ್ರಹಣಾಗಾರಗಳನ್ನು ಹೊಂದಿದೆ.

ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ಜನಪ್ರಿಯ ನಾಯಕರನ್ನು ಒಳಗೊಂಡಂತೆ ಕನಿಷ್ಠ ೭೦ ವಿದೇಶಿ ಸರ್ಕಾರಗಳನ್ನು ಉರುಳಿಸಿದೆ. ಅಸಹಿಷ್ಣುವಾದ ಆಳ್ವಿಕೆಗಳ ವಿರುದ್ಧದ ಕನಿಷ್ಠ ೩೦ ಜನಪ್ರಿಯ-ರಾಷ್ಟ್ರೀಯ ಚಳವಳಿಗಳನ್ನು ನಿರ್ನಾಮ ಮಾಡಿದೆ. ಇತ್ತೀಚಿಗಿನ ರಷ್ಯಾ ಸೇರಿದಂತೆ ಕನಿಷ್ಠ ೩೦ ವಿದೇಶಿ ರಾಷ್ಟಗಳ ಚುನಾವಣೆಗಳನ್ನು ವಿರೂಪಗೊಳಿಸಿದೆ.

ಮಾನವ ಹಕ್ಕುಗಳ, ವಿಶ್ವ ಮತ್ತು ಪ್ರಾದೇಶಿಕ ಶಾಂತಿಯ, ಅಣ್ವಸ್ತ್ರ ನಿಷೇಧದ; ಆರ್ಥಿಕ ಮತ್ತು ವರ್ಣಭೇದ ನ್ಯಾಯದ, ಮೂಲನಿವಾಸಿ ಮತ್ತು ಪರಿಸರ ವಿಷಯಗಳಿಗೆ ಸಂಬಂಧಿಸಿದ ೧೬೦ ಪ್ರಗತಿಪರ ವಿಶ್ವಸಂಸ್ಥೆಯ ನಿರ್ಣಯಗಳನ್ನು ವಿರೋಧಿಸಿರುವ ಕೀರ್ತಿ ಅಮೇರಿಕಾಗೆ ಸಲ್ಲುತ್ತದೆ. ನೆಲಬಾಂಬುಗಳನ್ನು ನಿಷೇಧಿಸುವ ಅಂತರಾಷ್ಟ್ರೀಯ ಒಪ್ಪಂದವನ್ನಾಗಲಿ ಅಥವಾ ಅಂತರರಾಷ್ಟ್ರೀಯ ಅಪರಾಧಿ ನ್ಯಾಯಾಲಯಕ್ಕಾಗಲಿ ಸೊಪ್ಪು ಹಾಕುವುದಿಲ್ಲ. ೫೦ಕ್ಕೂ ಹೆಚ್ಚು ವಿದೇಶಿ ನಾಯಕರನ್ನು ಹತ್ಯೆಗೈಯ್ಯಲು ಹಲವಾರು ಬಾರಿ ಪ್ರಯತ್ನಿಸಿದ್ದು (ಫಿಡೆಲ್ ಕ್ಯಾಸ್ಟ್ರೋ ಒಬ್ಬರ ಮೇಲೆ ೨೬ ಬಾರಿ) ಕೆಲವು ಅಮೇರಿಕಾದ ನಾಯಕರು (ರೇಗನ್, ಜಾರ್ಜ್ ಬುಶ್ ಸೀನಿಯರ್, ಕಾರ್ಟರ್ ಮತ್ತು ಫೋರ್ಡ್) ಅಧಿಕೃತವಾಗಿ 'ಕೊಲ್ಲಲು ಪರವಾನಗಿ' ಮಂಜೂರು ಮಾಡುತ್ತಾರೆ.

ಲ್ಯಾಟಿನ್ ಮತ್ತು ದಕ್ಷಿಣ ಅಮೇರಿಕಾದ ಸಾವಿರಾರು ಪಾತಕಿಗಳಿಗೆ ಮತ್ತು ಹಿಂಸೆಕೋರರಿಗೆ ತನ್ನ ಪ್ರಸಿದ್ಧ 'ಅಮೇರಿಕಾ ಶಾಲೆಗಳಲ್ಲಿ' ತರಬೇತಿ ನೀಡಿದ ನಂತರ ತಮ್ಮ ಮೂಲ ನೆಲಕ್ಕೆ ಮರಳುವ ಪಾತಕರು ರಾಜಕೀಯ ಕೊಲೆಗಳು, ಹಿಂಸಾಕೃತ್ಯ, ಕಾಣೆ ಮಾಡುವುದು, ಆತ್ಮಹತ್ಯಾ ದಳ ಮತ್ತು ಹಲವು ಪ್ಯಾರಾ ಮಿಲಿಟರಿ ಪ್ರಕ್ರಿಯೆಗಳನ್ನು ನಡೆಸುತ್ತಾರೆ. ಸ್ಥಳೀಯರು ಈ 'ಅಮೇರಿಕಾ ಶಾಲೆ'ಯನ್ನು 'ದಂಗೆ ಶಾಲೆ' ಎಂದೂ ಕರೆಯುತ್ತಾರೆ.

ಕೊರಿಯಾದಲ್ಲಿ ೨೦ ಲಕ್ಷ, ವಿಯೆಟ್ನಾಂನಲ್ಲಿ ೩೦ ಲಕ್ಷ, ಆಫ್ಘಾನಿಸ್ತಾನದಲ್ಲಿ ೪ ಲಕ್ಷ, ಇಂಡೋನೇಷ್ಯಾದಲ್ಲಿ ೧೦ ಲಕ್ಷ, ಪೂರ್ವ ತೈಮೊರ್‌ನಲ್ಲಿ ೨.೪ ಲಕ್ಷ, ನಿಕರಾಗುವಾದಲ್ಲಿ ೧.೦ ಲಕ್ಷ ಮತ್ತು ಚಿಲಿಯಲ್ಲಿ ೨೦,೦೦೦ ಜನರನ್ನು ಅಮೇರಿಕಾ ಆಹುತಿ ತೆಗೆದುಕೊಂಡಿದೆ. ಆಫ್ಘಾನಿಸ್ತಾನದಲ್ಲಿ ೨೦೦೦ದಲ್ಲಿ ಮಿಲಿಟರಿ ಕಾರ್ಯ ಆರಂಭವಾದಾಗಿನಿಂದ ಒಟ್ಟಾರೆ ನಾಗರಿಕರ ಸಾವು ೩೦,೦೦೦ ಮೀರಿದೆ. ನಿಕರಾಗುವಾದಲ್ಲಿ ಅಮೇರಿಕಾ ಸಾದರ ಪಡಿಸಿದ ಕೊಲೆಗಡುಕ ಶಕ್ತಿಗಳು ೩೦,೦೦೦ ಜನರನ್ನು ಕೊಂದಿವೆ. ೯,೬೦೦ ಮಕ್ಕಳನ್ನು ಅನಾಥರನ್ನಾಗಿಸಿವೆ ಮತ್ತು ೩೦೦ ಕೋಟಿ

> ಕೊರಿಯಾದಲ್ಲಿ ೨೦ ಲಕ್ಷ, ವಿಯೆಟ್ನಾಂನಲ್ಲಿ ೩೦ ಲಕ್ಷ, ಆಫ್ಘಾನಿಸ್ತಾನದಲ್ಲಿ ೫ ಲಕ್ಷ, ಇಂಡೋನೇಷ್ಯಾದಲ್ಲಿ ೧೦ ಲಕ್ಷ, ಪೂರ್ವ ತೈಮೊರ್‌ನಲ್ಲಿ ೨.೫ ಲಕ್ಷ, ನಿಕರಾಗುವಾದಲ್ಲಿ ೧.೦ ಲಕ್ಷ ಮತ್ತು ಚಿಲಿಯಲ್ಲಿ ೨೦,೦೦೦ ಜನರನ್ನು ಅಮೇರಿಕಾ ಆಹುತಿ ತೆಗೆದುಕೊಂಡಿದೆ. ಆಫ್ಘಾನಿಸ್ತಾನದಲ್ಲಿ ನಾಗರಿಕರ ಸಾವು ೩೦,೦೦೦ ಮೀರಿದೆ. ನಿಕರಾಗುವಾದಲ್ಲಿ ಅಮೇರಿಕಾ ಸಾದರ ಪಡಿಸಿದ ಕೊಲೆಗಡುಕ ಶಕ್ತಿಗಳು ೩೦,೦೦೦ ಜನರನ್ನು ಕೊಂದಿವೆ. ೯,೦೦೦ ಮಕ್ಕಳನ್ನು ಅನಾಥರನ್ನಾಗಿಸಿವೆ ಮತ್ತು ೩೦೦ ಕೋಟಿ ಬೆಲೆಬಾಳುವ ಮನೆಗಳು, ಶಾಲೆಗಳು, ಆರೋಗ್ಯ ಕೇಂದ್ರಗಳು, ಬೆಳೆ ಮತ್ತು ಇತರೆ ಕೇಂದ್ರಗಳನ್ನು ನಾಶಗೊಳಿಸಿದೆ. ೨ ಲಕ್ಷ ಪೂರ್ವ ತೈಮೋರ್ ಜನರನ್ನು ಅಮೇರಿಕಾ ಹಣವೊದಗಿಸಿದ ಇಂಡೋನೇಷ್ಯಾ ಮಿಲಿಟರಿ ಮರಣ ಹೋಮ ಮಾಡಿತು. ೧೯೯೧ರ ಗಲ್ಫ್ ಯುದ್ಧದಿಂದೀಚೆಗೆ ಯುರೇನಿಯಂ ವಿಕಿರಣದಿಂದ, ಕಲುಷಿತ ಭೂಮಿ ಮತ್ತು ನೈರ್ಮಲ್ಯ ವ್ಯವಸ್ಥೆಯಿಂದ ೨ ಲಕ್ಷ ಇರಾಕಿ ಜನರು ಮರಣವನ್ನಪ್ಪಿದ್ದಾರೆ. ೨೦೦೦ನೇ ವರ್ಷದ ಹೊತ್ತಿಗೆ ೧೧.೨ ಲಕ್ಷ ಸತ್ತಿದ್ದಾರೆ.

ಬೆಲೆಬಾಳುವ ಮನೆಗಳು, ಶಾಲೆಗಳು, ಆರೋಗ್ಯ ಕೇಂದ್ರಗಳು, ಬೆಳೆ ಮತ್ತು ಇತರೆ ಕೇಂದ್ರಗಳನ್ನು ನಾಶಗೊಳಿಸಿದೆ. ೨ ಲಕ್ಷ ಪೂರ್ವ ತೈಮೋರ್ ಜನರನ್ನು ಅಮೇರಿಕಾ ಹಣವೊದಗಿಸಿದ ಇಂಡೋನೇಷ್ಯಾ ಮಿಲಿಟರಿ ಮರಣ ಹೋಮ ಮಾಡಿತು. ೧೯೯೧ರ ಗಲ್ಫ್‌ಯುದ್ಧದಿಂದೀಚೆಗೆ ಯುರೇನಿಯಂ ವಿಕಿರಣದಿಂದ, ಕಲುಷಿತ ಭೂಮಿ ಮತ್ತು ನೈರ್ಮಲ್ಯ ವ್ಯವಸ್ಥೆಯಿಂದ ೨ ಲಕ್ಷ ಇರಾಕಿ ಜನರು ಮರಣವನ್ನಪ್ಪಿದ್ದಾರೆ. ೨೦೦೦ನೇ ವರ್ಷದ ಹೊತ್ತಿಗೆ ೧೧.೨ ಲಕ್ಷ (೮ ಲಕ್ಷ ಮಕ್ಕಳು) ಸತ್ತಿದ್ದಾರೆ. ೯೦ ರ ದಶಕದಲ್ಲಿ ೩೫,೦೦೦ ಜನರನ್ನು ಕೊಲಂಬಿಯಾದಲ್ಲಿ ಹತ್ಯೆಗೈಯಲಾಗಿದ್ದು, ೧,೫೦೦ ಯೂನಿಯನ್ ಸದಸ್ಯರನ್ನು ಸಿಐಎ – ಬೆಂಬಲಿತ ಹತ್ಯಾದಳಗಳು ಕೊಲೆಗೈದಿವೆ.

೮೦ ಲಕ್ಷ ಬಾಂಬ್‌ಗಳು, ೧೮೦ ಲಕ್ಷ ಗ್ಯಾಲನ್ ರಾಸಾಯನಿಕ ವಸ್ತುಗಳನ್ನು ವಿಯೆಟ್ನಾಂ ಮೇಲೆ ಸುರಿಮಳೆಗೈದಿದ್ದರಿಂದ ಶೇ.೪೦ ರಷ್ಟು ತೋಟಗಾರಿಕೆ ಮತ್ತು ಆರ್ಚರ್ಡ್‌ಗಳು, ಶೇ. ೪೦ ರಷ್ಟು ಅರಣ್ಯ ಭೂಮಿ, ಮೀನು ಮತ್ತು ಸಮುದ್ರ ಸಂಪನ್ಮೂಲಗಳು ನಾಶಗೊಂಡಿವೆ. ಅಮೇರಿಕಾದ ಮಿಲಿಟರಿ ನೀಡಿದ ರಾಸಾಯನಿಕ ವಸ್ತುಗಳು ಕೊಲಂಬಿಯಾದ ಪರಿಸರ ಮತ್ತು ಜನರ ಆರೋಗ್ಯವನ್ನು ಹಾಳುಗೆಡಿಸಿವೆ. ಕ್ಯೂಬಾದ ಸಕ್ಕರೆ ಬೆಳೆಯನ್ನು ಹಾಳುಮಾಡುವಂತಹ ವಾತಾವರಣ – ಬದಲಾವಣೆ ತಂತ್ರಜ್ಞಾನವನ್ನು ಸಿಐಎ ಉಪಯೋಗಿಸಿದೆ. ಕ್ಯೂಬಾದಲ್ಲಿ ಆಫ್ರಿಕನ್ ಹಂದಿ ಜ್ವರ ಬರುವಂತಹ ವೈರಸ್ ಹರಡಿ ೫ ಲಕ್ಷ ಹಂದಿಗಳನ್ನು ಕೊಲ್ಲುವಂತೆ ಮಾಡಿತು. ೩೦ ಸಾವಿರ ಕ್ಯೂಬನ್ನರನ್ನು, ೫೭ ಯುವಕರು ಮತ್ತು ೧೦೦ ಮಕ್ಕಳನ್ನು ಸಾವಿಗೀಡು ಮಾಡಿದ ಸಾಂಕ್ರಮಿಕ ಡೆಂಗೆ ಜ್ವರ ಹರಡಲು ಸಿಐಎ ಕಾರಣವೆಂಬ ಆರೋಪವು ಇದೆ. ಅಮೇರಿಕಾ ಸರ್ಕಾರವು ಹಿಂಸಾ – ಉಪಕರಣಗಳನ್ನು ತಯಾರಿಸಲು ಮತ್ತು ರಫ್ತು ಮಾಡಲು ನಿರಂತರವಾಗಿ ಪರವಾನಗಿ ನೀಡುತ್ತದೆ.

ಅಮೇರಿಕಾ [illegible] ಮತ್ತು ಕೈಗಾರಿಕೋದ್ಯಮಿಗಳು ಎರಡನೇ ವಿಶ್ವ ಮಹಾಯುದ್ಧದ ವೇಳೆ ಬಹಿರಂಗವಾಗಿ ನಾಜಿಗಳ ಜೊತೆ ಒಳಸಂಚು ನಡೆಸಿದರು. ಯುದ್ಧಾ ನಂತರ ಕೈಗಾರಿಕೆ ಮತ್ತು ರಕ್ಷಣಾ ಕ್ಷೇತ್ರಗಳ ಮುಖ್ಯ ಹುದ್ದೆಗಳಿಗೆ ನಾಜಿಗಳನ್ನು ಕೂರಿಸಲಾಯಿತು.

೬೫ ವರ್ಷದ ಯುದ್ಧ ವಿರೋಧಿ ಪ್ರದರ್ಶನಕಾರರ ಮಾತುಗಳಲ್ಲೇ ಹೇಳಬಹುದಾದರೆ (ದಿ ಬೋಸ್ಟನ್ ಗ್ಲೋಬ್, ಸೆಪ್ಟೆಂಬರ್, ೨೦೦೩) 'ಕೇಂಬ್ರಿಜ್‌ನಲ್ಲಿ ಪೊಲೀಸ್ ರಾಜ್ಯ ತರಲೋಸುಗ ನನ್ನ ಮಗ ಇರಾಕ್‌ನಲ್ಲಿ ಯುದ್ಧ ಮಾಡುತ್ತಿದ್ದಾನೆ. ಇರಾಕ್–ಸ್ವಾತಂತ್ರ್ಯ, ಧರ್ಮ, ಐಕ್ಯತೆಗಳ ಸುತ್ತ ಈ ರಾಷ್ಟ್ರವನ್ನು ಕಟ್ಟಲಾಗಿದೆ. ಆದಾಗ್ಯೂ ಈ ಹಕ್ಕನ್ನು ಯಾರಾದರೂ ಉಪಯೋಗಿಸಲೆತ್ನಿಸಿದರೆ ಅವರನ್ನು ಕಮ್ಯುನಿಸ್ಟ್ ಅಥವಾ ಕೆಟ್ಟದಾಗಿ ಪರಿಗಣಿಸಲಾಗುತ್ತದೆ'.

ಪ್ರಜಾಪ್ರಭುತ್ವದ ಹರಿಕಾರ ತಾನೆಂದು ಬಡಾ[illegible] ಕೊಚ್ಚಿಕೊಳ್ಳುವ ಅಮೇರಿಕಾ ಪ್ರತಿಯೊಬ್ಬ ನಾಗರಿಕರ [illegible] ಅಂದಾಜು ೯೦೦೦ ರಹಸ್ಯ ಮಾಹಿತಿಯನ್ನು ನಿರ್ವಹಿಸುತ್ತದೆ. ಖಾಸಗಿ ಕಂಪನಿಗಳು ತಮ್ಮ ಕಾರ್ಮಿಕರ ಮೇಲೆ ಬೇಹುಗಾರಿಕೆ ನಡೆಸುತ್ತಾರೆ. ಹಲವು ಅಮೇರಿಕಾ ನಗರಗಳ ಬೀದಿಗಳಲ್ಲಿ ಸಾರ್ವಜನಿಕರ ಚಲನವಲನ ಅರಿಯಲು ವಿಡಿಯೋ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಅಮೇರಿಕಾದ ನ್ಯಾಯಾಲಯಗಳು 'ಕೂಲಿಗಾಗಿ ಹೋರಾಡುವ' ಕಾರ್ಮಿಕರನ್ನು ಮತ್ತು ಕಾರ್ಮಿಕ ಸಂಘಟನೆಗಳನ್ನು 'ಆಸ್ತಿಯ ಮತ್ತು ಸಂವಿಧಾನದ ವಿರುದ್ಧ ಪಿತೂರಿ' ನಡೆಸುತ್ತಾರೆಂದು ತೀರ್ಪು ನೀಡಿದೆ. ೧೯೪೦ರಲ್ಲಿ ಅಮೇರಿಕಾದ ಕಾಂಗ್ರೆಸ್ ಅಂಗೀಕರಿಸುವ ಕುಖ್ಯಾತ 'ಸ್ಮಿತ್ ಕಾಯಿದೆ'ಯ ಕ್ರಾಂತಿಕಾರಿ ಸಿದ್ಧಾಂತದ ಪ್ರತಿಪಾದನೆಯನ್ನು ಶಿಕ್ಷಿಸಲರ್ಹವಾದ ಅಪರಾಧವೆಂದು ತಿಳಿಸುತ್ತದೆ. ೧೯೮೪ರಲ್ಲಿ ಅಮೇರಿಕಾದ ಕಾನೂನು ಏಜೆಂಟರು ವಿಚಾರವಾದಿ ಕಪ್ಪು ಗುಂಪಿನ ಜನರನ್ನು ಬೆದರಿಸಲು ಫಿಲಿಡೆಲ್ಫಿಯಾ ನಗರದ ಪೂರ್ವ ಭಾಗದ ವಸತಿ ಗೃಹಗಳ ಮೇಲೆ ಮಿಲಿಟರಿ ಬಾಂಬ್‌ಗಳನ್ನು ಹಾಕಿದ್ದರೆಂದರೆ ಓದುಗರು ವಿಸ್ಮಿತರಾಗಬಹುದು.

ಕೈಗಾರಿಕೋದ್ಯಮಿ – ರಾಜಕಾರಣಿಗಳ ದುಷ್ಟ ಕೂಟ ತನ್ನ ವರ್ಗದ ಹಿತಾಸಕ್ತಿಗಾಗಿ ದುರ್ಬಲ ರಾಷ್ಟ್ರಗಳನ್ನು ನಿರ್ನಾಮ ಮಾಡುತ್ತಿರುವುದಲ್ಲದೆ ತನ್ನ ನೆಲದಲ್ಲಿಯ ನಾಗರಿಕರನ್ನೇ ಯಕಶ್ಚಿತ್ ಹುಳುಗಳಂತೆ ಪರಿಗಣಿಸುತ್ತಿರುವುದು, ಅಗತ್ಯ ಬಿದ್ದರೆ ಹೊಸಕಿ ಹಾಕಿಬಿಡುವುದು –ಇವೆಲ್ಲವು ಅಮೇರಿಕಾದ ದುರುಳ ಮುಖವನ್ನು ತೋರುತ್ತವೆ.

(ಅಂಕಿ ಅಂಶಗಳನ್ನು : ಬ್ಲಾಕ್ ಶರ್ಟ್ಸ್ ಮತ್ತು ರೆಡ್ಸ್ ಮತ್ತು ಡೆಮೊಕ್ರಾಸಿ ಫಾರ್ ದಿ ಫ್ಯೂ – ಲೇಖಕರು ಎಂ. ಪೆರೆಂಟಿ, ೨೦೦೨: ರೋಗ್ ಸ್ಟೇಟ್ ಲೇಖಕರು : ಡಬ್ಲ್ಯೂ. ಬ್ಲಮ್, ೨೦೦೦ : ರಾಮ್‌ಸೆಕ್ಲಾರ್ಕ್ ಮತ್ತು ಇತರರು : ಚಾಲೆಂಜ್ ಟು ಜೆನೊಸೈಡ್ : ೨೦೦೦ : ಜೆ. ಗೆರಾಲ್ಡ್, ಕೊಲಂಬಿಯಾ : ದಿ ಜೆನೊಸೈಡಲ್ ಡೆಮೋಕ್ರಸಿ, ೧೯೯೬) □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು – ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಪ್ರಾಥಮಿಕ ಶಿಕ್ಷಣ - ಇಂಗ್ಲೀಷ್ ಕಲಿಕೆ

ಸಮಕಾಲೀನ

ಮಾತೃಭಾಷೆಯಾಗಲೀ ಪರಭಾಷೆಯಾಗಲೀ, ಭಾಷೆಯು ಕೇವಲ ಒಂದು ಸಂಪರ್ಕ ಸಾಧನವಷ್ಟೆ, ಅಭಿವ್ಯಕ್ತಿ ಮಾಧ್ಯಮದ ಪ್ರಮುಖ ಅಂಶವಾಗಿರುವ ಭಾಷೆಗೆ ಯಾವುದೇ ಎಲ್ಲೆ ಇತಿ - ಮಿತಿಗಳಿರುವುದಿಲ್ಲ. ಮಾತೃಭಾಷೆ ಅಥವಾ ರಾಷ್ಟ್ರೀಯ ಭಾಷೆಯ ಬಗೆಗಿನ ವ್ಯಾಮೋಹ ಅಥವಾ ಅಭಿಮಾನ ಭಾವೋದ್ರೇಕಕ್ಕೊಳಗಾಗದಿದ್ದಲ್ಲಿ ಯಾವುದೇ ಭಾಷೆಯೂ ಪರಕೀಯವಾಗುವುದಿಲ್ಲ. ಆಂಗ್ಲಭಾಷೆಯ ವಿಸ್ತಾರ ಮತ್ತು ಅರಿವಿಗೆ ಇದೇ ಪ್ರಮುಖ ಕಾರಣವೆಂದು ಹೇಳಬಹುದು. ವಿಶ್ವದ ಎಲ್ಲಾ ಪ್ರಮುಖ ಭಾಷೆಗಳನ್ನು ನುಂಗಿಹಾಕುವುದರೊಂದಿಗೆ ಅನೇಕ ಭಾಷೆಗಳನ್ನು ತನ್ನೊಳಗೆ ಅಳವಡಿಸಿಕೊಂಡು ಬೆಳದಿರುವ ಆಂಗ್ಲಭಾಷೆ, ಜಾಗತೀಕರಣದ ಸನ್ನಿವೇಶದಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದು ಕೊಂಡಿದೆ.

○ ನಾ. ದಿವಾಕರ್

ಪ್ರಾಥಮಿಕ ಹಂತದಿಂದಲೇ 'ಶಿಕ್ಷಣದಲ್ಲಿ ಆಂಗ್ಲ ಭಾಷೆಯನ್ನು ಕಲಿಸುವ ಕರ್ನಾಟಕ ಸರ್ಕಾರದ ನಿಲುವು, ರಾಜ್ಯಾದ್ಯಂತ ವಾದ-ವಿವಾದಗಳಿಗೆ ಎಡೆ ಮಾಡಿಕೊಟ್ಟಿದೆ. ಗ್ರಾಮೀಣ ಮಕ್ಕಳು ಹಾಗು ಸರ್ಕಾರಿ ಶಾಲೆಗಳಲ್ಲಿ ಓದುವ ನಗರ - ಪಟ್ಟಣದ ಮಕ್ಕಳು ಆಂಗ್ಲ ಭಾಷ ಯನ್ನು ಕಲಿಯಲು ಅವಕಾಶ ಮಾಡಿಕೊಡುವುದರಿಂದ ಉತ್ತಮ ಭವಿಷ್ಯ ರೂಪಿಸಿದಂತಾಗುತ್ತದೆ. ಎಂಬ ಶಿಕ್ಷಣ ಮಂತ್ರಿಗಳ ಅಭಿಪ್ರಾಯ, ಒಂದು ಗಂಭೀರ ದರ್ಜೆಗೆ ಒಳಗಾಗಿದೆ. ಅನೇಕ ಪ್ರಗತಿ ಪರ ಸಂಘಟನೆಗಳು, ಸಾಮಾಜಿಕ ಸಂಸ್ಥೆಗಳು ಈ ಕುರಿತು ತಮ್ಮ ಸ್ಪಷ್ಟವಾದ ನಿಲುವು ತಾಳುತ್ತಿವೆ. ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಯಾವುದೇ ಸ್ಪಷ್ಟ ನಿರ್ಧಾರ ವ್ಯಕ್ತವಾಗದೆ, ವಿಷಯವನ್ನು ಇನ್ನೂ ಸಂಕೀರ್ಣಗೊಳಿಸಲಾಗಿದೆ.

ಈ ಇಡೀ ವಿವಾದದಲ್ಲಿ ಸ್ಪಷ್ಟ ವಾಗಿ ಮೂರು ಗುಂಪುಗಳನ್ನು ಗುರುತಿಸಬಹುದು. ಮೊದಲನೆಯಾದಾಗಿ ನಾಮ ಫಲಕಗಳಲ್ಲಿ, ಜಾಹಿ ರಾತು ಫಲಕಗಳಲ್ಲಿ, ಬ್ಯಾನರ್‌ಗಳಲ್ಲಿ, ಭಾನೆತ್ತರದ ಧ್ವಜಸ್ಥಂಬಗಳಲ್ಲಿ, ಭುವನೇಶ್ವರಿಯ ಅಂಧ ಆರಾಧನೆಯಲ್ಲಿ, ಸರ್ಕಾಲ್‌ನ ಹೆಸರುಗಳಲ್ಲಿ ಮಾತ್ರವೇ ಕನ್ನಡವನ್ನು ಗುರುತಿಸುವ, ಕನ್ನಡಕ್ಕಾಗಿ ಪ್ರಾಣವನ್ನೇ ತೆರುವ ಹುಟ್ಟು ಹೊರಾಟಗಾರರು, ಅರ್ಥಾತ್ ಕನ್ನಡ ಪರ ಸಂಘಟನೆಗಳು. ಎರಡನೆಯಾದಾಗಿ ಆಧುನಿಕ ಶಿಕ್ಷಣ ನೀತಿ ಜಾರಿ ಇದ್ದಾಗ್ಯೂ ಸಂವಿಧಾನಿ ಕವಾಗಿ ಶಿಕ್ಷಣದ ಹಕ್ಕು ಪಡೆದಿದ್ದಾಗ್ಯೂ, ಭಾರತೀಯ ಸಾಮಾಜಿಕ ವ್ಯವಸ್ಥೆಯ ಕಟ್ಟು ಪಾಡುಗಳಿಗೆ ಒಳಗಾಗಿ, ಅವಕಾಶ ವಂಚಿತರಾಗಿ ಆಂಗ್ಲಭಾಷೆಯ ಅರಿವಿಲ್ಲದಿರುವುದರಿಂದಲೇ ಸಾಮಾಜಿಕವಾಗಿ, ಕೀಳರಿ ಮೆಯಿಂದ ಕಾಣಲ್ಪಟ್ಟ ಒಂದು ವರ್ಗ. ಇನ್ನು ಮೂರನೇಯದಾಗಿ, ಕಿ.ರಂ.ನಾಗರಾಜ್ ರವರು ಹೇಳಿರುವಂತೆ, ಆಧುನಿಕ ಶಿಕ್ಷಣ ವ್ಯವಸ್ಥೆಯ ಎಲ್ಲಾ ಸವಲತ್ತುಗಳನ್ನು ಉಪಯುಕ್ತತೆಗಳನ್ನು ಅನುಭವಿಸಿ, ಗ್ರಾಮೀಣಾ ಜನತೆಯನ್ನು, ಹಿಂದುಳಿದ ವರ್ಗಗಳನ್ನು ನಿರಂತರವಾಗಿ ಅಂಧ ಕಾರದಲ್ಲಿಡುವ ಹುನ್ನಾರ ನಡೆಸುವಯತಾಸ್ಥಿತಿವಾದಿಗಳು, ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದೇ ಸಂದರ್ಭದಲ್ಲಿ ಯಾವುದೇ ವಿಷಯವನ್ನು ಕುರಿತಂತೆ ಈ ಮೂರು ವರ್ಗಗಳು ಕಾರ್ಯತತ್ಪರ ರಾಗಿರುತ್ತವೆ.

ಶಿಕ್ಷಣ ಸಚಿವ ರಾಮ ಲಿಂಗಾರೆಡ್ಡಿಯವರ ಮತ್ತು ಅವರ ಸರ್ಕಾರದ ಉದ್ದೇಶ ಎಷ್ಟೇ ಉತ್ತಮವಾಗಿದ್ದರೂ, ಪ್ರಾಥಮಿಕ ಹಂತ ದಿಂದಲೇ ಆಂಗ್ಲ ಭಾಷೆಯನ್ನು ಕಲಿಸುವ ವಿಷಯದಲ್ಲಿ ಸರ್ಕಾರ ಸಾಕಷ್ಟು ಎಚ್ಚರ ವಹಿಸಬೇಕಾಗುತ್ತದೆ. ಪ್ರಪ್ರಥಮವಾಗಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಸರ್ವವ್ಯಾಪ್ತಿ ಸುಧಾರಣೆ ಆಗಬೇಕಾಗಿದೆ. ಇತ್ತೀಚಿನ ಒಂದು ಸಂಶೋಧನಾ ವರದಿಯ ಪ್ರಕಾರ ಶೇಕಡ 60 ರಷ್ಟು ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದರೆ ಶೇಕಡ 65 ರಷ್ಟು ಶಾಲೆಗಳಲ್ಲಿ ಕಪ್ಪು ಹಲಗೆ ಗಳಾಗಲೀ, ಶೌಚಾಲಯಗಳಾಗಲೀ, ಉತ್ತಮ ಕಟ್ಟಡಗಳಾಗಲೀ, ಇರುವುದಿಲ್ಲ. ಶೇಕಡ 20 ರಷ್ಟು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎದ್ದು ಕಾಣುತ್ತದೆ. ಬಹುಪಾಲು ಶಾಲೆಗಳಲ್ಲಿ ಪ್ರಯೋಗಶಾಲೆಗಳಾಗಲೀ, ವಾಚನಾಲಯವಾಗಲೀ ಇರುವುದಿಲ್ಲ. ಇಷ್ಟೆಲ್ಲಾ ನ್ಯೂನತೆಗಳ

> ಗ್ರಾಮೀಣ ಮತ್ತು ನಗರದ ವಿದ್ಯಾರ್ಥಿಗಳಲ್ಲಿ ಖಾಸಗಿ ಶಾಲೆ - ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಲಲ್ಲಿ ಅಪಾರವಾದ ಕಂದರ ಉಂಟಾಗಿದೆ. ನಗರ ಹಾಗೂ ಪಟ್ಟಣಗಳಲ್ಲಿ ಖಾಸಗಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಆಂಗ್ಲ ಭಾಷೆ ಕಲಿಸಲಾರಂಭಿಸಿದರೆ, ಸರ್ಕಾರಿ ಶಾಲೆಗಳಲ್ಲಿನ ಮಕ್ಕಳು 5ನೇ ತರಗತಿಯಿಂದ ಕಲಿಸಲಾರಂಭಿಸುತ್ತಾರೆ. ಪ್ರೌಢಶಾಲೆ ಅಥವಾ ಕಾಲೇಜು ಹಂತಕ್ಕೆ ಬರುವಾಗ ಈ ಎರಡು ವರ್ಗಗಳ ನಡುವಿನ ಕಂದರ ಸ್ಪಷ್ಟವಾಗಿ ಅರಿವಾಗುತ್ತದೆ. ನಗರಗಳಲ್ಲಿ ಖಾಸಗಿ ಶಾಲೆಗೆ ನೇರ ಬಯಸುವ ಮಕ್ಕಳಿಗೆ ಆಂಗ್ಲ ಭಾಷಾ ಜ್ಞಾನದ ಕೊರತೆಯೇ ಕಂಟಕಪ್ರಾಯವಾಗುತ್ತದೆ. ಜಾಗತೀಕರಣದ ಪ್ರಭಾವದಿಂದ ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೆ ಅಷ್ಟಾಗಿ ಗಮನ ನೀಡುತ್ತಿಲ್ಲವಾದ್ದರಿಂದ, ಅನೇಕ ಸರ್ಕಾರಿ ಶಾಲೆಗಳು ಮುಚ್ಚಿಹೋಗುತ್ತಿವೆ.

ನಡುವೆಯೂ ಆಂಗ್ಲ ಭಾಷೆಯನ್ನು ಕಲಿಸಲು ಮುಂದಾಗಿರುವ ರಾಜ್ಯ ಸರ್ಕಾರದ ಎದೆಗಾರಿಕೆ ಅಥವಾ ಬಂಡ ಧೈರ್ಯ, ಮೆಚ್ಚುವಂತಹುದೇ, ಪ್ರಸ್ತುತ ಸನ್ನಿವೇಶದಲ್ಲಿ ಸರ್ಕಾರದ ತೀರ್ಮಾನ ಸಮಂಜಸವೆನಿಸುತ್ತದೆ. ಯಾವುದೇ ಒಂದು ಸಮಾಜದಲ್ಲಿ ತೀವ್ರತರವಾದ ಬದಲಾವಣೆಗಳನ್ನು ತರುವಾಗ ಪರ-ವಿರೋಧವಾದ - ವಿವಾದ ಇದ್ದೇ ಇರುತ್ತದೆ. ಆದರೆ ಈ ಬದಲಾವಣೆಗಳಿಂದ ಮುಂದಿನ ಪೀಳಿಗೆಯವರಿಗೆ ಒಳಿತಾಗುವುದೋ ಇಲ್ಲವೋ ಎನ್ನುವುದು ಇಲ್ಲ ಮುಖ್ಯ ಅಂಶವಾಗಬೇಕಾಗಿದೆ. ರೋಮಾಂಚಕಾರಿ ಭಾಷಣಗಳಿಂದಾಗಲಿ, ಉದ್ರೇಕಕಾರೀ ಘೋಷಣೆಗಳಿಂದಾ ಗಲೀ, ಇದನ್ನು ಬಗೆಹರಿಸಲಾಗುವುದಿಲ್ಲ.

ಮಾತೃಭಾಷೆಯಾಗಲೀ ಪರಭಾಷೆಯಾಗಲೀ, ಭಾಷೆಯು ಕೇವಲ ಒಂದು ಸಂಪರ್ಕ ಸಾಧನವಷ್ಟೆ, ಅಭಿವ್ಯಕ್ತಿ ಮಾಧ್ಯಮದ ಪ್ರಮುಖ ಅಂಶವಾಗಿರುವ ಭಾಷೆಗೆ ಯಾವುದೇ ಎಲ್ಲೆ ಇತಿ - ಮಿತಿಗಳಿರುವುದಿಲ್ಲ, ಮಾತೃಭಾಷೆ ಅಥವಾ ರಾಷ್ಟ್ರೀಯ ಭಾಷೆಯ ಬಗೆಗಿನ ವ್ಯಾಮೋಹ ಅಥವಾ ಅಭಿಮಾನ ಭಾವೋದ್ರೇಕಕ್ಕೊಳಗಾಗದಿದ್ದಲ್ಲಿ ಯಾವುದೇ ಭಾಷೆಯೂ ಪರಕೀಯವಾಗು ದಿಲ್ಲ, ಆಂಗ್ಲ ಭಾಷೆಯ ವಿಸ್ತಾರ ಮತ್ತು ಅರಿವಿಗೆ ಇದೇ ಪ್ರಮುಖ ಕಾರಣವೆಂದು ಹೇಳಬಹುದು. ವಿಶ್ವದ ಎಲ್ಲಾ ಪ್ರಮುಖ ಭಾಷೆಗಳನ್ನು ನುಂಗಿಹಾಕುವುದರೊಂದಿಗೆ ಅನೇಕ ಭಾಷೆಗಳನ್ನು ತನ್ನೊಳಗೆ ಅಳವಡಿಸಿಕೊಂಡು ಬೆಳೆದಿರುವ ಆಂಗ್ಲಭಾಷೆ, ಜಾಗತೀಕರಣದ ಸನ್ನಿವೇಶದಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದು ಕೊಂಡಿದೆ. ಹಾಗಾಗಿ ಅನಂತ ಮೂರ್ತಿಯವರು ಹೇಳಿರುವಂತೆ ಆಂಗ್ಲಭಾಷೆಯ ಹೆಚ್ಚುಗಾರಿಕೆಯನ್ನು ಮುರಿಯುವ ಉದ್ದೇಶದಿಂದ ಅಲ್ಲವಾದರೂ, ಒಂದು ವಿಶ್ವಮಾನ್ಯ ಜಾಗತಿಕ ಸಂಪರ್ಕ ಭಾಷೆಯಾಗಿ ಅಂಗ್ಲ ಭಾಷೆ ಇಂದು ಅತ್ಯವಶ್ಯವಾಗಿದೆ. ಹಾಗಾಗಿ ಈ ಭಾಷೆಯನ್ನು ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಕಲಿಸುವುದು ಅಗತ್ಯವಾಗಿದೆ.

ಭಾವನೆಗಳಿಗೆ ಬಲಿಯಾಗಿ ನಾವು ಚೀನಾ - ರಷ್ಯಾ - ಜಪಾನ್ ದೇಶಗಳೊಡನೆ ತುಲನೆ ಮಾಡುವುದು ಸಮಂಜ ಸವಾಗುವುದಿಲ್ಲ, ಆ ದೇಶಗಳಲ್ಲಿ ಈಗೀಗ ಆಂಗ್ಲ ಭಾಷೆ ನುಸುಳುತ್ತಿರುವುದಾದರೂ, ಭಾರತಕ್ಕೂ ಈ ದೇಶಗಳಿಗೂ ಬಹಳಷ್ಟು ಅಂತರವಿದೆ. 2600ಕ್ಕೂ ಹೆಚ್ಚು ಭಾಷೆಗಳನ್ನು ಹೊಂದಿರುವ ಭಾರತೀಯ ಸಮಾಜದ ನವ ಪೀಳಿಗೆಗೆ ಅಂಗ್ಲ ಭಾಷೆ ಸಂಪರ್ಕ ಸಾಧನವಾಗುದಾದರೆ ತವಕ ಪಡುವುದೇಕೆ ? ಪ್ರಾಥಮಿಕ ಹಂತದಿಂದ ಅಂಗ್ಲ ಭಾಷೆ ಕಲೀಸಿದರೆ ಕನ್ನಡಕ್ಕೆ ಕುತ್ತು ಬರುವುದೆಂಬ ಕನ್ನಡ ಸಂಘಟನೆಗಳ - ಹೋರಾಟ ಗಾರರ ಅಭಿಪ್ರಾಯ ಹುರುಳಿಲ್ಲದ್ದು, ಸಂಸ್ಕೃತ - ಲ್ಯಾಟಿನ್ - ಗ್ರೀಕ್ ಹಿಬ್ರೂಗಳಂತೆ ಕನ್ನಡ ಕೇವಲ ಒಂದು ಪ್ರದೇಶದ ಅಥವಾ ಜನಾಂಗೀಯ ಭಾಷೆಯಾಗಿ ಉಳಿದಿಲ್ಲ, ಸಾವಿರಾರು ವರ್ಷಗಳ ಇತಿಹಾಸ ಇರುವ 6 ಕೋಟಿ ಜನರ ಆಡು ಭಾಷೆಯಾಗಿರುವ ಭಾಷೆ ಅಷ್ಟು ಸುಲಭವಾಗಿ ಅವನತಿ ಹೊಂದುವುದಿಲ್ಲ.ಎಂಬ ಅಂಶವನ್ನು ಮನಗಾಣಬೇಕು.

ಪ್ರಸ್ತುತ ಸನ್ನಿವೇಶವನ್ನೇ ಅವಲೋಕನ ಮಾಡಿದರೆ ಗ್ರಾಮೀಣ ಮತ್ತು ನಗರದ ವಿದ್ಯಾರ್ಥಿಗಳಲ್ಲಿ, ಖಾಸಗಿ ಶಾಲೆ-ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಲಲ್ಲಿ ಅಪಾರವಾದ ಕಂದರ ಉಂಟಾಗಿದೆ. ಗ್ರಾಮೀಣ ಕ್ಷೇತ್ರಗಳಿಂದ ನಗರಗಳಿಗೆವಲಸೆ ಬರುವವರ ಸಂಖ್ಯೆ ಜಾಗತೀಕರಣದ ಪರಿಣಾಮವಾಗಿ, ದಿನೇ ದಿನೇ ಹೆಚ್ಚಾಗುತ್ತಿದ್ದು, ಈ ರೀತಿ ವಲಸೆ ಬಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಆಂಗ್ಲಭಾಷೆ ಒಂದು ತೊಡಕಾಗುತ್ತದೆ. ನಗರ ಹಾಗೂ ಪಟ್ಟಣಗಳಲ್ಲಿ ಖಾಸಗಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಅಂಗ್ಲಭಾಷೆ ಕಲಿಸಲಾರಿಂಭಿಸಿದರೆ, ಸರ್ಕಾರಿ ಶಾಲೆಗಳಲ್ಲಿನ ಮಕ್ಕಳು 5ನೇ ತರಗತಿಯಿಂದ ಕಲಿಸಲಾರಂಭಿಸುತ್ತಾರೆ. ಪ್ರೌಢಶಾಲೆ ಅಥವಾ ಕಾಲೇಜು ಹಂತಕ್ಕೆ ಬರುವಾಗ ಈ ಎರಡು ವರ್ಗಗಳ ನಡುವಿನ ಕಂದರ ಸ್ಪಷ್ಟವಾಗಿ ಅರಿವಾಗುತ್ತದೆ. ನಗರಗಳಲ್ಲಿ ಖಾಸಗಿ ಶಾಲೆಗೆ ನೇರ ಬಯಸುವ ಮಕ್ಕಳಿಗೆ ಆಂಗ್ಲ ಭಾಷಾ ಜ್ಞಾನದ ಕೊರತೆಯೇ ಕಂಟಕಪ್ರಾಯವಾಗುತ್ತದೆ. ಜಾಗತೀಕರಣದ ಪ್ರಭಾವದಿಂದ ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೆ ಅಷ್ಟಾಗಿ ಗಮನ ನೀಡುತ್ತಿಲ್ಲವಾದ್ದರಿಂದ, ಅನೇಕ ಸರ್ಕಾರಿ ಶಾಲೆಗಳು ಮುಚ್ಚಿ ಹೋಗುತ್ತಿವೆ. ಸರ್ಕಾರಿ ಶಾಲೆಗಳಲ್ಲಿ 7ನೇಯ ತರಗತಿ ಓದಿ, ಪ್ರೌಢಶಾಲೆಗೆ ಖಾಸಾಗಿ ಶಾಲೆಗೆ ಸೇರಬಯಸುವ ಮಕ್ಕಳಿಗೂ ಆಂಗ್ಲಭಾಷಾ ಜ್ಞಾನವೇ ಒಂದು ತೊಡಕಾಗುತ್ತದೆ. ಆಗ ಅನಿವಾರ್ಯವಾಗಿ ಮಕ್ಕಳು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮುಂದುವರಿಬೇಕಾಗುತ್ತದೆ.

ಕನ್ನಡ ಮಾಧ್ಯಮದಲ್ಲಿ ಒದುವುದು ಅಪರಾಧವೇನೂ ಅಲ್ಲವಾದರೂ, ಕೇಂದ್ರ ರಾಜ್ಯ ಸರ್ಕಾರಗಳ ನವ ಆರ್ಥಿಕ ನೀತಿಗಳ ಪರಿಣಾಮವಾಗಿ ವ್ಯಾಸಂಗ ಮುಗಿಸಿದ ವಿದ್ಯಾರ್ಥಿಗಳಿಗೆ ನೌಕರಿ ಒಂದು ಮರೀಚಿಕೆಯಾಗಿದೆ. ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ ಶೇಕಡ ೮5 ರಷ್ಟು ವಿದ್ಯಾರ್ಥಿಗಳು ಇಂದಿಗೂ ಸರ್ಕಾರಿ ನೌಕರಿಯನ್ನೇ ಬಯಸುತ್ತಾರೆ. ಆದರೆ ಸರ್ಕಾರಿ ನೌಕರಿ ಗಗನ ಕುಸುಮವಾಗಿದೆ. ಲಭ್ಯವಿರುವ ಖಾಸಗೀ ಕ್ಷೇತ್ರದ ನೌಕರಿಯಲ್ಲಿ ಗಣಕಯಂತ್ರ ಆಧಾರಿತ ನೌಕರಿಯೇ ಸಿಂಹಪಾಲು ಹೊಂದಿದೆ. ಬಿ.ಪಿ.ಓ.ಗಳಲ್ಲಿ ಕಾಲ್ ಸೆಂಟರ್‌ಗಳಲ್ಲಿ, ಬಹು ರಾಷ್ಟ್ರೀಯ ಕಂಪನಿಗಳಲ್ಲಿ, ಕನಿಷ್ಟ ಹೋಟೆಲ್‌ಗಳಲ್ಲೂ ಸಹ ನೌಕರಿಯ ಅರ್ಹತೆಯ ಪಟ್ಟಿಯಲ್ಲಿ ಆಂಗ್ಲಭಾಷಾ ಜ್ಞಾನ ಪ್ರಮುಖವಾಗಿರುತ್ತದೆ. ಹಾಗೆಂಬ ಮಾತ್ರಕ್ಕೆ ಉತ್ತಮವಾದ ಆಂಗ್ಲಭಾಷಾ ಜ್ಞಾನ ನೌಕರಿಯ ದೃಷ್ಟಿಯಿಂದ ಅಗತ್ಯವಾಗಿ ಬಿಟ್ಟಿದೆ. ಇನ್ನು ಮಧ್ಯಮ ಮೇಲ್ವರ್ಗದವರಿಗೆ ಇಂಜಿನಿಯರಿಂಗ್, ವೈದ್ಯಕೀಯ ಓದುವವರಿಗೆ ಅಂಗ್ಲಭಾಷಾವಾಗ್ಮಿ ಯಾಗಿರುವ ಅವಶ್ಯಕತೆಯಿಲ್ಲ, ಅರೆ ಬರೆ ಭಾಷೆಯ ಯಾದರೂ, ಇಂದು ಆಂಗ್ಲ ಭಾಷಾ ಜ್ಞಾನ ಅನಿವಾರ್ಯ ವಾಗಿರುತ್ತದೆ. ಸಂಪೂರ್ಣ ಕನ್ನಡ ಮಾಧ್ಯಮದಲ್ಲೇ ಓದಿದವರಿಗೆ ಪ್ರಾಥಮಿಕ ಹಂತದಿಂಲೇ ಅಂಗ್ಲ ಭಾಷೆ ಕಲಿಸುವುದರಿಂದ ಭಾಷಾ ಪ್ರೌಢಿಮೆ ಬೆಳದಿರುತ್ತದೆ.

ಚಾರಿತ್ರಿಕ ದೃಷ್ಟಿಯಿಂದ ನೋಡುತ್ತಾ ಅಂದಿನ ಕಾಲದಲ್ಲಿ ದಾರ್ಶನಿಕರು, ಬುದ್ಧಿಜೀವಿಗಳೆಲ್ಲಾ ಅಂಗ್ಲಭಾಷೆ ಓದಿದ್ದರೆ? ಎಂದು ಕೇಳುವುದು ಅರ್ಥಹೀನವಾಗುತ್ತದೆ. ಕಳೆದ 30 ವರ್ಷಗಳಲ್ಲಿ ಮಾನವ ಸಮಾಜ ತೀವ್ರತರವಾದ ಬದಲಾವಣೆಗಳನ್ನು ಕಂಡಿದೆ. ಭಾರತೀಯ ಸಮಾಜದಲ್ಲಿ ಅನೇಕ ಪರಿವರ್ತನೆ ಉಂಟಾಗಿವೆ. ಸಾಮಾಜಿಕವ್ಯವಸ್ಥೆಯಲ್ಲಿ ಬಾರಿ ಮಾರ್ಪಾಟಾಗಿದೆ. 70ರ ದಶಕದಲ್ಲಿ ಲಭ್ಯವಿದ್ದ ಅವಕಾಶಗಳು ಇಂದು ಕಂಡುಬರುವುದಿಲ್ಲ. ಹಾಗೆಯೇ ಪ್ರಸ್ತುತ ಸನ್ನಿವೇಶದಲ್ಲಿ ಕೆಲವು ಕ್ಷೇತ್ರಗಳಲ್ಲಿ ಲಭ್ಯವಿರುವ ಅವಕಾಶಗಳು 70ರ ದಶಕದಲ್ಲಿ ಊಹಿಸಲು ಅಸಾಧ್ಯವಾಗಿತ್ತು. ಸಮಾಜ ಕಲ್ಯಾಣ ಅರ್ಥಿಕತೆಯಿಂದ (ವೆಲ್ ಫೇರ್ ಎಕನಾಮಿಕ್ಸ್) ಪೂರ್ಣ ಪ್ರಮಾಣದ, ಮುಕ್ತ ಮಾರುಕಟ್ಟೆಯಾಧಾರಿತ ಪೈಪೋಟಿಯನ್ನಾದರಿಸಿದ ಬಂಡವಾಳ ಶಾಹಿವ್ಯವಸ್ಥೆಯೆಡೆಗೆ ಚಲಿಸುತ್ತಿರುವ ಭಾರತೀಯ ಸಮಾಜದಲ್ಲಿ, ಕೆಲವು ಬದಲಾವಣೆಗಳು ಅನಿವಾರ್ಯವಾಗಿದೆ. ಅವುಗಳಲ್ಲಿ ಆಂಗ್ಲಭಾಷೆಯ ಪ್ರಾತಿನಿಧ್ಯವೂ ಒಂದು ಜಾಗತೀಕರಣ - ಉದಾರೀಕರಣ - ಖಾಸಗೀಕರಣದ ವಿರುದ್ಧ ಹೋರಾಡುತ್ತಲೇ ಸಮಾಜವಾದ ಸಮತಾವಾದದ ಪುನರ್ ಸ್ಥಾಪನೆಗಾಗಿ ಹೋರಾಟ ನಡೆಸುತ್ತಲೇ ಸಾಮಾಜಿಕ ವ್ಯವಸ್ಥೆಯಲ್ಲಿ ಅಯಾ ಕಾಲ ಮಟ್ಟದಲ್ಲಿ ತಲೆದೋರುವ ಅಸಮಾನತೆಗಳನ್ನು ತೊಡೆದುಹಾಕುವುದು ಪ್ರಜ್ಞಾವಂತ ನಾಗರೀಕ ಸಮಾಜದ ಕರ್ತವ್ಯವಾಗಿದೆ. 20ನೇಯ ಶತಮಾನದ ಆರಂಭದಲ್ಲಿ ಮಾನವ ಮತ್ತು ಯಂತ್ರಗಳ ನಡುವೆ ಉಂಟಾಗಿದ್ದ ಘರ್ಷಣೆ ಇಂದು ವಿಭಿನ್ನ ಸ್ವರೂಪ ಪಡೆದಿದೆ. ಒಂದೆಡೆ ಬಂಡವಾಳ ಶಾಹಿಜಾಗತೀಕರಣವನ್ನು ವಿರೋಧಿಸುತ್ತಲೇ ಇನ್ನೊಂದೆಡೆ ಇದೇ ಜಗತ್ತನ್ನು ಒಂದು ಗ್ರಾಮವನ್ನಾಗಿಸುವ ಸಂಪರ್ಕ ಕ್ರಾಂತಿಯ ಉಪಯೋಗ ಪಡೆಯಬೇಕಾಗಿದೆ. ಇಲ್ಲಿ ಆಂಗ್ಲಭಾಷೆಯ ಅವಶ್ಯಕತೆ ಹೆಚ್ಚು ಪ್ರಸ್ತುತ ಎನಿಸುತ್ತದೆ.

ಬಂಡವಾಳ ಶಾಹಿ - ಸಾಮ್ರಾಜ್ಯಶಾಹಿಯ ಬೆಳವಣಿಗೆಯು ಉನ್ನತಾವಸ್ಥೆಯಲ್ಲಿರುವ ಈ ಸಂದರ್ಭದಲ್ಲಿ ಆಳುವ ವರ್ಗಗಳು, ಪಟ್ಟಭದ್ರ, ಹಿತಾಸಕ್ತಿಗಳು, ಪ್ರಬಲವರ್ಗಗಳು ಸಮಾಜದಲ್ಲಿ ಅಸಮಾನತೆಯನ್ನು ಹೆಚ್ಚಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತವೆ.

(18ನೆ ಪುಟಕ್ಕೆ)

ಇಂಗ್ಲೀಷ್ ಕಲಿಕೆಯೆಂಬ ಮಾಯಾ ಜಿಂಕೆ

ಸಮಕಾಲೀನ

೧೯೯೧ರ ನಂತರ ಜಾರಿಯಾಗುತ್ತಿರುವ ಉದಾರೀಕರಣ ಖಾಸಗೀಕರಣ, ಜಾಗತೀಕರಣ ನೀತಿಗಳು ಈ ಅಂತರ - ತಾರತಮ್ಯಗಳನ್ನು ಅತಿವೇಗವಾಗಿ ಹೆಚ್ಚಿಸುತ್ತ ಸಾಮಾಜಿಕ ಧ್ರುವೀಕರಣ ಸಂಭವಿಸುತ್ತಿರುವಾಗ, ಇಂಗ್ಲೀಷ್ ಭಾಷೆಯ ತಿಳಿವು ಮಾತ್ರ ಬಡವರ ಭವಿಷ್ಯದ ಸಂಜೀವಿನಿ ಎಂಬುದು ಎಷ್ಟರ ಮಟ್ಟಿಗೆ ಈ ಅಂತರವನ್ನು ಕಡಿಮೆ ಮಾಡುತ್ತದೆ ? ರಾಜಕೀಯ ಪ್ರಜಾತಂತ್ರವನ್ನು ಅಂತರರಾಷ್ಟ್ರೀಯ ವಾಣಿಜ್ಯ ಸಂಸ್ಥೆಗಳು ಅಪಹರಿಸುತ್ತಿರುವಾಗ, ಸಾಂಸ್ಕೃತಿಕ ಪ್ರಜಾತಂತ್ರವನ್ನು ಈ ನೆಲದ ಬ್ರಾಹ್ಮಣ್ಯ ಹಾಗೂ ಅಮೇರಿಕದ ಕೊಳ್ಳಬಾಕ ಸಂಸ್ಕೃತಿ ಅಪಹರಿಸುತ್ತಿರುವಾಗ ಅವೆಲ್ಲದರ ಪ್ರಭಾವದಿಂದಲೇ ರೂಪುಗೊಳ್ಳುವ ಶೈಕ್ಷಣಿಕ ನೀತಿಗಳಲ್ಲಿ ಪ್ರಜಾಂತ್ರ ಅಪೇಕ್ಷಿಸಲು ಸಾಧ್ಯವೇ ?

○ ಶಿವ ಸುಂದರ್

ಒಂದನೆ ತರಗತಿಯಿಂದಲೇ ಕರ್ನಾಟಕದ ಸರ್ಕಾರಿ ಶಾಲೆಯ ಮಕ್ಕಳಿಗೆ ಇಂಗ್ಲಿಷ್‌ಅನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಆಶಯ ಒಂದು ವಿವಾದವಾಗಿ ಈಗ ಒಂದು ಮಜಲನ್ನು ಮುಟ್ಟಿದಂತೆ ಕಾಣುತ್ತದೆ. ಕನಿಷ್ಟ ಈ ವರ್ಷದ ಮಟ್ಟಿಗೆ ಸರ್ಕಾರ ಈ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಿಲ್ಲವೆಂದು ಘೋಷಿಸಿದೆ. ಒಂದನೆ ತರಗತಿಯಿಂದಲೇ ಕಡ್ಡಾಯವಾಗಿ ಇಂಗ್ಲೀಷ್ ಕಲಿಸಲೇಬೇಕೆಂಬ ಸಾಮಾಜಿಕ ನ್ಯಾಯದ ಉನ್ಮಾದದಿಂದ ಪ್ರಾರಂಭವಾದ ಚರ್ಚೆ, ಕ್ರಮೇಣ ಕೆಲವು ಶೈಕ್ಷಣಿಕ ಸೂಕ್ಷ್ಮಗಳ ವಾಸ್ತವತೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಾರಂಭಿಸಿತು. ಹೀಗಾಗಿ ನಂತರದ ಚರ್ಚೆಗಳಲ್ಲಿ ಇಂಗ್ಲೀಷ್ ಕಲಿಕೆ ಒಂದನೆ ತರಗತಿಯಿಂದಲೇ, ಅಥವಾ ಐದನೇ ತರಗತಿಯಿಂದಲೇ ಎಂಬ ಪ್ರಾಯೋಗಿಕ ಅಂಶಗಳು ಚರ್ಚೆಯ ತೆಕ್ಕೆಗೆ ಒಳಪಟ್ಟಿತು. ಅಂತಿಮವಾಗಿ ಮಾತೃಭಾಷಾ ಶಿಕ್ಷಣ, ಹಾಗೂ ಏಕರೂಪ ಶಿಕ್ಷಣವೆಂಬ ಶೈಕ್ಷಣಿಕ ಪ್ರಜಾತಂತ್ರದ ಈಡೇರದ ಆಶಯಗಳ ಚರ್ಚೆ ಮತ್ತೆ ಚಾಲನೆ ಪಡೆದುಕೊಂಡಿದೆ. ಹೇಗಿದ್ದರೂ ಈ ವರ್ಷ ಸರ್ಕಾರ ಯಾವುದೇ ಹೊಸ ನೀತಿ ಜಾರಿಗೆ ತರುವುದಿಲ್ಲವಾದ್ದರಿಂದ, ಅಷ್ಟರ ಮಟ್ಟಿಗೆ ಉನ್ಮಾದ ವಿಲ್ಲದ ಚರ್ಚೆಗೆ ಆಸ್ಪದ ಉಂಟಾಗಿದೆ.

ಒಂದನೆ ತರಗತಿಯಿಂದಲೇ ಇಂಗ್ಲೀಷ್ ಕಲಿಸಬೇಕೆ ಬೇಡವೆ ಎಂಬ ಬಗ್ಗೆ ಭಿನ್ನ - ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಆದರೆ ಇವುಗಳ ನಡುವೆಯೂ ಕೆಲವು ಏಕಾಭಿಪ್ರಾಯಗಳೂ ರೂಪುಗೊಂಡಿವೆ

1. ಪ್ರಾಥಮಿಕ ಹಂತದಿಂತಲೇ ಒಂದು ಭಾಷೆಯಾಗಿ ಇಂಗ್ಲೀಷ್ ಕಲಿಸಲೇಬೇಕು.

2. ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕು.

3. ಹಾಗು ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳಲ್ಲೂ ಏಕರೂಪ ಕಲಿಕಾ ಪದ್ಧತಿ ಜಾರಿಗೆ ತರಬೇಕು.

ಕೆಲವು ಕೇಳಬೇಕಾದ ಪ್ರಶ್ನೆಗಳು :

ಮೇಲಿನ ವಿಷಯಗಳಲ್ಲಿ ಹೆಚ್ಚಿನ ತಕರಾರು ಕಂಡು ಬರುತ್ತಿಲ್ಲ. ಆದರೆ ದುರಂತದ ಸಂಗತಿಯೆಂದರೆ ಈ ಮೂರು ಸರ್ವಸಮ್ಮತ ಗ್ರಹಿಕೆಗಳು 1956ರಿಂದಲೂ ಜಾರಿಗೆ ಬರದ ಆಶಯಗಳಾಗಿಯೇ ಉಳಿದಿವೆ. ಶೈಕ್ಷಣಿಕ ರಂಗದಲ್ಲಿ ತಾರತಮ್ಯ ನಿವಾರಿಸಿ, ಶೈಕ್ಷಣಿಕ ಪ್ರಾಜಾತಂತ್ರ ರೂಪಿಸುವ ಈ ಆಶಯಗಳನ್ನು ಏಕೀಕರಣದ ನಂತರವೂ ಸರ್ಕಾರವು ಜಾರಿಗೆ ತರದಿರಲು ಕಾರಣವೇನು?

ಬದಲಿಗೆ ಈ ಮೂರು ಆಶಯಗಳಿಗೆ ತದ್ವಿರುದ್ದವಾದ ಬಡವ ಬಲ್ಲಿದ, ಗ್ರಾಮೀಣ-ನಗರ ಇತ್ಯಾದಿ ತಾರತಮ್ಯಗಳನ್ನು ಹೆಚ್ಚಿಸುವಂತ ಇಂಗ್ಲೀಷ್ ಕಲಿಕೆಯ ನಡುವಿನ ತಾರತಮ್ಯವನ್ನು, ಅದು ನೀಡುವ ಉದ್ಯೋಗವಕಾಶಗಳಿಲ್ಲಿನ ತಾರತಮ್ಯಗಳನ್ನು ಹೆಚ್ಚಿಸುವ ನೀತಿಗಳೇ ಜಾರಿಗೆ ಬಂದಿದೇಕೆ? ಈ ಶೈಕ್ಷಣಿಕ ತಾರತಮ್ಯಗಳಿಗೂ ಸಮಾಜದಲ್ಲಿ ಹೆಚ್ಚುತ್ತಿರುವ ಒಟ್ಟಿಗೆ ಜಾತಿ, ಪ್ರದೇಶ, ವರ್ಗ, ಲಿಂಗಾಧಾರಿತ ತಾರತಮ್ಯಗಳಿಗೂ ಏನಾದರೂ ಸಂಬಂಧವಿದೆಯೇ ?

ಅದರಲ್ಲೂ 1991ರ ನಂತರ ಜಾರಿಯಾಗುತ್ತಿರುವ ಉದಾರೀಕರಣ ಖಾಸಗೀಕರಣ, ಜಾಗತೀಕರಣ ನೀತಿಗಳು ಈ ಅಂತರ - ತಾರತಮ್ಯಗಳನ್ನು ಅತಿವೇಗವಾಗಿ ಹೆಚ್ಚಿಸುತ್ತ ಸಾಮಾಜಿಕ ಧ್ರುವೀಕರಣ ಸಂಭವಿಸುತ್ತಿರುವಾಗ, ಇಂಗ್ಲೀಷ್ ಭಾಷೆಯ ತಿಳಿವು ಮಾತ್ರ ಬಡವರ ಭವಿಷ್ಯದ ಸಂಜೀವಿನಿ ಎಂಬುದು ಎಷ್ಟರ ಮಟ್ಟಿಗೆ ಈ ಅಂತರವನ್ನು ಕಡಿಮೆ ಮಾಡುತ್ತದೆ ?

ರಾಜಕೀಯ ಪ್ರಜಾತಂತ್ರವನ್ನು ಅಂತರರಾಷ್ಟ್ರೀಯ ವಾಣಿಜ್ಯ ಸಂಸ್ಥೆಗಳು ಅಪಹರಿಸುತ್ತಿರುವಾಗ, ಆರ್ಥಿಕ ಪ್ರಜಾತಂತ್ರವನ್ನು ಬಹುರಾಷ್ಟ್ರೀಯ ಕಂಪನಿಗಳು ಅವರ ಸ್ಥಳೀಯ ದಲ್ಲಾಳಿಗಳು ಅಪಹರಿಸುತ್ತಿರುವಾಗ, ಸಾಂಸ್ಕೃತಿಕ ಪ್ರಜಾತಂತ್ರವನ್ನು ಈ ನೆಲದ ಬ್ರಾಹ್ಮಣ್ಯ ಹಾಗೂ ಅಮೇರಿಕದ ಕೊಳ್ಳಬಾಕ ಸಂಸ್ಕೃತಿ ಅಪಹರಿಸುತ್ತಿರುವಾಗ ಅವೆಲ್ಲದರ ಪ್ರಭಾವದಿಂದಲೇ ರೂಪುಗೊಳ್ಳುವ ಶೈಕ್ಷಣಿಕ ನೀತಿಗಳಲ್ಲಿ ಪ್ರಜಾಂತ್ರ ಅಪೇಕ್ಷಿಸಲು ಸಾಧ್ಯವೇ ?

ಇನ್ನಿತ್ಯಾದಿ ಪ್ರಮುಖ ಪ್ರಶ್ನೆಗಳು ಈಗಲಾದರು ಚರ್ಚೆಗಳಲ್ಲಿ ಸ್ಥಾನ ಪಡೆದುಕೊಳ್ಳಬೇಕಿತ್ತು. ಇದಲ್ಲದೇ ಹೊರಗೆ ಕರ್ನಾಟಕದ ಏಕೀಕರಣದ ಕಾಲದಿಂದಲೂ ಎಲ್ಲಾ ಮುಖ್ಯಮಂತ್ರಿಗಳ ರಾಜ್ಯೋತ್ಸವ ಭಾಷಣಗಳಲ್ಲೂ ಪ್ರತಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣಗಳಲ್ಲು ವ್ಯಕ್ತವಾಗುತ್ತಿರುವ ಈ ಶೈಕ್ಷಣಿಕ ಪ್ರಜಾತಂತ್ರದ ಆಶಯಗಳು ಅಲ್ಲಿಯೇ ಉಳಿದು ಹೋಗುತ್ತಿದೆಯೇ ವಿನಃ ಆಚರಣೆಗೆ ಬರುವುದಿಲ್ಲ. ಈಗಲೂ ಹಳೆಯ ಆಶಯಗಳ ಪುನರ್ ಧೃಡೀಕರಣವಾಗಿದೆ. ಚರ್ಚೆ-ಹೋರಾಟಗಳು ಸ್ಥಗಿತಗೊಳ್ಳುವ ಹಂತಕ್ಕೆ ಬರದೇ ಇರಬಾರದು.

ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಕೆ ಕಡ್ಡಾಯ ಮಾಡಬೇಕೆಂಬ ಈಗಿನ ಚರ್ಚೆಯಲ್ಲೂ ಮೇಲ್ನೋಟಕ್ಕೆ ಉದ್ಯೋಗವಕಾಶ ಗಳಲ್ಲಿ ಸಮಾನ ಅವಕಾಶ ಒದಗಿಸುತ್ತ ದೆಂಬ ಆಶಯ ವ್ಯಕ್ತವಾಗುತ್ತದೆ. ಈ ಆಶಯ ವಾಸ್ತವದ ಆಕಾರದಲ್ಲಿ ನೆಲೆ ನಿಂತಿದೆಯೇ ಅಥವಾ ಸ್ವಕಲ್ಪಿತ ಬಯಕೆಯೇ? ಎಂಬ ಪ್ರಶ್ನೆ ಯನ್ನು ಬದಿಗಿಟ್ಟರೂ, ಈ ನೀತಿ ಸಾಮಾಜಿಕ - ಆರ್ಥಿಕ - ರಾಜಕೀಯ ಕ್ಷೇತ್ರಗಳಲ್ಲಿನ ಅಪ್ರಜತಾಂತ್ರಿಕತೆಯನ್ನು ಹೆಚ್ಚಿಸುವುದಿಲ್ಲ? ಎಂದು ವಿಶ್ವದಲ್ಲಿ ಏಕಸಾಮ್ಯ-ಕಾರ್ಪೊರೇಟ್ ಸೊಸೈಟಿ ಘೋಷಿ ಸುತ್ತಿರುವ ಸಂಸ್ಥೆಗಳೇ ಶೈಕ್ಷಣಿಕ ರಂಗ ದಲ್ಲೂ "ವ್ಯಾವಹಾರಿಕ ಇಂಗ್ಲೀಷ್ " ಕಲಿಕೆ ಕಡ್ಡಾಯ ಮಾಡ ಬೇಕೆಂದು ಒತ್ತಡ ತರುತ್ತಿರುವಾಗ ಇಂಗ್ಲೀಷ್ ಕಲಿಕೆಯ ವಿಷಯವನ್ನು ಶೈಕ್ಷಣಿಕ ವಿಷಯಗಳಿಗೆ ಸೀಮಿತವಾಗಿಟ್ಟು ನಿಲುವಿಗೆ ಬರಲು ಸಾಧ್ಯವೇ? ಎಂಬಿತ್ಯಾದಿ ಪ್ರಶ್ನೆಗಳು ಈಗಲಾದರು ಆಶಾವಾದ ಚರ್ಚೆಗೆ ಒಳಪಡಬೇಕಿದೆ.

ಇಂಗ್ಲೀಷ್-ಜನಭಾಷೆಯೇ? ಪ್ರಭುತ್ವದ ರಾಜಕೀಯ ವ್ಯಾಕರಣವೋ?

ಬ್ರಿಟೀಷ್ ವಸಾಹತುಶೋಷಣೆಗೆ ಒಳಪಟ್ಟ ಭಾರತದಲ್ಲಿ ಇಂಗ್ಲೀಷ್ ಎಂದಿಗೂ ಕೇವಲ ಒಂದು ತಟಸ್ಥ ಭಾಷೆಯಾಗಿರಲಿಲ್ಲ. ಅದು ಪ್ರಭುತ್ವದ ಭಾಷೆಯ ವಸಾಹತುಶಾಹಿ ನೀತಿಯ ಭಾಗವಾಗಿ, ಸ್ಥಳೀಯ ಜನ ಭಾಷೆಗಳನ್ನು ಮೂಲೆಗುಂಪು ಮಾಡಿತು. 1835-1947ರ ನಡುವೆ ಆಡಳಿತ, ವ್ಯವಹಾರ ಪ್ರತಿಯೊಂದರಲ್ಲೂ ಅಧಿಕವಾಗಿ ಇಂಗ್ಲೀಷ್ ಜಾರಿಯಾಯಿತು. ವಸಾಹತು ಆಳ್ವಿಕೆಯ ಉದ್ದೇಶ ಹಾಗೂ ಪರಿಣಾಮಗಳಿಂದಾಗಿ ಸ್ಥಳೀಯ ಜನಭಾಷೆಗಳು ಅಸ್ತಿತ್ವ-ಅಗತ್ಯ ಕಡಿಮೆಯಾಗಲಾರಂಭಿಸಿತು. ಇದು ವಸಾಹತುಶಾಹಿ ರೂಪಿಸಿತ ರಾಜಕೀಯ ವ್ಯಾಕರಣ.

ಬ್ರೀಟೀಷರ ಶಿಕ್ಷಣ ನೀತಿಯನ್ನು ಪ್ರಸ್ತಾಪಿಸುವಾಗ ಮೆಕಾಲೆಯ ಮಾತುಗಳನ್ನು ಸಹಜವಾಗಿಯೇ ಉದ್ದರಿಸಲಾಗುತ್ತದೆ. ರಕ್ತದಿಂದ ಭಾರತೀಯರಾಗಿ ಅಭಿಪ್ರಾಯ ಅಭಿರುಚಿಗಳಲ್ಲಿ

ಇಂಗ್ಲೀಷ್‌ಗಿರುವ ಒಂದು ಸುಶಿಕ್ಷಿತ ದಲ್ಲಾಳಿ ವರ್ಗದ ಸೃಷ್ಟಿ ವಸಾಹತುಶಾಹಿ ಪ್ರಭುತ್ವದ ಅಸ್ತಿತ್ವಕ್ಕೆ ಅತ್ಯಂತ ಅಗತ್ಯವಾಗಿದ್ದ ನೀತಿಯಾಗಿತ್ತು. ಈ ಸುಶಿಕ್ಷಿತ ದಲ್ಲಾಳಿ ವರ್ಗದ ಸಹಕಾರ – ಸಹಯೋಗದಿಂದಾಗಿಯೇ ಬ್ರಿಟಿಷ್ ವಸಾಹುತಶಾಹಿ 250 ವರ್ಷಗಳ ಕಾಲ ಭಾರತವನ್ನಾಳಲು ಸಾಧ್ಯವಾಯಿತು. 1947ರಲ್ಲಿ ಭಾರತದ ಜನಸಂಖ್ಯೆ 25ಕೋಟಿ. ಈ 25ಕೋಟಿ ಜನರನ್ನಾಳಲು ಇಡೀ 250ವರ್ಷಗಳಲ್ಲಿ ಬ್ರಿಟೀಷ್ ಬಿಳಿ ಸೈನಿಕರ ಸಂಖ್ಯೆ ಎಂದಿಗು 17,000ಕ್ಕಿಂತ ಹೆಚ್ಚಿರಲಿಲ್ಲ. ಬದಲಿಗೆ ಬ್ರಿಟೀಷ್ ವಸಾಹುತುಶಾಹಿ ಇಂಗ್ಲೀಷ್ ಮೇಲರಿಮೆಯ ಸೈನಿಕರನನ್ನು ಪ್ರತಿ ಭಾರತೀಯನ ತಲೆಯಲ್ಲಿ ಪ್ರತಿಷಾಪಿಸಿ ಸ್ವಂತಿಕೆ ಸ್ವಾವಲಂಬನೆಯೆಂಬ ಮೂಲ ಸ್ಥಳೀಯ ಮೇಲೆ ಹುಟ್ಟುತ್ತಿದ್ದಂತೆ ತಲೆಯಲ್ಲೇ ಸಾಯಿಸುವಂತೆ ಮಾಡಿತು. ಈ ಪ್ರಕ್ರಿಯೆಯನ್ನೇ ಆಫ್ರಿಕಾದ ಚಿಂತಕ ಗೂಗಿ-ನಾ-ಥಿದೀಯೋ " killing means of Imagination " (ಚಿಂತನಾ ಸಾಧನದ ಕೊಲೆ)



ಎಂದು ಕರೆಯುತ್ತಾನೆ.

ಒಂದು ಭಾಷೆ ರೂಪುಗೊಳ್ಳುವುದೇ ಒಂದು ಭಾಷಾ ಸಮುದಾಯದ ಸಾಮಾಜಿಕ ಬದುಕಿನ ಸಂದಹನದಲ್ಲಿ ಈ ಸಾಮಾಜಿಕ ಬದುಕು ಕೂಡ ಮಾಡುವ ತಾಂತ್ರಿಕ ಜ್ಞಾನ, ಬದುಕಿನ ವಿವೇಕ ಮೂಡಿಸುವು ಸಾಮೂಹಿಕ ಕನಸು ಒಂದು ಭಾಷೆಯನ್ನು ರೂಪಿಸುತ್ತದೆ. ಬದಲಿಗೆ ಈ ಭಾಷೆಯೇ ಆ ಭಾಷಿಕ ಸಮೂದಾಯವನ್ನು ಒಂದು ಘಟಕವಾಗಿ ಮುಂದಿನ ದಿನಗಳಲ್ಲಿ ಬಂದು ರಾಷ್ಟ್ರೀಯತೆಗಾಗಿ ರೂಡಿಸುತ್ತಿದೆ. ಹೀಗೆ ಭಾಷೆ ಕೇವಲ ಒಂದು ಸಂತಹನ ಸಾಧನವಲ್ಲ, ಬದಲಿಗೆ ಒಂದು ಸಮುದಾಯದ ಸಾಮಾಜಿಕ ಬದುಕಿನ ಉಳಿವಿನ ಸಂಕೇತ, ಬೆಳೆವ ಹಂಬಲ.

ವಸಾಹತುಶಾಹಿ ಆಳಿಕೆಯಿಂದಾಗಿ ಭಾಷೆ ಹಾಗೂ ಸಮೂದಾಯಗಳ ನಡುವಿನ ಈ ಸಾವಯವ ಸರೋಜಾತ್ಮಕ ಸಂಬಂಧದಲ್ಲಿ ಬದುಕು ಬಂತು. ವಸಾಹತುಶಾಹಿವಸಾ ಹತುದೇಶಗಳ ಮೇಲೆ ಹೇರಿದ ಆರ್ಥಿಕತೆ ಸ್ಥಳಿಯ ಜನ ಸಮೂದಾಯಗಳ ಜ್ಞಾನ. ವಿದೇಶಗಳನ್ನು ನಗರ ಗೊಳಿಸಿತು. ಮೆಕಾಲೆ ಹೇಳಿದಂತೆ ಅಭಿರುಚಿಯಲ್ಲಿ ಮಾರ್ತ ದಲ್ಲಿದೆ ಹೊಸ ಕೌಶಲ್ಯ-ತಾಂತ್ರಿಕತೆ ಬೇಡುವ ಆರ್ಥಿಕತೆ ಭಾರತದ ಮೇಲೆ ಹೇಳಲ್ಪಟ್ಟಿರುವದರಿಂದ ಹೊಸ ಬಗೆಯ ಶ್ರಮ-ಸೇವೆ ಬ್ರಿಟೀಷರಿಗೆ ಬೇಕಿತ್ತು. ಆದರೆ ಅದನ್ನು ಅವರು ಸ್ಥಳೀಯ ಭಾಷಗಳಲ್ಲಿ ಕೊಡಲು ಸಿದ್ದರಿಲ್ಲದಿದ್ದರಿಂದ ಇಂಗ್ಲೀಷ್ ಭಾಷೆ ಕಲಿಕೆಯ ಮೂಲಕ ಮಾತ್ರ ಆ ಕೌಶಲ್ಯ ದರೂನಂತೇಯಿತು. ಹಾಗೂ ಆ ಅವಕಾಶಗಳು ಶಾಲಾ ಶಿಕ್ಷಣ-ಇಂಗ್ಲೀಷ್ ಶಿಕ್ಷಣದ ಅವಕಾಶಗಳು ಪಾರಂಪರಿಕವಾಗಿ ಈ ಜ್ಞಾನದ ವಾರಸುದಾರಿಕೆ ಪಡೆದಿದ್ದ ವರ್ಗಗಳೆ ಸಿಗುವಂತೆ ನೋಡಿಕೊಳ್ಳಲಾಯಿತು. ಹೀಗಾಗಿ ಇಂಗ್ಲೀಷ್ ಸಹ ಇದೀಗ ಬ್ರಾಹ್ಮಣ್ಯದ ಜೊತೆ ಜಾತಿ ವ್ಯವಸ್ಥೆ ಜೊತೆ ರಾಜಿ ಮಾಡಿ ಕೊಂಡು, ಜಾತಿ ವ್ಯವಸ್ಥೆಗೆ ನೀರೆರೆಯಿತೇ ವಿನಃಮುರಿಯ ಲಿಲ್ಲ. ಅಲ್ಲಲ್ಲಿ ಕಲಿತು ಬಂದ ಒಬ್ಬನ ಅಂಬೇಡ್ಕರ್-ಒಟ್ಟು ಕುವೆಂಪು ಅಪರೂಪದ ಅಪವಾದವೇ ವಿನಃನೀತಿ ಆಗಿರಲಿಲ್ಲ.

ನೀತಿ ಸಾಹತೀಕರಣದ ವ್ಯಾಕರಣ

ಆದರೆ 1947ರ ನಂತರ ನಿರ್ವಸಾಹತಿಕರಣದ ಪ್ರಕ್ರಿಯೆ ಪ್ರಾರಂಭಗೊಳ್ಳಬೇಕಿತ್ತು. ರಾಜಕೀಯವಾಗಿ ಬ್ರಿಟೀಷರು ಅಧಿಕಾರದ ಹಸ್ತಾಂತರ ಮಾಡಿದರೂ, ಆರ್ಥಿಕ ಸ್ವಾವಲಂಬನೆ ಸ್ವಾತಂತ್ರ್ಯದ ದೃಷ್ಟಿಯಿಂದ ಆರ್ಥಿಕ ಮಿತಸಾಹತಿಕರಣವಾಯಿತೇ? 1944ರ ಬಾಂಬೇ ಪ್ಲಾನ್ ಇಂದ ಹಿಡಿದು ನೆಹರು ಮೆಹಲೆನೋಬಿಸ್ ಯೋಜನೆವರೆಗೆ ಸ್ವಾತಂತ್ರ್ಯ ಭಾರತದ ಪ್ರಾರಂಭದ ಎಲ್ಲಾ ಆರ್ಥಿಕ-ನೀತಿಗಳು ಆರ್ಥಿಕ ಸ್ವಾವಲಂಬನೆಯ ಹಾಗು ಇರ್ವಹಾಸ ವೇತಕರದ ಯೋಚನೆಯನ್ನು ಹೊಂದಿರಲಿಲ್ಲ. ಅದರಲ್ಲು 1951ರ ಪ್ರಥಮ ಸಂಜೂಷಿತ ಯೋಜನೆಯಿಂದಲೇ ಕೃಷಿ, ಕೈಗಾರಿಗೆ, ಶಿಕ್ಷಣ ಎಲ್ಲದರಲ್ಲೂ ವಿದೇಶಿ ಅವಲಂಬನೆ ಪ್ರಾರಂಭವಾಯಿತು. ಅರ್ಥಾತ್ ಭಾರತದ ಜನಸಮು ದಾಯದ ಸಾವಿರಾರು ವರ್ಷಗಳ ನಾಗರೀಕತೆ ಸೃಷ್ಟಿಸಿದ ಜ್ಞಾನ-ವಿದೇಶಗಳನ್ನು ಆಧರಿಸಿದ ಆರ್ಥಿಕತೆ ಕಟ್ಟಲಾಗಲಿಲ್ಲ. ಬದಲಿಗೆ ವಿದೇಶಿ ಆರ್ಥಿಕತೆಯ ಅಗತ್ಯಗಳನ್ನು ಪೂರೈಸುವ ಕಚ್ಚಾವಸ್ತು ಸರಬರಾಜು ಆರ್ಥಿಕತೆಯಾಗಿಯೇ ಭಾರತ ಉಳಿದು ಬಿಟ್ಟಿತು. ಆದ್ದರಿಂದಲೇ ಹೊಸ ಆರ್ಥಿಕತೆಯ ಭಾಷೆ ಹಾಗೂ ಪಾರಭಾಷೆ ಎರಡು ಆದ ಇಂಗ್ಲೀಷ್ ಅಧಿ ಪತ್ಯವೇ ಸ್ವಾತಂತ್ರ್ಯನಂತರವು ಮುಂದುವರೆಯಿತು. ಹಾಗೂ ಆ ಆರ್ಥಿಕತೆಗೆ ಇಡೀ ಜನಸಮುದಾಯದ ಒಳಗೊಳ ವಿಕೆಯ ಅಗತ್ಯವೇ ಇಲ್ಲವಾದ್ದರಿಂದ ಅದೂ ಸಹ ಆಯ್ದ ಜನರಿಗೆ ಮಾತ್ರ ಲಭ್ಯವಾಗ ತೊಡಗಿತು.

ಆದ್ದರಿಂದಲೇ ಸಂವಿದಾನದಲ್ಲಿ 1950ರ ನಂತರ 15 ವರ್ಷವಾದ ಮೇಲೆ ಇಂಗ್ಲೀಷ್ ಬಳಕೆಯು ಆಡಳಿತ ಎಲ್ಲ ಕ್ಷೇತ್ರಗಳನ್ನು ನಿರ್ಮೂಲನೆ ಮಾಡಬೇಕೆಂಬ ಆಶಯ ವಿದ್ದರೂ, 1967ರಲ್ಲಿ ಸಂಸತ್ತಿನಲ್ಲಿ ನೀತಿ ಬದಲಾಯಿಸಿ ಇಂಗ್ಲೀಷ್ ಅಧಿಪತ್ಯ ಮುಂದುವರೆಸಲಾಯಿತು. ಮೇಲಾಗಿ ಎಲ್ಲಾ ಉಚ್ಚ ಹಾಗೂ ವರಿಷ್ಠ ನ್ಯಾಯಲಯದಲ್ಲಿ ಇಂಗ್ಲೀಷನ್ನೇ ಬಳಸಬೇಕೆಂದು ಕಡ್ಡಾಯ ಮಾಡಲಾಯಿತು.

ಹೀಗಾಗಿ ಸ್ಥಳೀಯ ಭಾಷೆಗಳ ನಿರಾಕರಣೆ ಎಂದರೆ ಆ ಭಾಷೆಯಲ್ಲಿ ಆರ್ಥಿಕ ಪ್ರತಿಫಲಿತವಾಗುವ ಆ ಭಾಷಿಕ ಸಮುದಾಯದ ಜ್ಞಾನ-ವಿವೇಕಗಳ ನಿರಾಕರಣೆ ಎಂದರ್ಥ. ಇಂಗ್ಲೀಷ್ ಸ್ವಂತ ವಸಹತು ಭಾಷೆ ಕಡ್ಡಾಯವಾಗುವುದೆಂದರೆ ಆ ಭಾಷೆಯನ್ನು ಸಂವಹನ ಮಾಧ್ಯಮವಾಗಿಟ್ಟುಕೊಂಡಿರುವ ಆರ್ಥಿಕತೆಯ ಹೇರಿಕೆಯಾಗಿದೆಯಂದರ್ಥ. ಅರ್ಥಾತ್ ವಸಾಹತು ಸಂಬಂಧಗಳೇ ಮುಂದುವರೆದಿದೆಯಂದರ್ಥ. ಹೀಗಾಗಿ ಭಾಷಾ ನೀತಿ ಒಂದು ಶೈಕ್ಷಣಿಕ ನೀತಿಯ ಭಾಗ'ವಾಗಿಯು ಆ ಶೈಕ್ಷಣಿಕ ನೀತಿ ಆರ್ಥಿಕತೆಯ ಆಗತ್ಯಗಳು ಮೇಲೂ ರೂಪುಗೊಂಡಿರುತ್ತದೆ.

1991ರ ಜಾಗತೀಕರಣದ ನೀತಿ ನಮ್ಮ ದೇಶದ ಕೃಷಿ ಕೈಗಾರಿಕೆ, ಸ್ನಾತಕೋತ್ತರ ನೈಸರ್ಗಿಕ ಸಂಪನ್ಮೂಲ ಎಲ್ಲವನ್ನು ಮತ್ತು ವಸಾಹತೀಕರಿಸುತ್ತದೆ. ಪಾರಂಪರಿಕ ಕೃಷಿಯ ಬದಲಿಗೆ ವಿದೇಶಿ ಮಾರುಕಟ್ಟೆಗೆ ಬೇಕಾದ ಪುಷ್ಪ ಕೃಷಿ, ಸೀಗಡಿ ಕೃಷಿ ಪರಿಚಿತವಾಗುತ್ತಿದೆ. ಆಹಾರ ಧಾನ್ಯದ ಕೃಷಿ ಪದ್ದತಿಯಲ್ಲೂ ಬಹು ರಾಷ್ಟ್ರೀಯ ಕಂಪನಿಗಳು ಹೇರು ತಿರುವ ಪದ್ದತಿಗಳು ಬರುತ್ತಿವೆ. ಈ "ಹೊಸ ಕೌಶಲ್ಯ "ತರ ಬೇತಿ ಇಂಗ್ಲೀಷ್‌ನಲ್ಲಿ ನಡೆಯುತ್ತಿದೆ. ನಿಜ ಅದು ಕೆಲವು ಉದ್ದೇಷಗಳನ್ನು ಸೃಷ್ಟಿಸುತ್ತದೆ. ಆದರೆ ಅದು ಲಕ್ಷಾಂತರ ರೈತ ಸಮುದಾಯದ ದಾಸ್ಯಕ್ಕೆ ಭಿಕಾರಿತನಕ್ಕೆ ದೂಡುತ್ತದೆ. ಅದೇ

(ಮುಂದಿನ ಪುಟಕ್ಕೆ)

ಜಾಗತೀಕರಣದ ನೀತಿ ನಮ್ಮ ದೇಶದ ಕೃಷಿ ಕೈಗಾರಿಕೆ, ಸ್ನಾತಕೋತ್ತರ ನೈಸರ್ಗಿಕ ಸಂಪನ್ಮೂಲ ಎಲ್ಲವನ್ನು ಮತ್ತು ವಸಾಹತೀಕರಿಸುತ್ತದೆ. ಪಾರಂಪರಿಕ ಕೃಷಿಯ ಬದಲಿಗೆ ವಿದೇಶಿ ಮಾರುಕಟ್ಟೆಗೆ ಬೇಕಾದ ಪುಷ್ಪ ಕೃಷಿ, ಸೀಗಡಿ ಕೃಷಿ ಪರಿಚಿತವಾಗುತ್ತಿದೆ. ಆಹಾರ ಧಾನ್ಯದ ಕೃಷಿ ಪದ್ದತಿಯಲ್ಲೂ ಬಹು ರಾಷ್ಟ್ರೀಯ ಕಂಪನಿಗಳು ಹೇರುತಿರುವ ಪದ್ದತಿಗಳು ಬರುತ್ತಿವೆ. ಈ "ಹೊಸ ಕೌಶಲ್ಯ "ತರಬೇತಿ ಇಗ್ಲೀಷ್‌ನಲ್ಲಿ ನಡೆಯುತ್ತಿದೆ. ನಿಜ ಅದು ಕೆಲವು ಉದ್ದೇಷಗಳನ್ನು ಸೃಷ್ಟಿಸುತ್ತದೆ. ಆದರೆ ಅದು ಲಕ್ಷಾಂತರ ರೈತ ಸಮುದಾಯದ ದಾಸ್ಯಕ್ಕೆ ಭಿಕಾರಿತನಕ್ಕೆ ದೂಡತ್ತದೆ.

ಪ್ರಾಥಮಿಕ ಶಿಕ್ಷಣ - ಇಂಗ್ಲೀಷ್ ಕಲಿಕೆ

(15ನೆ ಪುಟದಿಂದ)

ಧರ್ಮ ಬಾಷೆ - ಜಾತಿ - ರಾಜಕೀಯ - ಪ್ರಾದೇಶಿಕತೆ - ಜನಾಂಗೀಯತೆ ಮುಂತಾದವುಗಳು ಆಳುವ ವರ್ಗಗಳಿಗೆ ಪ್ರಮುಖ ಸಾಧನೆಗಳಾಗಿ ಬಿಡುತ್ತವೆ. ಈ ಎಲ್ಲಾ ಸಾಧನೆಗಳಿಗೆ ವಿರುದ್ಧ ಬ್ರಹ್ಮಾಸ್ತ್ರವಾಗಿ ಬಾಷೆ ಕೆಲಸ ನಿರ್ವಹಿಸುತ್ತದೆ. ಎಕೆಂದರೆ ಸಂಪರ್ಕ ಕ್ರಾಂತಿಯ ಆಧುನಿಕ ಯುಗದಲ್ಲಿ ಭಾಷಾಜ್ಞಾನ ಜಾಗತೀಕ ಮಟ್ಟದಲ್ಲಿ ಜನರನ್ನು ಒಂದುಗೂಡಿಸುತ್ತದೆ. ಇಂದಿಗೂ ಅನೇಕ ವಿವಾದ ಸಂಕಿರಣಗಳಲ್ಲಿ ಪ್ರಚಲಿತ ಜಾಗತೀಕ ವಿದ್ಯಾಮಾನಗಳ ಬಗ್ಗೆ

> **ಸಂಪರ್ಕ ಕ್ರಾಂತಿಯ ಆಧುನಿಕ ಯುಗದಲ್ಲಿ ಭಾಷಾಜ್ಞಾನ ಜಾಗತೀಕ ಮಟ್ಟದಲ್ಲಿ ಜನರನ್ನು ಒಂದುಗೂಡಿಸುತ್ತದೆ. ಇಂದಿಗೂ ಅನೇಕ ವಿವಾದ ಸಂಕಿರಣಗಳಲ್ಲಿ ಪ್ರಚಲಿತ ಜಾಗತೀಕ ವಿದ್ಯಾಮಾನಗಳ ಬಗ್ಗೆ ಉಪನ್ಯಾಸಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕಾಗುತ್ತದೆ. ಇಲ್ಲವಾದಲ್ಲಿ ಈ ಉಪನ್ಯಾಸದ ಅಗತ್ಯತೆ ಇರುವ ಬಹುಪಾಲು ಮಂದಿ ವಿಷಯ ವಂಚಿತರಾಗಿಯೇ ಉಳಿಯುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಈ ನ್ಯೂನತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಆಧುನಿಕತೆ ಮತ್ತು ನಾಗರೀಕ ಸಮಾಜದ ನಡುವೆ ಆಂಗ್ಲಭಾಷೆ ಒಂದು ಸಂಪರ್ಕದ ಕೊಂಡಿಯಾಗುವುದಾದಲ್ಲಿ ಅದನ್ನು ಸ್ವಾಗತಿಸಲೇಬೇಕಾಗುತ್ತದೆ.**

ಉಪನ್ಯಾಸಗಳನ್ನು ಕನ್ನಡಕ್ಕೆತರ್ಜುಮೆ ಮಾಡಬೇಕಾಗುತ್ತದೆ. ಇಲ್ಲವಾದಲ್ಲಿ ಈ ಉಪನ್ಯಾಸದ ಆಗತ್ಯತೆ ಇರುವ ಬಹುಪಾಲು ಮಂದಿ ವಿಷಯ ವಂಚಿತರಾಗಿಯೇ ಉಳಿಯುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಈ ನ್ಯೂನತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಆಧುನಿಕತೆ ಮತ್ತು ನಾಗರೀಕ ಸಮಾಜದ ನಡುವೆ ಆಂಗ್ಲಭಾಷೆ ಒಂದು ಸಂಪರ್ಕದ ಕೊಂಡಿಯಾಗುವುದಾದಲ್ಲಿ ಅದನ್ನು ಸ್ವಾಗತಿಸಲೇ ಬೇಕಾಗುತ್ತದೆ.

ಹಾಗೆಂದ ಮಾತ್ರಕ್ಕೆ ಪ್ರಾಥಮಿಕ ಹಂತದಿಂದ ಆಂಗ್ಲಭಾಷೆ ಕಲಿಸುವುದರಿಂದ ಎಲ್ಲ ವಿದ್ಯಾರ್ಥಿಗಳೂ ಆಂಗ್ಲಭಾಷಾ ಪ್ರವೀಣರಾಗುತ್ತಾರೆಂದು ಅರ್ಥವಲ್ಲ. ಭಾಷಾ ಜ್ಞಾನಕ್ಕೂ ಭಾಷಾ. ಪಾಂಡಿತ್ಯಕ್ಕೂ ಅಪಾರ ವ್ಯತ್ಯಾಸವಿದೆ. ಕೇವಲ ಅಂಕಗಳಿಕೆಯ ದೃಷ್ಟಿಯಿಂದ ಭಾಷಾ ಅಧ್ಯಯನ ಮಾಡಿದಲ್ಲಿ ಅದು ಕೂಪ ಮಾಡೋಕತನವಾಗುತ್ತದೆ. ರಾಜ್ಯ ಸರ್ಕಾರದತೀರ್ಮಾನದಿಂದ ಈ ಅಪಾಯವೂ ಸಂಭವಿಸ ಬಹುದು. ಆಂಗ್ಲಭಾಷೆಯನ್ನು ಒಂದು ಪಠ್ಯ ವಿಷಯವನ್ನಾಗಿ ಮಾಡಿದ ಕೂಡಲೇ ಎಲ್ಲಾ ವಿದ್ಯಾರ್ಥಿಗಳೂ ಆಂಗ್ಲ ಬಾಷಾ ಪ್ರವೀಣರಾಗುವುದಿಲ್ಲ. ಹಾಗೆ ನೋಡಿದರೆ ಆಂಗ್ಲ ಮಾಧ್ಯಮದ ಶಾಲೆಗಳು ಬೀದಿಗೊಂದು ಇದ್ದರೂ ನಮ್ಮ ಜನರ ಆಂಗ್ಲಭಾಷಾ ಜ್ಞಾನ 'ಭಾರತೀಯ ಇಂಗ್ಲೀಷ್' 'ಹಿಂಗ್ಲೀಷ್', 'ಕಂಗ್ಲೀಷ್' ಎಂದೇ ಹೆಸರಾಗಿದೆ (ಅಂದರೆ ಹಿಂದಿ - ಕನ್ನಡ ಮಿಶ್ರಿತ ಇಂಗ್ಲೀಶ್ ಎಂದರ್ಥ) ಎಕೆಂದರೆ ಅಂಗ್ಲ ಮಾಧ್ಯಮದ ಶಾಲೆಗಳಲ್ಲಿ ಪಾಠ ಮಾಡುವ ಶಿಕ್ಷಕ - ಶಿಕ್ಷಕಿಯರಿಗೆ ಆಂಗ್ಲಭಾಷಾ ಪ್ರಾವೀಣ್ಯತೆ ಇರುವುದಿಲ್ಲ.

ಕಾನ್ವೆಂಟ್‌ಗಳೆಂದು ಹೇಳಿಕೊಳ್ಳುವ ಅನೇಕ ಆಂಗ್ಲ ಮಾಧ್ಯಮದ ಶಾಲೇಗಳಲ್ಲಿ ಪಾಠಗಳನ್ನು ಕನ್ನಡದಲ್ಲಿಯೇ ಮಾಡಲಾಗುತ್ತದೆ ಹಾಗಾಗಿ ಸಾಮಾನ್ಯ ಜನರ ಆಡು ಭಾಷೆಯ ರೂಪದಲ್ಲಿ ಆಂಗ್ಲ ಭಾಷೆ ಸಾಕಷ್ಟು ಹೊಡೆತ ತಿನ್ನುತ್ತದೆ. ಇದೇ ಪರಿಸ್ಥಿತಿ ಸರ್ಕಾರಿ ಶಾಲೆಗಳಲ್ಲೂ ಕಂಡು ಬರುವ ಸಾಧ್ಯತೆಗಳು ಹೆಚ್ಚಾಗಿವೆ.

ಹಾಗಾಗಿ ರಾಜ್ಯ ಸರ್ಕಾರವು ತನ್ನ ನಿರ್ಧಾರವನ್ನು ಅನುಷ್ಠಾನಗೊಳಿಸುವ ಮುನ್ನ ಆಂಗ್ಲ ಭಾಷಾ ಶಿಕ್ಷಕರಿಗೆ ಉತ್ತಮ ಗುಣಮಟ್ಟದ ತರಬೇತಿ ನೀಡಬೇಕಾಗುತ್ತದೆ. ಆಂಗ್ಲ ಭಾಷೆಯನ್ನು ಐಚ್ಛಿಕ ಪದ ವಿಷಯವನ್ನಾಗಿ ಓದಿರುವ ಪದವೀಧರರನ್ನು ನೇಮಿಸುವುದು ಅವಶ್ಯವಾಗುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಟಿ.ಸಿ.ಹೆಚ್. ಹಂತದಲ್ಲಿ ಆಂಗ್ಲಭಾಷೆಯನ್ನು ಅಧ್ಯಯನ ಮಾಡಿಸುವುದು ಅವಶ್ಯವಾಗುತ್ತದೆ. ಶೈಕ್ಷಣಿಕ ಸುಧಾರಣೆಗಳಲ್ಲಿ ಇದು ಮುಖ್ಯ ಅಂಶವಾಗಿದೆ. ಇಲ್ಲವಾದಲ್ಲಿ ಗ್ರಾಮೀಣ ಮಕ್ಕಳು ಸರ್ಕಾರಿ ಶಾಲೆಗಳು ಮಕ್ಕಳು ಅತ್ತ ಕನ್ನಡವನ್ನು ಕಲಿಯದೆ ಇತ್ತ ಆಂಗ್ಲ ಭಾಷೆಯನ್ನು ಸರಿಯಾಗಿ ಕಲಿಯದೆ ಎಡಬಿಡಂಗಿಗಳಾಗಿ ಬಿಡುವ ಸಾಧ್ಯತೆಗಳಿವೆ.

ನೌಕರಿಗಾಗಿ ಉಪವಾಸ ಸತ್ಯಾಗ್ರಹ ಮಾಡಿ, ಆಸ್ಪತ್ರೆ ಸೇರುತ್ತಿರುವ ಸಾವಿರಾರು ನಿರುದ್ಯೋಗಿ ಶಿಕ್ಷಕರನ್ನು ಈ ನಿಟ್ಟನಲ್ಲಿ ಸರ್ಕಾರ ನೇಮಕ ಮಾಡಬಹುದು. ಯಾವುದೇ ಭಾಷೆಯ ಕಲಿಕೆ-ಕಲಿಸುವಿಕೆಯಲ್ಲಿ ಆ ಭಾಷೆಯ ಸೌಂದರ್ಯತತ್ವಕ್ಕೆ ಚ್ಯುತಿ ಬಾರದಂತೆ ಎಚ್ಚರ ವಹಿಸುವುದು ಅಗತ್ಯ. ಕರ್ನಾಟಕ ರಾಜ್ಯ ಸರ್ಕಾರ ಈ ದೃಷ್ಟಿ ಕೋನದಿಂದ ತನ್ನ ನಿರ್ಧಾರವನ್ನು ಅನುಷ್ಠಾನಗೊಳಿಸುವಲ್ಲಿ ಮುಂದಿನ ಪೀಳಿಗೆಯವರಿಗೆ ನೆರವಾಗತ್ತದೆ. □

ಇಂಗ್ಲೀಷ್ ಕಲಿಕೆಯೆಂಬ ಮಾಯಾ ಜಿಂಕೆ

(ಹಿಂದಿನ ಪುಟದಿಂದ)

ರೀತಿ ನಮ್ಮೆಲ್ಲ ಕೈಗಾರಿಕೆಳನ್ನು ಖಾಸಗೀಕರಿಸಿ, ನೈಸರ್ಗಿಕ ಸಂಪನ್ಮೂಲಗಳನ್ನು ನಮಗೆ ದಕ್ಕದಂತೆ ಮಾಡಿರುವ ವಿದೇಶಿ ಕಂಪನಿಗಳು ಸೃಷ್ಟಿಸುತ್ತಿರುವ ಕೈಗಾರಿಕ ಆರ್ಥಿಕತೆವಸಾಹತು ಶಾಹಿ ಸಂಬಂದವೇ ಅದಕ್ಕೆ ಆಯ್ದ ಇಂಗ್ಲೀಷ್ ಪಂಡಿತರು ಬೇಕು. ಸ್ಥಳೀಯ ಕೌಶಲ್ಯವುಳ್ಳ ಜನಸಮೂದಾಯದಲ್ಲಿ ಆದ್ದರಿಂದಲೇ ತಂತ್ರಜ್ಞಾನದಲ್ಲಿ ಸಂವಹನ ಮಾಧ್ಯಮ ಇಂಗ್ಲೀಷೇ ಹೊರತು ಕನ್ನಡದಲ್ಲಿ, ಇಂಗ್ಲೀಷ್ ಕಡ್ಡಾಯವಾಗುವುದು ಈ ಆರ್ಥಿಕತೆ ಸ್ವಪ್ರೇರಿತ ಧಾರ್ಮಿಕರ ಉತ್ತಮ ಸಮರ್ಥನೆ ಕೊಡುತ್ತದೆ, ಸುಗಮಗೊಳಿಸುತ್ತದೆ.

ಅದೇ ರೀತಿ 75,000 ಉದ್ಯೋಗ ಸೃಷ್ಟಿಮಾಡುತ್ತದೆಂಬ ಭ್ರಮೆ ಬಿತ್ತುತ್ತಿರುವ ಪಂಡಿತರು ಆ ಸೇವಾ ಕ್ಷೇತ್ರಮಾ ಉದ್ಯೆಗಗಳು ಸೃಷ್ಟಮಾಡು ವುದು ಕಾಲ್ ಸೆಂಟರ್‌ನಲ್ಲಿ, ಓಟ ಸೋಸಿಂಗ್ ಸೆಂಟರ್ ಗಳಲ್ಲಿ ಎಂದು ಹೇಳುವುದನ್ನು ಮರೆಯುತ್ತಿದ್ದಾರೆ. ಆರ್ಥಿ ಕತೆಗೆ ಪ್ರಧಾನ ಆಕರ್ಷಿಕೆ ಇಲ್ಲಿನ ಆಗ್ಗದ ಬೆಲೆಯ ಕಾರ್ಮಿ ಕರು. ಥೈಲೇಂಡಿನಲ್ಲೋ, ವಿಯಟ್ನಮಿನಲ್ಲೋ, ಚೀನಾ ದಲ್ಲೋ ಇದಕ್ಕಿಂತಲೂ ಅಗ್ಗದ ಕಾರ್ಮಿಕರು ದೊರೆತರೆ ಈ ಉದ್ಯೋಗಗಳು ಅಲ್ಲಿಗೆ ಸ್ಥಳಂತರಿಕೊಳ್ಳುತ್ತವೆ. 75,000 ಉದ್ಯೋಗವು ಮರೀಚಿಕೆಯಾಗುತ್ತದೆ ಆ ಬಗೆಯಲ್ಲಿ ಅಗ್ಗದ ಕಾರ್ಮಿಕರಲ್ಲಿ ಪೈಪೋಟಿ ನಡೆಯಲೆಂದೇ ವಿಶ್ವಬ್ಯಾಂಕ್ ಭಾರತ, ಚೀನಾ ವಿಯಾಟ್ನಾಂ ಇನ್ನಿತರ ದೇಶಗಳಲ್ಲಿ ವ್ಯಾವಹರಿಕ ಇಂಗ್ಲೀಷ್ ಕಲಿಸಿ ಎಂದು ಒತ್ತಡ ಹೇರುತ್ತಿದೆ. ನಮ್ಮ ಚಿಂತಕ ಗಣ್ಯರು ಇದರ ಹಿಂದಿನ ವಸಾಹತುಶಾಹಿ ಹುನ್ನತದ ಬಗ್ಗೆ ಕಣ್ಣು ಮುಚ್ಚಿಕೊಂಡು ಅದೇ ಗಿಳಿಪಾಠ ಪಠಿಸುತ್ತಿದ್ದಾರೆ.

ಆದ್ದರಿಂದ ಇಂಗ್ಲೀಷ್ ಕಡ್ಡಾಯಗೊಳಿಸ ಬೇಂಕೆಂಬ ಭಾಷಾ ನೀತಿಯು, ಈ ದೇಶದ ದಲಿತ - ಶೂದ್ರ ಸಮೂದಾ ಯಗಳಿಗೆ ಆಧುನಿಕತೆಯ, ಆರ್ಥಿಕ ಪ್ರಗತಿಯ, ಸಾಮಾಜಿಕ ವಿಮೋಚನೆಯ ಮಾರ್ಗವನ್ನು ಬಂದ್ ಮಾಡುವ ಸಾಮಾ ಜಿಕ-ಆರ್ಥಿಕ ನೀತಿಗಳ ಭಾಗವಾಗಿದೆ. ಆದ್ದರಿಂದ ಇಂಗ್ಲೀಷ್ ಕಲಿಕೆ ಕಡ್ಡಾಯ ಮಾಡಿಕೊಳ್ಳುವುದು ನಮ್ಮ ನೇಣು ನಾವೇ ಕೈಯಾರೆ ಹಾಕಿಕೊಳ್ಳುವುದಕ್ಕೆ ಸಮ.

ಇಂಗ್ಲೀಷ್ ಭಾಷೆ, ಮಾರುಕಟ್ಟೆ ಆರ್ಥಿಕತೆಯ ಈ ಯುಗದಲ್ಲಿ ಪ್ರಭುತ್ವದ ಭಾಷೆ. ಯಾಜಮಾನ್ಯ ಭಾಷೆ. ವಸಾಹತು ಭಾಷೆ, ಸಾಧ್ಯವಾದಷ್ಟು ಬೇಗ ಅದನ್ನು ಅಸ್ಪೃಸ್ಯತೆಗೊಳಿಸುವಂತೆ ಆರ್ಥಿಕತೆ -ರಾಜಕಾರಣ ಸೃಷ್ಟಿಸುವುದೇ ನಿವತನಾಹತೇಕಾದ ಧ್ಯಯಾವಗಬೇಕು. ಮತ್ತು ಕ್ಷೇತ್ರಗಳಲ್ಲಿ ನಿರ್ವಸಾಹತೀಕರಣ ಭೋಧಿಸುವವರು ಶೈಕ್ಷಣಿಕ ಕ್ಷೇತ್ರದಲ್ಲಿ ಸ್ಥಳೀಯ ಸಮುದಾಯಗಳನ್ನು ಅಪ್ರಸುತ್ತಗೊಳಿಸುವ ಭಾಷಾ ನೀತಿ ಪ್ರತಿಪಾದಿಸುವುದು ಸಮಸ್ಯೆಯ ಸಮಗ್ರ ಗ್ರಹಿಕೆಯ ಕೊರತೆಯನ್ನು ತೋರಿಸುತ್ತದೆ. ಅದು ಕ್ರಮೇಣ ವಸಾಹತು ಶಾಹಿ ಆರ್ಥಿಕತೆ ರಾಜಕಾರಣದ ವಕ್ತಾರರಾಗಿ ಬಿಡುವುದು ಅಪಾಯಕಾರಿ. □

> **ಇಂಗ್ಲೀಷ್ ಕಡ್ಡಾಯಗೊಳಿಸ ಬೇಂಕೆಂಬ ಭಾಷಾ ನೀತಿಯು, ಈ ದೇಶದ ದಲಿತ – ಶೂದ್ರ ಸಮೂದಾ ಯಗಳಿಗೆ ಆಧುನಿಕತೆಯ, ಆರ್ಥಿಕ ಪ್ರಗತಿಯ, ಸಾಮಾಜಿಕ ವಿಮೋಚನೆಯ ಮಾರ್ಗವನ್ನು ಬಂದ್ ಮಾಡುವ ಸಾಮಾ ಜಿಕ–ಆರ್ಥಿಕ ನೀತಿಗಳ ಭಾಗವಾಗಿದೆ. ಆದ್ದರಿಂದ ಇಂಗ್ಲೀಷ್ ಕಲಿಕೆ ಕಡ್ಡಾಯ ಮಾಡಿಕೊಳ್ಳುವುದು ನಮ್ಮ ನೇಣು ನಾವೇ ಕೈಯಾರೆ ಹಾಕಿಕೊಳ್ಳುವುದಕ್ಕೆ ಸಮ.**

ಅವಲೋಕನ

ಧರೆಗೆ ದೊಡ್ಡವರು: ಒಂದು ಓದು

ಡಾ||ಸುಭಾಷ್ ಭರಣಿಯವರ "ಧರೆಗೆ ದೊಡ್ಡವರು' ಎಂಬ ಪುಸ್ತಕವನ್ನು ಕೊಂಡು ತಂದು ಓದಿದೆ. ನನಗೂ ಸಹ ಈ ಬಗ್ಗೆ ಆಸಕ್ತಿಯಿದ್ದು ಸಂಶೋಧನೆ ಮಾಡುತ್ತಿದ್ದೇನೆ. ನನ್ನ ಆಲೋಚನಾ ವಿಚಾರಗಳಿಗೆ ಪುಸ್ತಕದ ಕೆಲವು ಮಾಹಿತಿಗಳು ಪೂರಕವಾಗಿವೆ. ಅದಕ್ಕೆ ಸಂಬಂಧಿಸಿದಂತೆ ಕೆಲವು ಅಭಿಪ್ರಾಯಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ವಿಶ್ವಸಂಸ್ಥೆಯು ಇತ್ತೀಚೆಗೆ ಭಾರತದ ಅಸ್ಪೃಶ್ಯತೆಯ ಬಗ್ಗೆ ಚರ್ಚಿಸಲು ಒಪ್ಪಿಕೊಂಡಿದೆ. ದಕ್ಷಿಣ ಆಫ್ರಿಕದ ಡರ್ಬಾನ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಈ ಬಗ್ಗೆ ಚರ್ಚಿಸಲು ಅನುಮತಿ [illegible]ರಲಿಲ್ಲ. ಭಾರತದ ಅಸ್ಪೃಶ್ಯತೆಯು ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಡಾ.ಭರಣಿಯವರು ಈ ಪುಸ್ತಕ ಹೊರತಂದಿರುವುದು ಹೆಮ್ಮೆಯ ಸಂಗತಿ. 'ಹೊಲೆಯ' ಎಂಬ ಹೆಸರಿನಿಂದ ಕುಗ್ಗಿ, ಅವಮಾನಿತರಾಗಿ ಅಮಾನವೀಯರಾಗಿ ಬದುಕುತ್ತಿದ್ದ ಮೂಲನಿವಾಸಿ ಜನಾಂಗಕ್ಕೆ ಭರಣಿಯವರು ನೀಡಿರುವ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ಐತಿಹಾಸಿಕ ನೆಲೆಗಟ್ಟಿನಿಂದಾಗಿ, ಸ್ವಾಭಿಮಾನದಿಂದ ಎದೆತಟ್ಟಿ ಹೇಳುವಂತೆ ಮಾಡಿರುವ ಪ್ರಯತ್ನ ಬೆಲೆಕಟ್ಟಲಾಗದ್ದು.

ಒಂದು ಕಾಲಕ್ಕೆ ಭೂಮಿಯನ್ನು ಹದಮಾಡಿ ಕೃಷಿಗೆ ಪರಿವರ್ತಿಸಿ, ಈ ನೆಲದ ಒಡೆಯರಾಗಿದ್ದ ಹೊಲೆಯರು, ಕಾಲಕ್ರಮೇಣ ಆರ್ಯರ ಆಕ್ರಮಣಕ್ಕೆ ತುತ್ತಾಗಿ, ಈ ನೆಲದ ಹಕ್ಕೂ ಕಳೆದುಕೊಂಡು ಭೂರಹಿತರಾಗಿ ಅಸ್ಪೃಶ್ಯರಾದದ್ದು ಮಾತ್ರ ವಿಪರ್ಯಾಸ. ಇಂದು ಅವರು ದರಖಾಸು, ತೋಟಿ ಇನಾಮತಿ, ಕೊಡಿಗೆ ಜಮೀನುಗಳೆಂಬ ತುಂಡುಭೂಮಿಗೆ ಸರ್ಕಾರದ ಮುಂದೆ ಕೈಯಾಡ್ಡಬೇಕಾಗಿ ಬಂದಿರುವುದು ಇತಿಹಾಸದ ಕ್ರೂರ ವ್ಯಂಗ್ಯವೆಂದರೆ ತಪ್ಪಾಗಲಾರದು.

ಈ ಕೃತಿಯ ಬಗ್ಗೆ ಅವಲೋಕನ ಮಾಡುವಾಗ ಹಲವಾರು ಅಂಶಗಳು ಗೋಚರವಾಗುತ್ತವೆ.

ದ್ರಾವಿಡ ಭಾಷಾ ಮೂಲದಿಂದ ಹೊಲ ಮತ್ತು ಹೊಲೆಯ ಪದಗಳು ನಿಷ್ಪನ್ನವಾಗಿವೆ. ಕನ್ನಡದಲ್ಲಿ ಹೊಲೆಯ, ತಮಿಳಿನ ಪರಯ ಅಥವಾ ಪರೈಯನ್, ತೆಲುಗಿನ ಮಾಲಾ, ಮಲಯಾಳಂನ ಪುಲೈಯಾರ್ ಪದಗಳು ಒಂದುಕ್ಕೊಂದು ಸಂಬಂಧ ಹೊಂದಿವೆ. ತಮಿಳಿನ ಪೂಂಜ ಮತ್ತು ಕನ್ನಡದಲ್ಲಿ ಹೊಲ ಆಗಿ ಅನುಕ್ರಮವಾಗಿ ಪರಯ ಮತ್ತು ಹೊಲೆಯ ಆಗಿವೆಯೆಂದು ಹೇಳಿರುವ ಕೆಲವು ವಿದ್ವಾಂಸರ ಅಭಿಪ್ರಾಯವನ್ನು ನಿರೂಪಿಸಿದ್ದಾರೆ.

ಭಾರತದ ಅಸ್ಪೃಶ್ಯ ಕುಲಗಳು ಕೋಲಾ ಮತ್ತು ಮುಂಡಾ ಬುಡಕಟ್ಟಿನವರೆಂದು ಹೇಳಿದ ಡಾ.ಹಿರೇಮಠ ಮತ್ತು ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಚರ್ಚಿಸಿದ್ದಾರೆ.

ಹೊಲೆಯರು ಕೃಷಿಕರಾಗಿದ್ದುದಷ್ಟೇ ಅಲ್ಲದೆ ವ್ಯಾಪಾರಿಗಳಾಗಿ, ಮಗ್ಗನೇಯುವವರಾಗಿ, ಉದ್ದಿಮೆದಾರರು ಆಗಿದ್ದರು. ಇವರು ಯೋಧರಾಗಿದ್ದುದಷ್ಟೇ ಅಲ್ಲದೇ ಈ ನೆಲವನ್ನು ಆಳಿದವರು ಎಂಬ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ.

ಆದಿಕರ್ನಾಟಕರು ಮೂಲತಃ ಹಳ್ಳಿಯ ಸ್ಥಾಪಕರಾಗಿರುವುದರಿಂದಾಗಿಯೇ, ಶವಕಾಷ್ಟ (ನೆಲಹಾಗ)ದ ಭೂಮಿಯನ್ನು ಅಸ್ಪೃಶ್ಯರಾದ ಹೊಲೆಯ/ಕುಳವಾಡಿಗಳಿಂದಲೇ ಮೇಲುಜಾತಿಯವರು ಖರೀದಿಸುವಂತಹ ಪದ್ಧತಿ ಉಳಿಸಿಕೊಂಡು ಬಂದಿದ್ದಾರೆ. ಮೂಲನಿವಾಸಿಗಳು ಕೃಷಿಕರಾಗಿ, ನೆಲಗುಡಿಸಿ ಊರುಕಟ್ಟಿದವರು ಎಂಬುದನ್ನು ವಿವಿಧ ಮೂಲಗಳ ಮಾಹಿತಿಯಿಂದ ನಿರೂಪಿಸಿದ್ದಾರೆ.

ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನಲೆ

ಹೊಲೆ ಮಾದಿಗರ ಬಳಿ ಕಥೆ ಪುರಾಣಗಳು ಯಾಕೆ ಹೇರಳವಾಗಿವೆ. ಆದಿ ಜಾಂಬವರ ಹಿನ್ನಲೆ, ಲಕ್ಷ್ಮಿ ಕೋಮಟಿ ಮತ್ತು ಹೊಲೆಯರ ಮನೆಗೆ ಬಂದದ್ದು, ಶವಕಾಷ್ಟದ 'ನೆಲಹಾಗ' ಶುಲ್ಕವಸೂಲಿ, ಹಲ್ಮಿಡಿ ಶಾಸನದ ಉಲ್ಲೇಖ, ಕದಂಬರ ಕಾಲಘಟ್ಟದ ಸನ್ನಿವೇಶಗಳು, 1925 ಅಕ್ಟೋಬರ್ 23 ರಂದು ಮೈಸೂರು ಸಂಸ್ಥಾನವು ಹೊಲೆಯ ಮತ್ತು ಪಂಚಮ ಎಂಬ ಜಾತಿ ಸೂಚಕ ಪದಗಳಿಗೆ ಬದಲಾಗಿ ಆದಿಕರ್ನಾಟಕ ಎಂಬುದಾಗಿ ಘೋಷಿಸಿದ್ದು ಇತ್ಯಾದಿ ವಿಷಯಗಳು ಸಮಗ್ರವಾಗಿ ಮೂಡಿ ಬಂದಿವೆ.

ದಲಿತರಲ್ಲಿರುವ ಎಡಗೈ-ಬಲಗೈ ಜಾತಿಗಳ ಉಗಮಕ್ಕೆ ಪುರಾಣದ ಉಲ್ಲೇಖವನ್ನು ಕೊಡುತ್ತಾರೆ, 'ಕ್ರಿ.ಶ.7ನೆಯ ಶತಮಾನದಲ್ಲಿ ಕಂಚಿಯ ಕಾಳಿ (ಕಾಮಾಕ್ಷಿ) ತನ್ನ ಬಲಗೈನಲ್ಲಿ ಕೆಲಜಾತಿಗಳನ್ನು, ಎಡಗೈನಲ್ಲಿ ಕೆಲಜಾತಿಗಳನ್ನು ಇಟ್ಟುಕೊಂಡು ತೂಗಿದ್ದರಿಂದ ಆಯಾಯ ಜಾತಿಗಳು ಎಡಗೈ ಮತ್ತು ಬಲಗೈ ಆದವು' ಎಂಬುದುನ್ನು ಉಲ್ಲೇಖಿಸುತ್ತಾರೆ.

ಹದಿನೆಂಟನೇ ಶತಮಾನದಲ್ಲಿ ಕೃಷಿಕರೆಂದು, ವ್ಯಾಪಾರಿವರ್ಗ ಮತ್ತು ಕುಶಲ ಕರ್ಮಿಗಳನ್ನು ಎಡ-ಬಲಗಳೆಂದು ಕ್ರಮವಾಗಿ ಒಂಬತ್ತು ಹಾಗೂ ಹದಿನೆಂಟು ಪಣದ ಜಾತಿಗಳು ಗುರುತಿಸಲ್ಪಟ್ಟವು. ಆದರೆ ಇಂದು ಕೇವಲ ಆ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಹೊಲೆಯ-ಮಾದಿಗರು ಮಾತ್ರ ಸಣ ಹಗೆಯನ್ನು ಸಾಧಿಸುವ ಬಗ್ಗೆ ವಿವರಿಸುತ್ತಾರೆ. ಪ್ರಸ್ತುತ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ವರ್ಗೀಕರಣದ ಬಗ್ಗೆ ನಡೆಯುತ್ತಿರುವ ಹೋರಾಟದ ಹಿನ್ನಲೆಗೆ ಇದು ಹಿಡಿದ ಕನ್ನಡಿಯಾಗಿದೆ. ಆ ದಿನಗಳಲ್ಲಿ ಪಣದ ವಿಚಾರವಾಗಿ ಹತ್ತಿಕೊಂಡ ಶೀತಲಸಮರದ ಇಂಧನ ತಣ್ಣಗೆ ಹತ್ತಿ ಇಂದಿಗೂ ಉರಿಯುತ್ತಲೇ ಇದೆ, ಎರಡೂ ಕಡೆಯ ಸಣಸ್ಥ ಗುಂಪುಗಳು ನೆಲ ಕಚ್ಚುವುದರೊಂದಿಗೆ ಬ್ರಾಹ್ಮಣರ ಅಧಿಪತ್ಯ ಸ್ಥಾಪಿತವಾಯಿತೆಂದು ವಿಷಾದದಿಂದ ತಿಳಿಸುತ್ತಾರೆ.

ಮಾದೇಶ್ವರ ಮಾದಿಗರ ಹುಡುಗನೆಂದು ಜನಮನದಲ್ಲಿದ್ದರೂ ಸಹ, ಲೇಖಕರು ವಿಶ್ವಕರ್ಮ ಇರಬಹುದೆಂದು ಉದಾಹರಣೆಗಳ ಮೂಲಕ ಅನುಮಾನ ವ್ಯಕ್ತಪಡಿಸಿದ್ದಾರೆ. ಮಂಟೇಸ್ವಾಮಿ ಕಲ್ಯಾಣಕ್ಕೆ ಪ್ರವೇಶ ಮಾಡಿ, ಅಲ್ಲಿಯ ಆಷಾಡ ಭೂತಿತನವನ್ನು ಬಹಿರಂಗಗೊಳಿಸುತ್ತಾರೆ. ಹಿಂದುಳಿದ ಮತ್ತು ಅಸ್ಪೃಶ್ಯ ವರ್ಗದ ಶರಣರೇ ನಿಜವಾದವರು ಎಂದು ಸಾರುತ್ತಾರೆ. ಅನಂತರ ದಕ್ಷಿಣಕ್ಕೆ ಬಂದು ಅನೇಕ ಪವಾಡ ಮಾಡಿ ತಮ್ಮ ಪ್ರಭಾವದಿಂದ ಶಿಷ್ಯವೃಂದ ಸೃಷ್ಟಿಸುತ್ತಾರೆ. ಮಂಟೇಸ್ವಾಮಿಯನ್ನು ಜನಪದರು "ಧರೆಗ



ಪ್ರಕಾಶಕರು: ದ್ರಾವಿಡ ಪ್ರಕಾಶನ
ಲುಂಬಿನಿ, ನಂ.೬, ಬ್ಲಾಕ್ ನಂ.೨೧
ಎಸ್.ಬಿ.ಎಂ. ಕಾಲೋನಿ, ಶ್ರೀರಾಮಪುರ
೨ನೇ ಹಂತ, ಮೈಸೂರು - ೨೩
ಪುಟ: ೨೧೮ ಬೆಲೆ:ರೂ.೧೦೦

> 'ಹೊಲೆಯ' ಎಂಬ ಹೆಸರಿನಿಂದ ಕುಗ್ಗಿ, ಅವಮಾನಿತರಾಗಿ ಅಮಾನವೀಯರಾಗಿ ಬದುಕುತ್ತಿದ್ದ ಮೂಲ ನಿವಾಸಿ ಜನಾಂಗಕ್ಕೆ ಭರಣಿಯವರು ನೀಡಿರುವ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ಐತಿಹಾಸಿಕ ನೆಲೆಗಟ್ಟಿನಿಂದಾಗಿ, ಸ್ವಾಭಿಮಾನದಿಂದ ಎದೆತಟ್ಟಿ ಹೇಳುವಂತೆ ಮಾಡಿರುವ ಪ್ರಯತ್ನ ಬೆಲೆಕಟ್ಟಲಾಗದ್ದು. ಒಂದು ಕಾಲಕ್ಕೆ ಭೂಮಿಯನ್ನು ಹದಮಾಡಿ ಕೃಷಿಗೆ ಪರಿವರ್ತಿಸಿ, ಈ ನೆಲದ ಒಡೆಯರಾಗಿದ್ದ ಹೊಲೆಯರು, ಕಾಲಕ್ರಮೇಣ ಆಕ್ರಮಣಕ್ಕೆ ತುತ್ತಾಗಿ, ಈ ಭೂರಹಿತ ರಾಗಿ ಅಸ್ಪೃಶ್ಯರಾದದ್ದು ಮಾತ್ರ ವಿಪರ್ಯಾಸ. ಇಂದು ಅವರು ತುಂಡುಭೂಮಿಗೆ ಸರ್ಕಾರದ ಮುಂದೆ ಕೈಯಾಡ್ಡಬೇಕಾಗಿ ಬಂದಿರುವುದು ಇತಿಹಾಸದ ಕ್ರೂರ ವ್ಯಂಗ್ಯ.

○ ಮಾಯಣ್ಣಸ್ವಾಮಿ.ಕೆ

ದೊಡ್ಡವರು" ಎಂದು ಕರೆಯುತ್ತಾರೆ. ಶ್ರೀ ರಾಮಾನುಜಾಚಾರ್ಯರು ಹೊಲೆ-ಮಾದಿಗರ ಮೇಲೆ ಹೇಗೆ ಪ್ರಭಾವ ಬೀರಿದರು, ದೆಹಲಿ ಸುಲ್ತಾನನ ಬಳಿಯಿದ್ದ ವಿಗ್ರಹ ತರಲು ಹೊಲೆ ಮಾದಿಗರು ಆಚಾರ್ಯರಿಗೆ ಹೇಗೆ ಬೆಂಗಾವಲಾದರು. ಇದರಿಂದ ಆಚಾರ್ಯರು ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವಸ್ಥಾನಕ್ಕೆ ಪ್ರವೇಶ ಕಲ್ಪಿಸಿಕೊಟ್ಟರು. ಟಿಪ್ಪುವಿನ ಪತನಾನಂತರ ದಿವಾನ್ ಪೂರ್ಣಯ್ಯ ಅದನ್ನು ನಿಷೇಧಿಸಿದನೆಂದು ತಿಳಿಸುತ್ತಾರೆ.

ಒಳಪಂಗಡಗಳ ಬಗ್ಗೆ ವಿವರಿಸುತ್ತಾ ಹೊಲೆಯರಲ್ಲಿ 12 ಬಗೆಗಳಿವೆಯೆಂದು ಗುರುತಿಸುತ್ತಾರೆ. ಕುಲಗಳಲ್ಲಿ ಮರ, ಎಲೆ, ಹೂ, ಪಕ್ಷಿ ಲೋಹ ಇತ್ಯಾದಿ ನಿಸರ್ಗಕ್ಕೆ ಹತ್ತಿರವಾದ ರೂಪ ಪಡೆದುಕೊಂಡು ಅನಾದಿಕಾಲದಿಂದ, ತಲೆಯಿಂದ ತಲೆಮಾರಿನವರೆಗೆ ನಂಬಿಕೆಗಳು ನಡೆದುಬಂದು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಭದ್ರವಾಗಿವೆ. ಆಹಾರ ಪದ್ಧತಿಯಲ್ಲಿ ಮಾಂಸಹಾರ (ಮುಖ್ಯವಾಗಿ ದನದ ಮಾಂಸ) ಸೇವನೆ ಬಗ್ಗೆ ನಂಬಿಕೆಯಿದೆ. ಆದರೆ ದಲಿತರಲ್ಲೂ ಸಸ್ಯಾಹಾರಿ ಪಂಗಡಗಳಿವೆಯೆಂದು ತಿಳಿದು ಬರುತ್ತದೆ.

ಋತುಮತಿಯಾದಾಗ ಹುಡುಗಿಗೆ ಮಾಡುವ ಶಾಸ್ತ್ರಗಳು, ಉಪಚಾರಗಳು, ಹೆಣ್ಣು ನೋಡುವ ಪದ್ಧತಿ, ಮಾತುಕತೆ, ಒಪ್ಪುವೀಳೆ ಶಾಸ್ತ್ರ ಅಟ್ಟಿಕ್ಕುವುದು, ಮದುವೆಯಲ್ಲಿ ನಡೆಯುವ ಸಂಪ್ರದಾಯದ ಶಾಸ್ತ್ರಗಳು ಇತ್ಯಾದಿ ವಿವರಣೆಯಿದೆ. ವಿವಿಧ ಶಾಸ್ತ್ರಗಳನ್ನು ಮಾಡಿ ಮೇಲುಜಾತಿಯವರಂತೆ ಸಪ್ತಪದಿ ತುಳಿದು ಕನ್ಯಾದಾನ ಮಾಡುವ ಬದಲು, ಹೆಣ್ಣನ್ನು ಗಂಡಿಗೆ ಧಾರೆಯೆರೆದು ಕೊಡುವ ಪದ್ಧತಿಯು ಆದಿಕರ್ನಾಟಕದವರ ಸಂಪ್ರದಾಯ ವಾಗಿದೆ. ಈ ಪದ್ಧತಿಯು ಪುರೋಹಿತ ಶಾಹಿಯ ವಿರುದ್ಧವಾಗಿ ಪ್ರತಿ ಸಂಸ್ಕೃತಿ ಕಟ್ಟಿರುವ ಕುರುಹಾಗಿದೆ.

ಮಗು ಹುಟ್ಟಿದಾಗ ಮಾಡುವ ನಾಮಕರಣದ ಶಾಸ್ತ್ರಗಳು, ವ್ಯಕ್ತಿಯೊಬ್ಬ ಸತ್ತಾಗ ಮಾಡುವ ಸಂಸ್ಕಾರ, ಸೂತಕ ತೆಗೆಯುವ ಶಾಸ್ತ್ರಗಳು, ಹೆಂಡತಿಯನ್ನು ಗಂಡ ಬಿಟ್ಟಾಗ ತೆರ ವಾಪಸ್ ಪಡೆಯುವುದು, ವಿಧವೆಗೆ ಮರುವಿವಾಹ ಅಂದರೆ "ಕೂಡಿಕೆ" ಮಾಡುವ ಪದ್ಧತಿಗಳು ಇತ್ಯಾದಿ ಚೆನ್ನಾಗಿ ಮೂಡಿಬಂದಿವೆ.

ಹೈದರಾಲಿ ಮತ್ತು ಟಿಪ್ಪುವಿನ ಕೊಡುಗೆಗಳು

ಶೋಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಹೈದರಾಲಿ ಮತ್ತು ಟಪ್ಪುರವರ ಪಾತ್ರ ಸ್ಮರಣೀಯವಾದುದು. ಊಳಿಗಮಾನ್ಯ ಪದ್ಧತಿ ಮತ್ತು ಸಾಮ್ರಾಜ್ಯ ಶಾಹಿ ವಿರೋಧಿಯಾಗಿದ್ದುದಷ್ಟೇ ಅಲ್ಲದೆ, ರೈತರನ್ನು ಸುಲಿಗೆ ಮಾಡುತ್ತಿದ್ದ ಪಾಳೇಗಾರರನ್ನು ನಾಶಮಾಡಿದರು. ಉಳುವವನಿಗೆ ಭೂಮಿ ಸಿಗಬೇಕು ಎಂಬುದು ಟಿಪ್ಪುವಿನ ಪರಿಕಲ್ಪನೆ, ಅಸ್ಪೃಶ್ಯ ಮಹಿಳೆಯರು ಎದೆಯ ಮೇಲೆ ಬಟ್ಟೆ ಧರಿಸಬಾರದು ಎಂದು ರೂಢಿಯಲ್ಲಿದ್ದ ಅನಿಷ್ಟ ಪದ್ಧತಿಯನ್ನು ರಾಜಾಜ್ಞೆಯ ಮೂಲಕ ತೊಡೆದು ಹಾಕಿದ್ದುದು ಗಮನಾರ್ಹಸಾಧನೆ. ಮದ್ಯಪಾನ ನಿಷೇಧ, ಬಂಜರು ಭೂಮಿಯನ್ನು ಕೃಷಿಗೆ ಪರಿವರ್ತಿಸಿದ್ದುದು, ವೇಶ್ಯಾವೃತ್ತಿ ಬಹುಪತ್ನಿತ್ವ ನಿಷೇಧ, ರೇಷ್ಮೆ ಬೆಳೆ ಪರಿಚಯಿಸಿದ್ದುದು, ಅಪರಾಧಿಗಳಿಗೆ ಮಾವಿನ ಗಿಡ ಮತ್ತು ಹಲಸಿನ ಗಿಡ ನೆಟ್ಟು ನೀರೆರೆದು ಪೋಷಿಸುವಂತೆ ಶಿಕ್ಷೆ ನೀಡಿ, ಆ ಮೂಲಕ ಪರಿಸರ ಪ್ರಜ್ಞೆ ಬೆಳೆಸಿದ್ದು, ಯುದ್ಧದಲ್ಲಿ ಮಡಿದ ಯೋಧರ ಕುಟುಂಬಗಳಿಗೆ ಭೂಮಿ ನೀಡಿ ಬದುಕಿಗೆ ಆಶ್ರಯ ಕಲ್ಪಿಸಿದ ಟಿಪ್ಪುವಿನ ಸಾಧನೆಗಳು ಪ್ರಮುಖ ಮೈಲಿಗಲ್ಲುಗಳು.

ನಾಲ್ವಡಿ ಕೃಷ್ಣರಾಜ ಒಡೆಯರು

ಬ್ರಿಟಿಷರ ಸಾಮಾಜಿಕ ನ್ಯಾಯದಿಂದಾಗಿ ದಲಿತರು ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೆ ಬರಲು ಸಾಧ್ಯವಾಯಿತು. ಅದೇ ಹಾದಿಯಲ್ಲಿ ಮುನ್ನಡೆದವರು ನಾಲ್ವಡಿ ಕೃಷ್ಣರಾಜ ಒಡೆಯರ್. ಪ್ರಜಾಪ್ರತಿನಿಧಿಸಭೆ ಸ್ಥಾಪನೆ, ಹಿಂದುಳಿದವರಿಗೆ ಮತ್ತು ಅಸ್ಪೃಶ್ಯರಿಗೆ ವಿದ್ಯಾಭ್ಯಾಸ, ವಿಶ್ವೇಶ್ವರಯ್ಯನವರ ಪ್ರತಿಭಟನೆಯ ನಡುವೆಯೂ ಉದ್ಯೋಗ ನೇಮಕಾತಿಯಲ್ಲಿ ಹಿಂದುಳಿದವರಿಗೆ ವಿಶೇಷ ಅವಕಾಶ, ಮಿಲ್ಲರ್ ಆಯೋಗ ರಚನೆ ಪ್ರಮುಖ ಮೈಲಿಗಲ್ಲು.

> **ಬ್ರಿಟಿಷರ ಸಾಮಾಜಿಕ ನ್ಯಾಯದಿಂದಾಗಿ ದಲಿತರು ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೆ ಬರಲು ಸಾಧ್ಯವಾಯಿತು. ಅದೇ ಹಾದಿಯಲ್ಲಿ ಮುನ್ನಡೆದವರು ನಾಲ್ವಡಿ ಕೃಷ್ಣರಾಜ ಒಡೆಯರ್. ಪ್ರಜಾಪ್ರತಿನಿಧಿಸಭೆ ಸ್ಥಾಪನೆ, ಹಿಂದುಳಿದವರಿಗೆ ಮತ್ತು ಅಸ್ಪೃಶ್ಯರಿಗೆ ವಿದ್ಯಾಭ್ಯಾಸ, ವಿಶ್ವೇಶ್ವರಯ್ಯನವರ ಪ್ರತಿಭಟನೆಯ ನಡುವೆಯೂ ಉದ್ಯೋಗ ನೇಮಕಾತಿಯಲ್ಲಿ ಹಿಂದುಳಿದವರಿಗೆ ವಿಶೇಷ ಅವಕಾಶ, ಮಿಲ್ಲರ್ ಆಯೋಗ ರಚನೆ ಪ್ರಮುಖ ಮೈಲಿಗಲ್ಲು.**

"ಹಿಂದುಳಿದ ವರ್ಗಗಳಿಗೆ ಎಲ್ಲಾರಂಗದಲ್ಲೂ ಮೀಸಲಾತಿ ನೀಡಬೇಕು" ಎಂಬುದು ನಾಲ್ವಡಿಯವರ ನಿಲುವು. ಆದರೆ "ಬುದ್ಧಿವಂತಿಕೆ ಮತ್ತು ಸಾಮರ್ಥ್ಯವನ್ನು ಕಡೆಗಣಿಸಿದರೆ ಅಭಿವೃದ್ಧಿ ಕಾರ್ಯಗಳಿಗೆ ಕುಂದುಂಟಾ ಗುತ್ತದೆ. ವ್ಯಕ್ತಿಯ ಸಾಮರ್ಥ್ಯ ಮತ್ತು ಅರ್ಹತೆಯ ಆಧಾರದ ಮೇಲೆಯೇ ಸರಕಾರಿ ಉದ್ಯೋಗ ನೀಡಬೇಕು". ಎಂಬುದು ವಿಶ್ವೇಶ್ವರಯ್ಯನವರ ವಾದವಾಗಿತ್ತು. ಈ ವಾದ ತಳ್ಳಿ ಹಾಕಿದ ಮಹಾರಾಜರು "ಬ್ರಾಹ್ಮಣೇತರರನ್ನು ಸರ್ಕಾರಿನ ಸೇವೆಗೆ ಸೇರಿಸಿ- ಕೊಳ್ಳುವುದರಿಂದ ಸಾಮರ್ಥ್ಯವನ್ನು ಕಡೆಗಣಿಸು ತ್ತಿದ್ದೇವೆ ಎಂಬ ವಾದವನ್ನು ನಿರಾಕರಿಸಿ, ಒಂದು ವೇಳೆ ಬ್ರಾಹ್ಮಣೇತರರಲ್ಲಿ ದಕ್ಷತೆ-ಸಾಮರ್ಥ್ಯ ಇಲ್ಲದಿದ್ದರೆ, ನಾನು ಅವರಲ್ಲಿ ಅದನ್ನು ಬೆಳೆಸುತ್ತೇನೆ" ಎಂದರು.

ಐಷಾರಾಮದಿಂದ ದೂರವಿದ್ದು ಪ್ರಜಾಕ್ಷೇಮವನ್ನೇ ಉಸಿರಾಗಿಸಿಕೊಂಡು, ಸ್ವದೇಶಿ ಸಂಪನ್ಮೂಲಗಳನ್ನು ವ್ಯವಸ್ಥಿತ ಯೋಜನೆ ಮತ್ತು ಬಳಕೆಯಿಂದ ರಾಜ್ಯದ ಆಧುನೀಕರಣ, ಮಿಲ್ಲರ್ ಆಯೋಗ ರಚನೆ, ಅರಮನೆಗೆ ಪಂಚಮರ ಪ್ರವೇಶಾವಕಾಶ, ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ, ಮುಕ್ತ ಶಿಕ್ಷಣ ಇತ್ಯಾದಿಗಳನ್ನು ಸಾಧಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ. ಅವರಲ್ಲಿದ್ದ ದೂರದೃಷ್ಟಿ ಸರಳತನ, ಜನಕಲ್ಯಾಣದ ಪರಮಗುರಿ, ಉದಾರಮನೋಭಾವ, ಪಾಶ್ಚಾತ್ಯ ಶಿಕ್ಷಣ ಮತ್ತು ಸಂಸ್ಕೃತಿಯ ಪ್ರಭಾವ, ಹಿರಿಯರ ಮಾರ್ಗದರ್ಶನ, ಸಹವರ್ತಿಗಳ ಪ್ರೇರಣೆ, ಪರಂಪರೆಯ ಪಾಲನೆ ಮುಂತಾದ ಅಂಶಗಳಿಂದ ಪರಿಪೂರ್ಣ ವ್ಯಕ್ತಿತ್ವವನ್ನು ಹೊಂದಿದ್ದ ಮಹಾರಾಜರಿಗೆ "ರಾಜರ್ಷಿ" ಎಂಬ ಬಿರುದು ಸಾಕಾರಗೊಂಡಿದೆ. ಮೇಲ್ವರ್ಗದ ವಿರೋಧವಿದ್ದರೂ ಹಿಂದುಳಿದವರು ಮತ್ತು ದಲಿತರಿಗೆ ನ್ಯಾಯ ಮತ್ತು ಸಮಾನತೆಯನ್ನು ದೊರಕಿಸಿಕೊಟ್ಟದ್ದಕ್ಕಾಗಿ ಮಹಾರಾಜರಿಗೆ ಅವರು ಚಿರಋಣಿಗಳಾಗಿದ್ದಾರೆ.

ದೇವರಾಜ ಅರಸರ ಕೊಡುಗೆ

ಕರ್ನಾಟಕದ ಮುಖ್ಯಮಂತ್ರಿಯಾಗಿ ಅವರು ಆಡಳಿತ ಮತ್ತು ನೀಡಿದ ಕೊಡುಗೆಗಳು ಅಪಾರ. ಹಿಂದುಳಿದ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಒದಗಿಸಲು ಹಾವನೂರು ಆಯೋಗ ರಚಿಸಿದರು. ಕ್ರಾಂತಿಕಾರಿ ರಾಜಕಾರಣಿ ಬಿ.ಬಸವಲಿಂಗಪ್ಪನವರು "ತಲೆ ಮೇಲೆ ಮಲ ಹೊರುವ ಅಮಾನುಷ ಪದ್ಧತಿ" ನಿಷೇದಿಸಲು ದಿಟ್ಟ ಹೆಜ್ಜೆ ಇಟ್ಟಾಗ ಅರಸರು ಪ್ರೋತ್ಸಾಹ ನೀಡಿದರು. ಭೂ ಸುಧಾರಣಾ ಮಂಡಳಿ ರಚಿಸಿ, "ಉಳುವವನೇ ಹೊಲದೊಡೆಯ" ಎಂದು ಘೋಷಿಸಿದರು. ಜೀತ ವಿಮುಕ್ತಿ, ಋಣಪರಿಹಾರ ಕಾಯಿದೆ, ಜಲ ಅಭಿವೃದ್ಧಿ ಯೋಜನೆ, ವಿದ್ಯುತ್ ಯೋಜನೆ, ನೀರಾವರಿ ಕಾಮಗಾರಿ, ಮಣ್ಣು ಸಂರಕ್ಷಣೆ, ಗೃಹ ನಿರ್ಮಾಣ ಸಂಸ್ಥೆಗಳ ಮೂಲಕ ದುರ್ಬಲರಿಗೆ, ಮನೆ ನಿರ್ಮಾಣ, ಭಾಗ್ಯಜ್ಯೋತಿ, ಸರ್ವರಿಗೂ ಶಿಕ್ಷಣ, ಆಹಾರದಂಗೆ ನಿಭಾಯಿಸಿದ್ದುದು, ನಿರುದ್ಯೋಗಿ ಯುವಕರಿಗೆ ಸ್ಟೈಪೆಂಡರಿ ಯೋಜನೆ ಮುಂತಾದವುಗಳು ಅರಸರ ಪ್ರಮುಖ ಸಾಧನೆಗಳು. ಇವೆಲ್ಲವುಗಳ ಬಗ್ಗೆ ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಅಂತಿಮವಾಗಿ ಇಡೀ ಕೃತಿಯನ್ನು ಅವಲೋಕಿಸಿದಾಗ ಇದಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

1. ಮಧ್ಯ ಶಿಲಾಯುಗದಲ್ಲಿ (10,000BP-2500BC) ಮತ್ತು ನೂತನ ಶಿಲಾಯುಗದ ಪ್ರಾರಂಭದಲ್ಲಿ ಹೊಲೆಯರು ಮಾದಿಗರಿಗಿಂತ ಮೊದಲು ಕೃಷಿ ಪದ್ಧತಿ ಆರಂಭಿಸಿದರು, ಕೃಷಿ ಮಾಡುತ್ತಿದ್ದು ಕ್ರಮೇಣ ಹೊಲದ ಒಡೆಯರಾಗಿದ್ದರು. ಹೊಲೆಯರಾಗಿದ್ದುದರಿಂದಲೇ ಅವರಿಗೆ "ಹೊಲೆಯ"ರು ಎಂಬ ಹೆಸರು ಬಂದಿತೆಂಬ ಇತಿಹಾಸಕಾರರಾದ ಎಡ್ಗರ್ ಥರ್ಸ್ಟನ್, ರಂಗಾಚಾರಿ, ಬುಕಾನನ್, ಹಯವದನ್‌ರಾವ್ ಮುಂತಾದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

2. ಕಾವೇರಿಯಿಂದಂ ಅ ಗೋದಾವರಂ ಇರ್ದ ನಾಡು ಅದು ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷ! ಎಂದು ಕವಿರಾಜಮಾರ್ಗದಲ್ಲಿ ಉಲ್ಲೇಖವಿದೆ. ಆ ಪ್ರಕಾರ ಕಾವೇರಿಯಿಂದ ಗೋದಾವರೆಗೂ ವ್ಯಾಪಿಸಿದ್ದ ಕನ್ನಡದ ಜನಗಳು ಯಾರೆಂದರೆ ಕುರುಬ, ಗೊಲ್ಲ ಹೊಲೆಯ, ಬಿಲ್ಲವ, ಹಳೇಪೈಕ, ಮಲೆಯರು, ಕೋತ(ಕೋಲ). ಈ ಹಿನ್ನಲೆಯಲ್ಲಿ ಅವಲೋಕಿಸುವಾಗ ಆದಿಕರ್ನಾಟಕ ಎಂದು ಕರೆಸಿಕೊಳ್ಳುವ ಹೊಲೆಯರು ಈ ನೆಲದ ಮೂಲನಿವಾಸಿಗಳು ಎಂಬುದರಲ್ಲಿ ಯಾವ ಅನುಮಾನವು ಇಲ್ಲ.

3. ತುಳು ನಾಡಿನ ಚಾರಿತ್ರಿಕ ದಾಖಲೆಯ ಪ್ರಕಾರ "ಕರಾವಳಿ ಮತ್ತು ಮಲೆನಾಡಿನಲ್ಲಿ ಪ್ರಬಲವಾಗಿದ್ದ ಮೀನುಗಾರರು ಮತ್ತು ಹೊಲೆಯರನ್ನು ನಿರ್ಮೂಲನ ಮಾಡಲು, ತುಳು ನಾಡಿನ ಬ್ರಾಹ್ಮಣರು ಕದಂಬರ

ಮಯೂರ ವರ್ಮನನ್ನು ಸೃಷ್ಟಿಸಿದರು". ಡಾ.ಬಿ.ಆರ್. ಅಂಬೇಡ್ಕರ್‌ರವರ "ನನ್ನ ಜನ ಈ ನೆಲವನ್ನು ಆಳಿದವರು" ಎಂಬ ವಾದಕ್ಕೆ ಪುಷ್ಟಿ ಸಿಗುತ್ತದೆ.

4. "ಮಾಲಾ" ಪದದ ನಿಷ್ಪತ್ತಿಯ ಬಗ್ಗೆ ದ್ರಾವಿಡ ಭಾಷೆಯ ಸಾಮ್ಯತೆ ಹೋಲಿಕೆಯಲ್ಲಿ ಅನುಮಾನ ವ್ಯಕ್ತಪಡಿಸಿದ್ದಾರೆ. ಅವರು 'ಮಾಲಾ"ಎಂಬ ಪದವು ಅರೇಬಿಕ್ ಭಾಷೆಯ ಮಾಲ್ ಅಥವಾ ಮಾಲಿಕದಿಂದ ಬಂದಿರಬಹುದೇ ಎಂದು ಅನುಮಾನಿಸಿದ್ದಾರೆ ಆದರೆ ತೆಲುಗಿನ "ಮಾಲಾ" ಪದವು ತಮಿಳಿನ "ಮಲೈ" ಎಂಬ ಪದದಿಂದ ನಿಷ್ಪತ್ತಿಯಾಗಿದೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮೂಲ ದ್ರಾವಿಡದಿಂದ ಮೊದಲು ಬೇರೆಯಾದದ್ದು ತೆಲುಗು. ಮಧ್ಯದ್ರಾವಿಡ ಭಾಷಾ ವರ್ಗೀಕರಣ ಪಟ್ಟಿಯಲ್ಲಿ ತೆಲುಗು, ತುಳು ಭಾಷೆಗಳು ಸೇರಿವೆ. ಕಂದಮಿಳು ಎಂಬ ಹೆಸರಿನಿಂದ ಕನ್ನಡ ಮತ್ತು ತಮಿಳು ಭಾಷೆಗಳು ಬಹುಕಾಲದವರೆಗೆ ಜೊತೆಯಲ್ಲಿದ್ದು ಕ್ರಮೇಣ ಬೇರ್ಪಡೆಯಾದವು. ಭಾಷಾ ವಿಜ್ಞಾನಿಗಳು ಕನ್ನಡ ಮತ್ತು ತಮಿಳನ್ನು ದಕ್ಷಿಣ ದ್ರಾವಿಡ ಭಾಷಾವರ್ಗದಲ್ಲಿ ಗುರುತಿಸುತ್ತಾರೆ. ಹೀಗಾಗಿ ತಮಿಳಿನ ಪೊಲಂ, ಪರಯ, ಮತ್ತು ಕನ್ನಡದ ಹೊಲ, ಹೊಲೆಯ ಪದಗಳಲ್ಲಿ ಸಾಮ್ಯತೆ ಕಂಡು ಬರುತ್ತದೆ.

5. ಲೇಖಕರು ಎಡಗೈ-ಬಲಗೈ ಬಗ್ಗೆ ಪ್ರಸ್ತಾಪಿಸುತ್ತಾ, ಕ್ರಿ.ಶ.7ನೆಯ ಶತಮಾನದಲ್ಲಿ ಕಂಚಿಯ ಕಾಳಿ(ಕಾಮಾಕ್ಷಿ) ತನ್ನ ಬಲಗೈಯಲ್ಲಿ, ಎಡಗೈಯಲ್ಲಿ ಕೆಲಜಾತಿಗಳನ್ನು ಇಟ್ಟುಕೊಂಡು ತೂಗಿದ್ದರಿಂದ ಆಯಾಯ ಜಾತಿಗಳು ಎಡಗೈ-ಬಲಗೈ ಆದುವೆಂದು ಐತಿಹ್ಯ ತಿಳಿಸುತ್ತದೆ ಎಂದು ಉಲ್ಲೇಖಿಸಿದ್ದಾರೆ. ಆದರೆ ತಮಿಳುನಾಡಿನ ಚರಿತ್ರೆಯ ಪ್ರಕಾರ, ಸಂಗಂ ಯುಗದಲ್ಲಿ ಕರಿಕಾಲ ಚೋಳನ ಆಳ್ವಿಕೆಯ ಕಾಲದಲ್ಲಿ ಇಡಂಗೈ(ಎಡಗೈ) ಮತ್ತು ಪಳಂಗೈ(ಬಲಗೈ) ಜಾತಿಗಳಾದವೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

6. ಇನ್ನೊಂದು ವಿಚಾರವಾಗಿ ಇಲ್ಲಿ ಪ್ರಸ್ತಾಪ ಮಾಡಲೇಬೇಕು. ಅದೇನೆಂದರೆ, "ಶಿವನ ಹೆಂಡತಿ ಪಾರ್ವತಿಯ ಅಂಶದಿಂದ ಹುಟ್ಟಿದವನು ಹೊಲೆಯ. ಯಾವುದೋ ಕಾರಣ ನಿಮಿತ್ತ ವಿಶ್ವಕರ್ಮರು ತನ್ನ ಕತ್ತಿಯಿಂದ ಹೊಲೆಯರನ್ನೆಲ್ಲಾ ಕೊಚ್ಚಿ ಹಾಕಿಕೊಂಡು ಸಾಯಿಸುತ್ತಾ ಬರುತ್ತಿದ್ದ. ಆ ಸಮಯದಲ್ಲಿ ಒಬ್ಬ ಹೊಲೆಯರ ಹುಡುಗ ತಪ್ಪಿಸಿಕೊಂಡು ಓಡಿದ. ಆಗ ಅವನನ್ನು ಬೆನ್ನಟ್ಟಿಕೊಂಡು ಆಚಾರಿ ಬರುತ್ತಿದ್ದ. ಆ ಹುಡುಗ ಅಗಸ ಬಟ್ಟೆ ಒಗೆಯುತ್ತಿದ್ದ ಜಾಗಕ್ಕೆ ಓಡಿಬಂದು ವಿಷಯ ತಿಳಿಸಿದ. ಆಗ ಅಗಸನು ಬಟ್ಟೆ ಒಗೆಯುವ ಸಲುವಾಗಿ ಬಳಸುತ್ತಿದ್ದ ಬಾನಿಯನ್ನು ಆ ಹುಡುಗನ ಮೇಲೆ ಹಾಕಿ ಮುಚ್ಚಿಟ್ಟನು. ಅನಂತರ ಆಚಾರಿಯು ಬಂದು ಹುಡುಗನ ಬಗ್ಗೆ ಅಗಸನನ್ನು ವಿಚಾರಿಸಿದಾಗ ಗೊತ್ತಿಲ್ಲ ಎಂದನು.,

ಬಾನಿಯನ್ನು ತೆಗೆಸಿ ಈ ಹುಡುಗ ಯಾರೆಂದು ಕೇಳಿದನು. ಆಗ ಅಗಸನು ಅವನು ನನ್ನ ಮಗನೆಂದನು. ಆಚಾರಿಯು, ಹಾಗಾದರೆ ಹುಡುಗನನ್ನು ಜೊತೆಯಲ್ಲಿ ಕುಳ್ಳಿರಿಸಿ ಕೊಂಡು ಊಟ ಮಾಡು ಎಂದು ಕೇಳಿದನು. ಆಗ ಅಗಸನು ಹುಡುಗ ನನ್ನು ಕರೆದು ಊಟಕ್ಕೆಕುಳಿತನು. ಬಾಳೆ ಎಲೆಯಲ್ಲಿ ಅನ್ನ ಹಾಕಿ, ಎಲೆಯ ಮಧ್ಯಕ್ಕೆ ಗೆರೆ ಹಾಕಿ ಆ ಕಡೆಯುದನ್ನು ತಿನ್ನುವಂತೆ ಹೇಳಿ, ಈ ಕಡೆಯದನ್ನು ತಾನು ತಿಂದನು. ಆಗ ಬಾಳೆ ಎಲೆಗೆ ಮಧ್ಯ ದಿಂಡು ಬಂದಿತುಂಬ ಕಥೆಯು ನಂಬಿಕೆಯು ಇಂದಿಗೂ ಹೊಲೆಯರಲ್ಲಿ ಪ್ರಚಲಿತ ನಲ್ಲಿದೆ.

ಆದರೆ ಮಂಟೇಸ್ವಾಮಿಯ ಚಳುವಳಿಗೆ ಸಂಬಂಧಿಸಿದಂತೆ ಅವ ಲೋಕನ ಮಾಡುವಾಗ ಮಂಟೇ ಸ್ವಾಮಿಯ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿ ಯವರುಗಳು ಮೂಲತಃ ಹಲಗೂರಿನ ಪಂಚಾಳರು (ಆಚಾರಿಗಳು). ಮಂಟೇಸ್ವಾಮಿ ಒಕ್ಕಲಿನವರಾದ ಹೊಲೆಯರು ಇಂದು ಇವರನ್ನು ತಮ್ಮ ಮನೆ ದೇವರಾಗಿ ಪೂಜಿಸುತ್ತಿದ್ದಾರೆ, ತಮ್ಮ ಮಕ್ಕಳಿಗೂ ಸಹ ಅವರ ಹೆಸರನ್ನು ಇಡು ತ್ತಾರೆ ಎಂಬುದು ಸೋಜಿಗದ ಸಂಗತಿ.

7. ಮಲ್ಲೆ ಮಾದೇಶ್ವರನು ಮಾದಿಗರ ಹುಡುಗನಾದರೆ, ಮಂಟೇಸ್ವಾಮಿ ಬಲಗೈನವನೆಂದು ಹೇಳುತ್ತಾರೆ. ಅದೇ ರೀತಿ ನಂಜನಗೂಡಿನ ನಂಜುಂಡೇಶ್ವರನು ಸಹ ಹೊಲೆಯರ ಹುಡುಗನೆಂಬ ಅಭಿಪ್ರಾಯವಿದೆ. ದೇವ ಚಂದ್ರನ ರಾಜಾವಳಿ ಕಥಾ ಸಾರದಲಿ ಈ ರೀತಿಯ ಉಲ್ಲೇಖವಿದೆ. "ಉಮ್ಮತೂರಿನಲಿ

"ಮಾಲಾ" ಪದವು ತಮಿಳಿನ "ಮಲೈ" ಎಂಬ ಪದದಿಂದ ನಿಷ್ಪತ್ತಿಯಾಗಿದ'ಯೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮೂಲ ದ್ರಾವಿಡದಿಂದ ಮೊದಲು ಬೇರೆಯಾದದ್ದು ತೆಲುಗು. ಮಧ್ಯದ್ರಾವಿಡ ಭಾಷಾ ವರ್ಗೀಕರಣ ಪಟ್ಟಿಯಲ್ಲಿ ತೆಲುಗು, ತುಳು ಭಾಷೆಗಳು ಸೇರಿವೆ. ಕಂದಮಿಳು ಎಂಬ ಹೆಸರಿನಿಂದ ಕನ್ನಡ ಮತ್ತು ತಮಿಳು ಭಾಷೆಗಳು ಬಹುಕಾಲದವರೆಗೆ ಜೊತೆಯಲ್ಲಿದ್ದು ಕ್ರಮೇಣ ಬೇರ್ಪಡೆ ಯಾದವು. ಭಾಷಾ ವಿಜ್ಞಾನಿಗಳು ಕನ್ನಡ ಮತ್ತು ತಮಿಳನ್ನು ದಕ್ಷಿಣ ದ್ರಾವಿಡ ಭಾಷಾವರ್ಗದಲ್ಲಿ ಗುರುತಿಸುತ್ತಾರೆ. ಹೀಗಾಗಿ ತಮಿಳಿನ ಪೊಲಂ, ಪರಯ, ಮತ್ತು ಕನ್ನಡದ ಹೊಲ, ಹೊಲೆಯ ಪದಗಳಲ್ಲಿ ಸಾಮ್ಯತೆ ಕಂಡು ಬರುತ್ತದೆ

ಭುಜಂಗರಾಯನು ಆಳುತ್ತಿ[illegible]ಯರ ಅಪ್ಪಾಜಿ ಯೆಂಬ ಬ್ರಾಹ್ಮಣನು ವೇದಪಾರಾಯಣ ನಾಗಿ ಮಂತ್ರಿ ಪದವಿ ಯಲ್ಲಿದ್ದನು. ಆತನು ಮೂವತ್ತ ಮೂರು ಹಳ್ಳಿ ಯಲ್ಲಿ ಮೂವ ತ್ತಮೂರು ಒಕ್ಕಲನ್ನು ಕ್ಷೇತ್ರಾದಿ ಮಾನವನ್ನು ಹೊಂದಿ ಮಠವನ್ನು ಮಾಡಿಕೊಂಡು ತನ್ನ ಪುತ್ರರು ಮತ್ತು ಶಿಷ್ಯರುಗಳಿಗೆ ವೇದಸ್ಮೃತಿ ಮುಂತಾದ ಪಾಠವನ್ನು ಹೇಳುತ್ತಿದ್ದನು. ಬಡಗ ಸೀಮೆಯಿಂದ ಒಬ್ಬ ಹೊಲೆಯರ ಹುಡುಗನು ಬುದ್ಧಿಚಾತು ರ್ಯದಿಂದ ವಿನಯ ವಿವೇಕಗಳನ್ನು ಪ್ರಕಟಿಸಿ ಜಾತಿಯನ್ನು ಮರೆಮಾಚಿ ಬಂದು ಆ ಮಠವನ್ನು ಸೇರಿದನು.

ಅಲ್ಲಿ ಆತನು ವೇದವನ್ನು ಸಾಂಗವಾಗಿ ಅಧ್ಯಯನ ಮಾಡಿ ಪ್ರಸಿದ್ಧನಾದನು. ಅಪ್ಪಾಜಿ ದೀಕ್ಷಿತರು ಅವನ ಬುದ್ಧಿಗೆ ಮೆಚ್ಚಿ ತನ್ನ ಮಗಳನ್ನು ಮದುವೆ ಮಾಡಿ ಪ್ರತ್ಯೇಕ ಮನೆಯನ್ನು ಮಾಡಿ ಅಗ್ರಹಾರದ ಮಧ್ಯದಲ್ಲಿರಿಸಿ ಸೋಮಯಾಜಿ ಎಂದು ಹೆಸರಿಟ್ಟು ಪೂಜ್ಯನನ್ನಾಗಿ ಮಾಡಿದರು. ಕೆಲವು ದಿವಸಗಳ ಅನಂತರ ಆತನ ತಾಯಿಯು ತನ್ನ ಮಗನನ್ನು ಹುಡುಕಿಕೊಂಡು ಬಂದು ಆತನನ್ನು ನೋಡಿದಳು. ಮಗನು ತಾಯಿಯ ತಲೆಯನ್ನು ಬೋಳಿಸಿ ಗುಪ್ತವಾಗಿ ತನ್ನ ಮನೆಯಲ್ಲಿಟ್ಟಕೊಂಡನು. ಸೋಮ ಯಾಜಿಯ ಪತ್ನಿಯು ಆಕೆಯ ಕುಲವನ್ನು ತಿಳಿದು ತಂದೆಗೆ ತಿಳಿಸಿದಳು. ಈ ವಿಷಯವು ಕ್ರಮೇಣ ಜನಜನಿತವಾಯಿತು.

ಇದನ್ನು ತಿಳಿದ ಅಗ್ರಹಾರದ ಬ್ರಾಹ್ಮಣರೆಲ್ಲರು ಪಾಪ ಸಂಪ್ರಾಪ್ತಿಯಾಯಿತೆಂದು ಅಸಹ್ಯಪಟ್ಟುಕೊಂಡರು.

ಕೆಲವರು ಹೊಳೆಯಲ್ಲಿ ಬಿದ್ದರು. ಕೆಲವರು ವಿಷ ಸೇವನೆ ಮಾಡಿದರು. ಮತ್ತೆ ಕೆಲವರು ಅಗ್ನಿ ಪ್ರವೇಶ ಮಾಡಿದರು. ಅಪ್ಪಾಜಿ ದೀಕ್ಷಿತನು ಯಾತ್ರೆಗೆಯ್ದು ಬಂದು ಲಿಂಗಧಾರಿಯಾಗಿ ಕೆಲವು ಬ್ರಾಹ್ಮಣರಿಗೆ ಲಿಂಗವನ್ನು ಕಟ್ಟಿಸಿದನು. ಚೋಳರಿಂದ ಪ್ರತಿಷ್ಠಿತವಾಗಿದ್ದ ಲಿಂಗಾಲಯ ವನ್ನುದ್ದರಿಸಿದ ಆತನು ಕಪಿನಿತೀರದಲ್ಲಿ ಗರಳಪುರಿ ಎಂಬ ಪುರವನ್ನು ಉದ್ದರಿಸಿದನು. ಅನಂತರ ಆತನು ರಾಜನಿಗೆ ಹೇಳಿ ವಿಷಕಂಠನ ಪಡಿತರಕ್ಕಾಗಿ ಐದು ಹಳ್ಳಿಗಳನ್ನು ಬಿಡಿಸಿ ನೂರೈವತ್ತು ಲಿಂಗಾಲಯಗಳನ್ನು ಮಾಡಿಸಿದನು. ಈ ಹೊಲೆಯರ ಹುಡುಗ ಯಾರು? ಅವನು ನಂಜನ ಗೂಡಿನ ಕಪಿನಿತೀರದಲ್ಲಿರುವ ನಂಜುಂಡೇಶ್ವರ ಇರಬಹುದೇ? ಎಂದು ಮಹಾದೇವ ಶಂಕನಪುರರವರು ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸಂಶೋಧನೆ ನಡೆಯ ಬೇಕಾಗಿದೆ.

8. ಅವಿಭಜಿತ ಮೈಸೂರು ಜಿಲ್ಲೆಯ ಆದಿಕರ್ನಾಟ ಕರು ಎಂದು ಹೇಳುತ್ತಲೇ ಕೊಡಗು, ಚಿತ್ರದುರ್ಗ ಸೇರಿದಂತೆ ಇತರೆ ಜಿಲ್ಲೆಗಳ ಜನಾಂಗದ ಸಂಪ್ರದಾಯಗಳ ಬಗ್ಗೆ ವಿವರಿಸಿದ್ದಾರೆ. ಅದೂ ಸಹ ಸಮಗ್ರವಾಗಿ ಪ್ರತಿಬಿಂಬಿತ ವಾಗಿರುವುದಿಲ್ಲ ವಿವಾಹಕ್ಕೆ ಸಂಬಂಧಿಸಿದಾಗಲೂ ಸಹ ಸಮಗ್ರವಾಗಿ ವಿವರಿಸಿರುವುದಿಲ್ಲ. ಒಂದೊಂದು ಕುಲದಿಂದ ಇನ್ನೊಂದು ಕುಲಕ್ಕೆ ಸಂಬಂಧ ಬೆಳೆಸುವಾಗ ಬರುವ ಅಡ್ಡಿ-ಅಡಚಣೆಗಳ ಬಗ್ಗೆ ವಿವರಿಸಿಲ್ಲ. ದಾಸಗಳು, ಜೋಗಿಗಳು, ಮಂಟೇಸ್ವಾಮಿ ಮತ್ತು ಮಾದೇಶ್ವರ ಇತ್ಯಾದಿ ದೇವರ ಒಕ್ಕಲುಗಳಿರುವ ಪಂಗಡಗಳಲ್ಲೇ ಹೆಣ್ಣುಕೊಡುವ - ತರುವ ಪದ್ಧತಿಯಿಲ್ಲ. ನಮ್ಮ ಸಮಾಜದಲ್ಲಿಯೂ ಸಹ ಮಠದಲ್ಲಿ ಗುರು ಬೋಧನೆ (ಧೀಕ್ಷೆ) ತೆಗೆದುಕೊಳ್ಳುವ ಪದ್ಧತಿಯಿದ್ದೂ ಇವರು ಗಳು ಸತ್ತಾಗ ಊಳುವ ಪದ್ಧತಿಯು ವಿಭಿನ್ನವಾಗಿದೆ.

9. ಕುಲಗಳ ಪಟ್ಟಿಯನ್ನು ಅವಲೋಕಿಸಿದಾಗ ಕೆಲವು ಹೆಸರುಗಳು ಪಟ್ಟಿಯಲ್ಲಿ ಬಿಟ್ಟು ಹೋಗಿವೆ. ಉದಾ: ತಾವರೆ, ಹೊಳವರು, ಚಿಲಕ, ಕ್ಷತ್ರಿಯ, ಬಳ್ಳಿ, ಬಳ್ಳೆ ಇತ್ಯಾದಿ. ಕೆಲವು ನಿರ್ದಿಷ್ಟ ಕುಲಗಳ ಮತ್ತು ಮನೆದೇವರುಗಳಿರುವ ಹೊಲೆಯರು ದಾಸಗಳ ಅಥವಾ ಜೋಗಿಗಳ ಮನೆಯಿಂದ ಸಂಬಂಧ ಬೆಳೆಸುವುದಿಲ್ಲ. ಉದಾ:ಭೂಮಿ ಕುಲದವರು ವೆಂಕಟರಮಣ ಸ್ವಾಮಿಯ ಒಕ್ಕಲಿನ ಮನೆಗಳಲ್ಲಿ ಹೆಣ್ಣು ಕೊಡುವುದು ಮತ್ತು ತರುವುದು ಇಲ್ಲ, ಭೂಮಿಕುಲ, ರಾಕ್ಷಸಮ್ಮ ಮತ್ತು ರಾವಣೇಶ್ವರ ಮನೆದೇವರ ಒಕ್ಕಲಿನವರು ದಾಸಗಳ ಮನೆಯಲ್ಲಿ ಸಂಬಂಧ ಬೆಳೆಸುವುದಿಲ್ಲ, ಶಿವನ ಒಕ್ಕಲಿರುವ ಮನೆಗಳಲ್ಲಿ ಮಾತ್ರ ಸಂಬಂಧ ಬೆಳೆಸುತ್ತಾರೆ. ಇನ್ನೂ ಗಂಗಡಿಕಾರ, ಮೊರಸು, ತಿಗಳ, ಹಗ್ಗ ಮಗ್ಗ ಇತ್ಯಾದಿ ಒಂದು ಪಂಗಡದಿಂದ ಮತ್ತೊಂದು ಪಂಗಡದಲ್ಲಿ ಸಂಬಂಧ ಬೆಳೆಸುವುದಂತೂ ಇಲ್ಲವೇ ಇಲ್ಲ.

10. ಒಳಪಂಗಡಗಳಾದ ಗಂಗಡಿಕಾರ, ಮರಸು, ದಾಸ, ಹಗ್ಗ ಮಗ್ಗ ಹೆಸರುಗಳ ಪ್ರಸ್ತಾಪದಲ್ಲಿ ತಿಗಳ, ಕರಡಿ ಹೊಲೆಯರ ಹೆಸರುಗಳು ಬಿಟ್ಟುಹೋಗಿವೆ.

ಒಟ್ಟಾರೆ ಇದೊಂದು ಮಹತ್ವಪೂರ್ಣ ಕೃತಿಯಾಗಿದೆ, ಇಡೀ ಕೃತಿಯನ್ನು ಮೈಸೂರು ಮಹಾರಾಜ ರಾದ ಶ್ರೀ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ಅರ್ಪಿಸಿರುವುದು ಕೃತಿಗೆ ಸಂದ ಗೌರವ. □

ಕೃಷಿ-ಮಾರುಕಟ್ಟೆಯಲ್ಲಿ ಬಾಲಕಾರ್ಮಿಕರು

ಸಂಶೋಧನೆ
ವಿಠೋಬ ಭೀಮಣ್ಣ
ಶಿವರಾಜ ಬಿ.ಕೆ.

ಪ್ರಕೃತಿಯಲ್ಲಿ ಮಾನವನ ಜೀವನವು ಒಂದು ಆಟವಿದ್ದಂತೆ, ದಿನಗಳೆಂತೆ ಹೊಸ ಹೊಸ ತರಹದ ನೋಟವಾಗಿ ಹೊರಹೊಮ್ಮುತ್ತದೆ. ಅವನ ಜೀವನ ವ್ಯವಸ್ಥೆಯಲ್ಲಿ ಬಾಲ್ಯವಸ್ಥೆ ಪ್ರೌಢಾವಸ್ಥೆ ಯೌವ್ವನಾವಸ್ಥೆ ಮತ್ತು ವೃದ್ಧಾಪ್ಯವಸ್ಥೆ ಎಂಬ ನಾಲ್ಕು ಹಂತಗಳಿವೆ. ಮಾನವನ ಬಾಳಿಗೆ ದಾ[illegible]ಪವಾಗುವ ವ್ಯವಸ್ಥೆ ಎಂದರೆ ಬಾಲ್ಯಾವಸ್ಥೆಯ ಹಂತವಾಗಿದೆ. ಈ ಹಂತದಲ್ಲಿನ ಮಕ್ಕಳನ್ನು ದೇವರ ಸ್ವರೂಪವೆಂದು ಸಮಾಜದಲ್ಲಿ ಜನ ಬಣ್ಣಿಸುತ್ತಾರೆ. ಆದರೆ ಆದೇ ಮಕ್ಕಳು ಇಂದು ಗುಲಾಮರಾಗಿ ಸಮಾಜದಲ್ಲಿ ಬಾಳುತ್ತಿದ್ದಾರೆ.

ಮಕ್ಕಳು ಬಳ್ಳಿಯಲ್ಲಿ ಅರಳುವ ಹೂಗಳಿದ್ದಾಗ್ಗೆ, ಇಂತಹ ಹೂಗಳನ್ನು ಚಿವುಟಿ ಹಾಕುವ ಕಾರ್ಯ ಎಲ್ಲಾ ಸಮಾಜದಲ್ಲಿ ನಡೆಯುತ್ತಿದೆ. ಬಾಲ್ಯದಲ್ಲಿ ಸುಖದ ಕನಸುಗಳನ್ನು ಕಾಣುತ್ತ ಸುಖದಲ್ಲಿ ಉಂಡುಟ್ಟ ಸುಂದರ ಜೀವನ ನಡೆಸುವ ವಯಸ್ಸಿನಲ್ಲಿ ಕುಟುಂಬದ ಆರ್ಥಿಕ ವ್ಯವಸ್ಥೆ ಹದಗೆಟ್ಟಾಗ, ತಂದೆ - ತಾಯಿಯರು ದುಡಿಯಲಾರದ ಸ್ಥಿತಿಯಲ್ಲಿದ್ದಾಗ, ಬಾಲಕ - ಬಾಲಕಿಯರು ತಂದೆ-ತಾಯಿಯಂದಿರನ್ನು ಸಾಕಲು ಮತ್ತು ತಮ್ಮ ಕುಟುಂಬದ ಆರ್ಥಿಕ ಗುಣಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು ತಮ್ಮ ಸುಕೋಮಲ ದೇಹಗಳನ್ನು ಈ ಭೂಮಿಗೆ ಭಾಗಿಸಬೇಕಾಗುತ್ತದೆ. ತಮ್ಮ ಎಳೆಯ ದೇಹದ ಬೇವರಿನ ನೀರನ್ನು ಭೂಮಾತೆಗೆ ಅರ್ಪಿಸಬೇಕಾಗುತ್ತದೆ. ಕಷ್ಟವೆಂಬ ಕಗ್ಗತ್ತಲೆಯಲ್ಲಿ ಹೋಗಿ ಜೀವನ ನಿರ್ವಹಿಸಲಿಕ್ಕೆ ಹಣವೆಂಬ ಸುಖವನ್ನು ಹುಡುಕಬೇಕಾಗುತ್ತದೆ.

ಭಾಲ ಕಾರ್ಮಿಕರೆಂದರೆ ಯಾರು?

ಈ ಪ್ರಶ್ನೆಗೆ ಸಂಬಂಧಿಸಿದಂತೆ, ಸಾಮಾನ್ಯವಾಗಿ 5 ರಿಂದ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕ ಮತ್ತು ಬಾಲಕಿಯರು ದುಡಿಮೆಯಲ್ಲಿ ತೊಡಗಿದ್ದರೆ, ಅಂತಹವರನ್ನು ಬಾಲ ಕಾರ್ಮಿಕರೆಂದು ಪರಿಗಣಿಸಲಾಗುತ್ತದೆ.

8 ರಿಂದ 10 ವರ್ಷಗಳ ಮಧ್ಯದೊಳಗಿನ ಕೆಲಸ ಮಾಡುವ ಬಾಲಕ ಬಾಲಕಿಯರನ್ನು ಬಾಲ ಕಾರ್ಮಿಕರೆಂದು ಕಾರ್ಮಿಕರ ಮೇಲಿನ ರಾಷ್ಟ್ರೀಯ ಆಯೋಗವು ಗುರುತಿಸಿದೆ.

ಜಮೀನುದಾರರ ಜಮೀನಿನಲ್ಲಿ ಕೆಲಸ ಮಾಡುವ 8 ರಿಂದ 15 ವರ್ಷದೊಳಗಿನ ಮಕ್ಕಳನ್ನು ಬಾಲ ಕಾರ್ಮಿಕರೆಂದು 1981 ರ ಭಾರತ ಜನಗಣತಿಯು ಪರಿಗಣಿಸಿದೆ.

ಕೃಷಿಯಲ್ಲಿ ಬಾಲಕಾರ್ಮಿಕರ ಗಾತ್ರ

ಕೈಗಾರಿಕೆಗಳಲ್ಲಿಯಂತೆ ಕೃಷಿಯಲ್ಲಿಯು ಬಾಲ ಕಾರ್ಮಿಕರ ಸಂಖ್ಯೆಯು ದಿನಗಳೆದಂತೆ ಹೆಚ್ಚಾಗುತ್ತ ಹೋಗುತ್ತಿದೆ. 1950-51 ರ ಜನಗಣತಿಯ ಪ್ರಕಾರ ಕೃಷಿಯಲ್ಲಿ ಬಾಲಕಾರ್ಮಿಕರ ಸಂಖ್ಯೆ 4.8 ಪ್ರತಿಶತದಷ್ಟಿತ್ತು. ಅದು 1956-57 ರಲ್ಲಿ 7.7 ಪ್ರತಿಶತದಷ್ಟಾಯಿತು. 1961 ರ ಜನಗಣತಿಯ ಪ್ರಕಾರ ಪ್ರತಿಶತ 15 ರಷ್ಟಾದದ್ದು ಆಶ್ಚರ್ಯಕರವಾಗಿತ್ತು. ಆದರೆ ಪ್ರಸ್ತುತದಲ್ಲಿ ಪ್ರತಿಶತ 30ಕ್ಕಿಂತ ಹೆಚ್ಚು ಬಾಲಕ ಬಾಲಕೀಯರು ಕೃಷಿಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. 1991 ರ ಜನಗಣತಿಯ ಪ್ರಕಾರ ಭಾರತದ ಕೃಷಿವಲಯದಲ್ಲಿ ಬಾಲಕಾರ್ಮಿಕರ ಔದ್ಯೋಗಿಕ ರಚೆನೆಯನ್ನು ' ಕೋಷ್ಟಕ ಒಂದರ ಸಹಾಯದಿಂದ ತಿಳಿದುಕೊಳ್ಳಬಹುದು.

ಕೋಷ್ಟಕ ಒಂದ ನ್ನು ಪರಿಶೀಲಿಸಿದಾಗ ಕೃಷಿ ಚಟುವಟಿಕೆಗಳಲ್ಲಿ ಬಾಲಕ ಬಾಲಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರಾಗಿರುವುದು ಕಂಡುಬರುತ್ತದೆ. ಅದರಲ್ಲಿ ಶೇ.12.30 ರಷ್ಟು ಬಾಲಕೀಯರು ಬಾಲಕರಿಗಿಂತ ಹೆಚ್ಚಿರುವುದು ವಿಶೇಷವೆನಿಸಿದೆ. ಭಾರತದಲ್ಲಿ ಕರ್ನಾಟಕವು(44.61%) ಹೆಚ್ಚಿನ ಸಂಖ್ಯೆಯಲ್ಲಿ ಬಾಲಕ - [illegible]ವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಎರಡನೇ ಕೋಷ್ಟಕದಿಂದ ತಿಳಿಯಬಹುದು.

ಕೋಷ್ಟಕ-೧

ಭಾರತದಲ್ಲಿ ಬಾಲ ಕೃಷಿ ಕಾರ್ಮಿಕರ ಔದ್ಯೋಗಿಕ ರಚನೆ

(೧೯೯೧ ರ ಜನಗಣತಿ ಪ್ರಕಾರ)

ಕ್ರ.ಸಂ.	ಔದ್ಯೋಗಿಕ ರಚನೆ	ಬಾಲಕರು	ಬಾಲಕಿಯರು
1.	ಸಾಗುವಳಿಕಾರಿಕೆ	37.90	30.80
2.	ಕೃಷಿ ಕಾರ್ಮಿಕರು	39.60	51.90
3.	ಗೃಹ ಔದ್ಯೋಗಿಕ ತಯಾರಿಕೆಯಲ್ಲಿ	20.40	12.70
4.	ಇತರೆ	02.10	04.60
	ಒಟ್ಟು	100.00	100.00

ಸಂಶೋಧನಾ ಅಧ್ಯಯನ ವಿಧಾನ

ಈ ಸಂಶೋಧನಾ ಅಧ್ಯಾಯನಕ್ಕೆ ಕರ್ನಾಟಕ ರಾಜ್ಯದ ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕವನ್ನು ಆಯ್ದುಕೊಳ್ಳಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಆಡಿಯಲ್ಲಿ ನೀರಾವರಿಗೆ ಒಳಪಟ್ಟಿರುವುದರಿಂದ ಸಂಶೋಧನಾ ಅಧ್ಯಯನಕ್ಕೆ ಸೂಕ್ತವಾದುದಾಗಿದೆ. ಅಧ್ಯಾಯನಕ್ಕಾಗಿ ನೀರಾವರಿ ಮತ್ತು ನೀರಾವರಿಯೇತರ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಪ್ರಶ್ನಾವಳಿಗಳ ಸಹಾಯದಿಂದ, ನೀರಾವರಿ ಪ್ರದೇಶದಲ್ಲಿ 30 ಬಾಲಕ-ಬಾಲಕಿಯರು ಮತ್ತು ನೀರಾವರಿಯೇತರ ಪ್ರದೇಶದಲ್ಲಿ 10 ಬಾಲಕ-ಬಾಲಕಿ ಯರನ್ನು ಆಯ್ಕೆ ಮಾಡಿಕೊಂಡು ಅವರ ಮತ್ತು ಅವರ

ಬಾಲ್ಯದಲ್ಲಿ ಸುಖದ ಕನಸುಗಳನ್ನು ಕಾಣುತ್ತ ಸುಖದಲ್ಲಿ ಉಂಡುಟ್ಟ ಸುಂದರ ಜೀವನ ನಡೆಸುವ ವಯಸ್ಸಿನಲ್ಲಿ ಕುಟುಂಬದ ಆರ್ಥಿಕ ವ್ಯವಸ್ಥೆ ಹದಗೆಟ್ಟಾಗ, ತಂದೆ - ತಾಯಿಯರು ದುಡಿಯಲಾರದ ಸ್ಥಿತಿಯಲ್ಲಿದ್ದಾಗ, ಬಾಲಕ - ಬಾಲಕಿಯರು ತಂದೆ-ತಾಯಿಯಂದಿರನ್ನು ಸಾಕಲು ಮತ್ತು ತಮ್ಮ ಕುಟುಂಬದ ಆರ್ಥಿಕ ಗುಣಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು ತಮ್ಮ ಸುಕೋಮಲ ದೇಹಗಳನ್ನು ಈ ಭೂಮಿಗೆ ಭಾಗಿಸ ಬೇಕಾಗುತ್ತದೆ. ತಮ್ಮ ಎಳೆಯ ದೇಹದ ಬೇವರಿನ ನೀರನ್ನು ಭೂಮಾತೆಗೆ ಅರ್ಪಿಸಬೇಕಾಗುತ್ತದೆ. ಕಷ್ಟವೆಂಬ ಕಗ್ಗತ್ತಲೆಯಲ್ಲಿ ಹೋಗಿ ಜೀವನ ನಿರ್ವಹಿಸಲಿಕ್ಕೆ ಹಣವೆಂಬ ಸುಖವನ್ನು ಹುಡುಕಬೇಕಾಗುತ್ತದೆ.

ಪಾಲಕ-ಪೋಷಕರನ್ನು ಸಂದರ್ಶಿಸಿ, ಅವರಿಂದ ವಿವರ ಪಡೆದುಕೊಂಡು ಅಂಕಿ ಸಂಖ್ಯೆಗಳನ್ನು ರಚಿಸಲಾಗಿದೆ. ಇದು 'ಕೃಷಿ ಕಾರ್ಮಿಕರ ಮಾರುಕಟ್ಟೆಯ ಒಂದು ಅಧ್ಯಯನದ' ಭಾಗವಾಗಿರುವುದರಿಂದ ಅವಶ್ಯ ಕತೆಯ ಅಂಶಗಳಿಗೆ ಮಾತ್ರ ಹೆಚ್ಚಿನ ಗಮನಹರಿಸಲಾಗಿದೆ.

ಸಂಶೋಧನಾ ಅಧ್ಯಯನದ ಉದ್ದೇಶಗಳು

ಈ ಕೆಳಗಿನ ಉದ್ದೇಶಗಳನ್ನು ಇಟ್ಟುಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ. ಅವುಗಳೆಂದರೆ,

೧.ಕೃಷಿಯಲ್ಲಿ ಬಾಲಕ ಮತ್ತು ಬಾಲಕಿಯರ ಕೆಲಸದ ಸ್ವರೂಪವನ್ನು ತಿಳಿಯುವುದು.

೨. ಕೃಷಿಯಲ್ಲಿ ಬಾಲ ಕಾರ್ಮಿಕರ ಕೂಲಿ ನಿರ್ಧಾರ ಹೇಗಾಗುತ್ತದೆ ಎಂಬುದನ್ನು ತಿಳಿಯುವುದು.

೩. ಕೃಷಿಯಲ್ಲಿ ಬಾಲ ಕಾರ್ಮಿಕರ, ವರ್ಷದಲ್ಲಿನ ಸರಾಸರಿ ಕೆಲಸದ ದಿನಗಳು ಮತ್ತು ದಿನಗಳಲ್ಲಿಯ ಕೆಲಸದ ಅವಧಿಯನ್ನು ತಿಳಿಯುವುದು.

೪. ಕೃಷಿಯಲ್ಲಿ ಬಾಲ ಕಾರ್ಮಿಕರ ಕಾರಣಗಳನ್ನು ತಿಳಿದುಕೊಳ್ಳುವುದು.

ಕೃಷಿಯಲ್ಲಿ ಬಾಲಕಾರ್ಮಿಕರ ಕೆಲಸದ ಸ್ವರೂಪ

ನೀರಾವರಿ ಪ್ರದೇಶಗಳಲ್ಲಿ ವರ್ಷಪೂರ್ತಿ ಚಟುವಟಿಕೆಗಳು ನಡೆಯುವುದರಿಂದ ಕೆಲಸಕ್ಕೇನು ಕಡಿಮೆ ಇರುವುದಿಲ್ಲ ನಿರಾವರಿಯೇತರ ಪ್ರದೇಶಗಳಲ್ಲಿ ವರ್ಷದಲ್ಲಿ 6 ರಿಂದ 7 ತಿಂಗಳು ಗಳವರೆಗೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುವುದರಿಂದ, ಉಳಿದ ದಿನಗಳಲ್ಲಿ ಸಮೀಪದ ನೀರಾವರಿ ಪ್ರದೇಶದ ಗ್ರಾಮಗಳಿಗೆ ಸುಗ್ಗಿಯ ರೂಪದಲ್ಲಿ ವಲಸೆ ಹೋಗುವ ರೂಢಿಯಿದೆ. ಈ ಸುಗ್ಗಿಯ ಕಾಲ ಮುಗಿದ ತಕ್ಷಣ ತಮ್ಮ ಸ್ವಂತ ಗ್ರಾಮಕ್ಕೆ ಹಿಂದಿರುಗುತ್ತಾರೆ.

15 ವರ್ಷಕ್ಕಿಂತ ಕೆಳಗಿನವರಿಗೆ ಹಗುರವಾದ ಕೆಲಸಕ್ಕೆ ನೇಮಿಸುತ್ತಾರೆ. ಕೆಲವೊಬ್ಬ ರೈತರು ಮನೆಯಲ್ಲಿ ದನಗಳನ್ನು ಕಾಯಲು ನೇಮಿಸುತ್ತಾರೆ. ಇನ್ನೂ ಬಾಲಕಿಯರಂತೂ ಸಾಮಾನ್ಯವಾಗಿ ಎಲ್ಲಾ ಮಹಿಳೆಯರು ಮಾಡುವಂತ ಕೆಲಸಗಳನ್ನು ಮಾಡಬೇಕಾಗುತ್ತದೆ. ಕಳೆ ಕೀಳುವುದು, ಶೇಂಗಾ ಹರಿಯುವುದು ಮತ್ತು ರಾಶಿ ಸಮಯದಲ್ಲಿ ಸಹಾಯ ಮಾಡುವುದು ಇನ್ನಿತರ ಕೆಲಸಗಳಲ್ಲಿ ಭಾಗವಹಿಸುತ್ತಾರೆ. ಕೃಷಿಯಲ್ಲಿ ಬಾಲ ಕಾರ್ಮಿಕರ ಕೆಲಸದ ಸ್ವರೂಪವನ್ನು ಮೂರನೇ ಕೋಷ್ಟಕದಿಂದ ತಿಳಿದುಕೊಳ್ಳ ಬಹುದಾಗಿದೆ.

ಕೃಷಿಯ ಎಲ್ಲಾ ಚಟುವಟಿಕೆಗಳಲ್ಲಿ ಬಾಲಕೀಯರು ಬಾಲಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಶೇಂಗಾ ಕಿತ್ತುವುದು, ತೆನೆ ಮುರಿಯುವುದು, ಗೊಬ್ಬರ ಹಾಕುವುದರಲ್ಲಿ ಪ್ರತಿಶತ 70ರಷ್ಟು ಬಾಲಕಿಯರು ಭಾಗವ ಹಿಸಿದರೆ, ಪ್ರತಿಶತ 30 ರಷ್ಟು ಬಾಲಕರು ಭಾಗವಹಿಸುತ್ತಾರೆ ಮತ್ತು ನೀರಾವರಿ ಪ್ರದೇಶದಲ್ಲಿ ನೀರಾವರಿಯೇತರ ಪ್ರದೇಶ ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಾಲಕ-ಬಾಲಕೀಯರು ಕೃಷಿ ಚಟುವಟಿಕೆಗಳಲ್ಲಿ ಕಾರ್ಮಿಕರಾಗಿ ಭಾಗವಹಿಸಿರುವುದು ಈ ಸಂಶೋಧನಾ ಅಧ್ಯಯನದಿಂದ ತಿಳಿದು ಬಂದಿದೆ. ಆದ್ದರಿಂದ ಕೃಷಿಯಲ್ಲಿ ಬಾಲಕರಿಗಿಂತ ಬಾಲಕೀಯರೇ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರಾಗಿದ್ದಾರೆ ಎಂಬುದು ಸತ್ಯಾಂಶವಾಗಿದೆ.

ಕೃಷಿಯಲ್ಲಿ ಬಾಲಕಾರ್ಮಿಕರ ಕೂಲಿ ನಿರ್ಧಾರ

ಕೃಷಿಯಲ್ಲಿ ಸಾಮಾನ್ಯವಾಗಿ ಕೂಲಿಯು ಕಾರ್ಮಿಕರ ದೈಹಿಕ ಸಾಮರ್ಥ್ಯ, ಕೃಷಿ ಚಟುವಟಿಕೆಗಳು ಮತ್ತು ಅವಧಿಗನುಗುಣವಾಗಿ ನಿರ್ಧಾರವಾಗುತ್ತದೆ. ಮಹಿಳೆ ಮತ್ತು ಪುರುಷರ ಮಧ್ಯ ಕೂಲಿಯಲ್ಲಿ ವ್ಯತ್ಯಾಸವಿರುತ್ತದೆ. ಪುರುಷರ ದೈಹಿಕ ಸಾಮರ್ಥ್ಯ ಹೆಚ್ಚಿರುವುದರಿಂದ ಮಹಿಳೆಯರಿಗಿಂತ ಹೆಚ್ಚು ಕೂಲಿ ಕೊಡಲಾಗುತ್ತದೆ. ಕೆಲವು ಅವಧಿಯಲ್ಲಿ ಕಾರ್ಮಿಕರು ದಿನಗೂಲಿ ಪಡೆದರೆ, ಕೆಲವು ಅವಧಿಯಲ್ಲಿ ಗುತ್ತಿಗೆ ಆಧಾರದ ಕೂಲಿ ಪಡೆಯುತ್ತಾರೆ. ಆದರೆ ಬಾಲ ಕಾರ್ಮಿಕರು ಕೇವಲ ದಿನಗೂಲಿಗೆ ಮಾತ್ರ ಸೀಮಿತವಾಗಿದ್ದಾರೆ. ಇವರ ಕೂಲಿಯಲ್ಲಿಯು ವ್ಯತ್ಯಾಸ ಕಂಡುಬರುತ್ತದೆ. ಬಾಲಕರಿಗೆ ಬಾಲಕಿಯರಿಗಿಂತ ಹೆಚ್ಚು ಕೂಲಿ ಕೊಡಲಾಗುತ್ತದೆ.

ಕೋಷ್ಟಕ - ೨
ಭಾರತದಲ್ಲಿ ರಾಜ್ಯವಾರು ಕೃಷಿ ಚಟುವಟಿಕೆಗಳಲ್ಲಿ ಪಾಲ್ಗೊಂಡ ಬಾಲ ಕಾರ್ಮಿಕರ ಶೇಕಡಾವಾರು

ಕ್ರ.ಸಂ. ರಾಜ್ಯಗಳು	ಸಾಗುವಳಿ	ಕೃಷಿಕಾರ್ಮಿಕರು	ಪಶುಸಂಗೋಪನೆ
ಭಾರತ	30.19	18.66	05.97
1.ಆಂಧ್ರಪ್ರದೇಶ	13.63	43.09	08.42
2.ಅಸ್ಸಾಂ	11.57	06.00	06.61
3.ಬಿಹಾರ	13.23	12.47	25.95
4. ಗುಜರಾತ	30.91	32.18	08.52
5.ಹಿಮಾಚಲಪ್ರದೇಶ	07.69	00.00	00.00
6.ಕರ್ನಾಟಕ	15.04	44.61	08.52
7.ಮಧ್ಯಪ್ರದೇಶ	57.30	22.28	00.75
8.ರಾಜಸ್ಥಾನ	71.57	04.31	00.39
9.ತಮಿಳುನಾಡು	08.44	17.53	01.95
10.ಪಶ್ಚಿಮ ಬಂಗಾಳ	06.96	10.13	09.49
11.ಉತ್ತರ ಪ್ರದೇಶ	29.93	4.01	00.73

ಮೂಲ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-1998-99.

ಸಂಶೋಧನಾ ಅಧ್ಯಯನದ ಪ್ರಕಾರ ಬಾಲ ಕಾರ್ಮಿಕರ ಕೂಲಿಯು ವಯಸ್ಕರ ಕೂಲಿಯಲ್ಲಿನ ಅರ್ಧದಷ್ಟು ಕೊಡಲಾಗುತ್ತದೆ ಮತ್ತು ಬಾಲಕ ಬಾಲಕಿಯರ ಕೂಲಿಯಲ್ಲಿ ವ್ಯತ್ಯಾಸವಿದ್ದು, ನೀರಾವರಿ ಮತ್ತು ನೀರಾವರಿ ಯೇತರ ಪ್ರದೇಶಗಳಲ್ಲಿಯೂ ಭಿನ್ನವಾಗಿರುವುದು ಕಂಡು ಬಂದಿದೆ. ಬಾಲಕಾರ್ಮಿಕರಿಗೆ ಕೊಡಲಾಗುವ ಕೂಲಿಯು ಹಣದ ರೂಪದಲ್ಲಿದ್ದು, ದಿನಗೂಲಿ ಯಾಗಿರುತ್ತದೆ.

ಕೋಷ್ಟಕ - ೩
ಕೆಲಸದ ಸ್ವರೂಪ (ಪ್ರತಿಶತದಲ್ಲಿ)

ಕ್ರ.ಸಂ. ಕೆಲಸದ ಸ್ವರೂಪ	ನೀರಾವರಿ ಪ್ರದೇಶ	ನೀರಾವರಿಯೇತರ ಪ್ರದೇಶ	ಒಟ್ಟು
1.ದನ ಕಾಯುವುದು	33.33	25.00	29.41
2.ಕಳೆ ಕೀಳುವುದು/ತೆಗೆಯುವುದು	33.33	18.75	26.47
3.ಶೇಂಗಾ ಹರಿಯುವುದು ಮತ್ತು ಕಿತ್ತುವುದು	38.90	18.75	29.41
4.ಇತರೆ	44.44	43.75	44.11

ಮೂಲ:ಕ್ಷೇತ್ರಾಧ್ಯಯನ

ಅಧ್ಯಾಯನದ ಕ್ಷೇತ್ರದಲ್ಲಿ ಬಾಲ ಕಾರ್ಮಿಕರಿಗೆ ಕೊಡಲಾಗುವ ಕೂಲಿಯು ನೀರಾವರಿ ಪ್ರದೇಶದಲ್ಲಿ ಕಡಿಮೆಯಿದ್ದು, ನೀರಾವರಿಯೇತರ ಪ್ರದೇಶದಲ್ಲಿ ಹೆಚ್ಚಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಕೃಷಿ ಚಟುವಟಿಕೆಗಳಾದ ಶೇಂಗಾ ಕಿತ್ತುವುದು ಮತ್ತು ಹರಿಯುವುದು, ಕಳೆ (ಕಸ) ಕಿತ್ತುವುದು, ಗೊಬ್ಬರ ಹಾಕುವುದು, ತೆನೆ ಮುರಿಯುವುದು ಮತ್ತು ರಾಶಿ ಸಮಯದಲ್ಲಿ ಸಹಾಯ ಮಾಡುವುದಕ್ಕೆ ನೀರಾವರಿ ಪ್ರದೇಶದಲ್ಲಿ ಬಾಲಕಿಯರಿಗೆ ಒಂದು ದಿನಕ್ಕೆ ರೂ.15 ರಷ್ಟು ಕೊಟ್ಟರೆ, ನೀರಾವರಿಯೇತರ ಪ್ರದೇಶದಲ್ಲಿ ರೂ.20 ಕೊಡುತ್ತಾರೆ.

ಶೇಂಗಾ ಕಿತ್ತುವುದು, ಜೋಳ, ಸಜ್ಜೆ, ತೊಗರಿ ಕೋಯ್ಯುವುದು ಮತ್ತು ಗೊಬ್ಬರ ಹಾಕುವುದಕ್ಕೆ ನೀರಾವರಿ ಪ್ರದೇಶದಲ್ಲಿ ಬಾಲಕರಿಗೆ ರೂ.22 ಕೊಟ್ಟರೆ, ನೀರಾವರಿ ಯೇತರ ಪ್ರದೇಶದಲ್ಲಿ ರೂ.25 ಕೊಡುತ್ತಾರೆ. ಇದು ನೀರಾವರಿಯೇತರ ಪ್ರದೇಶದಲ್ಲಿ ಮಹಿಳೆಯರಿಗೆ ಕೊಡ ಲಾಗುವ ಕೂಲಿಗೆ ಸಮೀಪದ ಕೂಲಿಯಾಗಿರುತ್ತದೆ.

ಕೃಷಿ ಚಟುವಟಿಕೆಗಳಲ್ಲಿ ದನ ಕಾಯುವುದು ಒಂದಾಗಿರುವುದರಿಂದ ಕೂಲಿಯು ಊರಿನ ಗಣ್ಯ ವ್ಯಕ್ತಿಗಳು ನಿರ್ಧರಿಸುತ್ತಾರೆ. ಆದು ಆಕಳು ಮತ್ತು ಎಮ್ಮೆಗಳಿಗೆ ಬೇರೆ ಬೇರೆಯಾಗಿರುತ್ತದೆ ಮತ್ತು ಕೂಲಿಯು ತಿಂಗಳಿಗೊಮ್ಮೆ ಕೊಡಬೇಕೆಂದು ನಿಗದಿಯಾಗಿರುತ್ತದೆ. ಒಂದು ತಿಂಗಳಿಗೆ ಒಂದು ಆಕಳಿಗೆ ರೂ.35 ನಿಗದಿಯಾದರೆ, ರೂ.45ನ್ನು ಒಂದು ಎಮ್ಮೆಗೆ ಕೊಡಲಾಗುತ್ತದೆ. ಇದು ನೀರಾವರಿ ಮತ್ತು ನೀರಾವರಿಯೇತರ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿರದೆ ಒಂದೇ ರೀತಿಯಾಗಿರುವುದು ಈ ಸಂಶೋಧನಾ ಅಧ್ಯಯನದಿಂದ ತಿಳಿದು ಬಂದಿದೆ.

ಸರಾಸರಿ ಕೆಲಸದ ದಿನಗಳು ಮತ್ತು ದಿನದಲ್ಲಿಯ ಕೆಲಸದ ಅವಧಿ

1991ರ ಭಾರತದ ಜನಗಣತಿಯ ಪ್ರಕಾರ ಕೃಷಿಯಲ್ಲಿ ಬಾಲಕಾರ್ಮಿಕರ ಸರಾಸರಿ ಕೆಲಸದ ದಿನಗಳು 220 ಎಂದು ವರದಿ ಮಾಡಿದ ಅಂದಾಜು ಇದೆ. ನೀರಾವರಿ ಪ್ರದೇಶದಲ್ಲಿ ವರ್ಷಪೂರ್ತಿ ಚಟುವಟಿಕೆಗಳು ನಡೆಯುವುದರಿಂದ ಸರಾಸರಿ ಕೆಲಸದ ದಿನಗಳು ನೀರಾವರಿಯೇತರ ಪ್ರದೇಶಕ್ಕಿಂತ ಹೆಚ್ಚಿಗೆ ಇರುತ್ತದೆ ಎಂಬುದನ್ನು ನಾಲ್ಕನೇ ಕೋಷ್ಟಕದ ಸಹಾಯದಿಂದ ತಿಳಿದುಕೊಳ್ಳಬಹುದಾಗಿದೆ.

ಮಹಿಳೆಯರಿಗೆ ಮೀಸಲಾದ ಕೃಷಿ ಚಟುವಟಿಕೆಗಳು ಬಹಳಷ್ಟು ಇರುವುದರಿಂದ ನೀರಾವರಿ ಮತ್ತು ನೀರಾವರಿಯೇತರ ಪ್ರದೇಶಗಳೆರಡರಲ್ಲಿಯೂ ಬಾಲಕಿಯರೇ ಹೆಚ್ಚು ದಿನ ಕೃಷಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ಇದು ಜನಗಣತಿ ಅಂದಾಜು ಮಾಡಿದ ವರದಿಗಿಂತ ಹೆಚ್ಚು ಆಗಿರುವುದು ಆಶ್ಚರ್ಯಕರ ಸಂಗತಿಯಾಗಿದೆ.

ದಿನದಲ್ಲಿಯ ಕೆಲಸದ ಅವಧಿಯಲ್ಲಿ ಬಾಲಕ ಮತ್ತು ಬಾಲಕಿಯರ ಮಧ್ಯ ವ್ಯತ್ಯಾಸವಿರುವುದಿಲ್ಲ. ಒಂದು ದಿನದಲ್ಲಿ 6 ರಿಂದ 7 ಅಥವಾ 7 1/2 ತಾಸುಗಳವರೆಗೆ ಬಾಲ

ಕಾರ್ಮಿಕರು ಕಾರ್ಯ ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ನೀರಾವರಿ ಪ್ರದೇಶದಲ್ಲಿ ಮಾತ್ರ ಮಾರ್ಚ - ಏಪ್ರಿಲ್ ತಿಂಗಳಲ್ಲಿ ಹೆಚ್ಚಿನ ಅವಧಿರೂಪದಲ್ಲಿ ಕೆಲಸ ಮಾಡಲಾಗುತ್ತದೆ. ಆದ್ದರಿಂದ ಅಲ್ಲಿ ಪೂರ್ಣ ಅವಧಿ ಮತ್ತು ಭಾಗಶಃ ಅವಧಿ ಕೆಲಸವೆಂದು ಕರೆಯಲಾಗುತ್ತಿದೆ (Part time ıd Full time). ಆ ತಿಂಗಳುಗಳಲ್ಲಿ ಮುಂಜಾನೆ 7ರಿಂದ 1 ಗಂಟೆಯವರೆಗೆ ಪೂರ್ಣ ಅವಧಿಯಾಗಿ, ಮಧ್ಯಾಹ್ನ 2 ರಿಂದ ಸಂಜೆ 6ರ ವರೆಗೆ ಭಾಗಶಃ ಅವಧಿ ಕೆಲಸವೆಂದು ಪರಿಗಣಿಸಲಾಗುತ್ತದೆ. ಪೂರ್ಣ ಅವಧಿ ಮತ್ತು ಭಾಗಶಃ ಅವಧಿಯಲ್ಲಿ ಮಾಡುವ ಕೆಲಸಕ್ಕೆ ಬೇರೆ ಬೇರೆಯಾಗಿ ಕೂಲಿಯನ್ನು ಕೊಡಲಾಗುತ್ತದೆ.

ಕೃಷಿ ಬಾಲಕಾರ್ಮಿಕರ ಕಾರಣಗಳು

ಕುಟುಂಬದಲ್ಲಿ ಪ್ರೌಢ ಕಾರ್ಮಿಕರ ಆದಾಯ ಕಡಿಮೆಯಾಗಿ, ಉಪಜೀವನದ ನಿರ್ವಹಣೆ ಕಷ್ಟಕರವಾದಾಗ, ಕುಟುಂಬದಲ್ಲಿನ ಬಾಲಕ-ಬಾಲಕಿಯರು ಅನಿವಾರ್ಯವಾಗಿ ಕಾರ್ಮಿಕರಾಗಬೇಕಾಗುತ್ತದೆ. ಕೃಷಿಯಲ್ಲಿ ಬಾಲ ಕಾರ್ಮಿಕರ ಹಲವಾರು ಕಾರಣಗಳನ್ನು ಈ ಸಂಶೋಧನಾ ಅಧ್ಯಾಯವು ಗುರುತಿಸಿದೆ.

೧. ಸರಳವಾಗಿ ಉದ್ಯೋಗ ದೊರೆಯುವುದು

ಕೈಗಾರಿಕೆಗಳಲ್ಲಿಯಂತೆ ಕೃಷಿಯಲ್ಲಿ ಉದ್ಯೋಗಕ್ಕಾಗಿ ಯಾವುದೇ ವಿದ್ಯಾರ್ಹತೆ ಕೌಶಲ್ಯ ಮತ್ತು ಸಂಬಂಧಿಸಿದ ತರಬೇತಿಯ ಅವಶ್ಯಕತೆ ಇರುವುದಿಲ್ಲ. ಯಾರಿಗೂ ಲಂಚ ಕೊಡಬೇಕಾಗಿಲ್ಲ, ಮತ್ತು ಉದ್ಯೋಗ ಪಡೆದುಕೊಳ್ಳಲು ಕಷ್ಟಪಡುವ ಅವಶ್ಯಕತೆ ಇರುವುದಿಲ್ಲ ಕೃಷಿಯಲ್ಲಿ ನಮಗಾಗಿ ಉದ್ಯೋಗ ಸದಾಕಾಯುತ್ತಿರುತ್ತದೆ ಎಂದು ಬಾಲಕ - ಬಾಲಕಿಯರು ಅಭಿಪ್ರಾಯ ಪಟ್ಟಿದ್ದಾರೆ. ಪ್ರತಿಶತ 85.29ರಷ್ಟು ಬಾಲಕ - ಬಾಲಕಿಯರು ಇದೇ ಕಾರಣದಿಂದಾಗಿ ಕೃಷಿಯಲ್ಲಿ ಕಾರ್ಮಿಕರಾಗಿದ್ದಾರೆ ಎಂಬುದು ಪಾಲಕ-ಪೋಷಕರ ಅಭಿಪ್ರಾಯವಾಗಿದೆ.

೨. ಶಾಲೆಗೆ ಹೋಗುವಲ್ಲಿ ಆಸಕ್ತಿ ಇಲ್ಲದಿರುವುದು

ಹಳ್ಳಿಗಳಲ್ಲಿ ಹೆಚ್ಚು ಅನಕ್ಷರಸ್ಥರು ಇರುವುದರಿಂದ ಮಕ್ಕಳಿಗೆ ಸರಿಯಾದ ಮಾರ್ಗದರ್ಶನದ ಕೊರತೆಯಿರುತ್ತದೆ. ಇದರಿಂದಾಗಿ ಮಕ್ಕಳು ಶಾಲೆಗೆ ಹೋಗುವುದರಲ್ಲಿ ಆಸಕ್ತಿ ತೋರುವುದಿಲ್ಲಾ, ಕಾರಣ ಅವರು ಉಂಡುಟ್ಟು ಉಡಾಳರಾಗಿ ದಾರಿ ಬಿಡುತ್ತಾರೆ ಎಂಬುದು ಪಾಲಕರ ಅನಿಸಿಕೆಯಾಗಿರುತ್ತದೆ. ಆಗ ಅನಿವಾರ್ಯವಾಗಿ ಪಾಲಕರೇ ತಮ್ಮ ಮಕ್ಕಳನ್ನು ಜಮೀನ್ದಾರರ ಹೋಲದಲ್ಲಿ ಕಾರ್ಮಿಕರನ್ನಾಗಿ ಸುತ್ತಾರೆ. ಪ್ರತಿಶತ 91.25ರಷ್ಟು ಮಕ್ಕಳು ಇದೇ ಕಾರಣದಿಂದಲೇ ಕೃಷಿಯಲ್ಲಿ ಕಾರ್ಮಿಕರಾಗಿರುವುದು ಈ ಸಂಶೋಧನಾ ಅಧ್ಯಯನದಿಂದ ತಿಳಿದುಬಂದಿದೆ.

೩. ಬಡತನ

ಭಾರತದಲ್ಲಿ ಪ್ರತಿಶತ 25 ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಡೆ ವಾಸಿಸುತ್ತಿವೆ. ಇಂತಹ ಕುಟುಂಬಗಳಲ್ಲಿ ಹುಟ್ಟಿದ ಮಕ್ಕಳಿಗೆ ಕನಿಷ್ಠ ಅವಶ್ಯಕತೆಗಳು ಕೂಡಾ ಸಿಗುತ್ತಿಲ್ಲಾ, ಕುಟುಂಬಗಳ ನಿರ್ವಹಣೆ ಕಠಿಣ ಪರಿಸ್ಥಿತಿಯಲ್ಲಿದ್ದಾಗ ಮಕ್ಕಳ ಪಾತ್ರ ಅನಿವಾರ್ಯವಾಗುತ್ತದೆ. ಆಗ ಮಕ್ಕಳು ಜಮಿನ್ದಾರರನ್ನು ಅವಲಂಬಿಸಬೇಕಾಗಿ ಅವರ ಹೋಲ - ಗದ್ದೆಗಳಲ್ಲಿ ಕಾರ್ಮಿಕರಾಗಬೇಕಾಗುತ್ತದೆ. ಪ್ರತಿಶತ 98.55 ರಷ್ಟು ಮಕ್ಕಳು ಕೃಷಿಯಲ್ಲಿ ಕಾರ್ಮಿಕರಾಗಿರುವುದು ಇದೇ ಕಾರಣದಿಂದಲೇ ಎಂದು ಈ ಸಂಶೋಧನಾ ಅಧ್ಯಾಯನದಿಂದ ತಿಳಿದು ಬಂದಿರುತ್ತದೆ.

ಕೋಷ್ಟಕ - ೪

ಬಾಲಕಾರ್ಮಿಕರ ಕೆಲಸದ ಸರಾಸರಿ ದಿನಗಳು

(ಒಂದು ವರ್ಷದಲ್ಲಿ)

ಕ್ರ.ಸಂ.	ಬಾಲಕಾರ್ಮಿಕರು	ನೀರಾವರಿ ಪ್ರದೇಶ	ನೀರಾವರಿಯೇತರ ಪ್ರದೇಶ
1.	ಬಾಲಕರು	255	190
2.	ಬಾಲಕಿಯರು	280	200

ಮೂಲ : ಕ್ಷೇತ್ರಾಧ್ಯಯನ

> **ಇಂದಿನ ಮಕ್ಕಳೆ ಮುಂದಿನ ನಾಗರಿಕರು ಎಂಬ ಮಾತನ್ನೇ ಹುಸಿಗೊಳಿಸಿದ ಭಾರತದಲ್ಲಿ ಶೇ.೬೫ ರಷ್ಟು ಮಕ್ಕಳು ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ೧೯೯೧ ರ ಜನಗಣತಿ ಪ್ರಕಾರ ಶೇ.೩೯.೬೦ ರಷ್ಟು ಬಾಲಕರು ಮತ್ತು ಶೇ.೫೧.೯೦ ರಷ್ಟು ಬಾಲಕಿಯರು ಕೃಷಿ ಕಾರ್ಮಿಕರಾಗಿದ್ದಾರೆ. ಇದು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ.**

೪. ಋಣಭಾರತ್ವ

ತಾತಾ ಮಾಡಿದ ಸಾಲ ಮೊಮ್ಮಕ್ಕಳ ಮೇಲೆ ಎಂಬಂತೆ, ಕುಟುಂಬದ ನಿರ್ವಹಣೆಗಾಗಿ ಜಮೀನ್ದಾರರಲ್ಲಿ ಸಾಲದ ರೂಪವಾಗಿ ಹಣ ತೆಗೆದುಕೊಂಡಿರುತ್ತಾರೆ. ಜಮೀನ್ದಾ ರರು ಸಾಲಕ್ಕೆ ಬಡ್ಡಿ, ಬಡ್ಡಿಗೆ + ಬಡ್ಡಿ ಸೇರಿಸಿ ಅಸಲಿನ ಎರಡು ಮೂರರಷ್ಟು ಪಟ್ಟು ಹೆಚ್ಚಿಗೆ ಮಾಡಿರುತ್ತಾರೆ, ಆಗ ತಂದ ಸಾಲ ತೀರಿಸದೆ ಇದ್ದಾಗ, ಸ್ವತಃ ತಂದೆ-ತಾಯಿಯಂದಿರೇ ಅನಿವಾರ್ಯವಾಗಿ ಮಕ್ಕಳನ್ನು ಅವರ ಹೊಲ ಗದ್ದೆ ಗಳಲ್ಲಿ ಕೆಲಸಕ್ಕೆ ಕಳುಹಿಸುತ್ತಾರೆ. ಈ ಅಧ್ಯಾಯನದ ಪ್ರಕಾರ ಪ್ರತಿಶತ 5.89 ರಷ್ಟು ಮಕ್ಕಳು ಇದೇ ಕಾರಣದಿಂದ ಕೃಷಿಯಲ್ಲಿ ಕಾರ್ಮಿಕರಾಗಿ ದುಡಿಯು ತ್ತಿದ್ದಾರೆ.

ಫಲಿತಾಂಶಗಳು

ಇಂದಿನ ಮಕ್ಕಳೆ ಮುಂದಿನ ನಾಗರಿಕರು ಎಂಬ ಮಾತನ್ನೇ ಹುಸಿಗೊಳಿಸಿದ ಭಾರತದಲ್ಲಿ ಶೇ.65 ರಷ್ಟು ಮಕ್ಕಳು ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. 1991 ರ ಜನಗಣತಿ ಪ್ರಕಾರ ಶೇ.39.60 ರಷ್ಟು ಬಾಲಕರು ಮತ್ತು ಶೇ.51.90 ರಷ್ಟು ಬಾಲಕಿಯರು ಕೃಷಿ ಕಾರ್ಮಿಕರಾಗಿದ್ದಾರೆ. ಇದು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. ಈ ಸಂಶೋಧನಾ ಅಧ್ಯಾಯನದಿಂದ ಕೃಷಿಯಲ್ಲಿ ಬಾಲ ಕಾರ್ಮಿಕರ ಬಗೆಗಿನ ಕೆಲವು ಫಲಿತಾಂಶಗಳು ಈ ಕೆಳಗಿನಂತಿವೆ.

೧. ನೀರಾವರಿ ಮತ್ತು ನೀರಾವರಿಯೇತರ ಪ್ರದೇಶದ ಕೆಲಸದ ಸ್ವರೂಪದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲಾ, ಆದರೆ ನೀರಾವರಿ ಪ್ರದೇಶದಲ್ಲಿ ವರ್ಷಪೂರ್ತಿ ಕೆಲಸ ದೊರೆತರೆ, ನೀರಾವರಿಯೇತರ ಪ್ರದೇಶದಲ್ಲಿ 6 ರಿಂದ 7 ತಿಂಗಳುಗಳವರೆಗೆ ಮಾತ್ರ ಕೆಲಸ ದೊರೆಯುತ್ತದೆ.

೨. ಕೂಲಿ ನಿರ್ಧಾರದಲ್ಲಿ ಬಾಲಕ ಮತ್ತು ಬಾಲಕಿಯರ ಮಧ್ಯ ವ್ಯತ್ಯಾಸವಿರುತ್ತದೆ. ಬಾಲಕರಿಗೆ ಬಾಲಕಿಯರಿಗಿಂತ ಹೆಚ್ಚುಕೂಲಿ ದೊರೆಯುತ್ತದೆ.

೩. ವರ್ಷದ ಸರಾಸರಿ ಕೆಲಸದ ದಿನಗಳಲ್ಲಿಯು ವ್ಯತ್ಯಾಸ ಕಂಡು ಬರುತ್ತದೆ. ನೀರಾವರಿ ಪ್ರದೇಶದಲ್ಲಿ ಬಾಲಕಿಯರು (280) ಬಾಲಕರಿಗಿಂತ (255) ಹೆಚ್ಚು ದಿನ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ನೀರಾವರಿಯೇತರ ಪ್ರದೇಶ ದಲ್ಲಿಯೂ ಕೂಡಾ ಬಾಲಕಿಯರು (200) ಬಾಲಕರಿಗಿಂತ (190) ಹೆಚ್ಚುದಿನ ಕೆಲಸದಲ್ಲಿ ಭಾಗಿಯಾಗುತ್ತಾರೆ.

೪. ದಿನದ ಕೆಲಸದ ಅವಧಿಯಲ್ಲಿ ಬಾಲಕ ಬಾಲಕಿಯರ ಮಧ್ಯೆ ಯಾವುದೇ ವ್ಯತ್ಯಾಸವಿರುವುದಿಲ್ಲ.

೫. ಗ್ರಾಮೀಣ ಪ್ರದೇಶದಲ್ಲಿ ಬಡತನವೆಂಬ ಕಾರಣದಿಂದ ಬಾಲಕ - ಬಾಲಕಿಯರು ಕೃಷಿಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಮಕ್ಕಳ ಬಗ್ಗೆ ಕಾಳಜಿಯಿರುವ ಸಂಘ - ಸಂಸ್ಥೆಗಳು ಬಾಲ ಕಾರ್ಮಿಕರ ಸಮಸ್ಯೆಯ ನಿವಾರಣೆಗಾಗಿ ಶಿಕ್ಷಣದ ಸಾರ್ವತ್ರಿಕರಣ ಕಡ್ಡಾಯ ಮತ್ತು ಉಚಿತ ಶಿಕ್ಷಣ ಇಟ್ಟುಕೊಂಡು 1955ನೇ ವರ್ಷವನ್ನು ಬಾಲ್ಯವನ್ನು ರೂಪಿಸಿದ ವರ್ಷವನ್ನಾಗಿ ಆಚರಿಸಲಾಗಿದೆ. ಅದರೆ ಇತ್ತೀಚಿನ ಜನಗಣತಿಗಳನ್ನು ವೀಕ್ಷಿಸಿದಾಗ ಬಾಲ ಕಾರ್ಮಿಕರ .ಸಂಖ್ಯೆ ಹೆಚ್ಚುತ್ತಾ ಹೋಗುತ್ತಿರುವುದು ಕಟ್ಟೆನಿಸುವ ಸಂಗತಿಯಾಗಿದೆ.

ಬಾಲ ಕಾರ್ಮಿಕ ಸಮಸ್ಯೆಯನ್ನು ಹೋಗಲಾಡಿಸುವದಕ್ಕಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಂಡು ವಿಫಲವಾಗಿದೆ. ಚಿಣ್ಣರ ಅಂಗಳದಲ್ಲಿ ಬಾ ಮರಳಿ ಶಾಲೆಗೆ ಕಾರ್ಯಕ್ರಮ, ಮಧ್ಯಾಹ್ನ ಊಟದ ವ್ಯವಸ್ಥೆ, ಹಾಲು ಕೊಡುವ ವ್ಯವಸ್ಥೆ, ಪಡಿತರ ಕೇಂದ್ರದಿಂದ ಉಚಿತ ಧಾನ್ಯಗಳ ವಿತರಣೆ, ಉಚಿತ ಪಠ್ಯ - ಪುಸ್ತಕ ವಿತರಣೆ, ಉಚಿತ ವಸ್ತ್ರ ವಿತರಣೆ ಇನ್ನಿತರ ಕಾರ್ಯಕ್ರಮಗಳು ಮಧ್ಯವರ್ತಿಗಳ ಹಸ್ತಕ್ಷೇಪದಿಂದಾಗಿ ಯಶಸ್ವಿಯಾಗಿಲ್ಲ, ಮತ್ತು ಹಾಕಿಕೊಂಡ ಕಾರ್ಯಕ್ರಮಗಳ ಬಗ್ಗೆ ಸರ್ಕಾರ ಸರಿಯಾದ ಕಾಳಜಿ ವಹಿಸುವುದಿಲ್ಲ ಎಂಬುದು ಪೋಷಕರ ಕೂಗಾಗಿದೆ.

ಎಲ್ಲಿಯವರೆಗೆ ಸರ್ಕಾರ ಕಾಳಜಿ ವಹಿಸುವುದಿಲ್ಲವೋ ಮತ್ತು ಮಧ್ಯವರ್ತಿಗಳ ಕಾಟ ತಪ್ಪುವುದಿಲ್ಲವೋ ಅಲ್ಲಿಯವರೆಗೆ ಹಾಕಿಕೊಂಡ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಶಸ್ವಿಯಾಗುವುದಿಲ್ಲ ಎಂಬುದು ಮತ್ತೊಂದು ವರ್ಗದ ಕೂಗಾಗಿದೆ.

೧. ಪಾಲಕ - ಪೋಷಕರಿಗೆ ಕನಿಷ್ಠ ಕೂಲಿ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಯಲ್ಲಿ ತರಬೇಕು.

೨. ಪಾಲಕ - ಪೋಷಕರಿಗೆ ಸರಿಯಾದ ಕೆಲಸಕ್ಕೆ ಸರಿಯಾದ ಕೂಲಿ ನಿಗದಿಯಾಗಬೇಕು.

೩. ಕೂಲಿ ನಿರ್ಧಾರದ ಹಕ್ಕು ಕಾರ್ಮಿಕರಿಗೆ ಇರಬೇಕು.

೪. ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ಅವಶ್ಯಕತೆಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ರೂಪಿಸಬೇಕು.

೫. ಗ್ರಾಮೀಣ ಪ್ರದೇಶಗಳಲ್ಲಿ ವರ್ಷಪೂರ್ತಿ ಉದ್ಯೋಗ ನೀಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

೬. ಬಡತನ ರೇಖೆಯ ಕೆಳಗಿರುವವರಿಗೆ ಪಡಿತರ ಕೇಂದ್ರದಿಂದ ಉಚಿತ ದಾನ್ಯಗಳನ್ನು ವಿತರಿಸಬೇಕು.

೭. ಸರ್ಕಾರಿ ಮತ್ತು ಸರ್ಕಾರಿಯೇತರ ಬ್ಯಾಂಕುಗಳಲ್ಲಿದ್ದ ಬಡವರ ಸಾಲವನ್ನು ಮನ್ನಾ ಮಾಡಬೇಕು.

೮. ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಈಡೇರಿಸುವಂತಾಗಬೇಕು.

ಈ ಮೇಲಿನ ಅಂಶಗಳನ್ನು ಅಳವಡಿಸಿಕೊಂಡಾಗ ಕೃಷಿಯಲ್ಲಿ ಬಾಲಕಾರ್ಮಿಕರಾಗುವುದನ್ನು ತಡೆಗಟ್ಟುವುದಲ್ಲದೆ ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸುವಲ್ಲಿ ಯಶಸ್ವಿಯಾಗ ಬಹುದೆಂದು ಈ ಸಂಶೋಧನಾ ಅಧ್ಯಯನದಿಂದ ತಿಳಿದು ಬಂದಿದೆ.

ಉಪಸಂಹಾರ

ನಮ್ಮ ದೇಶದಲ್ಲಿ ಮಕ್ಕಳನ್ನು ದುಡಿಸುವುದರಿಂದ ಅವರ ಹಕ್ಕುಗಳಿಂದ ಅವರನ್ನು ವಂಚಿತರನ್ನಾಗಿಸುತ್ತಿದ್ದೇವೆ. ಮಕ್ಕಳ ಮನಸ್ಸು ಹಾಗೂ ದೇಹ ಬಿಳಿ ಹಾಳೆ ಇದ್ದಂತೆ, ಅದರ ಮೇಲೆ ನಾವು ಏನು ಬರೆಯುತ್ತೇವೆಯೋ ಅದೇ ದೊಡ್ಡದಾಗಿ ಬೆಳೆಯುತ್ತದೆ ಎಂದೂ ಗೊತ್ತಿದೆ, ಅದರೂ ಮಕ್ಕಳನ್ನು ನಾವು ಯಾವ ದಾರಿಯಲ್ಲಿ ಕರೆದೊಯ್ಯಬೇಕೆಂಬುದರ ಬಗ್ಗೆ ಗುರಿ, ಉದ್ದೇಶ, ಇಲ್ಲದೇ ನಮ್ಮ ಮಕ್ಕಳನ್ನು ನಾವೇ ದಾರಿ ತಪ್ಪಿಸುತ್ತಿದ್ದೇವೆ ಎಂಬುದನ್ನು ಪ್ರತಿಯೊಬ್ಬರೂ ಯೋಚಿಸ ಬೇಕಾಗಿದೆ. □

ಸಂವಾದ

ಉಪಸಂಪಾದಕರು, ಸಹಾಯಕರು, ಡಿ.ಟಿ.ಪಿ. ಆಪರೇಟರ್‌ಗಳು ಬೇಕಾಗಿದ್ದಾರೆ.

'ಸಂವಾದ' ಪ್ರಕಾಶನ ಮತ್ತು ಮಾಸಪತ್ರಿಕೆಯಲ್ಲಿ ಕೆಲಸ ಮಾಡಲು ಪೂರ್ಣಾವಧಿ ಉಪಸಂಪಾದಕರು ಹಾಗೂ ಸಹಾಯಕರು ಹಾಗೂ ಡಿ.ಟಿ.ಪಿ. ಆಪರೇಟರ್‌ಗಳು ಬೇಕಾಗಿದ್ದಾರೆ. ಕರಡು ತಿದ್ದುವುದು, ಲೇಖಕರನ್ನು ಭೇಟಿ ಮಾಡುವುದು, ಪ್ರಸಾರ ಮತ್ತು ಮುದ್ರಣ ಕೆಲಸಗಳನ್ನು ನಿರ್ವಹಿಸುವುದು ಇವೇ ಮೊದಲಾದ ಕೆಲಸಗಳನ್ನು ಉಪಸಂಪಾದಕರು, ಸಹಾಯಕರು ಮಾಡಬೇಕಾಗುತ್ತದೆ. ಆಯ್ಕೆಯಾದವರಿಗೆ ಆಕರ್ಷಕ ವೇತನ ನೀಡಲಾಗುವುದು. ಶೈಕ್ಷಣಿಕ ಅರ್ಹತೆ ಮುಖ್ಯವಲ್ಲ. ಕನ್ನಡ ಭಾಷೆ ಮತ್ತು ಬರವಣಿಗೆಯಲ್ಲಿ ಪ್ರಭುತ್ವ ಇರುವವರಿಗೆ ಆದ್ಯತೆ ನೀಡಲಾಗುವುದು.

ಡಿ.ಟಿ.ಪಿ. ಆಪರೇಟರ್‌ಗಳಿಗೆ ಪೇಜ್‌ಮೇಕರ್, ಕೋರಲ್ ಡ್ರಾ, ಫೋಟೋ ಷಾಪ್ ತಿಳುವಳಿಕೆ ಅಗತ್ಯ. ಉಪಸಂಪಾದಕರು ಹಾಗೂ ಸಹಾಯಕರ ಆಯ್ಕೆಯಲ್ಲಿ ಡಿ.ಟಿ.ಪಿ. ತಿಳಿದವರಿಗೆ ಆದ್ಯತೆ ನೀಡಲಾಗುವುದು. ಆಸಕ್ತಕರು ಕೂಡಲೇ ಸಂಪಾದಕರನ್ನು ಕೆಳಕಂಡ ವಿಳಾಸದಲ್ಲಿ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಬಹುದು

ಇಂದೂಧರ ಹೊನ್ನಾಪುರ, ನಂ. ೪೦೨, ೧ನೇ ಮುಖ್ಯರಸ್ತೆ ೨ನೇಬ್ಲಾಕ್,
ಹೆಚ್.ಬಿ.ಆರ್ ಬಡಾವಣೆ, ಬೃಂದಾವನ ನಗರ, ಬೆಂಗಳೂರು-೫೬೦ ೦೪೩.
ದೂರವಾಣಿ: ೦೮೦-೨೫೪೪೮೦೫೦೬, ಮೊಬೈಲ್: ೯೪೪೮೦೪೮೩೦೬

ಹತ್ತರ ನೋಟುಗಳು

ಮುಷ್ಟಿ ಬಿಡಿಸಿ ಮತ್ತೆ ಮತ್ತೆ ನೋಡುತ್ತೇನೆ
ಅವೇ ಹತ್ತರ ಎರಡು ನೋಟುಗಳ
ಹಿಂದೆ ಮುಂದೆ ಮೇಲೆ ಕೆಳಗೆ
ಹೇಗೆ ನೋಡಿದರೂ ಅಂತರವಿಲ್ಲ ಬೆಲೆಯಲ್ಲಿ

ಗರಿಗರಿಯಾದ ನೋಟುಗಳಲ್ಲ
ಬೆವರಿಂದ ತೊಯ್ದು ಮುದ್ದೆಯಾದ ಹತ್ತಾರು ಕೈದಾಟಿ
ರೂಪ ಕಳಕೊಂಡ
ಅವೇ ಹತ್ತರ ಎರಡು ನೋಟುಗಳು !
ಮಗಳ ಕಣ್ಣಲ್ಲಿ ಎರಡು ಐಸ್‌ಕ್ರೀಂನ ನೋಟುಗಳು
ಈತನಿಗೋ ದಿನದಲಿ ಉರಿಸಿ ಮುಗಿಸುವ
ಸಿಗರೇಟಿನ ಅರೆಪ್ಯಾಕಿನ ನೋಟುಗಳು
ತಿಂಗಳಲಿ ಹಲ ಸಾವಿರವ ಎಣಿಸುವ
ಈ ಕೈಗಳಿಗೆ ಮಾವನಿತ್ತ ಆಯಾರ
ಹತ್ತರ ಈ ಎರಡು ನೋಟುಗಳು !

ಎಲ್ಲರನು ಒಪ್ಪಿಸಿದಂತಲ್ಲ
ಈ ಮಾವನ ಗತ್ತು ಗೈರತ್ತೇ ಬೇರೆ
ಕೊಟ್ಟಾರು ಜೀವಕ್ಕೆ ಜೀವ
ಹಾದಿ ಬದಲಾದರೆ
ಕತ್ತಿ ಕೋಲು ಸಿಕ್ಕಿದ್ದ ಹಿಡಿದು ಹಿರಿದು
ಬಂದೇ ಬಿಟ್ಟಾರು ಎಂದಿದ್ದು
ಎಲ್ಲ ಎಲ್ಲ ಈ ಮಾವನ ಕುರಿತೇ.

ಕಲ್ಲಿಮೀಸೆ ಭೀಮಾಕಾಯ ಕಂಚಿನ ಕಂಠದ
ಬದಲು ಕಂಡದ್ದು ಕುರುಚಲು ಗಡ್ಡ
ಮೊಗತುಂಬಾ ನಗೆಮಲ್ಲಿಗೆ ದಡ್ಡುಗಟ್ಟಿದ ಅಂಗೈ
ಮಿಲುಗುಟ್ಟುವ ಎದೆಯ ಈ ಮಾವ
ಕ್ಷಣದಲಿ ಅಚಲವಾಗಿ ಅಚ್ಚೊತ್ತಿದ್ದ.

ಯಾರಿಗೆ ಯಾರು ಮಾಡಬೇಕು ಆಯಾರ?
ತರ್ಕ ವ್ಯಾಕರಣ ಎಲ್ಲ ತಲೆಕೆಳಗು
ಹೃದಯ ಭಾಷೆಯೇ ಎಲ್ಲಕು ಮಿಗಿಲು
ತೋಳ ಮಡಿಕೆಯಿಂದೆತ್ತಿ ಕೊಟ್ಟ ಈ ನೋಟು
ಆತನ ದಿನಗೂಲಿ, ಅಂದಿನ ಉಳಿತಾಯ
ನಾಳಿನ ಆಪತ್ತಿಗೆಂದಿಟ್ಟ ನಿಧಿ ಏನೇನಾಗಿತ್ತೊ?
ರೆಪ್ಪೆ ಬಡಿಯುವಷ್ಟರಲ್ಲಿ ಸೇರಿತ್ತು ನನ್ನ ಕೈ.

ವ್ಯವಹಾರದ ಬೆಲೆ ಒಂದೇ
ಹತ್ತರ ಈ ನೋಟುಗಳಿಗೆ
ಈ ನೋಟಿಗಂಟಿದ ಬೆವರಿಗೆ
ಅದಕಂಟಿದ ಅಂತಃಕರಣಕೆ
ಹತ್ತರ ಮುಂದೆಷ್ಟು ಸೇರಿಸಲಿ ಸೊನ್ನೆಗಳ?
ಬಾನು ತುಂಬೆಲ್ಲ ನಕ್ಷತ್ರ
ಲೆಕ್ಕವಿಟ್ಟವರಾರು
ಮತ್ತೆ ಮತ್ತೆ ನೋಡುತ್ತೇನೆ
ಹತ್ತರ ಎರಡು ನೋಟುಗಳ

ಸಬಿಹಾ ಭೂಮಿಗೌಡ

ನೈಸರ್ಗಿಕ ಕೃಷಿ

ಈ ಜಗತ್ತು ಜೀವ ತಳೆದು ಇಷ್ಟು ಸಾವಿರ ವರ್ಷಗಳಾದವು. ಈ ಭೂಮಿಯ ಮೇಲೆ ವ್ಯವಸಾಯ ಶುರುವಾಗಿ ಹತ್ತು ಸಾವಿರ ವರ್ಷಗಳಾದವು. ಬೇಸಾಯದಲ್ಲಿ ಸಗಣಿ ಬಳಕೆಗೆ ಬಂದು ಐದೂವರೆ ಸಾವಿರ ವರ್ಷಗಳಾದವು. ಈ ಭೂಮಿಯ ಮೇಲೆ ಬೇಸಾಯ ಕಲೆ ಎಂಬುದು ಹತ್ತು ಸಾವಿರ ವರ್ಷಗಳಿಂದ ಬಾಳಿ, ಬದುಕಿ, ಬೆಳೆದು ಬಂದಿದೆ. ಜೊತೆಗೆ ಕಳೆದ ಈ ಐವತ್ತು ವರ್ಷಗಳಲ್ಲಿ ಅದು ಕೆಡಬಾರದಷ್ಟು ಕೆಟ್ಟಿದೆ. ಈ ಕಾರಣಕ್ಕೆ ಇಡೀ ಜಗತ್ತು ಮರಣೋನ್ಮುಖಿ ಯಾಗಿದೆ. ಇಂಥ ಮರಣೋನ್ಮುಖಿಯಾದ ಜಗತ್ತನ್ನು ಸುಭಾಷ್ ಪಾಳೇಕರರ ನೈಸರ್ಗಿಕ ಕೃಷಿ ವಿಜ್ಞಾನ ಜೀವೋನ್ಮುಖಿಯಾಗಿಸಲು ಹೊರಟು ನಿಂತಿದೆ.

❍ ಸ್ವಾಮಿ ಆನಂದ್.ಆರ್

(ಕಳೆದ ಸಂಚಿಕೆಯಿಂದ)

ನಮ್ಮ ಸಾಂಪ್ರದಾಯಿಕ ಕೃಷಿಜ್ಞಾನವನ್ನನುಸರಿಸಿ ಬೇಸಾಯ ಮಾಡುತ್ತಿರುವ ರೈತರಲ್ಲಿ ಹೆಚ್ಚಿನ ಗೊಂದಲಗಳಿಲ್ಲ. ಅವರು ಬೆಳೆ ಬೆಳೆಯುವ ಟೆಕ್ನಾಲಜಿಗಾಗಿ ಕೃಷಿ ವಿಶ್ವವಿದ್ಯಾನಿಲಯ, ಗೊಬ್ಬರ, ಬೀಜ, ಕಳೆನಾಶಕ ಹಾಗೂ ರಾಸಾಯನಿಕ ಕಂಪನಿಗಳನ್ನು ಅವಲಂಭಿಸಲೇ ಬೇಕಾದಂಥ ಅನಿವಾರ್ಯಗಳ ಬೆಲೆಗಳಲ್ಲಿ ಸಿಲುಕಿ ಕೊಂಡಿಲ್ಲ. ಅವರದೇ ಭೂಮಿ, ಅವರೇ ಕಾಪಾಡಿಕೊಂಡು ಬಂದ ಬೀಜ, ಅವರದೇ ಬಿತ್ತನೆಯಕ್ರಮ, ಬೆಳೆಯ ಪದ್ದತಿ ಎಲ್ಲವೂ ಅವರದ್ದೆ. ಅವರಿಗವರೇ ಅಲ್ಲಿ ಸಾರ್ವಭೌಮರು. ಪರಂಪರಾನುಗತವಾಗಿ ಬಂದ ಕೃಷಿಜ್ಞಾನ ಅವರಲ್ಲಿ ಸಹಜ ಸಿದ್ಧಿ.

ಆದರೆ ಆಧುನಿಕ ಕೃಷಿ ಹೆಸರಲ್ಲಿ ಹೈಬ್ರೀಡ್ ತಳಿಗಳ ದಾಸ್ಯಕ್ಕೆ ಬಿದ್ದ ರೈತರ ಗೋಳು ಹೇಳತೀರದರು. ಇಂದು ದಿನಕ್ಕೆ ನೂರಾರು, ಸಾವಿರಾರು ಬಗೆಯ ಹೈಬ್ರೀಡ್ ಬಿತ್ತನೆ ಬೀಜಗಳು, ತಳಿಗಳು ಕೃಷಿವಲಯ ಪ್ರವೇಶಿಸುತ್ತಿವೆ. ಅವುಗಳನ್ನವಲಂಭಿಸಿ ಫರ್ಟಿಲೈಜ಼ರ್ಸ್, ಕೆಮಿಕಲ್‌ಗಳೂ ಕೂಡ. ಹಾಗೆಯೇ ಸಾವಿರಾರು ರೀತಿಯ ಬೇಸಾಯದ ಮಾದರಿಗಳು ! ಯಾವುದೇ ಹೊಸ ಹೈಬ್ರೀಡ್ ಬೀಜ ಬಿತ್ತುವಾಗಲೂ ಪ್ರತಿ ವಿಷಯವನ್ನು ರೈತ ಹೊಸದಾಗಿಯೇ ಕಲಿಯಬೇಕು, ತಿಳಿಯಬೇಕು, ಅನುಸರಿಸಬೇಕು. ಹೀಗಾಗಿ ಒಂದೊಂದು ಬೆಳೆ ಬೆಳೆಯುವಾಗಲೂ ಒಂದೊಂದು ಪಿ.ಹೆಚ್.ಡಿ. ಗಾಗುವಷ್ಟು ನಾಲೆಡ್ಜ್ ಅನ್ನು ರೈತ ರೂಢಿಸಿಕೊಳ್ಳಬೇಕು. ಇಷ್ಟೆಲ್ಲಾ ಆಗಿ ಅಧಿಕ ಇಳುವರಿ ಬಂದಿತೆನ್ನಿ ! ಆ ಅಧಿಕ ಇಳುವರಿಯ ಶ್ರೇಯಸ್ಸು, ಪ್ರಶಸ್ತಿ ರೈತನಿಗೆ ಸಲ್ಲುವುದಿಲ್ಲ. ನಮ್ಮ ಕೃಷಿ ಇಲಾಖೆ ಆ ಅಧಿಕ ಇಳುವರಿಯ ಕೀರ್ತಿ ಮತ್ತು ಪ್ರಶಸ್ತಿಗಳೆರಡನ್ನು ಗೊಬ್ಬರದ ಕಂಪನಿ, ಬೀಜದ ಕಂಪನಿ, ಕಳೆ ಹಾಗೂ ಕೀಟನಾಶಕದ ಕಂಪನಿಗಳಿಗೆ ಸಮನನಾಗಿ ಹಂಚಿ ಬಿಡುತ್ತದೆ. ಇದು ಯಶಸ್ಸಿನ ಮಾತಾಯಿತು. ಆದರೆ. ವಿಫಲತೆಯ ಕಿರೀಟ ಯಾರ ತಲೆಗೆ ? ಅದು ಯಾವೊತ್ತಿಗೂ, ಎಂದೆಂದಿಗೂ ರೈತನಿಗೆ, ಮೀಸಲು.

ಹಸಿರು ಕ್ರಾಂತಿಯ ಪರಿಣಮವಾಗಿ ವಿಷವಿಕ್ಕಿ ಬೆಳೆಯುವ ಸಂಕಟ ತಳಿ ಬೇಸಾಯಕ್ಕೆ ಸುಧಾರಿತ ಬೇಸಾಯ ಪದ್ಧತಿ ಅನ್ನುತ್ತವೆ ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳು. ಈ ಸುಧಾರಿತ ಬೇಸಾಯದಲ್ಲಿ ಪ್ರತಿ ಬೆಳೆಗೂ ಒಂದೊಂದು ವಿಧಾನ ಅನುಸರಿಸಬೇಕು ಎಂಬುದನ್ನು ಈಗಾಗಲೇ ಹೇಳಿಯಾಗಿದೆ. ಈ ವಿಧಾನದಲ್ಲಿ ಪ್ರತೀ ಗಿಡಕ್ಕೂ - ಇಂತಿಷ್ಟು ದಿನಕ್ಕೆ ಇಂತಿಷ್ಟೆ ಸಮಯದಲ್ಲಿ, ಇಂತಿಷ್ಟೆ ಗೊಬ್ಬರ, ಔಷಧಿ, ಕಳೆನಾಶಕ, ಕೀಟನಾಶಕಗಳನ್ನು ಸಿಂಪಡಿಸಬೇಕು ಎಂಬ ಕಟ್ಟಳೆಗಳಿವೆ. ಬವಾನಿಸ್ DPA , ಪೊಟ್ಯಾಷ್, ಯೂರಿಯ, ಅಮೋನಿಯಂ ಸಲ್ಫೇಟ್, ಡಿ.ಎಂ.45, ವಿಕಲಾಕ್ಸ್, ವಿಪುಲ್, ಮೆಟಾಸಿಡ್, ಟ್ರೈಸಲ್, ಎಂಡೋಸಲ್ಫಾನ್, ಮಲ್ಟಿ ಪ್ಲಕ್, ಕೆಲಾಕ್ಸಿನ್, ರೋಗರ್, ಬೋರೇಕಾಲ್, ಸ್ಯಾಟರ್ರೈಟ್, ಸೆವಿನ್ ಇತ್ಯಾದಿಗಳ ದೊಡ್ಡ ಪಟ್ಟಿಯೇ ಇದೆ. ಇದನ್ನೆಲ್ಲ ರೈತ ಅರಗಿಸಿಕೊಳ್ಳಬೇಕು. ದುಬಾರಿ ಬೆಲೆತೆತ್ತು ಈ ಮಾರಣಾಂತಿಕ ವಿಷಗಳನ್ನೆಲ್ಲ ಕೊಂಡು ಬೆಳೆಗಳಿಗೆ ಸಿಂಪಡಿಸಬೇಕು. ಬೆಳೆ ಎಡವಟ್ಟಾದರೆ ಅದಕ್ಕೆ ರೈತನೇ ಹೊಣೆ. ಯಾವ ಕಂಪನಿಯೂ ರೈತನ ವಿಫಲತೆಗಳ ಜೊತೆ ನಿಲ್ಲುವುದಿಲ್ಲ. ಮಾರುಕಟ್ಟೆಯಲ್ಲಿ ಬೆಲೆ ಬಿದ್ದಾಗಲೂ ಅಷ್ಟೆ ಕಡೆಗೆ ದಾರಿ ಕಾಣದ ರೈತನ ಕೈಯಲ್ಲಿ ಉಳಿಯುವುದೊಂದೇ :ಎಂಡೋ ಸಲ್ಫಾನ್ ಬಾಟಲಿ.

ಸುಭಾಷ್ ಪಾಳೇಕರರ ನೈಸರ್ಗಿಕ ಕೃಷಿ ವಿಧಾನದಲ್ಲಿ ರೈತ ಕಂಗೆಡುವ, ಹತಾಶಗೊಳ್ಳುವ ಪರಿಸ್ಥಿತಿಯೇ ಉದ್ಭವವಾಗುವುದಿಲ್ಲ ಆಧುನಿಕ ಸಂಕರ ಪಳಿಯ ದಾಸ್ಯದಲ್ಲಿ, ವಿಷವರ್ತುಲದಲ್ಲಿ

ಶೂನ್ಯ ಬಂಡವಾಳ - ಸಮೃದ್ಧ ಬೆಳೆ 2

ಪಾಳೇಕರರ ಜೀವಾಮೃತ

ನರಳುತ್ತಿರುವ ಯಾವುದೇ ರೈತ ತ್ಷಕ್ಷಣವೇ ಈ ನೈಸರ್ಗಿಕ ಕೃಷಿಗೆ ಮರಳಬಹುದು. ಇಲ್ಲಿಯ ಜ್ಞಾನ ಬಚ್ಚಿಟ್ಟ ಜ್ಞಾನವಲ್ಲ, ತೆರೆದ ಪುಸ್ತಕ. ಅತ್ಯಂತ ಸರಳವಾಗಿರುವ ಇದನ್ನು ಯಾರು ಬೇಕಾದರೂ ಅರ್ಥ ಮಾಡಿಕೊಳ್ಳಬಹುದು, ಅನುಸರಿಸಬಹುದು. ಅನಗತ್ಯ ಗೊಂದಲ, ಗೋಜಲು, ರಗಳೆಗಳು ಇಲ್ಲಿ ಇಲ್ಲ.

ಬೀಜಾಮೃತ, ಜೀವಾಮೃತ ಕುರಿತಂತೆ ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ದೇಸಿ ಆಕಳ ಸಗಣಿಗಿರುವ ವೈಶಿಷ್ಟ್ಯ ಕೂಡ ಹೇಳಲಾಗಿದೆ. ಈಗ ನೇರವಾಗಿ ಬೆಳೆ ಬೆಳೆಯುವ ವಿಷಯಕ್ಕೆ ಬನ್ನಿ.

ಬಾಳೆ ಕೃಷಿ:

ಆಧುನಿಕ ಕೃಷಿ ಅನುಸರಿಸುವವರು ಒಂದು ಎಕರೆ ವಿಸ್ತೀರ್ಣದಲ್ಲಿ 6`X 6` ಅಳತೆಯಲ್ಲಿ 1200 ಕಂದುಗಳನ್ನು ನೆಡುತ್ತಾರೆ. ಪಾಳೇಕರ ವಿಧಾನ ಅನುಸರಿಸಿರುವ ಬನ್ನೂರು ಕೃಷ್ಣಪ್ಪ ಒಂದು ಎಕ್ರೆಗೆ ಎಂಟು ನೂರು ಕಂದುಗಳನ್ನು ಹಾಕಿದ್ದಾರೆ. 8`X 5` ಅಳತೆಯಲ್ಲಿ ನಮ್ಮ ಬಹುಪಾಲು ಬೆಳೆಗಳಿಗೆ ವರ್ಷದ ಎಲ್ಲಾ ಋತುಗಳಲ್ಲಿ ಬಿಸಿಲು ಬೇಕು ಭೂಮಿ ತನ್ನ ಕಕ್ಷೆಯ ಮೇಲೆ ರುಗುವುದರ ಜೊತೆಗೆ ಸೂರ್ಯನ ಸುತ್ತ ಸುತ್ತುತ್ತದೆ.

ಈ ಹಿನ್ನೆಲೆಯಲ್ಲಿ ಸೂರ್ಯ ಜೂನ್ 21ರಿಂದ ಡಿಸೆಂಬರ್ 20ರವರೆಗಿನ ಆರು ತಿಂಗಳು ದಕ್ಷಿಣಕ್ಕೆ (ದಕ್ಷಿಣಾಯ ಪಥ), ಡಿಸೆಂಬರ್ 21ರಿಂದ ಜೂನ್ 20 ರವರೆಗಿನ ಆರು ತಿಂಗಳು ಉತ್ತರ (ಉತ್ತರಾಯಣ ಪಥ) ಕ್ಕಿರುತ್ತಾನೆ. ಹೀಗಾಗಿ ನಾವು ಬಾಳೆಯನ್ನು ದಕ್ಷಿಣೋತ್ತರದ ಸಾಲಿನ್ನಲ್ಲಿ ನೆಡಬೇಕು. ದಕ್ಷಿಣೋತ್ತರದ ಸಾಲುಗಳಲ್ಲಿ ಐದು ಅಡಿಗೊಂದರಂತೆ ನೆಟ್ಟು ಪೂರ್ವ-ಪಶ್ಚಿಮದ ನಡುವಿನ ಅಂತರವನ್ನು ಎಂಟು ಅಡಿಗೆ ಕಾಯ್ದುಕೊಳ್ಳಬೇಕು. ಹೀಗಾದಾಗ ವರ್ಷದ ಎಲ್ಲ ಋತುಗಳಲ್ಲೂ ಬಾಳೆಗೆ ಬಿಸಿಲು ಪ್ರಾಪ್ತವಾಗುತ್ತದೆ. ಕೆಲವು ಬಾಳೆ ಮಾತ್ರವಲ್ಲ ಸಾಲುಗಳಲ್ಲಿ ಬೆಳೆಯುವ ಯಾವುದೇ ಬೆಳೆಯ ಸಾಲುಗಳನ್ನೂ ದಕ್ಷಿಣ - ಉತ್ತರ ದಿಕ್ಕುಗಳಿಗೆ ಅಭಿಮುಖವಾಗಿರುವಂತೆ ನೋಡಿಕೋಳ್ಳಬೇಕು. ಜೊತೆಗೆ ಎಲ್ಲ ಬೆಳೆಗಳಿಗೂ ಒಂದೇ ಬಗೆಯ ಬಿಸಿಲು ಬೇಕಾಗುವುದಿಲ್ಲ. ಗಿಡಗಳ ಸೌಮ್ಯತೆ ಆಧರಿಸಿ ಬೆಳಕನ್ನು ನಿರ್ವಹಿಸ ಬೇಕಾಗುತ್ತದೆ. ಪ್ರತಿ ಚದರ ಅಡಿಯ ಬೆಳಗಿನ ಬಿಸಿಲಿಗೆ 700 ಕ್ಯಾಂಡಲ್‌ನ ಪ್ರಖರತೆ ಇರುತ್ತದೆ. ಅದೇ ನಡು ಮದ್ಯಾಹ್ನದ ಬಿಸಿಲಗೆ 12500 ಕ್ಯಾಂಡಲ್‌ನ ಪ್ರಖರತೆ ಇರುತ್ತದೆ. ಬಾಳೆ ಅಡಿಕೆ ಗಳಿಗೆ ಇಷ್ಟು ದೊಡ್ಡ ಮಟ್ಟದ ಸೌರಶಕ್ತಿ ಬೇಕಾಗಿರುವುದಿಲ್ಲ. ಅತಿಯಾದ ಬಿಸಿಲು ಈ ಬೆಳೆಗಳಿಗೆ ಮಾರಕ. ಬಾಳೆಗೆ ಬೇಕಾಗಿರುವ ಸೌರಶಕ್ತಿ 3000ಕ್ಯಾಂಡಲ್ ನಷ್ಟು ಮಾತ್ರ. ಹೀಗಾಗಿ ಬಾಳೆ ಬೆಳೆಯುವವರು ಅಲ್ಲಲ್ಲೇ ನುಗ್ಗೆ, ಪಪ್ಪಾಯಿ ಇತ್ಯಾದಿಗಳನ್ನು ಬೆಳೆಯಿರಿ. ನುಗ್ಗೆ ಬಾಳೆಗಿಂತ ಶೀಘ್ರವಾಗಿ ಬೆಳೆಯುತ್ತದೆ. ಜೊತೆಗೆ ಇದು ನೈಟ್ರೋಜನ್ ಸರಬರಾಜು ಮಾಡುತ್ತದೆ. ಅತಿಯಾಗಿ ಬೆಳೆಯುವ ನುಗ್ಗೆಯನ್ನು ಕತ್ತರಿಸಿ ಬಾಳೆ ತೋಟಕ್ಕೆ ಮಲ್ಚಿಂಗ್ ಮಾಡಬಹುದು.

ಪಚ್ಚಬಾಳೆ, ರಸಬಾಳೆ, ಎಲಕ್ಕಿಬಾಳೆ.... ಯಾವುದೇ ಆಗಿರಬಹುದು, ಆದಷ್ಟು ಅವುಗಳ ಬಿತ್ತನೆಯನ್ನು ಸ್ಥಳೀಯವಾಗಿಯೇ ಸಂಗ್ರಹಿಸಿ. ಇವತ್ತು ಬಾಳೆಯಲ್ಲಿ ಟಿಶ್ಯೂ ಕಲ್ಚರ್ ಬಂದಿದೆ. ಅದರ ಒಂದು ಗಿಡಕ್ಕೆ ಹಾಲಿ ಮಾರುಕಟ್ಟೆ ದರ 25ರೂ. ಆ ಬಾಳೆ ಬೆಳೆದು ಭೂಮಿಯನ್ನು ಜನಾರೋಗ್ಯವನ್ನು ದುರಂತಕ್ಕೀಡು ಮಾಡಿರುವವರ ವಿಷಯಕ್ಕೆ ಆಮೇಲೆ ಬರೋಣ.

ಸ್ಥಳೀಯವಾಗಿ ಯಾವುದೇ ಬಾಳೆ ಕಂದಿನ ಗರಿಷ್ಟ ಬೆಲೆ 2ರೂಪಾಯಿ. ನಾವು ಖರ್ಚು ಮಾಡಲಿರುವ ಹಣವನ್ನು ಗರಿಷ್ಟ ಬೆಲೆಯಿಂದಲೇ ಲೆಕ್ಕ ಹಾಕೋಣ. ಬಾಳೆ ಕಂದು ಆಯ್ಕೆ ಮಾಡಿಕೊಂಡಾದ ಮೇಲೆ ಅವುಗಳನ್ನು ನೆಡಲು ಬೇಕಾದ ಗುಂಡಿಯ ಲೆಕ್ಕಾಚಾರ ಆಧುನಿಕ ಬೇಸಾಯಕ್ರಮ ಅನುಸರಿಸುವವರು ಬಾಳೆ ನೆಡಲು ಎರಡು ಅಡಿ ಆಳ, ಎರಡು ಅಡಿ ಅಗಲವಿರುವ ಗುಂಡಿಗಳನ್ನು ತೋಡುತ್ತಾರೆ. ಈ ರೀತಿ ಗುಂಡಿ ತೋಡಿದರೆ ಪೋಷಕಾಂಶಗಳನ್ನೊಳಗೊಂಡ ಮೇಲ್ಮಣ್ಣು ಬಾಳೆಗೆ ದಕ್ಕುವುದಿಲ್ಲ. ಇಲ್ಲಿ ಗುಂಡಿ ತೋಡಲು, ಪ್ರತೀ ಗುಂಡಿಗೆ 2 ರೂ ಖರ್ಚು ಬೇರೆ! ಜೊತೆಗೆ ತೋಡಿದ ಗುಂಡಿ ಮುಚ್ಚಲು ಕೆರೆಗೋಡು, ಕೊಟ್ಟಿಗೆ ಗೊಬ್ಬರ, ಕೋಳಿಕಸ, ರಾಸಾಯನಿಕ ಗೊಬ್ಬರ ಇತ್ಯಾದಿಗಳಿಗೆಂದು ಪ್ರತೀ ಗುಂಡಿಗೆ 30ರಿಂದ 40ರೂ ಖರ್ಚು ಮಾಡುತ್ತಾರೆ. ಲಿಕ್ವಿಡ್ ಕೆಮಿಕಲ್ ಫರ್ಟಿಲೈಜರ್ಸ್ ಬಳಸಿ ಟಿಶ್ಯ ಬಳೆ ಬೆಳೆಯುವವರು ಒಂದು ಗಿಡದ ಮೇಲೆ 100ರಿಂದ 120ರೂ ಗಳವರೆಗೆ ಖರ್ಚು ಮಾಡುತ್ತಾರೆ. ಜೈನ್ಯ & ನಸಿಕ್ ಕಂಪನಿಯ ಲಿಕ್ವಿಡ್ ಕೆಮಿಕಲ್ಸ್ ಫರ್ಟಿಲೈಜರ್ ಬಳಸಿ ಬಾಳೆ ಬೆಳೆದರೆ ಒಂದು ಎಕರೆಗೆ ಒಂದು ಲಕ್ಷದ ನಲವತ್ತು ಸಾವಿರ ರೂಗಳವರೆಗೆ ಖರ್ಚು!

ಪಾಳೇಕರರ ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಈ ಬಗೆಯ ಖರ್ಚುಗಳಿರುವುದಿಲ್ಲ. ಬಾಳೆ ಕಂದು ನೆಡಲು 2`X 2` ಅಳತೆಯ ಗುಂಡಿಯ ಅಗತ್ಯವೂ ಇಲ್ಲ. ಬಾಳೆ ಕಂದಿನ ಬುಡದ ಗಾತ್ರ ಎಷ್ಟಿರುತ್ತೇ ಅಷ್ಟು ಮಾತ್ರದ ಗುಂಡಿಯಾದರೆ ಸಾಕು. ಎರಡು ಬಾರಿ ಭೂಮಿಯನ್ನು ಉತ್ತು ಹದ ಮಾಡಿಕೊಳ್ಳುವುದಕ್ಕೆ 500ರೂ ಬಾಳೆ ಕಂದುಗಳಿಗೆ 1800ರೂ, ಬೀಜಾಮೃತ, ಜೀವಾಮೃತಗಳಿಗೆ, ಬೇಕಾಗುವ 2ಕೆ.ಜಿ. ಕಡ್ಲೆಹಿಟ್ಟು 2ಕೆ.ಜಿ. ಬೆಲ್ಲ 1ಲೀಟರ್ ಹಾಲು... ಇವಿಷ್ಟಕ್ಕೆ 100ರೂ ಎಂದಾದರೂ ಒಟ್ಟು ಒಂದು ಎಕ್ರೆಯಲ್ಲಿ ಬಾಳೆ ನೆಡಲು 2400ರೂ ಮಾತ್ರ ಖರ್ಚು.

ಇದೀಗ ಬೀಜೋಪಚಾರ ಮಾಡಿ ಬಾಳೆ ಕಂದುಗಳನ್ನು ನೆಟ್ಟಿರುವಿರಿ. ಒಂದು ಎಕ್ರೆಗೆ ಪೂರ್ತಿ ಜೀವಾಮೃತವನ್ನು ನೀಡಿರುವಿರಿ. ಈಗ ಅಲ್ಲಲ್ಲಿ ನುಗ್ಗೆ ಬೀಜ ನೆಡುತ್ತಾ ಬನ್ನಿ. ಗ್ಲಿರಿಸೀಡಿಯಾ ಕೂಡ ಆಗಬಹುದು. ಅದೂ ಕೂಡ ಬಾಳೆಗೆ ಎತ್ತೇಚ್ಚವಾಗಿ ನೈಟ್ರೋಜನ್ ಸರವರಾಜು ಮಾಡುತ್ತದೆ. ವಿಪರೀತವಾಗಿ ಬೆಳೆದಾಗ ಅದರ ರೆಂಬೆಗಳನ್ನು ಕತ್ತರಿಸಿ ಮಣ್ಣಿನಲ್ಲಿ ಆರ್ದ್ರತೆ ಕಾಪಾಡಲು ಮತ್ತು ಕಳೆ ನಿಯಂತ್ರಿಸಲು ಹೊದಿಕೆಯಾಗಿಯೂ ಮಾರ್ಪಡಿಸಬಹುದು. ಬಾಳೆಯ ತೋಟದೊಳಗೆ ಹಸಿಮೆಣಸಿನಕಾಯಿ, ಅಲಸಂದೆ, ಈರುಳ್ಳಿ, ಬೆಳ್ಳುಳ್ಳಿ, ಚೆಂಡುಹೂ, ಸೇವಂತಿಗೆ ಗಿಡಗಳಿಗೂ ಜಾಗ ಮಾಡಿಕೊಡಿ. ಈರುಳ್ಳಿ ಸೂರ್ಯ ಕಿರಣಗಳಿಂದ ಕಾಸ್ಮಿಕ್ ಎನರ್ಜಿ (ನೀಲಾತೀತ ಕರಣಗಳು) ಯನ್ನು ಸ್ವೀಕರಿಸಿ ಸುತ್ತಲ ಪರಿಸರಕ್ಕೆ ರವಾನಿಸುತ್ತದೆ. ಚೆಂಡು ಹೂ ಅಥವಾ ಸೇವಂತಿಗೆ ಬಾಳೆಯ ಗೆಡ್ಡೆಗೆ ತಗಲುವ ನಿಮೊಟೊಡ್, ಬಂಜಿಟಾಪ್, ಪನಾಮ ವಲ್ಟ್ ಇತ್ಯಾದಿ ರೋಗಗಳನ್ನು ನಿರ್ನಾಮ ಮಾಡುತ್ತದೆ. ಜೊತೆಗೆ ತೋಟದ ಸೌಂದರ್ಯವನ್ನು ಕೂಡ ಹೆಚ್ಚಿಸುತ್ತದೆ. ನಿಮಟೋಡ್ ಮತ್ತು ಬಂಚೆಟಾಪ್ ರೋಗಗಳಿಗೆ ಪ್ರಪಂಚದ ಯಾವ ಕೆಮಿಕಲ್ಸ್ ಕಂಪನಿಯೂ ಔಷಧಿ ಕಂಡು ಹಿಡಿದಿಲ್ಲ.

ಕೃಷ್ಣಪ್ಪ ಅವರ ತೋಟದಲ್ಲಿ ದೇವನೂರ ಮಹದೇವ, ಬಸವರಾಜತಂಬಾಕೆ ಮತ್ತು ಸುಭಾಷ್ ಪಾಳೇಕರ್

ಬಾಳೆಯನ್ನು ನೀವೀಗ ಉತ್ತರ-ದಕ್ಷಿಣ ಸಾಲುಗಳಲ್ಲಿ ನೆಟ್ಟಿರುವಿರಿ. ಈಗ ನೀವು ಹಾಯಿಸುವ ನೀರು ಉತ್ತರ ದಕ್ಷಿಣಭಿಮುಖವಾಗಿರಲಿ. ಪೂರ್ವ ಪಶ್ಚಿಮದ ಎಂಟು ಅಡಿ ಸಾಲುಗಳ ನಡುವೆ ಉಪ ಬೆಳೆಯಾಗಿ ಈರುಳ್ಳಿ, ಬೆಳ್ಳುಳ್ಳಿ, ಅಲಸಂದೆ, ಮೆಣಸಿನಕಾಯಿ ಗಿಡಗಳನ್ನು ನೆಡಬಹುದು. ಇವುಗಳ ಫಸಲು 31ನೇ ದಿನಕ್ಕೆ ಆರಂಭವಾಗಿ ಮುಂದಿನ 5ತಿಂಗಳವರಗೆ ಲಭಿಸುತ್ತವೆ. ಬಾಳೆಯ ಪಕ್ಕದಲ್ಲಿ ಒಂದು ಅಡಿ ಅಂತರದಲ್ಲಿ ಈರುಳ್ಳಿ ಅನಂತರದ ಒಂದು ಅಡಿ ಅಂತರದಲ್ಲಿ ಅಲಸಂದೆ ಅಥವಾ ಬೇರಾವುದೇ ದ್ವಿದಳ ಧಾನ್ಯ ಮಧ್ಯದ ಸಾಲಿನಲ್ಲಿ ಮೆಣಸಿನ ಕಾಯಿಗಿಡ, ಆ ನಂತರದ ಸಾಲಿನಲ್ಲಿ ಅಲಸಂದೆ, ಕಡೆಗೆ ಬೆಳ್ಳುಳ್ಳಿ. ಬಾಳೆಯ ಪೂರ್ವ-ಪಶ್ಚಿಮ ಗಳ ಎಂಟು ಅಡಿ ಸಾಲಿನ ನಡುವೆ ಈ ಐದು ಬೆಳೆಗಳ ಸಾಲುಗಳಿರಲಿ. ಈ ಬೆಳೆಗಳ ಮುಂದಿನ ಸಾಲುಗಳು ಎರಡು ಅಡಿ ಅಂತರ ಕಾಯ್ದು ಕೊಳ್ಳಿರಿ.

ಮಳೆಗಾಲದಲ್ಲಿ ನೀರು ಹಾಯಿಸುವ ಅಗತ್ಯವಿಲ್ಲ. ಮಳೆ ಇಲ್ಲದಾಗ 15 ದಿನಗಳಿಗೊಮ್ಮೆ ನೀರು ಸಾಕು. ಅತಿಯಾದ ನೀರು ನೀಡಿದರೆ ಬೇರನ್ನು ಕೊಳೆಸುತ್ತದೆ.

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

ಗಿಡಗಳ ಬೆಳವಣಿಗೆಗೆ ಇಳುವರಿಗೆ [illegible] ಶುರುವಿಗೆ (ಮಳೆ ಇಲ್ಲದಿರುವಾಗ) ಬಾಳೆ ಗಿಡ ಸೇರಿಸಿ ನಡುವಿನ 5ಸಾಲುಗಳಿಗೂ ನೀರು ಹರಿಯಬೇಕು. ಹನಿ ನೀರಾವರಿ ಮೂರಕವೂ ಈ ಸೌಲಭ್ ಕಲ್ಪಿಸಿ ಕೊಳ್ಳಬಹುದು. ಬಾಳೆ ಎರಡರಿಂದ ಮೂರು ತಿಂಗಳಿಗೆ ಬರುವಷ್ಟೊತ್ತಿಗೆ ಬಾಳೆಯ ಸಾಲಿನಲ್ಲಿ ಬುಡಕ್ಕೆ ಹರಿಯುತ್ತಿದ್ದ ನೀರನ್ನು ಶಾಸ್ವತವಾಗಿ ನಿಲ್ಲಿಸಿ ಬಿಡಿ. ಒಮ್ಮೆ ನಿಲ್ಲಿಸಿದ ಮೇಲೆ ಮುಂದಿನ ಮೂವತ್ತೈದು ವರ್ಷಗಳ ವರೆಗೆ ಬುಡಕ್ಕೆ ನೀರು ಹಾಯಿಸುವಂತಿಲ್ಲ ಯಾಕೆಂದರೆ ಬುಡಕ್ಕೆ ನೀರು ಹಾಯಿಸುವುದರಿಂದ ಲಾಭಕ್ಕಿಂತ ಹಾನಿಯೆ ಹೆಚ್ಚು ಮೂರು ತಿಂಗಳಷ್ಟೊತ್ತಿಗೆ ಈರುಳ್ಳಿ (ಸಣ್ಣ ಈರುಳ್ಳಿ - ಸಾಂಬಾರ್ ಈರುಳ್ಳಿ) ಬೆಳ್ಳುಳ್ಳಿ ಫಸಲು ಬಂದಾಗಿರುತ್ತದೆ. ಬೆಳ್ಳುಳ್ಳಿ, ಈರುಳ್ಳಿ ಪಸಲು ತೆಗೆದು ನಂತರ ಅಲಸಂದೆ ಮತ್ತು ಮೆಣಸಿನಕಾಯಿ ಸಾಲುಗಳ ನಡುವೆ ನೀರು ಹಾಯಿಸಿ ಅಲಸಂದೆ ಮತ್ತು ಮೆಣಸಿನಕಾಯಿ ಸಾಲುಗಳ ನಡುವೆ ನೀರು ಹಾಯಿಸಿ ಅಲಸಂದೆ ಅಥವಾ ಇನ್ನಾವುದೇ ದ್ವಿದಳ ಫಸಲು ಬಂದ ಬಳಿಕ 5ನೇ ತಿಂಗಳಿನಷ್ಟೊತ್ತಿಗೆ ಮಧ್ಯದ ಮೆಣಸಿನ ಕಾಯಿಗಿಡದ ಸಾಲಿನಲ್ಲಿ ನೀರು ಹಾಯಿಸುತ್ತೀರಿ. ಮುಂದೆ ಮುಂದಿನ ಮೂವತ್ತೈದು ವರ್ಷ ಇದೇ ಸಾಲಿನಲ್ಲಿ ಬಾಳೆಗೆ ಪ್ರತಿ ಹದಿನೈದು ದಿನಕ್ಕೊಮ್ಮೆ ಮಾತ್ರ ನೀರು ಹರಿಯಲಿ.

ಯಾವುದೇ ಗಿಡ-ಮರ ಇರಬಹುದು ಅದರ ಕೊನೇಯ ಎಲೆಯ ತುದಿ ಎಲ್ಲಿಲ್ಲಿಯವರೆಗೆ ಚಾಚಿಕೊಂಡಿರುತ್ತದೊ ಆ ನೇರಕ್ಕೆ ಭೂಮಿಯ್ಲ್ಲಿ ನೀರು ಹಾಯಿಸಬೇಕು. ಆಗ ಮಾತ್ರ ಅವುಗಳ ಬೇರುಗಳು ವಿಸ್ತಾರವಾಗಿ ಹರಡಿಕೊಳ್ಳುತ್ತಾ ಗಟ್ಟಿಯಾಗುತ್ತ ಬರುತ್ತವೆ. ಮತ್ತು ಎಲ್ಲ ಪೋಷಕಾಂಶಗಳನ್ನು ಹೀರಿ ಬೆಳೆಯಲು ಅನುಕೂಲಕಾರಿಯಾಗಿರುತ್ತವೆ. ಯಾವಾಗ ನಾವು ಬಾಳೆಯ ಮಧ್ಯದ ಸಾಲುಗಳಲ್ಲಿ ನೀರು ಹಾಯಿಸುತ್ತೇವೋ ಆವಾಗ ದಾಹಗೊಂಡ ಬಾಳೆಯ ಬೇರುಗಳು ಅಲ್ಲಿಯ ವರೆಗೆ ದಾವಿಸುತ್ತಾ ಹರಡುತ್ತವೆ ಆಗ ಬಾಳೆ ಗಟ್ಟಿಯಾಗಿ ಬೇಹೂರಿ ಬೆಳೆಯುತ್ತದೆ.

ಈ ನೈಸರ್ಗಿಕ ಕೃಷಿ ವಿಧಾನದಲ್ಲಿ ಭೂಮಿಯ ಆರ್ದ್ರತೆ ಕಾಪಾಡಲು ಹೊದಿಕೆ ಅತ್ಯಗತ್ಯ. ಆದರೆ ಅದಕ್ಕಾಗಿ ಹೆಚ್ಚಿನ ಶ್ರಮ ಬೇಕಾಗುವುದಿಲ್ಲ, ಬೆಳೆಯ ನಡುವೆ ನೆಟ್ಟ ಅಲಸಂದೆ, ಮೆಣಸಿನಕಾಯಿ ಗಿಡಗಳನ್ನು ಫಸಲು ಬಂದ ಮೇಲೆ ಅಲ್ಲೇ ಹೊದಿಕೆಯಾಗಿ ರೂಪಾಂತರಿಸಲಾಗುತ್ತದೆ. ಈ ಉಪ ಬೆಳೆಗಳು ಕೈಗೆ ಬರುತ್ತಿದಂತೆ ಕುಂಬಲ, ಹಾಗಲ, ಹೀರೆ, ಪಡವಲ, ಹೀಗೆ ತೋಟದ ತುಂಬ ಹೆಚ್ಚುವ ತರಕಾರಿ ಬೆಳೆಗಳನ್ನು ಹಾಕಬಹುದು. ಇವುಗಳೊಂದಿಗೆ ಸೌತೆ, ಕರಬುಜ, ಕಲ್ಲಂಗಡಿ ಕೂಡ ಆಕಬಹುದು. ಈ ಬೆಳೆಗಳಿಂದಾಗಿ ಭೂಮಿಗೆ ಹೊದಿಕೆಯೂ ಆಯಿತು. ಫಸಲೂ ಆಯಿತು. ಜೊತೆಗೆ ಅಲಸಂದೆ ಅಥವಾ ಇನ್ನಾವುದೇ ದ್ವಿದಳ ಧಾನ್ಯಗಳ ಬೆಳೆಗಳಿಂದಾಗಿ ಬಾಳೆ ಹಾಗೂ ಇತರ ಪದಾರ್ಥ ಗಳಿಗೆ ಬೇಕಾದ ರೈಜೋಬಿಯಂ ಜೀವಾಣು ಮತ್ತು ಕಸ-ಕಡ್ಡಿಗಳ ಹೊದಿಕೆಯಿಂದಾಗಿ ಗಿಡಗಳ ಕಾಂಡ ಮತ್ತು ಎಲೆಗಳಿಗೆ ಬೇಕಾದ ಖನಿಜಗಳು, ಲವಣಗಳೂ ಲಭ್ಯವಾದಂತಾಯಿತು. ಅಷ್ಟೇ ಅಲ್ಲದೆ ಒಣಗಿದ ಕಸ-ಕಡ್ಡಿ, ಸೊಪ್ಪುಗಳು ವಾತಾವರಣದಲ್ಲಿರುವ ತೇವಾಂಶಗಳನ್ನು ಹೀರಿಕೊಂಡು ತೋಟದ ಸೊಬಗನ್ನು ಹಿಮ್ಮಡಿ ಗೊಳಿಸುತ್ತವೆ. ಬಾಳೆಯಲ್ಲಿ ಬೆಳೆಯುವ ಉಪ ಬೆಳೆಗಳಿಂಗಾಗಿ ಬಾಳೆಯ ಫಸಲು ಬರುವಷ್ಟೊತ್ತಿಗೂ ಮುಂಚೆಯೇ ಎಕರೆಗೆ 20ರಿಂದ 25 ಸಾವಿರ ರೂ ಆಧಾಯ ಕೂಡ ಬಂದಿರುತ್ತದೆ.

ಆರಂಭದಲ್ಲಿ ಈ ನೈಸರ್ಗಿಕ ಕೃಷಿ ವಿಧಾನದಲ್ಲಿ ಕಳೆ, ಬೆಳೆ, ರೋಗ ಎಲ್ಲವೂ ಸಹ ಜೀವನ ನಡೆಸುತ್ತವೆ. ಕೃಷ್ಣಪ್ಪನವರ ತೋಟದಲ್ಲಿ ಕಳೆ ಬಂದರೆ ಇವುಗಳನ್ನೆಲ್ಲ ಕಿತ್ತು ತೋಟಕ್ಕೆ ಹೊದಿಕೆಯಾಗಿಸಲಾಗುತ್ತದೆ. ವರ್ಷಕ್ಕೆ 3ರಿಂದ 4 ಬಾರಿ ಒಬ್ಬ ರೈತನಿಗೆ ಎರಡೆರಡು ದಿನ ಕಳೆ ಕೀಳುವ ಕೆಲಸವಿರುತ್ತದೆ.

ಮೊಳೆಯುವ ಮೊದಲೇ ಎರಗಬಹುದಾದ ವಿಪತ್ತುಗಳನ್ನು ಬೀಜಾಮೃತ ನಿವಾರಿಸುತ್ತದೆ. ಜೀವಾಮೃತ ಕೂಡ ಫಸಲಲ್ಲಿ ರೋಗ ನಿರೋಧಕ ವ್ಯವಸ್ಥೆಯನ್ನು ಜಾರಿಯಲ್ಲಿಟ್ಟಿರುತ್ತದೆ. ಇಷ್ಟಕ್ಕೂ ಮಾರಿ ರೋಗಗಳು ಬಂದರೆ 'ರೈತ ಕಂಗಾಲುಗೊಳ್ಳ ಬೇಕಾಗಿಲ್ಲ, ಸಾಮಾನ್ಯ ಫಂಗಸ್ ನಿವಾರಣೆ - ಶಿಲೀಂದ್ರನಾಶಕ್ಕೆ ಅತಿ ಸುಲಭ ವಿಧಾನವನ್ನು ಪಾಳೇಕರ್ ಕಂಡು ಕೊಂಡಿದ್ದಾರೆ. 100ಲೀಟರ್ ನೀರಿಗೆ 5ಲೀಟರ್ ಹುಳಿ ಮಜ್ಜಿಗೆ ಸೇರಿಸಿ ಸಿಂಪಡಿಸಿದರೆ ಫಂಗಸ್ ಸಮಸ್ಯೆಗಳಿಂದ ಬಚಾವಾಗಬಹುದು. ಒಂದು ಲೀಟರ್ ಹಸುವಿನ ಹಾಲಿನಲ್ಲಿ 5ಲೀಟರ್ ಮಜ್ಜಿಗೆ ಮಾಡಿ; ಐದು ದಿವಸ ಹಾಗೆಯೇ ಇಟ್ಟು

ಕೃಷ್ಣಪ್ಪವರಿಂದ ಆಸಕ್ತ ರೈತರಿಗೆ ಪ್ರಾತ್ಯಕ್ಷಿಕೆ

ಬಾಳೆ ಬೆಳೆಯುವಾಗ, ವಿಶೇಷವಾಗಿ ಗಮನಿಸಬೇಕಾದ ಒಂದು ಅಂಶ : ಯಾವುದೇ ಕಾರಣಕ್ಕೂ ಬಾಳೆ ಪಟ್ಟೆ ಎಲೆಗಳನ್ನು ಸವರ ಬಾರದು. ಬಾಳೆಯಲ್ಲಿ ಮೋತೆ ಹೊರಬರುವವರೆಗೂ ಹೆಚ್ಚುವರಿ ಕಂದುಗಳು ಬೆಳೆಯಲು ಆಸ್ಪದ ನೀಡಬಾರದು. ಬಿತ್ತನೆಗಾಗಿ ಉಳಿಸಿಕೊಂಡ ಕಂದುಗಳನ್ನು ಹೊರತು ಪಡಿಸಿ ಉಳಿದೆಲ್ಲ ಕಂದುಗಳನ್ನು ಬೇರು ಸಹಿತ ಕಿತ್ತು ಹಾಕಿ. ಮೋತೆ ಹೊರಬರುವಾಗ ಮಾತ್ರ ಅದರ ವಿರುದ್ಧ ದಿಕ್ಕಿನಲ್ಲಿ ಹೊಸ ಕಂದು ಹೊರ ಬರಲು ಅಸ್ಪದ ನೀಡಲೇಬೇಕು. ತೋಟದಲ್ಲಿ ಜೇನು ಸಾಕಣೆ ಕೈಗೊಳ್ಳುವುದು ಕೂಡ ಲಾಭದಾಯಕ. ಜೇನುಗಳಿಂದಾಗಿ ಪಾರಾಗಸ್ಪರ್ಶ ಸರಾಗವಾಗಿ ನಡೆದು ಆಧಿಕ ಇಳುವರಿಯನ್ನು ಪಡೆಯಬಹುದು. ಅಂತಿಮವಾಗಿ ಗೊನೆ ಕಡಿದ ತರುವಾಯ ಸದರಿ ಬಾಳೆ ಕಂದನ್ನು ತರಿದು ನೆಲಕುರುಳಿಸ ಬಾರದು. ಗೊನೆ ತರಿಸಿ ಕೊಂಡ ಬಾಳೆಯ ಪೋಷಾಕಾಂಶಗಳು ಹೊಸದಾಗಿ ಬೆಳೆಯುವ ಗಿಡಕ್ಕೆ ರವಾನೆಯಾಗುತ್ತವೆ. ಕಡೆಗೆ ಮೂಲ ಬಾಳೆಕಂದು ಕ್ರಮೇಣ ಕ್ಷಯಿಸಿ ಕ್ಷಯಿಸಿ ಮಣ್ಣಿನಲ್ಲಿ ಲೀನವಾಗುತ್ತದೆ.

ನೈಸರ್ಗಿಕ ಕೀಟನಾಶಕಗಳು

ಬಾಳೆಗೆ ತಗಲಬಹುದಾದ ಎಷ್ಟೋ ರೋಗಗಳನ್ನು ಅಲಸಂದೆ ಮತ್ತು ಮೆಣಸಿನಕಾಯಿ ಗಿಡಗಳು ನಿವಾರಿಸುತ್ತವೆ ! ನೈಸರ್ಗಿಕಬೇಸಾಯ ವಿಧಾನದಲ್ಲಿ ಪ್ರಕೃತಿ ಕೂಡ ತನ್ನದೇ ಆದ ಮಟ್ಟದಲ್ಲಿ ರೋಗಗಳನ್ನು ನಿಯಂತ್ರಿಸುತ್ತದೆ. ಬೀಜೋಪಚಾರದಲ್ಲೇ ಬೀಜ

ಚೆನ್ನಾಗಿ ಹುಳಿಬಂದ ಮಜ್ಜಿಗೆಯನ್ನು ಯಾವುದೇ ಬಗೆಯ ಫಂಗಸ್ ವಿರುದ್ಧ ಬಳಸಬಹುದು. ಒಂದು ಎಕ್ರೆಗೆ ಐದು ಲೀಟರ್ ಹುಳಿ ಮಜ್ಜಿಗೆ ಸಾಕು.

ಫಂಗಸ್ ಹೊರತು ಪಡಿಸಿ, ಗಿಡಗಳಿಗೆ ಬರುವ ಉಳಿದ ಯಾವುದೇ ರೋಗಗಳಿಗೂ (ತೆಂಗಿನ ನುಸಿ ರೋಗದ ವರೆಗೂ) ಅದರ ತೀವ್ರತೆಗಳನ್ನವಲಂಭಿಸಿ ಈ ಕೆಳಗೆ ಕಾಣಿಸಿದ ಮಿಶ್ರಣಗಳನ್ನು ಸ್ವತಃ ತಯಾರಿಸಿ ಸಿಂಪಡಿಸಬಹುದು. ಈ ಕೀಟನಾಶಕಗಳು ಪರಿಸರಕ್ಕೆ ಮಾರಕವಲ್ಲ, ಮಿತ್ರಕೀಟಗಳ ನಾಶಕ ಅಲ್ಲ.

ನೀಮ್ ಬಾಣ

ಮೂರು ಲೀಟರ್ ನೀರು, 10 ಲೀಟರ್ ಗಂಜಳ ಐದು ಕೇ.ಜಿ. ಕಹಿ ಬೇವಿನ ಎಲೆಗಳು ಎರಡು ಕೆ.ಜಿ. ಸಗಣಿ ಇವಿಷ್ಟನ್ನು ಒಗ್ಗೂಡಿಸಿ ಎರಡು ದಿನ ನೆನೆ ಹಾಕಿ, ನಂತರ ಸೋಸಿ ಬೆಳೆಗಳಿಗೆ ಸಿಂಪಡಿಸಿ, ಸಮಾನ್ಯ ವೆನಿಸುವ ರೋಗ ಕಾರಕ ಕೀಟಗಳಿಂದ ಫಸಲನ್ನು ಸಂರಕ್ಷಿಸಿ.

ರಾಮ ಬಾಣ

10 ಲೀಟರ್ ಗಂಜಳ ಐದು ಕೆ.ಜಿ. ಬೇವಿನ ಎಲೆ ಕೇ.ಜಿ. ತಂಬಾಗು ಪುಡಿ ಇವಿಷ್ಟೂ ಕೂಡಿದರೆ ರಾಮಬಾಣ ಹತ್ತು ದಿವಸಗಳವರೆಗೆ ಈ ಮಿಶ್ರಣವನ್ನು ನೆನೆ ಹಾಕಬೇಕು. ಪ್ರತಿ ನಿತ್ಯ 3 ಸಾರಿ ಕೋಲಿನಿಂದ ತಿರುಗಿಸಿ ರಾಡಿ ಮಾಡ ಬೇಕು. ಹತ್ತು ದಿನಗಳ ನಂತರ ಈ ಮಿಶ್ರಣವನ್ನು ಬಟ್ಟೆಯಲ್ಲಿ ಸೋಸಿ ಎಕರೆಗೆ 100ಲೀಟರ್ ನೀರಿಗೆ 2ಲೀಟರ್

ಸೇರಿಸಿ ಸಿಂಪಡಿಸಬೇಕು. ರಾಮಬಾಣವನ್ನು 6 ತಿಂಗಳವರೆಗೆ ಸಂಗ್ರಹಿಸಿ ಇಡಬಹುದು.

ಅಗ್ನಿ ಅಸ್ತ್ರ

ಗಂಜಳ ಇಪ್ಪತ್ತು ಲೀಟರ್ ಹತ್ತು ಕೆ.ಜಿ. ಬೇವಿನ ಸೊಪ್ಪು, ಎರಡು ಕೇ.ಜಿ. ಹೊಗೆಸೊಪ್ಪು, ಎರಡು ಕೇ.ಜಿ. ಹಸಿಮೆಣಸಿನಕಾಯಿ, ಎರಡು ಕೇ.ಜಿ. ಬೆಳ್ಳುಳ್ಳಿ; ಹತ್ತು ದಿನ ಕೊಳೆಹಾಕಿ, ಮಾಮೂಲಿನಂತೆ ದಿನವೂ ಮೂರು ಬಾರಿ ತಿರುಗಿಸಿದರೆ ಅಗ್ನಿ ಅಸ್ತ್ರ ರೆಡಿ. ಹತ್ತು ಲೀಟರ್ ನೀರಿಗೆ 200 ಎಂ.ಎಲ್. ಮಿಶ್ರಣ ಸಾಕು. (ಒಂಧು ಎಕರೆಗೆ) 6 ತಿಂಗಳವರೆಗೆ ಅಗ್ನಿ ಅಸ್ತ್ರವನ್ನು ಸಂಗ್ರಹಿಸಿ ಇಡಬಹುದು. ಎಲ್ಲ ಬೆಳೆಗಳಿಗೂ ಸಿಂಪಡಿಸಬಹುದು.

ದಶಪಾಣಿ

ಪಾಳೇಕಾರರ ನೈಸರ್ಗಿಕ ಕೃಷಿ ವಿಧಾನದಲ್ಲಿ ಉಲ್ಬಣಗೊಂಡ ಎಲ್ಲ ಬಗೆಯ ಬಾಧಕ ಕೀಟಗಳ ನಿವಾರಣೆಗಿರುವ ಕಟ್ಟ ಕಡೇಯ ಅಸ್ತ್ರ ದಶಪಾಣಿ. ಹತ್ತು ಲೀಟರ್ ಗಂಜಳ, ಎರಡು ಕೇ.ಜಿ. ಸಗಣಿ, ಎರಡು ಕೇ.ಜಿ. ಬೇವಿನಸೊಪ್ಪು, ಎರಡು ಕೇ.ಜಿ. ಎಕ್ಕದ ಸೊಪ್ಪು, ಎರಡು ಕೇ.ಜಿ. ಕಣಗಿಲೆ ಸೊಪ್ಪು, ಎರಡು ಕೇ.ಜಿ. ಹರಳು ಸೊಪ್ಪು, ಎರಡು ಕೇ.ಜಿ ಪರಂಗಿ ಸೊಪ್ಪು, ಎರಡು ಕೇ ಜಿ. ಸೀತಾಫಲ ಸೊಪ್ಪು, ಎರಡು ಕೇ.ಜಿ. ಕೆಂಪು ದಾಸವಾಳದ ಸೊಪ್ಪು, ಎರಡು ಕೇ.ಜಿ. ಹೊಂಗೆ ಸೊಪ್ಪು, ಎರಡು ಕೇ.ಜಿ. ಲಕ್ಕ ಸೊಪ್ಪು, ಎರಡು ಕೇ.ಜಿ. ಬಿಲ್ವಪತ್ರೆ ಸೊಪ್ಪು, ಎರಡು ಕೇ.ಜಿ. ತುಳಸಿ ಎಲೆ, ಎರಡು ಕೇ.ಜಿ. ದತ್ತುರಿ ಸೊಪ್ಪು

(ಈ ಸೊಪ್ಪುಗಳಲ್ಲಿ ಬೇವು, ಹೊಂಗೆ ಹೊರತು ಪಡಿಸಿ ಯಾವುದೇ ಎರಡು ಬಗೆಯ ಸೊಪ್ಪು ಸಿಗದಿದ್ದರೆ ತಲೆಕೆಡಿಸಿ ಕೊಳ್ಳಬೇಕಾಗಿಲ್ಲ) ಇವುಗಳೊಂದಿಗೆ ಎರಡು ಕೇ.ಜಿ. ಹಸಿಮೆಣಸಿನ ಕಾಯಿ 1/4ಕೆ.ಜಿ.ಬೆಳ್ಳುಳ್ಳಿಗಳನ್ನು ಜಜ್ಜಿನೂರು ಲೀಟರ್ ನೀರಿನೊಂದಿಗೆ ಒಂದು ತಿಂಗಳು ಕೊಳೆಹಾಕಬೇಕು. ದಿನಕ್ಕೆ ಒಮ್ಮೆ ಕೋಲಿನಿಂದ ತಿರುಗಿಸಿ ರಾಡಿಗೊಳಿಸಬೇಕು. 15 ಲೀಟರ್ ನೀರಿನೊಂದಿಗೆ 200 ಗ್ರಾಂ ದಶಪಾಣಿ ಸಾಕು ಒಂದು ಎಕರೆಗೆ. ಯಥಾ ಪ್ರಕಾರ ಆರು ತಿಂಗಳ ಕಾಲ ದಶಪಾಣಿ ಮಿಶ್ರಣವನ್ನು ಸಂಗ್ರಹಿಸಿ ಇಡಬಹುದು.

ಮೇಲೆ ತಿಳಿಸಿದ ಎಲ್ಲ ಸೊಪ್ಪುಗಳ ಗಿಡ, ಮರಗಳು ತನ್ನ ಜಮಿನುಗಳಲ್ಲಿ ಬೆಳೆದು ಕೊಳ್ಳುವುದು ಒಳ್ಳೆಯದು. ಹೊಗೆಸೊಪ್ಪು ಹೊರತು ಪಡಿಸಿದರೆ ಉಳಿದ ಯಾವ ಆಗತ್ಯಕ್ಕೂ ರೈತ ಪೇಟೆಯನ್ನು ಆವಲಂಭಿಸಬೇಕಾಗಿಲ್ಲ, ಆದರೆ ಆಂಥ ಹೊಗೆ ಸೊಪ್ಪನ್ನು ಕೂಡ ನಾವೇ ಬೆಳೆದು ಕೊಳ್ಳಬಹುದಲ್ಲ ? ಒಟ್ಟು ಈ ಬೇಸಾಯ ಪದ್ಧತಿಯಲ್ಲಿ ಬೀಜಕ್ಕಾಗಲ್ಲಿ ಗೊಬ್ಬರಕ್ಕಾಗಲಿ, ಕೀಟನಾಶಕ, ಕಳೆನಾಶಕ ಯಾವುದೆ ಗೊಬ್ಬರದ ಕಂಪನಿಗಳನ್ನು ಕೀಟನಾಶಕ ಕ್ರಿಮಿನಾಶಕ ಕಂಪನಿಗಳನ್ನು ಆವಲಂಭಿಸಬೇಕಾಗಿಲ್ಲ. ವಾಸ್ತವವಾಗಿ ರೈತನನ್ನೆ ನಂಬಿಕೊಂಡು ಬದುಕುತ್ತಿರುವ ಈ ಕಂಪನಿಗಳೆಲ್ಲ ಬಾಗಿಲು ಮುಚ್ಚುವ ಆನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ.

ತಪ್ಪಲಿರುವ ನೀರಿನ ಬವಣೆ

ಈ ಬಗೆಯ ಬೇಸಾಯ ಕ್ರಮ ಹೆಚ್ಚುಕರೆಂಟು (ಪಂಪ್‌ಸೆಟ್‌ನೀರಾವರಿಯನ್ನು ಬೇಡುವುದಿಲ್ಲ. ಹಾಗೆಯೇ ಡೀಸಲ್, ಪೆಟ್ರೋಲ್ ಮೇಲೆ ಅವಲಂಬಿತವಾಗಿರುವ ಪವರ್ ಟಿಲ್ಲರ್, ಟ್ರ್ಯಾಕ್ಟರ್‌ಗಳ ಅಗತ್ಯ ಕೂಡ ಕಂಡು ಬರುವುದಿಲ್ಲ. ಯಾಕೆಂದರೆ ತೆಂಗು, ಬಾಳೆ, ಮಾವು, ಸಪೋಟಮುಂತಾದ ತೋಟಗಾರಿಕಾ ಬೆಳೆಗಳಲ್ಲಿ ಜಮೀನು ಹದ ಮಾಡಿಕೊಂಡರೆ ಮುಂದಿನ ಮೂವತ್ತೈದು ವರ್ಷ ಉಳುವ ಗೊಡವಗೆ ಹೋಗ ಬೇಕಾಗಿಲ್ಲ.

ಅಂತೆಯೇ ನೀರು ಬಳಕೆಯ ವಿಷಯದಲ್ಲೂಕೂಡ ವ್ಯರ್ಥವಾಗಿ ನೀರು ಹರಿಸಿದರೆ ಇಲ್ಲಿನಾನಾ ಬಗೆಯ ಸಮಸ್ಯೆಗಳನ್ನು ನಾವೇ ಆಹ್ವಾನಿಸಿ ಕೊಂಡಂತಾಗುತ್ತದೆ. ನೈಸರ್ಗಿಕ ಆತಿವೃಷ್ಟಿಯಾವಾಗಲೂ ಇರುವುದಿಲ್ಲ. ನೈಸರ್ಗಿಕ ಆತಿವೃಷ್ಟಿ ಆನಾವೃಷ್ಟಿಗಳನ್ನು ಈ ಬಗೆಯ ಬೆಳೆದು ವಿಧಾನ ತಡೆದು ಕೊಳ್ಳಬಹುದು. ಆದರೆ ಕಾಲುವೆ ಪಂಪುಸೆಟ್ಟುಗಳ ನಿರಂತರ ನೀರು ಸರಬರಾಜಿನಲ್ಲಿ ಯಾವುದೇ ಆಣೆ ಕಟ್ಟುಗಳ ಅಚ್ಚು ಕಟ್ಟು ವ್ಯಾಪ್ತಿಯಲ್ಲಿ ಈಗ ಬಳಕೆಯಾಗುತ್ತಿರುವ ನೀರಿನಲ್ಲಿ ಶೇಖಡ 15 ರಿಂದ 20 ರಷ್ಟಾದರೂ ಸಾಕು. ಅತ್ಯುತ್ಕೃಷ್ಟ ಬೆಳೆ ಬೆಳೆಯ ಬಹುದು. ಅದನ್ನು ನೀರಾವರಿ ಪ್ರದೇಶದಲ್ಲಿರುವ ಕೃಷ್ಣಪ್ಪ ಮತ್ತು ಇತರರು ಬೆಳೆದು ಸಾಧಿಸಿ ಸಾಬೀತು ಪಡಿಸಿದ್ದಾರೆ.

ಆ ಹಿನ್ನೆಲೆಯಲ್ಲಿ ಗಮನಿಸಿದರೆ ಕಾವೇರಿ ಕೊಳದಲ್ಲಿ ಈಗ ಉದ್ಭವಿಸಿರುವ ಕರ್ನಾಟಕ-ತಮಿಳುನಾಡುಗಳ ನಡುವಿನ ಕಾವೇರಿವಾದ ತುಂಗಭದ್ರ, ಕೃಷ್ಣಾವಿವಾದಗಳು ವಿವಾದಗಳಾಗದೇ ಹೊಗಬಹುದು. ಈಗಿನ ರಸಗೊಬ್ಬರ, ಕಳೆನಾಶಕ, ಕ್ರಿಮಿನಾಶಕಗಳು ಜಮಿನುಗಳಿಗೆ ಆಧಿಕ ನೀರು ಬೇಡುತ್ತವೆ. ಎಷ್ಟು ನದಿ ನೀರು ಹರಿದರೂ ಅವು ಉಂಟು ಮಾಡಿರುವ ಮಲೊನ, ಸೃಷ್ಟಿಮಾಡಿರುವ ವಿಷ ಕೊಚ್ಚಿಕೊಂಡು ಹೋಗಲಾರವು. ಪಾಳೇಕರರ ಪ್ರಕಾರ ನೈಸರ್ಗಿಕ ಕೃಷಿ ವಿಧಾನ ಮಾತ್ರ ವಿಷಪೂರಿತ ನೀರಾವರಿ ಸಾಗುವಳಿ ಪ್ರದೇಶಕ್ಕೆ ಮರು ಜೀವ ನೀಡಬಲ್ಲದು ಹಾಗೆಯೆ ನದಿ ನೀರಿನ ಹೊಡೆದಾಟಗಳನ್ನು ಶಾಶ್ವತವಾಗಿ ಇಲ್ಲವಾಗಿಸಬಹುದು.

ಕಬ್ಬುಬೆಳೆಯಲ್ಲಿ ನವ ದಿಗಂತ

ಒಂದು ಎಕರೆಯಲ್ಲಿ ಕಬ್ಬುಬೆಳೆಯಲು 30 ರಿಂದ 40 ಸಾವಿರರೂಗಳವರೆಗೆ ಖರ್ಚು ಮಾಡುತ್ತಾರೆ ನಮ್ಮ ರೈತರು. ಮಂಡ್ಯ ಜಿಲ್ಲೆಯ ಕಬ್ಬಿನ ಬೆಳೆಯ ಸರಾಸರಿ ಇಳುವರಿ ಎಕರೆಗೆ 30ರಿಂದ 40 ಟನ್. ಬೀದರ್ ಜಿಲ್ಲೆಯ ಸರಾಸರಿ ಇಳುವರಿ ಎಕ್ರೆಗೆ 20 ರಿಂದ 25 ಟನ್ ಮಾತ್ರ. ಖರ್ಚಿಗೂ ಅದಾಯಕ್ಕೂ ಲೆಕ್ಕ ಹಾಕಿ ನೋಡಿ. ಎಷ್ಟೋ ಮಂದಿ ರೈತರು ಆದಾಯಕ್ಕಿಂತ ಹೆಚ್ಚು ನಷ್ಟದಲ್ಲೇ ಮುಳುಗಿದ್ದಾರೆ. ಆದರೆ ನೈಸರ್ಗಿಕ ಕೃಷಿ ಅನುಸರಿಸುವ ರೈತ ಎಕರೆಗೆ 60 ರಿಂದ 200 ಟನ್‌ವರೆಗೆ ಆತ್ಯುತ್ಕ್ರಷ್ಟ ಕಬ್ಬು ಬೆಳೆಯ ಬಲ್ಲ. ಇದು ಕನಸಲ್ಲ, ವಾಸ್ತವ.

ಈ ಚಮತ್ಕಾರ ಗಮನಿಸಲು ಒಂದೊಂದು ಎಕರೆಯ ಎರಡು ಪ್ಲಾಟ್‌ಗಳನ್ನು ಆಯ್ಕೆಮಾಡಿ. ಒಂದರಲ್ಲಿ ಹೈಬ್ರೀಡಾ ಬೀಜ ಬಿತ್ತಿರಿ. ಇನ್ನೊಂದರಲ್ಲಿ ನಮ್ಮದೇಶದ ಬೀಜ ಬಿತ್ತಿ. ಎರಡಕ್ಕೂ ಯಾವುದೇ ಗೊಬ್ಬರ ಹಾಕಬೇಡಿ, ಕೀಟನಾಶಕ ಸಿಂಪಡಿಸಬೇಡಿ. ಎರಡರ ಇಳುವರಿಯನ್ನು ಗಮನಿಸಿ. ಹೈಬ್ರೀಡ್ ಗದ್ದೆಯ ಇಳುವರಿ ಕಡಿಮೆಯಾಗಿದೆ ಎಕೆ? ಇದೇ ಹೈಬ್ರೀಡ್ ಗದ್ದೆಗೆ ರಸಾಯನಿಕ ಗೊಬ್ಬರ, ಕೀಟನಾಶಕ,, ಕಳೆನಾಶಕ ಬಳಸಿ. ಆಗ ಇಳುವರಿ ಹೆಚ್ಚಗುತ್ತದೆ.ಅಂದರೆ ಹೈಬ್ರೀಡ್ ಬಿಜದಲ್ಲಿ ಸ್ವಯಂ ಬೆಳೆಯುವ, ಉತ್ಪಾದಿಸುವ ಶಕ್ತಿ ಇಲ್ಲ, ರಸಾಯನಿಕ ಬಿದ್ದರೇನೆ ಅದಕ್ಕೆ ಮೆರಗು. ಆದರೆ ನಾಟಿ ಬೀಜದಲ್ಲಿ ಸ್ವಯಂ, ಸಂಪೂರ್ಣ ಶಕ್ತಿ ಆಡಗಿದೆ. ಆದು ತನ್ನ ಆ ಕೆಚ್ಚುನಂಬಿ ಬೆಳೆಯುತ್ತದೆ.

ಗಮನಿಸಿ :ಒಂದು ಚದುರ ಅಡಿ ಹಸಿರೆಲೆ, ಸೂರ್ಯ ನಿಂದ ಪ್ರತಿದಿನ 12.5 ಕೆಲೋರಿ ಶಕ್ತಿಯನ್ನು ಗ್ರಹಿಸಿ 4.5 ಗ್ರಾಂ ಆಹಾರ ಉತ್ಪಾದಿಸುತ್ತದೆ. ಇದನ್ನು ಹೊರಗಿನಿಂದ ಹೆಚ್ಚಿಸಲು ಸಾಧ್ಯವೇ ಇಲ್ಲ. ಇದು ನಿಸರ್ಗದ ನಿಯಮ. ಕಬ್ಬು ಬೆಳೆಯಾಗಲಿ, ಭತ್ತವಾಗಲಿ, ಯಾವುದೇ ಇತರ ಬೆಳೆಗಳಾಗಿರಲಿ ಹಗಲು ಆಹಾರ ಉತ್ಪಾದಿಸಿ ಸಂಜೆ ಆಹಾರ ವಿಲೇವಾರಿ ಮಾಡುತ್ತವೆ. ತಾನು ಸಿದ್ಧ ಪಡಿಸಿದ 100 ಕಿಲೋ ಆಹಾರದಲ್ಲಿ 40 ಕಿಲೋ ಧಾನ್ಯ ಅಥವಾ ಕಾಳುಗಳ ನಿರ್ಮಾಣಕ್ಕಾಗಿ, 20 ಕಿಲೋ ಆಹಾರವನ್ನು ಬೇರುಗಳ ಸಧೃಢತೆಗಾಗಿ, 20 ಕಿಲೋ ಆಹಾರವನ್ನು ಬೆಳೆಯ ಅಭಿವೃದ್ಧಿಗಾಗಿ ಉಳಿದ 20 ಕಿಲೋ ಆಹಾರವನ್ನು ಗಿಡ ಹಾಗೂ ಕಾಳುಗಳ ಸ್ವಾದ, ಸುಗಂಧ, ಪೌಷ್ಟಿಕತೆಗಾಗಿ ಹಂಚಿಕೆ ಮಾಡುತ್ತದೆ. ಇಲ್ಲಿ ಧಾನ್ಯ ನಿರ್ಮಾಣಕ್ಕಾಗಿ ಮಿಾಸಲಾಗಿರುವ 40 ಕಿಲೋ ಶಕ್ತಿಯನ್ನು ಹೊರಗಿನಿಂದ ಹೆಚ್ಚಿಸಲು ಸಾಧ್ಯವೇ ಇಲ್ಲ, ಇದು ನಿಸರ್ಗದ ಪಕ್ಕಾ ಗಣಿತ ಮತ್ತು ವಿಜ್ಞಾನಗಳ ಸೂತ್ರ. ಆಧುನಿಕ ಕೃಷಿ ವಿಜ್ಞಾನ ಇಲ್ಲೇನು ಮಾಡಿದೆ ನೋಡಿ ; ಗಿಡದ ಸರ್ವಾಗೀಣ ಅಭಿವೃದ್ಧಿಗೆ ಹಂಚಿಕೆಯಾಗಿರುವ ಶಕ್ತಿಗಳಲ್ಲಿ ಬೇರಿನ ಪಾಲಿನಿಂದ 10 ಕಿಲೋ, ಸ್ವಾದ, ಸುಗಂಧ, ಪೌಷ್ಟಿಕತೆಯ ಭಾಗದಿಂದ 15 ಕಿಲೋ, ಬೆಳೆಯ ಅಭಿವೃದ್ಧಿ ಪಾಲಿನಿಂದ 5 ಕಿಲೋ ಹೀಗೆ ಒಟ್ಟು 30 ಕಿಲೋ ಶಕ್ತಿಯನ್ನು ಅವುಗಳ ಪಾಲಿನಿಂದ ಬೇರ್ಪಡಿಸಿ ಧಾನ್ಯ ನಿರ್ಮಾಣದೆಡೆಗೆ ಸಾಗಿಸುತ್ತದೆ. ಆ ಮೂಲಕ ಇಳುವರಿ ಹೆಚ್ಚುವಂತೆ ನೋಡಿಕೊಳ್ಳುತ್ತದೆ. ಹೀಗಾಗಿಯೆ ನಮ್ಮ ಹೈಬ್ರೀಡ್ ತಳಿಯ ಆಹಾರಗಳಲ್ಲಿ ನೈಜ ಸ್ವಾದ, ಸುಗಂಧ, ಪೌಷ್ಟಿಕತೆಗಳು ಗೈರು ಹಾಜರಾಗಿರುತ್ತವೆ. ಬೇರಿನ ಶಕ್ತಿ ಸ್ವಾದ, ಸುಗಂಧ, ಪೌಷ್ಟಿಕತೆ ಮತ್ತು ಬೆಳವಣಿಗೆಯ ಸೊಬಗು ಕಳೆದು ಕೊಂಡ ಬೀಜ ಸ್ವಯಂ ಪ್ರಕಾಶಿಸಲು ಸಾಧ್ಯವೇ ?..... ಆ ಕೊರತೆಯನ್ನು ರಸಾಯನಿಕಗಳು ನೀಗಿಸಲು ಪ್ರಯತ್ನಿಸುತ್ತವೆ. ಆ ಪ್ರಯತ್ನ ಮತ್ತು ಉದ್ದೇಶ ಆತ್ಮ ಹತ್ಯಾ ಕಾರಿಯಾದದ್ದು. ನಿಸರ್ಗ ನಿಯಮಕ್ಕೆ ವಿರುದ್ಧವಾದದು.

ಇದೀಗ ಪಾಳೇಕರರ ಕಬ್ಬು ಕೃಷಿಯತ್ತ ಹೊರಳೋಣ. ಚಾಲ್ತಿಯಲ್ಲಿರುವ ಆಧುನಿಕ ಕೃಷಿ ವಿಧಾನ ಮತ್ತು ಸಾವಯವ ಕೃಷಿ ವಿಧಾನಗಳಲ್ಲಿ ಒಂದು ಎಕರೆ ಪ್ರದೇಶದಲ್ಲಿ ಕಬ್ಬು ನಾಟಿ ಮಾಡಲು 4 ಟನ್ ಬಿತ್ತನೆ ಕಬ್ಬು ಬೇಕು. ನಮ್ಮ ರೈತರು 2 ಅಡಿಯಿಂದ 3 ಅಡಿ ಸಾಲಿನಲ್ಲಿ ಕಬ್ಬು ನೆಡುತ್ತಾರೆ. ಒಂದೇ ಗುಳಿಗೆ 2ರಿಂದ 3 ತುಂಡುಗಳನ್ನು ನೆಡುತ್ತಾರೆ. ಸಾಮಾನ್ಯವಾಗಿ ನಮ್ಮ ರೈತರು 2 ಗಿಣ್ಣು ಗಳಿರುವ ಕಬ್ಬು ನೆಡುತ್ತಾರೆ. ಇಲ್ಲಿ ಕಬ್ಬಿನ ಫಸಲು ಒತ್ತೊತ್ತಾಗಿ ಬೆಳೆಯುತ್ತೆದೆ ಮತ್ತು ಇಡೀ ಕಬ್ಬಿನ ತೋಟ ಕತ್ತಲೆ ಗಟ್ಟುತ್ತದೆ. ಕಬ್ಬಿನ ಬೆಳೆ ದಟ್ಟವಾಗಿರುವ ಕಾರಣ ಎಲ್ಲ ಎಲೆಗಳಿಗೂ ಬಿಸಿಲು ತಾಗುವುದಿಲ್ಲ. ಹೀಗಾಗಿ ಈ ಫಸಲುಗಳಿಗೆ ಸೂರ್ಯ ಕಿರಣಗಳಿಂದ ಶಕ್ತಿ ಸಂಚಯವಾಗುವುದಿಲ್ಲ. ಹೀಗಾಗಿ ಇಲ್ಲಿ ಇಳುವರಿ ಕಮ್ಮಿ.

ನೈಸರ್ಗಿಕ ಕೃಷಿ ವಿಧಾನದಲ್ಲಿ ಒಂದು ಎಕ್ರೆ ಕಬ್ಬಿನ ನಾಟಿಗೆ 170 ಕಬ್ಬುಗಳು ಮಾತ್ರವೇ ಸಾಕು. ಅಂದರೆ ಟನ್ ಮಾತ್ರ. ಆಧುನಿಕ ಬೇಸಾಯದವರು ನಾಟಿ ಮಾಡಲು ಇದರ 16 ರಷ್ಟು ಪಟ್ಟು ಹೆಚ್ಚು ಬಳಸುತ್ತಾರೆ. ಕಬ್ಬಿನ ಸಾಲುಗಳು ದಕ್ಷಿಣೋತ್ತರಕ್ಕಿರಬೇಕು. ಸಾಲಿನಿಂದ ಸಾಲಿಗೆ 8 ಅಡಿ ಅಂತರ ಇರಬೇಕು. ದಕ್ಷಿಣೋತ್ತರದ ಸಾಲುಗಳಲ್ಲಿ 2 ಅಡಿಗೆ ಒಂದರಂತೆ ಒಂದು ಬಿತ್ತನೆ ನೆಡಬೇಕು.ಒಂದು ಎಕರೆಗೆ 2792 ಬಿತ್ತನೆ ಬೇಕು. ಒಂದು ಕಬ್ಬಿನಲ್ಲಿ 16 ಗಿಣ್ಣುಗಳು. ಆದರಂತೆ 170 ಕಬ್ಬುಗಳು ಒಂದು ಎಕರೆಯಲ್ಲಿ ನಾಟಿ ಮಾಡಲು ಸಾಕು. ಬಿತ್ತನೆ ಹೇಗಿರಬೇಕು ? 6 ತಿಂಗಳಿನಿಂದ 8 ತಿಂಗಳ ಅವಧಿಯ ಕಬ್ಬು ಬಿತ್ತನೆಗೆ ಅತ್ಯುತ್ತಮ. ಅದಕ್ಕಾಗಿ [illegible] ನಾವೇ [illegible]

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

ಕೃಷಿ ಜೀವನದಲ್ಲಿ ಋತುಮಾನಗಳ ವಿಸ್ಮಯ!

ಸೌರವ್ಯೂಹದ ಪ್ರಮುಖ ಗ್ರಹಗಳ ಪೈಕಿ ಈ ಪೃಥ್ವಿಯೂ ಒಂದು. 4,600 ಮಿಲಿಯ ವರ್ಷಗಳ ಹಿಂದೆ ಈ ಇಳೆ ರೂಪುಗೊಂಡಿತೆಂದು ನಾವೀಗಾಗಲೆ ತಿಳಿದಿದ್ದೇವೆ. 400 ಮಿಲಿಯ ವರ್ಷಗಳ ಹಿಂದೆ ಈ ಭೂಮಿಯ ಮೇಲೆ ಸಸ್ಯಗಳು, ಜೀವಿಗಳು ಉದಯಿಸಿದವು. ಇದಾದ ಎಷ್ಟೋ ವರ್ಷಗಳ ನಂತರ ಮಾನವ ಜೀವಿ ಜೀವ ತಳೆದ. ಈ ಇಳೆಯ ಮೇಲೆ ಬೆಳೆದ ಎಲ್ಲವೂ ಮತ್ತೆ ಇಳೆಯಲ್ಲೇ ಲೀನವಾಗುತ್ತವೆ. ಕೋಟ್ಯಾನುಕೋಟಿ ವರ್ಷಗಳಿಂದ ಇದು ಹೀಗೆಯೇ ನಡೆದುಬಂದಿದೆ. ಇಷ್ಟಾದರೂ ಈ ಭೂಮಿಯ ಮೇಲೆ ಒಂದು ಇಂಚು ಪದರು ಅಥವಾ ಮಣ್ಣು ಬೆಳೆಯಲು 200ರಿಂದ 500 ವರ್ಷಗಳ ಅವಧಿ ಬೇಕು.

ಈ ಹಿನ್ನೆಲೆಯಲ್ಲಿ ಸುಭಾಷ್ ಪಾಳೇಕರರು ಹೇಳುತ್ತಾರೆ....

ಮಿತ್ರರೆ, ಪ್ರತಿ ಜೀವಿಯ ಸೃಷ್ಟಿಯ ಹಿಂದೆ ಸಾವಿರಾರು ವರ್ಷಗಳ ಚರಿತ್ರೆ ಅಡಗಿದೆ. ಆ ಮಟ್ಟಿಗೆ ನಿಸರ್ಗದ ಪರಿಶ್ರಮ ಅಪಾರವಾದದ್ದು. ಸೃಷ್ಟಿಯ ಪ್ರತಿಯೊಂದರಲ್ಲೂ ಒಂದುರೊಳಗೊಂದು ಬೆಸೆದುಕೊಂಡಿರುವ ಕೊಂಡಿಗಳಿವೆ. ಋತುಮಾನಗಳು, ನಕ್ಷತ್ರಗಳು ಪ್ರತೀ ಜೀವಿಯ ಮೇಲೂ ತಮ್ಮದೇ ಆದ ಪ್ರಭಾವ ಹೊಂದಿದೆ. ಈ ಕುರಿತ ಅಧ್ಯಯನ ನಿಜಕ್ಕೂ ಕುತೂಹಲಕಾರಿಯದ್ದು ಮತ್ತು ಹೆಜ್ಜೆ ಹೆಜ್ಜೆಗೂ ಬೆರಗುಗೊಳಿಸುವಂಥದ್ದು.

ಸೃಷ್ಟಿಯೇ ಸರ್ವಸ್ವವಾಗಿದ್ದ ಕಾಲದಲ್ಲಿ ಕೃಷಿಕರಾದ ಎಲ್ಲರಿಗೂ ಈ

ಋತುಮಾನಗಳು, ಮಳೆ ನಕ್ಷತ್ರಗಳ ಕುರಿತು ಆಳವಾದ ತಿಳುವಳಿಕೆ ಇತ್ತು. ನಿಸರ್ಗದ ಭಾಷೆ ರೈತರಲ್ಲಿ ಅಂತರ್ಗತವಾಗಿತ್ತು. ಋತುಮಾನ, ಮಳೆ ನಕ್ಷತ್ರ ಆಧರಿಸಿ ಬೆಳೆ ಬೆಳೆವ ನಮ್ಮ ಯಾವ ರೈತರಲ್ಲೂ ಇಲ್ಲ ಕೃಷಿ ವಿಜ್ಞಾನಿಗಳ ಬಳಿಯೂ ಇಲ್ಲ.

ಅಶ್ವಿನಿ, ಭರಣಿ, ಕೃತಿಕಾ, ರೋಹಿಣಿ, ಮೃಗಶಿರಾ ಮತ್ತು ಮತ್ತೆ ಮುಂದುವರಿದು ಹಸ್ತ, ಚಿತ್ರೆ, ಸ್ವಾತಿ, ವಿಶಾಖ... ಈ ಮಳೆಗಳ ಆವರಣದಲ್ಲೆ ಬೆಳೆ ಬೆಳೆಯುವ ವಿಧಾನ: ಕೀಟ ನಿಯಂತ್ರಣ ಕಳೆ ನಿಯಂತ್ರಣಗಳ ಸರಳ ವಿಜ್ಞಾನ ಅಡಗಿದೆ. ಶರದೃತುವಿನ ಚಂದ್ರನ ಕಿರಣಗಳು ಬೆಳೆಯ ಮೇಲೆ ಉಂಟುಮಾಡುವ ಪರಿಣಾಮ

ನಿಮಗೆ ಅರಿವಾದರೆ ನೀವೆಷ್ಟು ವಿಸ್ಮಯಗೊಳ್ಳುವಿರಿ ಗೊತ್ತೆ? ಜಡಿ ಮಳೆ, ತುಂತುರು ಮಳೆ, ಇಬ್ಬನಿಗಳ ವಿದನ ಕೃಷಿಕರಾದವರಿಗೆ ಕೇವಲ ಸಾಮಾನ್ಯ ಜ್ಞಾನವಾಗಿದ್ದರಷ್ಟೇ ಸಾಲದು. ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಋತುಗಳ ಕುರಿತು ಮೇಲ್ನೋಟದ ತಿಳುವಳಿಕೆ ಇದ್ದರೆ ಸಾಲದು, ಋತುಮಾನಗಳ ಜೊತೆಗೆ ಅವಿನಾಭಾವ ಸಂಬಂಧ ಏರ್ಪಟ್ಟರೆ ರೈತನಾದವನು ಬೆಳೆಗಳೊಂದಿಗೆ ತಾನೂ ಬೆಳೆಯಬಲ್ಲ,ನರ್ತಿಸಬಲ್ಲ.ಆತನ ಆನಂದೋಲ್ಲಾಸಗಳಿಗೆ ಪಾರವೆಂಬುದೇ ಇರುವುದಿಲ್ಲ. ಈ ಋತುಮಾನಗಳ ಚಿತ್ರ-ವಿಚಿತ್ರ ಸ್ವಭಾವಗಳನ್ನು ಬೆಳೆಗಳೊಂದಿಗೆ ಅವುಗಳು ವ್ಯವಹರಿಸುವ ರೀತಿಯನ್ನು, ನಿಸರ್ಗ ವ್ಯವಸ್ಥೆಯಲ್ಲಿ ಅವುಗಳಿಗಿರುವ ಬಿಡಿ ಬಿಡಿಯಾಗಿ ಆನಂತರ ವಿವರಿಸುತ್ತೇನೆ. ಇವ್ಯಾವೂ ಬೆಳೆ ಬೆಳೆಯುವ ರೀತಿಗೆ ಅನುಷಂಗಿಕ ಮಾಹಿತಿಗಳಲ್ಲ,ಬದಲಿಗೆ ಪೂರ್ತಿ ಪೂರಕ ಜೀವಾಧಾರಕಗಳು.

ಸೌರವ್ಯೂಹದ ಪ್ರಮುಖ ಗ್ರಹಗಳ ಪೈಕಿ ಈ ಪೃಥ್ವಿಯೂ ಒಂದು. ಈ ಭೂಮಿಯ ಮೇಲೆ ಒಂದು ಇಂಚು ಪದರು ಅಥವಾ ಮಣ್ಣು ಬೆಳೆಯಲು ೨೦೦ರಿಂದ ೫೦೦ ವರ್ಷಗಳ ಅವಧಿ ಬೇಕು.

ಹಾಗೆಯೇ ಮಳೆ ನಕ್ಷತ್ರಗಳ ವೈಶಿಷ್ಟ್ಯ, ಅವುಗಳ ಶಾಂತವೂ, ಆರ್ಭಟವೂ ಹಾಗೂ ಆಟೋಟ ಉಪಟಳಗಳ, ನರ್ತನಗಳ ಲಯವನ್ನು ನಿರೂಪಿಸುತ್ತಾ ಸಾಗುತ್ತೇನೆ. ನೈಸರ್ಗಿಕ ಕೃಷಿಯಲ್ಲಿ ತೊಡಗುವ ಮತ್ತು ನೈಸರ್ಗಿಕ ಪರಿಸರದಲ್ಲಿ ಬೆಳೆದ ಫಸಲುಗಳನ್ನು ಸೇವಿಸುವ ವಿಕಾರ ರಹಿತ ಮನಸ್ಸುಗಳು ಸೃಷ್ಟಿಯ ಚಿದಂಬರ ರಹಸ್ಯಗಳ ಎದೆ ಬಡಿತಗಳನ್ನು, ನಾಡಿಮಿಡಿತಗಳನ್ನು ಆಲಿಸಲು ಮತ್ತು ಅರಿಯಲು ಸಡಗರದ ಗೆಜ್ಜೆಕಟ್ಟಿ ಓಡಿ ಬರುವುದು ಸಹಜ.

ಜೀವಂತ ಭೂಮಿ

ಭೂಮಿಯ ಮೇಲ್ಮೈ ಮೇಲೆ ಒಂದೇ ಒಂದು ಇಂಚು ಮಣ್ಣು ರೂಪುಗೊಳ್ಳ ಬೇಕಾದರೆ 200 ವರ್ಷಗಳಿಂದ 500 ವರ್ಷಗಳವರೆಗಿನ ಅವಧಿ ಬೇಕಿದೆ ಎಂದು ಈ ಹಿಂದೆ ಹೇಳಿರುವೆನಷ್ಟೆ ಭೂಮಿ ಮೇಲಿನ ಈ ಒಂದಿಂಚು ಮೇಲ್ಮಣ್ಣು ಅತ್ಯಂತ ಸಾರವಂತ ಮಣ್ಣು. ಇಲ್ಲಿ ಬಿರುಗಾಳಿ, ಸುಳಿಗಾಳಿ, ಚಂಡಮಾರುತಗಳ ಪಾತರಗಳೇನು ಅನ್ನುವುದನ್ನು ಆ ನಂತರ ತಿಳಿಯೋಣ. ಕೃಷಿ ಭೂಮಿಯಲ್ಲಿ ಬೆಳೆಗೆ ಪೂರಕವಾದ ಸಾರಯುಕ್ತ ಮಣ್ಣಿರುವುದು ಮೇಲ್ಮೈನಿಂದ 4ರಿಂದ 9ಂಚು ಆಳದವರೆಗೆ ಮಾತ್ರ. ಗಿಡದ ಬೇರುಗಳು ತಮ್ಮ ಸಾರಯುಕ್ತ ಪೋಷಕಾಂಶ ಮತ್ತು ಗಾಳಿಗಾಗಿ ಅವಲಂಬಿಸಿರುವ ವ್ಯಾಪ್ತಿ ಈ 4ರಿಂದ9 ಇಂಚು ಮಾತ್ರ ಈ ವ್ಯಾಪ್ತಿಗಿಂತಲೂ ಆಳಕ್ಕೆ ಬೇರುಗಳು ಸಾಗುವುದು ನೀರಿಗಾಗಿ ಮತ್ತು ಗಿಡ-ಮರಗಳ ಭದ್ರತೆಗಾಗಿ ನೈಸರ್ಗಿಕ ವ್ಯವಸ್ಥೆಯಲ್ಲಿ ಗಿಡಗಳ ಅನ್ನ ಚಕ್ರ ಸ್ವಯಂ ಪರಿಪೂರ್ಣವಾಗಿರುತ್ತದೆ. ಮಾನವ ಹಸ್ತಕ್ಷೇಪವಿರುವ ಬೇಸಾಯ ಪದ್ಧತಿಯೆ ಇವತ್ತಿನ ಕೃಷಿ ಪದ್ಧತಿ. ಸಜೀವನ ಇಂದ್ರಿಯಗಳು ಮತ್ತು ನಿರ್ಜೀವ ಅವಶೇಷಗಳು ಇಲ್ಲಿ ಬೆಳೆಯ ಅನ್ನಚಕ್ರದ ಕೊಂಡಿ. ನಮ್ಮದನ, ಕರು, ಎತ್ತುಗಳು ವ್ಯವಸಾಯಕ್ಕೆ ಪೂರಕ. ಅವುಗಳ ತೊಪ್ಪೆ ಮತ್ತು ಗಂಜಲಗಳನ್ನು ಮತ್ತೆ ನಾವು ಗೊಬ್ಬರದ ರೂಪದಲ್ಲಿ ವ್ಯವಸಾಯ ಭೂಮಿಗೆ ಹಿಂದಿರುಗಿಸುತ್ತೇವೆ. ಮಣ್ಣಿನಿಂದ ಪಡೆದದ್ದು ಮತ್ತೆ ಮಣ್ಣಿಗೆ ಹಿಂದಿರುಗುತ್ತದೆ. ಬೆಳೆದ ಬೆಳೆಯನ್ನು ಆಹಾರವಾಗಿ ಪಡೆದು ಮತ್ತೆ ಅದನ್ನು ಬೆಳೆದಲ್ಲಿಗೆ ವಿಸರ್ಜಿಸಿದರೆ ಒಂದು ಅನ್ನಚಕ್ರ ಪೂರ್ಣಗೊಳ್ಳುತ್ತದೆ.

ಸೃಷ್ಟಿಯಲ್ಲಿ ಪ್ರತಿಯೊಂದು ಜೀವಿಗೂ ಅನ್ನದ ವ್ಯವಸ್ಥೆಯನ್ನು ನಿಸರ್ಗವೇ ಕಲ್ಪಿಸಿದೆ. ಹಾಗೆಯೇ ಸೃಷ್ಟಿಯ ಪ್ರತಿಯೊಂದು ಜೀವಿಯ ಅಳಿವು ನಿಸರ್ಗಕ್ಕೆ ಅನ್ನವಾಗಿದೆ. ಭೂಮಿಯ ಮೇಲೆ ಸಹಜವಾಗಿ ಬೆಳೆಯುವ ಪ್ರತಿ ಗಿಡ,ಮರ ತನ್ನ ಅವಯವ, ಅದರ ಎಲೆ, ಹೂ, ಹಣ್ಣು, ಕಾಯಿ ಕಾಂಡ, ಬೇರುಗಳ ಸಮೇತ ಆಯುಷ್ಯ ಇರುವವರೆಗೂ ಮತ್ತು ಆಯುಷ್ಯ ಪೂರ್ತಿಯಾದ ಬಳಿಕ ಭೂಮಿಗೆ ಹಿಂದಿರುಗುತ್ತಾ ಹೋಗುತ್ತದೆ. ಮಣ್ಣಿನ ಮೇಲ್ಪದರ ಮತ್ತು ಆಳದಲ್ಲಿ ಕಣ್ಣಿಗೆ ಕಾಣುವ-ಕಾಣದ ಕೋಟ್ಯಂತರ ಜೀವಿಗಳಿವೆ. ಇವೆಲ್ಲವೂ ನೈಸರ್ಗಿಕ್ಕೆ ಪೂರಕವಾಗಿ ಒಂದನೊಂದು ಅವಲಂಬಿಸಿವೆ. ಗಿಡ-ಮರಗಳ ಅವಶೇಷಗಳನ್ನು ತಿಂದು ಬಾಳುವ ಜೀಗಳುಸತ್ತ ಬಳಿಕ ಅವೇ ಗಿಡ-ಮರಗಳಿಗೆ ಪೋಷಕಾಂಶಗಳಾಗಿ ಲಭಿಸುತ್ತವೆ. ಈ ಜೀವಿಗಳನ್ನು ಮತ್ತು ಬೆಳೆದ ಫಸಲನ್ನು ತಿಂದು ಬದುಕುವ ಕಪ್ಪೆ ಇಲಿ, ಇರುವೆ, ಹಾವು, ಹಕ್ಕಿ, ಇತ್ಯಾದಿ ಕೋಟ್ಯಾನುಕೋಟಿ ಜೀವಿಗಳು ಇಡೀ ನಿಸರ್ಗ ವ್ಯವಹಾರದಲ್ಲಿ ತಮ್ಮ ಪ್ರಾಮುಖ್ಯತೆ ಸಾರಿ ಮತ್ತೆ ಮರಳಿ ಮಣ್ಣಾಗುತ್ತವೆ. ಹಾಗೆಯೇ ಮನುಷ್ಯ ಕೂಡ. ಋತುಮಾನಗಳಿಗೆ ಅನುಗುಣವಾಗಿ ಭೂಮಿ ತನ್ನ ಮೇಲಿನ ಸಕಲ ಜೀವರಾಶಿಗಳಿಗೂ ಒಂದು ಅಸ್ತಿತ್ವ ಕಲ್ಪಿಸಿಕೊಟ್ಟಿದೆ.

ಹೇಮಂತ ಋತುವಿನಲ್ಲಿ ಗಿಡ-ಮರಗಳು ಫಲಿತವಾಗುತ್ತವೆ. ಶಿಶಿರನ ಕಾಲಕ್ಕೆ ಎಲೆಗಳು ಉದುರತೊಡಗುತ್ತವೆ. ಎಲೆ ಉದುರುವ ಮುನ್ನ ಮರ ಆ ಎಲೆಯ ಸ್ವಾದನ್ನೆಲ್ಲ ಮುಂದಿನ ತನ್ನ ಚಿಗುರುಗಳಿಗಾಗಿ ಹೀರಿಕೊಂಡಿರುತ್ತವೆ. ಉದುರಿದ, ಎಲೆ, ಕಡ್ಡಿ, ಕಾರುಗಳು ಆ ಮರದ ಬುಡದಲ್ಲಿ ಹರಡಿಕೊಳ್ಳುತ್ತವೆ. ಆ ಮರದ ಬೇರುಗಳು ತನ್ನ ಆಹಾರ ಸಂಗ್ರಹಕ್ಕಾಗಿ ತನ್ನದೇ ಆದ ಜಾಲ ರೂಪಿಸುತ್ತವೆ. ಅಲ್ಲಿ ಗೆದ್ದಲು,ಇರುವೆ, ಇಲಿ ಆ ಬೇರುಗಳಿಗೆ ಪೂರಕವಾದ ಕಾರ್ಯನಿರ್ವಹಿಸುತಿರುತ್ತವೆ. ಜೊತೆಗೆ ಅದೇ ಆವರಣದಲ್ಲಿ ಕಣ್ಣಿಗೆ ಕಾಣದ ಕೋಟ್ಯಾನುಕೋಟಿ ಜೀವಿಗಳು ಹುಟ್ಟುತ್ತಾ ಸಾಯುತ್ತ ಮಣ್ಣಿನ ಕಣ ಕಣಗಳ ನಡುವೆ ಸೂಕ್ಷ್ಮ ರಂಧ್ರ ಕೊರೆಯುತ್ತ ಮಣ್ಣಿನ ಮೇಲ್ಪದರನ್ನು ಹೂವಿನಂತೆ, ಮೃದುಗೊಳಿಸುತ್ತವೆ.

ಮಾನ್ಸೂನ್ ನಮ್ಮಲ್ಲಿ ರಭಸ ಮಳೆ. ನೈಸರ್ಗಿಕ ವಾತಾವರಣದಲ್ಲಿ ಈ ಮಳೆ ಎಷ್ಟೇ ಆರ್ಭಟಿಸಿದರೂ ಮಣ್ಣಿನ ಸವಕಳಿ ಉಂಟಾಗುವುದಿಲ್ಲ ಬಿದ್ದ ಮಳೆ ನೀರೇ ಆ

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

ಹೂವಿನಂಥ, ಸ್ಪಂಜಿನಂಥ ಮಣ್ಣು ಹೀರಿಕೊಂಡು ತನ್ನ ಕೊಟ್ಯಾನು ಕೋಟಿ ರಂಧ್ರಗಳ ಮೂಲಕ ನೆಲದಾಳಕ್ಕೆ ಸರಾಗವಾಗಿ ಕಳುಹಿಸುತ್ತದೆ. ನಿಸರ್ಗದ ನಿಜವಾದ ಸೊಬಗು ಅಡಗಿರುವುದು ಇಲ್ಲಿಯೇ.

ಸೇರಿದಂತೆ ಲಕ್ಷಾಂತರ ಜೀವಿಗಳು ನಿಸರ್ಗ ವ್ಯವಸ್ಥೆಯಲ್ಲಿ ತಮ್ಮದೇ ಆದುಬಗೆಯಲ್ಲಿ ಭೂಮಿಯನ್ನು ಉತ್ತು ಹದಗೊಳಿಸಿರುತ್ತವೆ. ಮಳೆ ಬೀಳುತ್ತಿದ್ದಂತೆ ಭೂಮಿಯ ಉಷ್ಣಾಂಶ ತಗ್ಗಿ ಬಿಲಗಳಿಂದ ಹೊರ ಬರುತ್ತವೆ. ಹೀಗೆ ಹೊರಬಂದವುಗಳು ಬೆಳೆಗಳಿಗೆ

ಪೂರಕವಾದ ಕೆಲಸದಲ್ಲಿ ತೊಡಗುತ್ತವೆ. ನಮ್ಮ ಈಗಿನ ಬೇಸಾಯ ಕ್ರಮದಲ್ಲಿ ಮುಂಗಾರಿಗಿಂತಮುಂಚೆಯೆಹೊಲ-ಗದ್ದೆಗಳನ್ನು ಉತ್ತು ಹಸನು ಮಾಡಿಕೊಂಡಿರುತ್ತೇವೆ. ಹೀಗೆ ಉತ್ತು ಹಸನು ಮಾಡಿಕೊಳ್ಳುದರಮೂಲಕ ಆಗುವ ಅನಾಹುತ ನಮ್ಮ ಅರಿವಿಗೆ ಬಂದೇ ಇರುವುದಿಲ್ಲ. ಫಸಲು ತೆಗೆದು ಕೊಂಡು ತಕ್ಷಣವೆ ಉಳುಮೆ ಮಾಡುವುದರಿಂದ ನೈಸರ್ಗಿಕ ವಾಗಿ ಜರುಗಬೇಕಾದಕ್ರಿಯೆಗಳು ಜರುಗುವುದಿಲ್ಲ. ಕೊಡು- ಕೊಳ್ಳುವ ಸಂಬಂಧದಲ್ಲಿ ವಾಹಕ ಪಾತ್ರ ನಿರ್ವಹಿಸುವ ಜೀವಾಣುಗಳು ಅಲ್ಲಿ ಇರುವುದಿಲ್ಲ. ಮಾನ್ಸೂನ್ ಮಳೆಯ ರಾಕ್ಷಸ ಹೊಡೆತ ಭೂಮಿಯ ಮೇಲ್ಪದರಿನ ಮಣ್ಣನ್ನೆಲ್ಲ ಕೊಚ್ಚಿಕೊಂಡು ಹೋಗುತ್ತದೆ. ಮೇಲ್ಪದರ ಮಣ್ಣು ಅತ್ಯಂತ ಸಾರಯುಕ್ತ ಮಣ್ಣು. ಉತ್ತು ನೆಲದಲ್ಲಿ ಜೀವಾಣುಗಳಿಗೆ ನೆಲೆ ಇಲ್ಲವಾದ್ದರಿಂದ ಮಳೆ ನೀರು ನೆಲದಾಳಕ್ಕೆ ಇಳಿಯುವ ಕಣ್ಣುಗಳೇ ಇರುವುದಿಲ್ಲ.'

ನಿಮ್ಮ ಉಳುಮೆಯಿಂದಾಗಿ ಭೂಮಿಯ ಸಾರ ನಷ್ಟವಾಯಿತು. ಎರಡನೆಯದಾಗಿ ನಿಮ್ಮಲ್ಲಿ ಸವಕಳಿಯಾದ ಆ ಮಣ್ಣು ಹಳ್ಳಿ ನದಿ ಪಾತ್ರಗಳನ್ನಿಡಿದು ಸಮುದ್ರದೆಡೆಗೆ ಹರಿಯಿತು. ನಿಮ್ಮ ಕೆರೆ, ಕಟ್ಟೆ, ಹಳ್ಳ, ಬಾವಿ. ಅಣೆಕಟ್ಟುಗಳಲ್ಲಿ ಹೊಳು ತುಂಬಿಕೊಂಡಿತು. ಈ ಉಳುಮೆಯ ಕಾರಣವಾಗೀಯೇ ದೊಡ್ಡ ಅಣೆಕಟ್ಟುಗಳಿಗೆ ಭವಿಷ್ಯವೆ ಇಲ್ಲವಾದಂತಾಗಿದೆ. ಬಾಕ್ರನಂಗಲ್ ಸೇರಿದಂತೆ ದೇಶದ ಬಹುತೇಕ ಅಣೆಕಟ್ಟುಗಳಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಹೊಳು ತುಂಬಿ ನೀರು ಸಂಗ್ರಹಣೆಯ ಸಾಮರ್ಥ್ಯ ಕುಸಿಯುತ್ತದೆ. ಇಷ್ಟೆಲ್ಲದರ ನಡುವೆ ನೀವು ಉಳುಮೆ ಮಾಡಿದ ತಪ್ಪಿಗೆ ಕೆರೆಗಳಲ್ಲಿ ಹೊಳಾಗಿ ಪರಿವರ್ತನೆಗೊಂಡಿರುವ ನೀಮ್ಮದೇ ನೆಲದ ಮಣ್ಣನ್ನು ವಾಪಸ್ಸು ತರಲು ಅನಗತ್ಯವಾಗಿ ಹಣ ಮತ್ತು ಶ್ರಮ ಖರ್ಚು ಮಾಡಬೇಕು'

ನಾನು ವ್ಯವಸಾಯದಲ್ಲಿ ಟ್ರ್ಯಾಕ್ಟರ್ ಬಳಕೆಯನ್ನು ವಿರೋಧಿಸುತ್ತಿರುವುದು ಈ ಕಾರಣಕ್ಕಾಗಿಯೆ. ಟ್ರ್ಯಾಕ್ಟರ್‌ಗಳಲ್ಲಿ ಉಳುಮೆ ಮಾಡುವುದರಿಂದ ಭೂಮಿಯ ಮೇಲ್ಪದರದಲ್ಲಿರುವ ಸಾರಯುಕ್ತ ಮಣ್ಣು ಮುಗುಚ್ಚಿ ಬಿದ್ದು ನಿಸ್ಸಾರ ಮಣ್ಣು ,ಮೇಲ್ಪದರಕ್ಕೆ. ಬರುತ್ತದೆ. ಇದರೊಂದಿಗೆ ಸಾರಯುಕ್ತ ಮಣ್ಣಿನಲ್ಲಿದ್ದ ಎಲ್ಲ ಅವಶೇಷಗಳು, ಜೀವಾಣುಗಳು ಫಸಲಿಗೆ ಲಭಿಸುವುದಿಲ್ಲ. ಇಂಥ ನೆಲದಲ್ಲಿ ಜೀವಾಣುಗಳು ನಿರ್ನಾಮಗೊಳ್ಳುತ್ತವೆ. ಎತ್ತುಗಳನ್ನು ಕಟ್ಟಿ ಬೇಸಾಯ ಮಾಡುವ ಕ್ರಮದಲ್ಲಿ ಈ ಬಗೆಯ ನಷ್ಟ ಆಗುವುದಿಲ್ಲವಾದರೊ, ಮಳೆ ಬಿದ್ದಾಗ ಸಾರವೆಲ್ಲ ಕೊಚ್ಚಿಕೊಂಡು ಹೋಗುವ ಅಪಾಯ ಇದ್ದೇ ಇರುತ್ತದೆ.

ನಿಸರ್ಗದಲ್ಲಿ ನೀರಿನ ವ್ಯವಸ್ಥೆಮಳೆಯೇ ಇಲ್ಲ, ನೀರಿನ ಅಭಾವ ಮತ್ತು ಬರ... ಇಂಥ ಸಂದರ್ಭಗಳಲ್ಲಿನ ನಿಸರ್ಗ ಈ ಭೂಮಿಯ ಮೇಲಿನ ಜೀವಕೋಟಿಗಳನ್ನು ಸಂರಕ್ಷಿಸುತ್ತಾಬಂದೆ ಮಳೆ ಆಶ್ರಯದಲ್ಲಿ ಅಲ್ಪಾವಧಿ ಬೆಳೆಗಳನ್ನು ಬೆಳೆಯುವಲ್ಲಿಯೂ ಮರಗಳು ಬೆಳೆಯುವುದನ್ನು ನೀವು ಕಾಣುತ್ತಿರುವಿರಿ. ನಾಲ್ಕು ವರ್ಷ ಮಳೆ ಬಾರದ ತೀವ್ರ ಬರಗಾಲ ಕಾಡುತ್ತಿದ್ದರೂ ಬೆಟ್ಟದ ಮೇಲೆ ಇರುವ ಆಮರ ಈ ಕೊರತೆಗಳನ್ನು ಕಾಣದಿರುವಂತೆ ಕಾಣುವುದನ್ನು ನೀವು ಕಂಡಿರುವಿರಿ. ಕಲ್ಲು ಬಂಡೆಯ ಮೇಲೂ ಬಂಡೆಯಷ್ಟೇ ಗಟ್ಟಿ ಶರೀರ ಉಳ್ಳ ಮರಗಳನ್ನು ನೀವು ನೋಡಿರುವಿರಿ. ಆಶ್ಚರ್ಯವೆಂದು ಅಷ್ಟೆಲ್ಲ ಕಂಡು ಮತ್ತು ನೋಡಿಯೂ ಬೆಳೆ ಬೆಳೆವಾಗ ನೀರಿನ ಬಳಕೆಯ ವಿಷಯದಲ್ಲಿ ಗೊಂದಲಕ್ಕೆ ಬೀಳಿವಿರಿ.

ಇದೀಗ ಭೂಮಿಯ ಗುರುತ್ವಾ ಕರ್ಷಣ ಬಲದ ಬಗೆಗೆ ನಿಮಗೆ ಚೆನ್ನಾಗಿ ಗೊತ್ತು. ಬಿದ್ದ ನೀರು ಹಳ್ಳಗಳೆಡೆಗೆ, ಕೊಳ್ಳಗಳೆಡೆಗೆ ಸಮುದ್ರ, ಸಾಗರಗಳೆಡೆಗೆ ಹರಿಯುತ್ತದೆ. ಆದರೆ ನಿಸರ್ಗ ತಗ್ಗಿನಲ್ಲಿರುವ ನೀರನ್ನು ಬೆಟ್ಟದ ಮೇಲಿನ ಬಂಡೆಯ ಮೇಲಿರುವ ಗಿಡದ/ಮರದ ನೆತ್ತಿಯವರೆಗೆ ಕೊಂಡೊಯ್ಯುತ್ತದೆ. ಇದನ್ನೇ ಕೇಶಾಕರ್ಷಣ ಶಕ್ತಿ ಎಂದು ಕರೆಯುವುದು. ಭೂಮಿಯ ಆಳದಿಂದ ಬೆಟ್ಟದ ತುದಿಯವರೆಗೂ, ಅಲ್ಲಿಂದ ತುಟ್ಟ ತುದಿಯಲ್ಲಿರುವ ಮರದ ಪ್ರತಿ ಕೊಂಬೆ-ರಂಬೆ-ಎಲೆ-ನೆತ್ತಿಯ ಚಿಗುರವರೆಗೆ ಕೊಂಡೊಯ್ಯುವ ವಿಧಾನವಿದೆಯಲ್ಲ, ಅದನ್ನು ನೀವೊಮ್ಮೆ ನೆನಸಿಕೊಳ್ಳಿ.

ಈ ಕಾರಣಕ್ಕಾಗಿಯೆ ನಾನು ಹೇಳಿದ್ದು ನಿಸರ್ಗ ಎಲ್ಲರ ಮತ್ತು ಎಲ್ಲದರ ಕಾಳಜಿ ವಹಿಸುತ್ತದೆಂದು. ನಾವು ಕೊಡ ಅಲ್ಲಿಯವರೆಗೆ ನೀರು ತೆಗೆದುಕೊಂಡು ಹೋಗಬಹುದು. ಆದರೆ ಅದಕ್ಕಾಗಿ ನಮ್ಮ ಶ್ರಮ ಎಷ್ಟು? ಎಷ್ಟೆಲ್ಲ ಅಶ್ವಶಕ್ತಿ ಹಣದ ಅಪವ್ಯಯ! ನಿಸರ್ಗದಲ್ಲಿ ಈ ಕ್ರಿಯೆ ಅನಾಯಾಸವಾಗಿ ಜರುಗುತ್ತದೆ. ಹಸ್ತಾ ನಕ್ಷತ್ರದ ನಂತರ ಈ ಕ್ರಿಯೆ ಹೆಚ್ಚು ಜಾಗೃತ, ಹೆಚ್ಚೆಚ್ಚು ಸ್ವಯಂ ಚಾಲಿತ, ಮೇಲ್ನೋಟಕ್ಕೆ ನಮಗೆ ಗುರುತ್ವಾಕರ್ಷಣ ಶಕ್ತಿ ಮತ್ತು ಕೇಶಾಕರ್ಷಣ ಶಕ್ತಿಗಳಿಂದೇ ಕಾಣುತ್ತದೆ ಹಸ್ತಾ ಚಿತ್ತೆ ಮಳೆಗಳು ಕೇಶಾಕರ್ಷಣ ಶಕ್ತಿಗೆ ನೆರವಾಗುತ್ತವೆ. ಇದೇ ಸಂದರ್ಭದಲ್ಲಿ ಗುರುತ್ವಾಕರ್ಷಣ ಶಕ್ತಿ ತನ್ನ ಒತ್ತಡದ ಮೂಲಕ ಮಣ್ಣಿನ ಕಣ ಕಣಗಳನ್ನು ರಕ್ಷಣೆ ಮಾಡುತ್ತದೆ.

ಆದ್ದರಿಂದ ಮಿತ್ರರೆ, ನಮ್ಮ ಬೇಸಾಯ ಕ್ರಮವನ್ನು ನಿಸರ್ಗ ನಿಯಮಗಳಿಗೆ ಪೂರಕವಾಗಿ ರೂಪಿಸಿಕೊಳ್ಳಬೇಕು ಬಂಜರು ಭೂಮಿಯಲ್ಲೂ ನಾವು ಯಾವುದೇ ಖರ್ಚುಗಳಿಲ್ಲದೆ ಫಸಲು ತೆಗೆಯಬಹುದು ಆದರೆ ಆ ಪರಿಸ್ಥಿತಿಗೆ, ಜಾಗಕ್ಕೆ ಒಗುವ ಫಸಲುಗಳನ್ನು ಮಾತ್ರ ಹಾಕಬೇಕು. ಮಹಾರಾಷ್ಟ್ರದ ಈಶಾನ್ಯ ಬಂಜರು ಭೂಮಿಗಳಲ್ಲಿ ಸೀತಾಫಲ ಮತ್ತು ನಿಂಬೆ ಸೊಗಸಾಗಿ ಬೆಳೆದಿದೆ, 'ನಮ್ಮ ಮಹಾರಾಷ್ಟ್ರ ಸರಕಾರ ಇಲ್ಲಿ ಈ ಪ್ರಯೋಗ ನಡೆಸಿ ಯಶಸ್ವಿಯಾಗಿದೆ.

ಉಳುಮೆ ಮಾಡಿ ಬೆಳೆ ಬಿತ್ತುವ ವ್ಯವಸ್ಥೆಯಿಂದ ಅದಷ್ಟೂ ಬೇಗ ನಾವು ದೂರ ಸರಿಯಬೇಕು ಮಳೆ ಆಶ್ರಿತ ಭೂಮಿಗಳಲ್ಲಿ ನಾವು ಕೇವಲ ಅಲ್ಪಾವಧಿ ಬೆಳೆಗಳಿಗೆ ಮಾತ್ರವೆ ಗಮನ ಕೊಡದೆ ಬಹು ಬಗೆಯ ದೀರ್ಘಾವಧಿ ಫಸಲುಗಳ ಕಡೆಯೂ ಗಮನ ಕೊಡಬೇಕು ಮಳೆ ಆಶ್ರಿತ ನೆಲಗಳಲ್ಲಿ ತೋಟಗಾರಿಕಾ ಬೆಳೆ ಯಶಸ್ವಿ ಆಗುವ ಹಾಗೆ ನೀರಾವರಿ ಭೂಮಿಯಲ್ಲೂ ಆಗುವುದಿಲ್ಲ, ಆದರೆ. ನೀವಿಲ್ಲಿ ನೈಸರ್ಗಿಕ ಕೃಷಿ ಕ್ರಮವನ್ನು ತಪ್ಪದೆ. ಅನುಸರಿಸಬೇಕು. ಯಾವುದೇ ಪ್ರದೇಶಲ್ಲಿ ಖಾಲಿ ಬೆಳೆ ಮಾತ್ರ ತೆಗೆಯಲು ಬೀಜಾಮೃತ, ಜೀವಾಮೃತ ಹೊದಿಕೆ ಮತ್ತು ಆರ್ದ್ರತೆ ಈ ಇಷ್ಟು ಜ್ಞಾನ ನಿಮಗಿದ್ದರೆ ಸಾಕು.

ನೈಸರ್ಗಿಕ ಕೃಷಿ ವ್ಯವಸ್ಥೆಯಲ್ಲಿ ಬೆಳೆಗ ಮೇಲೆ ಕೀಟಗಳು ಸಮರವನ್ನೇ ಸಾರ ಕಳೆಗಳು ಬೆಳೆದು ನಿಲ್ಲಲಿ ಇಲಿಗ ಉಪಟಳ ಮೇರೆ ಮೀರಲಿ, ಹಾವುಗಳು ಹಕ್ಕಿಗಳು ಪತಂಗಗಳ ಬೇಕಾದ್ದು ಮಾಡಲಿ. ಆದರೆ ತಿಳಿಯಿರಿ ಆ ಎಲ್ಲವುಗಳ ಇದ್ದಾಗಲೆ ಬೆಳೆಗೆ ಸಮೃದ್ಧಿ! ಈ ಬಾರಿ ಇಲಿಗಳ ಕಾಟ ಹೆಚ್ಚಾಯಿತ ಎಂದುಕೊಳ್ಳಿ ಶೇಕಡ ಐದರಷ್ಟು ಫಸಲು ಕೂಡ ನಷ್ಟವಾಯಿತ ಅಂದುಕೊಳ್ಳಿ ಆದರೆ ಅದರ ಮರುವರ್ಷ ನಷ್ಟದ ಹತ್ತು ಪಟ್ಟನ ನೀವು ಕಳೆ ಬೆಳೆದರೆ ಮತ್ತೆ ಅದು ಬೆಳೆದಲ್ಲಿಗೇ ಸೇರುತ್ತ ಬೆಳೆಯಿತ್ತಿರುವ ಬೆಳೆಯ ಮೇಲೆ ಪೈಪೋಟಿಗೆ ನಿಲ್ಲುವ ಕಳೆಯನ ನಿಯಂತ್ರಿಸಿ, ಅದನ್ನೇ ಭೂಮಿಗೆ ಹೊದಿಕೆ ಮಾಡಿ ನವ ರಾಸಾಯನಿಕ ಬೇಸಾಯ- ಹಾವು ಇಲಿ, ಎರೆಹುಳು ಗೆದ್ದಲು, ಕಪ್ಪೆ, ಜೇಡ, ದುಂಬಿ, ಜೇನು, ಪತಂಗ, ಹಕ್ಕಿ ಎಲ್ಲವನ ಕೊಲ್ಲುತ್ತಾ ಹೋಗುತ್ತದೆ.

ಹಾಗೆಯೇ ಭೂಮಿ ಮೇಲಿನ ಕೋಟ್ಯಾನ ಕೋಟಿ ಜೀವಾಣುಗಳನ್ನು ಕೂಡ. ಭೂಮಿಯಲ್ಲಿ ಬೇ ತೆಗೆಯಲು ಈ ಬಗೆಯಲ್ಲಿ ಕಸರತ್ತು ನಡೆಸುವ ನಾವು ಸದಾ ಕಾ ಬದುಕುಳಿಯಲು ಆಸ್ಪತ್ರೆ ಔಷಧಿ, ಡಾಕ್ಟರುಗಳ ಮೊರೆಹೋಗಬೇಕಾಗುತ್ತದೆ. ನಾವೀಗ ಮೊದಲು ರೋಗದ ಮೂಲ ಪತ್ತೆ ಹಚ್ಚಬೇಕು. ರೋಗದ ಮೂಲವಿರುವುದೇ ನವ ಬೇಸಾಯ ಕ್ರಮದಲ್ಲಿ! ಅದನ್ನು ಸರಿಪಡಿಸಿಕೊಂಡಿರುವ ಈ ಆಸ್ಪತ್ರೆಗಳು, ಔಷಧಿಗಳು, ಡಾಕ್ಟರುಗಳು, ಈ ಯಾರಿಗೂ ವಿಳಾಸವೇಇರುವುದಿಲ್ಲ. □

ಜೀವಾಮೃತ

(25ನೇ ಪುಟದಿಂದ)

ಗೊಳಿಸಿಕೊಳ್ಳುವುದು ಒಳ್ಳೆಯದು. ಆಗ ಬಿತ್ತನೆಗಾಗಿ 16 ಗಿಣ್ಣಿನ ಒಂದೇ ಒಂದು ಕಬ್ಬು ಸಾಕು. 1 ಎಕರೆಗೆ ಬೀಜ ಅಣಿಗೊಳಿಸಲು 1 ಗುಂಟೆ ಜಾಗ ಬೇಕು. 2 ಅಡಿ ಸಾಲಿನ ಸಾಲು ಮಾಡಿ 8 8 ಅಳತೆಯ ಅಂತರದಲ್ಲಿ 16 ಗಿಣ್ಣುಗಳನ್ನು ನಾಟಿ ಮಾಡ ಬೇಕು. ಯಥಾ ಪ್ರಕಾರ ಕಬ್ಬಿ ಸಾಲುಗಳ ನಡುವೆ ಕಡಲೆ, ಅಲಸಂದೆ, ಈರುಳ್ಳಿ, ಬೆಳ್ಳುಳ್ಳಿ ಮೆಣಸಿನಕಾಯಿ ಇತ್ಯಾದಿ ತರಕಾರಿ ಬೆಳೆ ಬೆಳಯ ಬಹುದು ಎಂಟು ತಿಂಗಳ ಅವಧಿಯಲ್ಲಿ ಒಂದು ಕಬ್ಬು ಕನಿಷ್ಠ 12 ಮರಿ ಕಬ್ಬುಗಳನ್ನು ಕೊಡುತ್ತದೆ. 16 ಕಬ್ಬಿನಲ್ಲಿ ತಲಾ 12ರಂತೆ 172 ಕಬ್ಬುಗಳು ಬಿತ್ತನೆಗೆ ಬರುತ್ತವೆ. 172 16 = 3052 ಗಿಣ್ಣು ಗಳಿರುತ್ತವೆ. ಬಿತ್ತನೆಗಾಗಿ 2792 ಗಿಣ್ಣುಗಳು ಮಾತ್ರ ಸಾಕು.

ಎರಡು ಬಾರಿ ಉತ್ತು ಹದ ಮಾಡಿಕೊಂಡ ಜಮಾನಿಗೆ ಜೀವಾಮೃತ ಹನಿಸಿ- ಬಿತ್ತನೆಗೆ ಬೀಜೋಪಚಾರ ಮಾಡಿ ನಾಟಿ ಮಾಡಿದರೆ ಒಂದೇ ಒಂದು ಗಿಣ್ಣು ಕೂಡ ಫೇಲ್ಯೂರ್ ಆಗುವುದಿಲ್ಲ, ಮೂಲದಲ್ಲಿ ನಾವು ಬಿತ್ತನೆಯಾಗಿ ಬಳಸಿದ್ದು ಒಂದೇ ಕಬ್ಬು, ಆದರೆ ಚಮತ್ಕಾರ ನೋಡಿ : ಕನಿಷ್ಠ 60 ಟನ್ ಶುರುವಾಗುವ ಇಳುವರಿ ವಾರ್ಷಿಕ ಸರಾಸರಿ 200 ಟನ್‌ಗಳ ಮೈಲಿಗಲ್ಲನ್ನು ದಾಟುತ್ತದೆ. ಆಧುನಿಕ ಕೃಷಿ ಅನುಸರಿಸಿ ಬೆಳೆವ ಕಬ್ಬಿನಲ್ಲಿ ಒಂದು ಪೂರ್ಣ ಫಸಲು ಉಳಿದೆರಡು ಕೂಳೆ ಫಸಲು, ಅಲ್ಲಿಗೆ ಅದು ಸಮಾಪ್ತ. ಎಲ್ಲೋ ಅಲ್ಲಿ-ಇಲ್ಲಿ ನಿಯಮಗಳನ್ನು ಮೀರಿ ದೀರ್ಘಾವಧಿ ಫಸಲು ನೀಡುತ್ತಿರುವ ಉದಾಹರಣೆ ಗಳಿವೆ. ಮತ್ತು ಅವಕ್ಕೆ ಬೇರೆಯದೇ ಆದ ಕಾರಣಗಳಿವೆ. ಆದರೆ ನೈಸರ್ಗಿಕ ವಿಧಾನದಲ್ಲಿ ಕಂಡು ಬರುವ ಸಾರ್ವತ್ರಿಕ ಯಶಸ್ಸು ಇತರ ವಿಧಾನಗಳಲ್ಲಿ ಕಾಣುವುದಿಲ್ಲ.

ಮುಂದುವರಿಯಲಿದೆ

ಹಿಂದುತ್ವ ಮತ್ತು ದಲಿತ ಪರಿಕಲ್ಪನೆ

ದೃಷ್ಟಿಕೋನ

ಇತ್ತೀಚಿನ ಎರಡು ದಶಕಗಳಿಂದ ಹಿಂದುತ್ವ ಕಥನಗಳಿಂದ ರೂಪುಗೊಳ್ಳುತ್ತಿದೆ. ಹಿಂದೂ ರಾಷ್ಟ್ರದ ಕಥನ, ಮುಸ್ಲೀಮರ ಬಗೆಗಿನ ಕಥನಗಳು ಹಿಂದುತ್ವವನ್ನು ಕಟ್ಟುತ್ತಿವೆ. ಚರಿತ್ರೆಯೂ ಇಲ್ಲಿ ಕಥನ, ಕಟ್ಟುಕಥೆ. ಜನರ ಧರ್ಮ, ದೇವರು ನಂಬಿಕೆ, ಭಾವನೆ, ಪಾವಿತ್ರ್ಯ, ಶ್ರದ್ಧೆ ಗಳನ್ನು ಬಳಸಿಕೊಂಡು ಕಥನಗಳನ್ನು ಕಟ್ಟಲ್ಪಡುತ್ತಿದೆ. ಆ ಮೂಲಕ ಹಿಂದುತ್ವ ಜನ ಬೆಂಬಲವನ್ನು ಜನಾಭಿಪ್ರಾಯವನ್ನು ಗಳಿಸಿಕೊಳ್ಳುತ್ತಿದೆ. ಮತ್ತು ಜನರ ರಾಜಕಾರಣವಾಗಿ ಬಿಂಬಿಸಲ್ಪಡುತ್ತಿದೆ. ರಾಷ್ಟ್ರ ಕಲ್ಪನೆಯಲ್ಲಿ ಎಲ್ಲ ಭಿನ್ನತೆಗಳನ್ನು ವಶರೂಪಗೊಳಿಸವು ಪ್ರಕ್ರಿಯೆ ನಡೆಯುತ್ತದೆ.

○ವಾಸುದೇವ ಬೆಳ್ಳೆ

ಇತ್ತೀಚಿನ ಎರಡು ದಶಕಗಳಿಂದ ' ಹಿಂದುತ್ವ ' ಕಥನಗಳಿಂದ ರೂಪುಗೊಳ್ಳುತ್ತಿದೆ. ಹಿಂದೂ ರಾಷ್ಟ್ರದ ಕಥನ, ಮುಸ್ಲೀಮರ ಬಗೆಗಿನ ಕಥನಗಳು ಹಿಂದುತ್ವವನ್ನು ಕಟ್ಟುತ್ತಿವೆ. ಚರಿತ್ರೆಯೂ ಇಲ್ಲಿ ಕಥನ, ಕಟ್ಟುಕಥೆ. ಜನರ ಧರ್ಮ, ದೇವರು ನಂಬಿಕೆ, ಭಾವನೆ, ಪಾವಿತ್ರ್ಯ, ಶ್ರದ್ಧೆ ಗಳನ್ನು ಬಳಸಿಕೊಂಡು ಕಥನಗಳನ್ನು ಕಟ್ಟಲ್ಪಡುತ್ತಿದೆ. ಆ ಮೂಲಕ ಹಿಂದುತ್ವ ಜನ ಬೆಂಬಲವನ್ನು ಜನಾಭಿಪ್ರಾಯವನ್ನು ಗಳಿಸಿಕೊಳ್ಳುತ್ತಿದೆ. ಮತ್ತು ಜನರ ರಾಜಕಾರಣವಾಗಿ ಬಿಂಬಿಸಲ್ಪಡುತ್ತಿದೆ.

ರಾಷ್ಟ್ರ ಕಲ್ಪನೆಯಲ್ಲಿ ಎಲ್ಲ ಭಿನ್ನತೆಗಳನ್ನು ವಶರೂಪಗೊಳಿಸವ ಪ್ರಕ್ರಿಯೆ ನಡೆಯುತ್ತದೆ. ಅಥವಾ ರಾಷ್ಟ್ರ ಎಲ್ಲ ವೈವಿದ್ಯತೆಗಳನ್ನು ನಿರ್ದಿಷ್ಟ ಸಾಂಸ್ಕೃತಿಕ ಗುರುತಿನಲ್ಲಿ ಒಳಗೊಳ್ಳುತ್ತದೆ. ವೈವಿದ್ಯಗಳನ್ನು ಒಳಗೊಳ್ಳುವ ಮತ್ತು ವಾಕಾಕಾರ ಗೊಳಿಸುವ ಪ್ರಕ್ರಿಯೆಯಲ್ಲಿ ಒಳಭೇದಗಳು ಮರೆಯಾಗುವುದಲ್ಲದೇ ಪ್ರಬಲ ವರ್ಗದ ಗುರುತು ಅಧಿಕೃತವಾಗುತ್ತದೆ. ಹೀಗೆ ಆಧುನಿಕ ಹಿಂದೂ, ಮುಸ್ಲಿಂ ಕ್ರೈಸ್ತ ರಾಷ್ಟ್ರ ಗುರುತುಗಳು ನಿರ್ಮಾಣವಾಗುತ್ತವೆ.

ಇವತ್ತಿನ ಉಗ್ರ ಹಿಂದುತ್ವದ ಜನಪ್ರಿಯ ತರ್ಕ್ ಹೀಗಿದೆ " ಭಾರತದ ಹಿಂದುಗಳ ರಾಷ್ಟ್ರ " ಇಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರು ಜನನ ಸಂಖ್ಯೆ, ಮತಾಂತರದ ಮೂಲಕ ಬಹುಸಂಖ್ಯಾರಾಗುತ್ತಿದ್ದಾರೆ. ಇವರು ಭಾರತೀಯ ರಾಷ್ಟ್ರ, ಸಂಸ್ಕೃತಿ, ಧರ್ಮಕ್ಕೆ ತೊಡಕಾಗಿದ್ದಾರೆ. ಮಸೀದಿಗಳು ಭಯೋತ್ಪಾದನೆಯ ಕೇಂದ್ರಗಳಾಗಿವೆ. ಮುಸ್ಲೀಮರು ಪಾಕಿಸ್ತಾನಕ್ಕೆ ನಿಷ್ಠರಾಗಿದ್ದಾರೆ. ಇಂಥ ದ್ರೋಹಿಗಳನ್ನು ನಾಶಮಾಡಬೇಕು. ಅವರು ಇಲ್ಲಿಬಾಳಬೇಕಾದರೆ ಸೋಲನ್ನು ಒಪ್ಪಿಕೊಂಡು ವಿಧೇಯರಾಗಿರಬೇಕು. ಇಂಥವರನ್ನು ಮತಕ್ಕಾಗಿ ಜಾಲೈಸುವ ಹೊಸ ಜಾತ್ಯಾತೀತರನ್ನು ವಿರೋಧಿಸಬೇಕು. ಹಾಗಾಗಿ, ಹಿಂದೂರಾಷ್ಟ್ರಕ್ಕಾಗಿ ನಮ್ಮ ಹೋರಾಟ ಜಾತ್ಯಾತೀತವಾದಿಗಳು ಹಾಗೂ ಕಮ್ಯುನಿಸ್ಟರ ವಿರುದ್ಧ.

ಹಿಂದುತ್ವದ ಹಿಂಸೆ, ಸಿದ್ಧಾಂತ, ಲಕ್ಷಣ, ತಂತ್ರ, ಚರಿತ್ರೆಯನ್ನು ಉಪಯೋಗಿಸುವ ಶ್ರಮ, ಹಿಂದುತ್ವದ ಉಗಮಕ್ಕೆ ಸಾಮಾಜಿಕ ಆರ್ಥಿಕ ಕಾರಣಗಳನ್ನು ಇತ್ಯಾದಿಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಅದನ್ನು ಪುನಃ ಪ್ರಸ್ತಾಪಿಸುವ ಅಗತ್ಯವಿಲ್ಲ. ಇವತ್ತು ನಾವು ಕಾಣುತ್ತಿರುವ ಹಿಂದುತ್ವ ವರ್ತಕರ, ಬಂಡವಾಳಶಾಹಿಗಳ ರಾಜಕಾರಣ. ಈ ರಾಜಕಾರಣದ ಹಿಂದೆ ಇರುವುದು ಧರ್ಮ ಹಿತಾಶಕ್ತಿಅಲ್ಲ, ವರ್ಗ ಹಿತಾಸಕ್ತಿ. ಜಾಗತೀಕರಣ ಕಾಲದ ವ್ಯಾಪಾರಿ ಹಿತಾಸಕ್ತಿಗಳಿಗೆ ಮತ್ತು ಮಂಡಲ ಆಯೋಗವರದಿಯ ನಂತರ ಜಾತ್ಯಾತೀತ, ಹಿಂದುಳಿದ ಮತ್ತು ದಲಿತ ವಿರೋಧಿ ಚಿಂತನೆಗಳಿಗೆ ಶಕ್ತಿ ಕೊಟ್ಟ ರಾಜಕಾರಣ ಇಲ್ಲ ಧರ್ಮವನ್ನು ಬಳಸಿಕೊಳ್ಳಲಾಗಿದೆ. ಜಾತ್ಯಾತೀತ, ಹಿಂದುಳಿದ ಮತ್ತು ದಲಿತ ಚಿಂತನೆಗಳು ತಮ್ಮ ಪ್ರಗತಿ ಚರ್ಚೆಗಳಲ್ಲಿ ಜಾತಿಯನ್ನು ಸಮಸ್ಯಾತ್ಮಕ ಗೊಳಿಸುತ್ತಾ ಬಂದಿದೆ. ಇಂಥ ಜಾತಿ ಚರ್ಚೆಯನ್ನು ಮರೆಮಾಚಲು ಹಿಂದುತ್ವ ರಾಜಕಾರಣ ಹಿಂದು ಧರ್ಮವನ್ನು ಮುನ್ನೆಲೆಗೆ ತಂದಿದೆ. ಜಾತಿಯ ಬದಲಿಗೆ ಧರ್ಮವನ್ನು ಮುಂದುಮಾಡಲಾಗಿದೆ. ಮಾರ್ಕ್ಸ್ ಹೇಳಿದಂತೆ ಧರ್ಮ ಅಫೀಮು.

ಹಿಂದುತ್ವವು ಸಂಕೇತ, ಬಣ್ಣಗಳ ಮೂಲಕ ' ಕೇಶರಿಕರಣ ' ಮಾಡುತ್ತದೆ ಸಂಕೇತ ಮತ್ತು ಬಣ್ಣಕ್ಕೆ ಜಾತಿ, ಭಾಷೆ, ಪ್ರಾದೇಶಿಕ ಭಿನ್ನತೆಗಳನ್ನು ತೊಡಕುಗಳನ್ನು ಮೀರುವ ಶಕ್ತಿ ಇದೆ. ಜಾತಿ, ಭಾಷೆ, ಪ್ರಾದೇಶಿಕ ವೈವಿಧ್ಯತೆಗಳನ್ನು ಮೀರುವ ಮತ್ತು ಎಲ್ಲವನ್ನೂ, ಎಲ್ಲರನ್ನೂ ' ಏಕ ' ಗೊಳಿಸುವ ಪ್ರಕ್ರಿಯೆಯಲ್ಲಿ ' ಸ್ವ' ಮತ್ತು 'ಅನ್ಯ'ದ ನಿರ್ಮಾಣವೂ ಆಗುತ್ತದೆ. ಈ ಬಣ್ಣ ಮತ್ತು ಸಂಕೇತಗಳು ' ಸ್ವ' ವನ್ನು ಏಕಗೊಳಿಸುವ, ಗಟ್ಟಿಗಳಿಸುವ ತಂತ್ರಗಾರಿಕೆಯೂ ಹೌದು ಹಾಗೂ ' ಸ್ವ 'ದ ಶಕ್ತಿ ಪ್ರದರ್ಶನವೂ ಹೌದು. ಈ ' ಸ್ವ ' ಮತ್ತು 'ಅನ್ಯ'ಗಳೆರಡೂ ಕಲ್ಪಿತ ನಿರ್ಮಾಣಗಳು ' ಸ್ವ' ವನ್ನು ಒಳ್ಳೆಯ, ರಾಷ್ಟ್ರ ಪ್ರೇಮದ ಅರ್ಥದಲ್ಲಿ ಕಟ್ಟುವಾಗ, ಅನ್ಯ ವನ್ನು ರಾಕ್ಷಸೀಕರಣಗೊಳಿಸಲಾಗುತ್ತದೆ. ಎರಡರ ಒಳಗೆ ಇರುವ ವೈರುದ್ಯಗಳು ಎರಡರಲ್ಲೂ ಮರೆಯಾಗುತ್ತವೆ.

ಭಾರತದಲ್ಲಿ ವಿಭಿನ್ನ ಸಾಮಾಜಿಕ ಸಮಸ್ಯೆಗಳ ಆಧಾರದಲ್ಲಿ ರೂಪುತಾಳಿದ ರಾಜಕಾರಣ ಮತ್ತು ರಾಜಕೀಯ ಪಕ್ಷಗಳಿವೆ. ಕಾಂಗ್ರೆಸ್,

(34ನೇ ಪುಟಕೆ)

ಕಾರ್ಖಾನೆ ಕಾಯಿದೆಗೆ ತಿದ್ದುಪಡಿ



ವಿಶ್ಲೇಷಣೆ

ಕಾರ್ಖಾನೆ ಕಾಯಿದೆಯಲ್ಲಿ ದುಡಿಯುವ ಕಾರ್ಮಿಕರು, ಅವಿದ್ಯಾವಂತರು ಅಥವಾ ಅರೆವಿದ್ಯಾವಂತರು ಸಮಾಜದ ಕೆಳವರ್ಗದಿಂದ ಬಂದವರು, ಬಡವರ್ಗದವರು, ಕಡಿಮೆ ಸಂಬಳಕ್ಕೆ ದುಡುಯುವವರು ಕೌಟುಂಬಿಕ ಜೀವನಕ್ಕೆ ಮನ್ನಣೆ ನೀಡುವ ಸಂಪ್ರದಾಯಸ್ತರು ಮತ್ತು ಮನೆ ಮಂದಿಯ ಉಟೋಪಚಾರದ ಜವಾಬ್ದಾರಿ ಹೊತ್ತವರು. ಕಾರ್ಖಾನೆಯ ಸಂಕಿರಣ ಹವಾನಿಯಂತ್ರಿತ ಮಹಲುಗಳಲ್ಲಿ ಬದಲಾಗಿ, ದೂಳು, ಸೆಕೆ, ವಾಸನೆ, ಮತ್ತು ಶಬ್ಧಗಳಿಂದ ಕಲುಶಿತಗೊಳ್ಳುವ ಸ್ಥಳಗಳು. ದೈತ್ಯಾಕಾರದ ಯಂತ್ರೋಪಕರಣಗಳೊಡನೆ ರಾತ್ರಿಯ ವೇಳೆ ಕೆಲಸ ಮಾಡುವುದು ಸುಲಭದ ಮಾತೆನಲ್ಲ.

○ ಜಿ. ಪಾಂಡು ನಾಯಕ್

ಕೇಂದ್ರ ಸಂಪುಟ ಸಭೆಯು ಇತ್ತೀಚೆಗೆ ಕಾರ್ಖಾನೆ ಕಾಯಿದೆ 1948 ಕ್ಕೆ ತಿದ್ದುಪಡಿ ತರಲು ನಿರ್ಧರಿಸಿದೆ. ಇದರ ಉದ್ದೇಶವೇನೆಂದರೆ ಈಗಿರುವ ಕಾಯಿದೆಯ ಪ್ರಕಾರ ಮಹಿಳೆಯರು ರಾತ್ರಿವೇಳೆಯಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂತಿಲ್ಲ. ಈ ಅಡಚಣೆಯನ್ನು ತೆಗೆದುಹಾಕಿ ಮಹಿಳೆಯರು ರಾತ್ರಿವೇಳೆಯಲ್ಲೂ ಸಹ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುವುದೇ ಈ ತಿದ್ದಿಪಡಿಯ ಉದ್ದೇಶ. ಈ ತಿದ್ದುಪಡಿ ಮಹಿಳೆಯರ ಉದ್ಯೋಗ ಹಕ್ಕಿಗೆ ಸಮಾನತೆ ನೀಡಲಿದೆ ಎಂದು ಕೇಂದ್ರ ಸರ್ಕಾರ ಅಭಿಪ್ರಾಯ ಪಟ್ಟಿದೆ.

ಎರಡು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರವು ಕಾಲ್‌ಸೆಂಟರ್ ಗಳಲ್ಲಿ ಮಹಿಳೆಯರು ರಾತ್ರಿ ವೇಳೆಯಲ್ಲಿ ಕೆಲಸ ಮಾಡಲು ಅನುವಾಗುವಂತೆ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ 1961ಕ್ಕೆ ತಿದ್ದುಪಡಿ ತಂದಿರುತ್ತದೆ.

ಈ ತಿದ್ದುಪಡಿಗಳ ಸ್ವರೂಪವನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ತಿಳಿಯುತ್ತದೆ, ಇದು ಮಹಿಳೆಯರ ಸಮಾನತೆಯ ಬದಲು ಮಹಿಳೆಯರ ಶೋಷಣೆಯನ್ನು ಪ್ರೋತ್ಸಹಿಸುತ್ತದೆ ಎಂಬುದು. ಕಾರ್ಖಾನೆ ಕಾರ್ಮಿಕರು ಮತ್ತು ಕಾಲ್‌ಸೆಂಟರ್ ಕಾರ್ಮಿಕರಲ್ಲಿ ಮಹತ್ತರವಾದ ವ್ಯತ್ಯಾಸಗಳಿವೆ. ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುವವರು ಮೆಲ್ವರ್ಗದ ತರುಣ ತರುಣಿಯರು, ತಮ್ಮ ಹಕ್ಕುಗಳ ಬಗ್ಗೆ ತಿಳುವಳಿಕೆ ಇರುವಂತವರು ಮತ್ತು ರಾತ್ರಿವೇಳೆಯಲ್ಲಿ ಕೆಲಸ ಮಾಡಬಯಸುವವರು. ಕಾಲ್‌ಸೆಂಟರ್‌ಗಳು ವಿಶ್ವಮಟ್ಟದ ಹವಾನಿಯಂತ್ರಿತ ಸಂಕೀರ್ಣಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಕಾಲ್ ಸೆಂಟರ್‌ನ ಕಾರ್ಮಿಕರು ಸ್ವಾತಂತ್ರವಾಗಿ ಬದುಕಲು ಬಯಸುವ ಹೊಸ ತಲೆಮಾರಿನ ಯುವಕರು. ಅವರಿಗೆ ಉತ್ತಮವಾದ ಸಂಭಳ ಮತ್ತು ಸೌಲಭ್ಯಗಳು ಲಭಿಸುತ್ತವೆ.

ಆದರೆ ಕಾರ್ಖಾನೆ ಕಾಯಿದೆಯಲ್ಲಿ ದುಡಿಯುವ ಕಾರ್ಮಿಕರು, ಅವಿದ್ಯಾವಂತರು ಅಥವಾ ಅರೆವಿದ್ಯಾವಂತರು ಸಮಾಜದ ಕೆಳವರ್ಗದಿಂದ ಬಂದವರು, ಬಡವರ್ಗದವರು, ಕಡಿಮೆ ಸಂಬಳಕ್ಕೆ ದುಡಿಯುವವರು ಕೌಟುಂಬಿಕ ಜೀವನಕ್ಕೆ ಮನ್ನಣೆ ನೀಡುವ ಸಂಪ್ರದಾಯಸ್ತರು ಮತ್ತು ಮನೆ ಮಂದಿಯ ಉಟೋಪಚಾರದ ಜವಾಬ್ದಾರಿ ಹೊತ್ತವರು. ಕಾರ್ಖಾನೆಯ ಸಂಕಿರಣ ಹವಾನಿಯಂತ್ರಿತ ಮಹಲುಗಳಲ್ಲಿ ಬದಲಾಗಿ, ದೂಳು, ಸೆಕೆ, ವಾಸನೆ, ಮತ್ತು ಶಬ್ಧಗಳಿಂದ ಕಲುಶಿತಗೊಳ್ಳುವ ಸ್ಥಳಗಳು. ದೈತ್ಯಾಕಾರದ ಯಂತ್ರೋಪಕರಣಗಳೊಡನೆ ರಾತ್ರಿಯ ವೇಳೆ ಕೆಲಸ ಮಾಡುವುದು ಸುಲಭದ ಮಾತೆನಲ್ಲ.

ಈಗಿರುವ ಕಾಯಿದೆಯ ಸ್ವರೂಪ

ಈಗಿರುವ ಕಾರ್ಖಾನೆ ಕಾಯಿದೆಯ ಪ್ರಕಾರ ಮಾಲಿಕನಿಗೆ ಯಾವುದೇ ಪುರುಷ ಕಾರ್ಮಿಕರನ್ನು ರಾತ್ರಿವೇಳೆ ಕೆಲಸ ಮಾಡಲು ಆದೇಶಿಸಬಹುದು. ರಾತ್ರಿವೇಳೆಯಲ್ಲಿ ದುಡಿಯಲು ನಿರಾಕರಿಸುವವರನ್ನು ಶಿಸ್ತುಕ್ರಮಕ್ಕೆ ಒಳಪಡಿಸಿ ಶಿಕ್ಷೆ ನೀಡಬಹುದು ಅಥವಾ ಕೆಲಸದಿಂದ ತೆಗೆದುಹಾಕಬಹುದು.

ಹಾಗೆಯೇ ಕೇಂದ್ರ ಸರ್ಕಾರದ ಉದ್ದೇಶಿತ ತಿದ್ದುಪಡಿ ಸಂಸತ್ತಿನಲ್ಲಿ ಅಂಗಿಕಾರವಾಗಿ ರಾಷ್ಟ್ರಪತಿಯವರ ಅನುಮತಿ ಪಡೆದರೆ, ಮಹಿಳಾಕಾರ್ಮಿಕರನ್ನು ಸಹ ರಾತ್ರಿವೇಳೆಯಲ್ಲಿ ಕಡ್ಡಾಯ ಸೇವೆ ಮಾಡಲು ಆದೇಶ ನೀಡುವ ಹಕ್ಕನ್ನು ಮಾಲಿಕರು ಪಡೆಯುತ್ತಾರೆ. ರಾತ್ರಿ ಕೆಲಸಕ್ಕೆ ನಿರಾಕರಿಸುವ ಮಹಿಳೆಯರು ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಅಂದರೆ ಉದ್ದೇಶಿತ ತಿದ್ದುಪಡಿ ಮಾಲಿಕರ ಅಧಿಕಾರವನ್ನು ಹೆಚ್ಚಿನ ಮಹಿಳೆಯರ ಶೋಷಣೆಗೆ ಪ್ರೋತ್ಸಾಹ ನೀಡುತ್ತದೆ.

ಸಿದ್ದ ಉಡುಪುಗಳ ತಯಾರಿಕಾ ಕಾರ್ಖಾನೆಗಳಂತಹ ಕೆಲವು ಕ್ಷೇತ್ರಗಳಲ್ಲಿ ಮಾಲಿಕರು ಉದ್ಯೋಗದಲ್ಲಿ ಮಹಿಳಾ ಕಾರ್ಮಿಕರಿಗೆ ಆದ್ಯತೆ ನೀಡುತ್ತಾರೆ. ಇದು ಮಹಿಳೆಯರಿಗೆ ಉದ್ಯೋಗ ನೀಡುವ ಉದಾರಿಕರಣ ಅಥವಾ ಸಹಾನುಭೂತಿಯಿಂದಲ್ಲ, ಬದಲಿಗೆ ಮಹಿಳಾ ಕಾರ್ಮಿಕರನ್ನು ಕಡಿಮೆ ವೇತನಕ್ಕೆ ದುಡೀಸಬಹುದು ಮತ್ತು ಮಹಿಳೆಯರು ಮಾಲಿಕರ ವಿರುದ್ದ ಬಂಡಾಯ ಅಥವಾ ಮುಷ್ಕರಗಳನ್ನು ಹೂಡುವುದಿಲ್ಲ ಎಂಬ

(ಮುಂದಿನ ಪುಟಕೆ)

ಕಾರ್ಖಾನೆ ಕಾಯಿದೆ 1948 ಕ್ಕೆ ತಿದ್ದುಪಡಿ

(ಹಿಂದಿನ ಪುಟದಿಂದ)

ಕಾರಣಕ್ಕೆ. ಹೀಗಾಗಿ ಕಾರ್ಮಿಕ ಕಾಯಿದೆಯಡಿಯಲ್ಲಿ ಒದಗಿಸಬೇಕಾಗಿರುವ ಸವಲತ್ತುಗಳಾದ ಕ್ಯಾಂಟಿನ್ ಮತ್ತು ಕಾರ್ಮಿಕ ಶಿಶುಗಳ ಪೋಷಣಾ ಕೇಂದ್ರಗಳು ಸಹ ಬಹಳಷ್ಟು ಮಹಿಳಾ ಕಾರ್ಮಿಕ ಕಾರ್ಖಾನೆಗಳಲ್ಲಿ ಲಭ್ಯವಿಲ್ಲ, ಮಹಿಳಾ ಕಾರ್ಮಿಕರ ಕಲ್ಯಾಣದಲ್ಲಿ ಸರ್ಕಾರಕ್ಕೆ ನಿಜವಾಗಿಯೂ ಆಸಕ್ತಿ ಇದ್ದರೆ, ಮಹಿಳೆಯರೇ ಇರುವ ಕಾರ್ಖಾನೆಗಳಲ್ಲಿ ಪುರುಷ ಕಾರ್ಮಿಕರನ್ನು ಸಹ ನೌಕರಿ ನೀಡಲು ಅನುವು ಮಾಡಿಕೊಟ್ಟು ಮಾಲಿಕ - ಕಾರ್ಮಿಕರ ನಡುವೆ ಇರುವ ವ್ಯತ್ಯಾಸಗಳನ್ನು ಕಡಿಮೆ ಮಾಡಬೇಕಾಗುತ್ತದೆ.

ಉದ್ಯೋಗದಲ್ಲಿ ಸಮಾನತೆ ನೀಡುವುದೇನೋ ಸರಿ. ಆದರೆ ರಾತ್ರಿ ವೇಳೆಯಲ್ಲಿ ಮಹಿಳೆಯರನ್ನು ಕಾರ್ಖಾನೆಗೆ ಹೋಗಿ ಕೆಲಸ ಮಾಡಿ ಎನ್ನುವುದೇನು ಸಮಾನತೆಯಲ್ಲ. ಪ್ರತಿಯೊಬ್ಬವ್ಯಕ್ತಿಯು ಬೆಳಗಿನಿಂಧ ಸಂಜೆಯವರೆವಿಗು ದುಡಿದು ಮನೆಸೇರುವುದು, ನಂತರ ಕುಟುಂಬದ ಸದಸ್ಯರೊಡಗೂಡಿ ಮಾತನಾಡಿ, ಊಟಮಾಡಿ ಬದುಕುವುದು ಪ್ರಕೃತಿದತ್ತ ನಿಯಮ. ಇದು ವಿಶ್ವಾದ್ಯಾಂತ ಜನರ ಸಹಜ ಬದುಕಿನ ರೀತಿ. ಉದ್ಯೋಗ ಸಮಾನತೆಯ ಹೆಸರಿನಲ್ಲಿ ಹಾಲಿನಂತಹ ಕೌಟುಂಬಿಕ ಜೀವನದಲ್ಲಿ ರಾತ್ರಿ ಕೆಲಸದ ವಿಷವನ್ನು ಬೆರೆಸುತ್ತಿರುವ ಸರ್ಕಾರಕ್ಕೆ ಬುದ್ಧಿಯಿಲ್ಲವೋ ಅಥವಾ ಮಾಲಿಕರಿಂದ ಲಂಚ ಪಡೆದು ಇಂತಹ ತಿದ್ದುಪಡಿ ತರಲೆತ್ನಸುತ್ತದೆಯೋ ಎಂಬುದು ಒಂದು ಆಶ್ಚರ್ಯಕರ ಸಂಗತಿ.

ಕಾರ್ಖಾನೆಯ ಮಾಲಿಕರು ರಾತ್ರಿವೇಳೆಯಲ್ಲಿ ಕೆಲಸ ನಡೆಸಬಯಸುವುದು ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಅಥವಾ ಆರ್ಥಿಕ ಮುಗ್ಗಟ್ಟಿನ ಸ್ಥಿತಿಯನ್ನು ನಿಭಾಯಿಸುವ ಸಲುವಾಗಿಯಲ್ಲ, ಬದಲಿಗೆ ತಾನು ರಾತ್ರಿಕೆಲಸದಿಂದ ಹೆಚ್ಚು ಲಾಭವನ್ನು ಪಡೆಯುವುದು ಸಾಧ್ಯವೆಂದೆನಿಸಿದಾಗ ಮಾತ್ರ. ಆದ್ದರಿಂದ ರಾತ್ರಿ ಕೆಲಸ ಮಾಡಿಸಬಯಸುವ ಮಾಲಿಕರು ಹೆಚ್ಚುವರಿ ಲಾಭವನ್ನು ಕಾರ್ಮಿಕರೊಡನೆ ಹಂಚುಕೊಂಡಾಗ ಮಾತ್ರ ರಾತ್ರಿ ಕೆಲಸದಿಂದ ತೊಂದರೆಗೊಳಪಡುವ ಕಾರ್ಮಿಕರಿಗೆ ನಿಜವಾದ ನ್ಯಾಯ ದೊರಕುತ್ತದೆ. ಕಾರ್ಮಿಕ ಕಲ್ಯಾಣದ ಮಾತನಾಡುವ ಸರ್ಕಾರ ಇಂತಹ ಸತ್ಯಾಂಶದ ಬಗ್ಗೆ ಗಮನ ಹರಿಸದಿರುವುದು ಶೋಚನೀಯ.

ರಾತ್ರಿ ಕೆಲಸವನ್ನು ಪ್ರೋತ್ಸಹಿಸುವುದರಿಂದ ನಮ್ಮ ಕೌಟುಂಬಿಕ ಮೌಲ್ಯಗಳು ನಶಿಸಿಹೋಗಿ ಯಾಂತ್ರಿಕೃತ ವ್ಯಕ್ತಿ ವಿಕಾಸಕ್ಕೆ ಪ್ರೇರಣೆ ಸಿಗುತ್ತದೆ. ತಂದೆ ತಾಯಿಯರು ಬದುಕಿರುವಾಗಲೇ ರಾತ್ರಿಯ ಕತ್ತಲೆಯಲ್ಲಿ ಎಳೆಮಕ್ಕಳು ಏಕಾಂಗಿಯಾಗಿ ನರಳಿದ್ದಾರೆ. ಉಟೋಪಚಾರದ ಕೊರತೆಯಿರುವ ವೃದ್ಧ ತಂದೆತಾಯಿಯರು ಅಥವಾ ಅತ್ತೆಮಾವಂದಿರು ದಿಕ್ಕಿಲ್ಲದವರಂತೆ ಬಳಲುತ್ತಾರೆ. ಈ ಕುಟುಂಬದ ಚಿಂತೆಹೊತ್ತು ಕಾರ್ಖಾನೆಯಲ್ಲಿ ರಾತ್ರಿ ಕೆಲಸಕ್ಕೆ ಹೋಗುವ ಮಹಿಳೆಯರು ದೈತ್ಯಾಕಾರದ ಯಂತ್ರಗಳೊಡನೆ ಕೆಲಸ ಮಾಡಲಾಗದೇ ಅಪಘಾತಕ್ಕೆ ಈಡಾಗಬಹುದು. ಮಡದಿಯ ಉಪಚಾರವಿಲ್ಲದೆ ಗಂಡಂದಿರು ರಾತ್ರಿ ಕೆಲಸದ ಹೆಂಡತಿಯಿಂದ ವಿವಾಹ ವಿಚ್ಛೇದನ ಪಡೆಯಬಹುದು. ಮಹಿಳೆಯರು ರಾತ್ರಿವೇಳೆಯಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದರಿಂದ ಕಲ್ಯಾಣವಾಗುತ್ತದೆ ಎಂದು ಹೇಳುವ ಕೇಂದ್ರ ಸರ್ಕಾರದ ಮತ್ತು ತಮಾಷೆಯಾಗಿದೆ.

ಮಹಿಳಾ ಕಾರ್ಮಿಕರ ಕಲ್ಯಾಣಕ್ಕಾಗಿ ಮಾಡಬೇಕಾಗಿರುವುದು ಬಹಳಷ್ಟಿದೆ. ಉದಾಹರಣೆಗೆ ಕಾರ್ಮಿಕ ಮಹಿಳೆಯರ ಮೇಲಾಗುವ ಲೈಂಗಿಕ ಶೋಷಣೆಯನ್ನು ತಡೆಯಲು ಸರ್ವೋಚ್ಚ ನ್ಯಾಯಾಲಯ 1997ರ ವಿಶಾಖ ವಿರುದ್ಧ ರಾಜಸ್ಥಾನ ರಾಜ್ಯದ ಪ್ರಕರಣದಲ್ಲಿ ಸೂಕ್ತ ಕಾಯಿದೆಯನ್ನು ತರಲು ನಿರ್ದೇಶನ ನೀಡಿತ್ತು. ಆದರೆ ಇದುವರೆವಿಗೆ ಏನನ್ನು ಮಾಡಿಲ್ಲದ ಸರ್ಕಾರ ಮಹಿಳಾ ಕಾರ್ಮಿಕರ ಸಮಾನತೆಯ ಬಗ್ಗೆ ಮಾತನಾಡುತ್ತಿದೆ.

ಕಾರ್ಮಿಕ ಕಾನೂನಿನಲ್ಲಿ ಸೂಕ್ತ ತಿದ್ದುಪಡಿ ಮಾಡಿದ್ದರೆ ಆರ್ಥಿಕ ಉದಾರಿಕರಣಕ್ಕೆ ಅರ್ಥವಿಲ್ಲವೆಂಬುದೆನೋ ನಿಜ. ಆದರೆ ತಿದ್ದು ಪಡಿಗಳು ಕೇವಲ ಮಾಲಿಕರ ಕೈ ಬಲಪಡಿಸುವ ಸಲುವಾಗಿ ಯಾಗಬಾರದು. ಒಟ್ಟಾರೆ ಸಮಾಜದ ಪ್ರಗತಿಯಾಗಬೇಕು. ಉದಾಹರಣೆಗೆ 100ಕ್ಕಿಂತ ಹೆಚ್ಚು ಕಾರ್ಮಿಕರಿರುವ ಉಧ್ಯಮಗಳಲ್ಲಿ ಸರ್ಕಾರದ ಅನುಮತಿ ಇಲ್ಲದೇ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲು ಔದ್ಯೋಗಿಕ ಸಂಭಂದ ಕಾಯಿದೆ 1947 ಯನ್ನು ತಿದ್ದಪಡಿ ಮಾಡಲು ಸರ್ಕಾರ ಸಿದ್ಧವಿದೆ. ಆದರೆ ಇದರಿಂದ ಕೆಲಸ ಕಳೆದುಕೊಳ್ಳುವ ಕಾರ್ಮಿಕರಿಗೆ ಪುನರ್ ಉದ್ಯೋಗವ ಕಾಶಗಳಲ್ಲಿ ಹೆಚ್ಚು ವಯಸ್ಕರೆಂಬ ಕಾರಣಕ್ಕೆ ಉದ್ಯೋಗ ನೀಡಲು ನಿರಾಕರಿಸುವ ಮಾಲಿಕರನ್ನು ನಿಯಂತ್ರಿಸಲು ಸೂಕ್ತ ಕಾಯಿದೆಯನ್ನು ತರಲು ಸರ್ಕಾರ ಸಿದ್ಧವಿಲ್ಲ.

ಒಟ್ಟಾರೆ ಹೇಳುವುದಾದರೆ ಮಹಿಳಾಕಾರ್ಮಿಕರಾಗಲಿ ಅಥವಾ ಪುರುಷ ಕಾರ್ಮಿಕರಾಗಿರಲಿ ರಾತ್ರಿ ವೇಳೆಯಲ್ಲಿ ಕೆಲಸ ಮಾಡುವುದು ವಿಶ್ವಾದ್ಯಾಂತ ಪ್ರಕೃತಿ ನಿಯಮಕ್ಕೆ ವಿರುದ್ದದ ವಿಷಯ ಆದ್ದರಿಂದ ಯಾವುದೇ ಕಾರ್ಮಿಕರ ಸ್ವೆಚ್ಚೆಯ ವಿರುದ್ಧ ಅವರನ್ನು ರಾತ್ರಿಕೆಲಸ ಮಾಡಲು ಆದೇಶಿಸುವುದು ಒಂದು ಅನಾಗರೀಕ ಸಂಸ್ಕೃತಿಯೇ ಹೌದು. □

ಹಿಂದುತ್ವ ಮತ್ತು ದಲಿತ ಪರಿಕಲ್ಪನೆ

(32ನೇ ಪುಟದಿಂದ)

ಎಸ್.ಪಿ, ಬಿ.ಎಸ್.ಪಿ. ಮುಂತಾದ ಪಕ್ಷಗಳಿಗೆ ತಮ್ಮದೇ ಪಕ್ಷ ರಾಜಕಾರಣದ ಜೊತೆಗೆ ಸಮಾನವಾದ ಮತ್ತು ಭಿನ್ನವಾದ ಸಾಮಾಜಿಕ ಸಮಸ್ಯೆಗಳನ್ನು ಸ್ಪರ್ಶಿಸುವ ರಕ್ಷಣಗಳಿವೆ. ಆದರೆ ಹಿಂದುತ್ವ, ಬಿ.ಜೇ.ಪಿ. ಎಲ್ಲ ಬಗೆಯ ಸಾಮಾಜಿಕ ಸಮಸ್ಯೆಗಳನ್ನು ಮೀರಿ ಭಾವನಾತ್ಮಕ ಮತ್ತು ಭ್ರಮಾತ್ಮಕ ಪಿಪಯಾಗಳ ಮೇಲೆ ರೂಪಿಸಲ್ಪಡುತ್ತದೆ. ಹಾಗಾಗಿಯೇ ಅದು ಬೇರೆಬೇರೆ ರಾಜಕೀಯ ಪಕ್ಷಗಳ ಬಗ್ಗೆ ಒಲವು ತೋರಿಸಬಲ್ಲ ಜನರನ್ನು ಒಳಗೊಳ್ಳು ಬಯಸುತ್ತದೆ, ಮತ್ತು ಎಲ್ಲಾ ಬಗೆ.ಯ ಸಾಮಾಜಿಕ ಸಮಸ್ಯೆಗಳನ್ನು ಮರೆತು ಜನ ತನ್ನನ್ನು ಒಳಗೊಳ್ಳುವಂಥ ರಾಜಕಾರಣವನ್ನು ರೂಪಿಸುತ್ತದೆ. ಈ ಬಗೆಯ ಉದ್ದೇಶವನ್ನು ಅದು ಹಿಂದೂ-ಮುಸ್ಲಿಂ ಎನ್ನುವ ' ಸ್ವ' ಮತ್ತು ' ಅನ್ಯ' ಪರಿಕಲ್ಪನೆಗಳ ಮೂಲಕ ಸಾಧಿಸುತ್ತದೆ.

ಹಿಂದುತ್ವವನ್ನು ಎದುರಿಸುವಾಗ ಮರೆಮಾಚಲ್ಪಟ್ಟ ಜಾತಿಯ ಚರ್ಚೆಯನ್ನು ಮುನ್ನೆಲೆಗೆ ತರಬೇಕಾಗುತ್ತದೆ. ಈ ಬಗೆಯ ಪ್ರಿತಿ ಚಿಂತನೆಯಲ್ಲಿ ಜಾತ್ಯಾತೀತರು, ಹಿಂದುಳಿದ ಮತ್ತು ದಲಿತರು ಪಾಲ್ಗೊಳ್ಳಬೇಕು. ಆದರೆ ಇದು ಹಿಂದುತ್ವಕ್ಕೆ ದ್ವಂದ್ವ ವಿರೋಧಿಚಿಂತನೆಯ ಸ್ವರೂಪ ಪಡೆಯಬಾರದು. ಹಿಂದುತ್ವ ಪ್ರತಿಯಾಗಿ ಮತ್ತೊಂದು ' ಏಕ ' ಚಿಂತನೆ ಯಾವಾಗಲೂ ತೊಡಕಿನದು. ಈ ಹೋರಾಟದಲ್ಲಿ ಹಲವಾರು ಸಾಮಾಜಿಕ ಅಸ್ತಿತ್ವವುಳ್ಳ ಜನರು ಪಾಲ್ಗೊಳ್ಳಬೇಕಾಗಿರುವುದರಿಂದ, ಆಯಾ ಅಸ್ತಿತ್ವಗಳ ಭಿನ್ನತೆಯಲ್ಲೇ ಹೋರಾಟ ರೂಪುಗೊಳ್ಳಬೇಕು. ಹಿಂದುತ್ವವು ನಾವೆಲ್ಲ ಹಿಂದೂ, ನಾವೆಲ್ಲ ಒಂದು ಎಂದು ಹೇಳುತ್ತದೆ. ಇದು ಹುಸಿ ಮಾತು. ಹಾಗೆನೇ ಅದರ ಪರ್ಯಾಯ ಚಿಂತನೆಯೂ ' ಏಕ ' ವಾಗಿರಲು ಸಾಧ್ಯವಿಲ್ಲ. ಜೊತೆಗೆ ಪ್ರಬಲವಾದ ಹಿಂದುತ್ವವನ್ನು ಯಾವುದೇ ಒಂದು ಜಾತಿ, ಸಮುದಾಯ ಎದುರಿಸಲು ಸಾಧ್ಯವಿಲ್ಲ. ಅಂಥ ವಿರೋಧ ದುರ್ಬಲವಾಗುತ್ತದೆ. ಇಲ್ಲಿ ಅನೇಕತೆಗಳ ಸಮನ್ವಯವನ್ನು ಸಾಧಿಸುವ ಸೂಕ್ಷ್ಮ ಸ್ಥಿತಿ ಇದೆ.

ದಲಿತರಿಗೆ ಇದು ಅತ್ಯಂತ ಸಂಕೀರ್ಣ ಸ್ಥಿತಿ. ಹಿಂದುತ್ವ ಎಲ್ಲರಿಗಿಂತಲೂ ಹೆಚ್ಚು ದಲಿತರಿಗೆ ಅಪಾಯಕಾರಿಯಾದುದು. ಹಿಂದುತ್ವಕ್ಕೆ ಭಾರತದಲ್ಲಿ ಉನ್ನತ ಸ್ಥಾನ ಇದೆ. ಬ್ರಿಟೀಷ್ ಮನಸ್ಸು ಕೂಡ ತನ್ನ ವಸಾಹತು ಹಿತಾಸಕ್ತಿಗಾಗಿ ' ಹಿಂದು ' ವನ್ನು ಶ್ರೇಷ್ಠ ಎನ್ನುವ ಅರ್ಥದಲ್ಲೇ ನಿರಸಿಸಿತು. ಹಿಂತುತ್ವ ಜಾತಿಯ ಕಾರಣಕ್ಕಾಗಿ ದಲಿತರಿಗೆ ಆಶಾಯಮಾನವೂ ಹೌದು, ಭ್ರಮಾಸ್ಮಸವೂ ಹೌದು. ಶತ್ರುವೇ ಅಪಾಯ ಮಾನವಾಗುವ, ಶತ್ರುವಿನ ಕೈಗೆ ತನ್ನನ್ನು ತಾನು ಕೊಟ್ಟು ಕೊಳ್ಳುವ ಸ್ಥಿತಿ ಇದು. ಪ್ರತಿಯೊಬ್ಬರು ಪ್ರಜ್ಞಾಪೂರ್ವವಾಗಿಯೋ, ಅಪ್ರಜ್ಞಾ ವರ್ಣವಾಗಿಯೋ ಅವರವರು ಹುಟ್ಟಿ ಬದುಕಿ ಬಂದ ಸಂಸ್ಕೃತಿಯ ಆಚಾರ, ವಿಚಾರದಂತೆ ಜೀವಿಸುತ್ತಾರೆ. ಇಂಥಲ್ಲಿ ಹಿಂದುತ್ವ ದಲಿತರಲ್ಲಿ ಅವೈದಿಕ ಪ್ರಜ್ಞೆಗೆ ವಿಸ್ಮೃತಿ ತಂದು ಬಿಡುತ್ತದೆ. ಇತ್ತೀಚೆಗೆ ದಲಿತರ ದೈವಾರಾಧನೆಗಳಲ್ಲಿ ಹಿಂದುತ್ವದ ಸಂಕೇತ, ಬಣ್ಣ, ಧ್ವಜ ಇತ್ಯಾದಿಗಳ ದಟ್ಟ ಪ್ರಭಾವವನ್ನು ಕಾಣಬಹುದು. ದೈವಾಸ್ಥಾನಗಳಲ್ಲಿ, ದೈವಸ್ಥಾನದ ಧ್ವಜಗಳಲ್ಲಿ ಬಣ್ಣ, ಸಂಕೇತಗಳು ಬಂದಿವೆ.

ಇಂಥ ಸಂದರ್ಭದಲ್ಲಿ ಹಿಂದುತ್ವಕ್ಕೆ ದಲಿತರು ಮಾತ್ರ ತೋರುವ ಪ್ರತಿಭಟನೆ ದುರ್ಬಲವಾಗಬಹುದು. ಇತರ ಸಮೂದಾಯಗಳ ಜೊತೆಗೆ ಸಮನ್ವಯದ ಎಳೆಗಳನ್ನು ಹುಡುಕಬೇಕಾಗಿದೆ. ಮತ್ತು ಜಾಗತೀಕರಣ ತನ್ನನೇರ ಆರ್ಥಿಕ ಚಟುವಟಿಕೆಗಳಲ್ಲಿ ದುರ್ಬಲರನ್ನು ಕಡೆಗಣಿಸಿದೆ. ಖಾಸಾಕೀಕರಣಕ್ಕೆ ಅದ್ಯತೆ ಸಿಗುತ್ತಿದೆ. ರಾಷ್ಟ್ರಪ್ರಭುತ್ವದ ಅದೀನದಲ್ಲಿ ನೆಡೆಯುತ್ತಿದ್ದ ಆರ್ಥಿಕ ನೀತಿಗಳು ಜಾಗತಿಕ ವಲಯಕ್ಕೆ ಸ್ಥಾನ ಪಲ್ಲಟ ಗೊಂಡಿವೆ. ಹಾಗಾಗಿ ಇವತ್ತಿನ ವಾಗ್ವಾದಗಳು ರಾಷ್ಟ್ರಪ್ರಭುತ್ವ ಮತ್ತು ಜಾಗತಿಕ ಆಯಾಮಗಳನ್ನು ಪರಿಗಣಿಸಿ ನಡೆಬೇಕಿದೆ. ಕೆಲವು ಚಿಂತಕರು ಜಾಗತೀಕರಣ, ಬಹುರಾಷ್ಟ್ರೀಯ ಕಂಪೆನಿಗಳ ವಿರೋಧದಲ್ಲಿ ಹಿಂದುತ್ವಕ್ಕೆ ಉತ್ತರ ಹುಡುಕುತ್ತಾರೆ. ಆದರೆ ಹಿಂದುತ್ವಕ್ಕೆ ದೇಶದೊಳಗಿನ ಆಯಾಮವೂ ಇದೆ. ಈ ರೀತಿಯ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸ್ಥಿತಿಗತಿ ಇರುವ ಚಾರಿತ್ರಿಕ ಸಂದರ್ಭದಲ್ಲಿ ' ದಲಿತ ಪರಿಕಲ್ಪನೆ ' ಯನ್ನು ಮರು ನಿರೂಪಿಸಬೇಕಾಗಿದೆ. □

ಅಂಗವಿಕಲರಿಗೆ ಅವಕಾಶ ನೀಡಿ,
ಅದ್ಭುತ ಸಾಧನೆ ನೋಡಿ.

ಅಂಗವಿಕಲತೆ ದೌರ್ಬಲ್ಯದ ಸಂಕೇತವಲ್ಲ. ಬದಲಾಗಿ ಅದು ಅಂಗವಿಕಲ ಬಂಧುಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸಿ ಸಾಧನೆಗೆ ಹೆಚ್ಚಿನ ಛಲ ಮೂಡಿಸುವುದು. ಅವರ ಗಮನಾರ್ಹ ಸಾಧನೆಗೆ ಪ್ರೇರಣೆಯಾಗಲೆಂದೇ ಪ್ರತಿವರ್ಷ ಡಿಸೆಂಬರ್ ೩ ರಂದು ವಿಶ್ವಾದ್ಯಂತ ಅಂಗವಿಕಲರ ದಿನವನ್ನಾಗಿ ಆಚರಿಸಲಾಗುತ್ತಿದೆ.

ಅಂಗವಿಕಲರಿಗಾಗಿ ಅವಕಾಶಗಳು:

ರಾಜ್ಯ ಸರ್ಕಾರ ಅಂಗವಿಕಲರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು:-

- ಶ್ರವಣ ಮತ್ತು ದೃಷ್ಟಿದೋಷವುಳ್ಳವರಿಗಾಗಿ ವಿಶೇಷ ಶಾಲೆಗಳನ್ನು ನಡೆಸಲು ಉತ್ತೇಜನ
- ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
- ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೊತ್ಸಾಹಧನ
- ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವ್ಯ ಗ್ರಂಥಾಲಯದ ಅನುಕೂಲ
- 'ಆಧಾರ' ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಅವಕಾಶ
- ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತ ದೂರವಾಣಿ ಬೂತ್ ಸೌಲಭ್ಯ
- ಸ್ವಯಂ ಉದ್ಯೋಗ ಅಥವಾ ಆದಾಯ ತರುವ ಉದ್ಯೋಗಗಳಿಗಾಗಿ ಸಾಲ ಸೌಕರ್ಯ
- ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮೆ ಯೋಜನೆ
- ಮಾಸಿಕ ನಿರ್ವಹಣೆ ಭತ್ಯೆಯ ನೀಡಿಕೆ
- ಅಂಗವಿಕಲರಿಗೆ ಶೇ.೫ ರಷ್ಟು ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ
- ಸಾಧನ ಸಲಕರಣೆಗಳ ಹಾಗೂ ತ್ರಿಚಕ್ರವಾಹನಗಳ ಉಚಿತ ಪೂರೈಕೆ
- ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್.

ಕರ್ನಾಟಕ ವಾರ್ತೆ

ಒಳನೋಟ

ಮಧ್ಯಯುಗೀನ ಕರ್ನಾಟಕದಲ್ಲಿ ಬಸವ ಪ್ರೇರಿತ ಸಾಮಾಜಿಕ - ಧಾರ್ಮಿಕ - ಸಾಂಸ್ಕೃತಿಕ ಆಂದೋಲನೆಯು ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆಯಾಗಿದೆ. ಬಸವಣ್ಣ ದೈಹಿಕ, ಸಾಮಾಜಿಕ ವೈಚಾರಿಕ ಶೋಷಣೆ ಯಿಲ್ಲದ, ಮಾನವೀಯ ಮೌಲ್ಯ ಗಳನ್ನು ಆಧರಿಸಿದ ಹೊಸ ಸಮಾಜದ ಕಾಣ್ಕೆಯನ್ನು ವಾಸ್ತವ ರೂಪಕ್ಕೆ ಇಳಿಸಲು ಅಂದಿನ ಜನತೆಯನ್ನು ಹೊಡೆದೆಬ್ಬಿಸಿದನು. ಅವನ ಚಳವಳಿ ಹಿತಾಸಕ್ತ ವರ್ಗಗಳಿಗೆ ದುಃಸ್ವಪ್ನವಾದರೆ, ಜನಸಾಮಾನ್ಯರಿಗೆ ಸರ್ವಾಂಗೀಣ ಬಿಡುಗಡೆಯ ಮಾರ್ಗವಾಯಿತು. ಈ ಬಂಧಮುಕ್ತ ಜನರಲ್ಲಿ, ಶತಮಾನಗಳಿಂದಲೂ ಸರ್ವತೋಪರಿ ತುಳಿಯಲ್ಪಟ್ಟ ದಲಿತ ಜನಾಂಗವೂ ಸೇರಿದುದು ಭಾರತೀಯ ಇತಿಹಾಸದಲ್ಲೆ ಮಹತ್ತರ ಸಾಧನೆಯಾಗಿದ.

ಶಂಕರ ಮ. ಪಾಟೀಲ

ಬಸವದೃಷ್ಟಿ ಪ್ರೇರಿತ
ದಲಿತ ಶರಣ - ವಚನಕಾರರು

ಮಧ್ಯಯುಗೀನ ಕರ್ನಾಟಕದಲ್ಲಿ ಬಸವ ಪ್ರೇರಿತ ಸಾಮಾಜಿಕ - ಧಾರ್ಮಿಕ - ಸಾಂಸ್ಕೃತಿಕ ಆಂದೋಲನೆಯು ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆಯಾಗಿದೆ. ದ್ರಷ್ಟಾ ಪುರುಷ ಬಸವಣ್ಣ ತಾನು ಕಂಡ ವಿಷಮತಾ ವಿರಹಿತವಾದ, ದೈಹಿಕ, ಸಾಮಾಜಿಕ ವೈಚಾರಿಕ ಶೋಷಣೆಯಿಲ್ಲದ, ಮಾನವೀಯ ಮೌಲ್ಯಗಳನ್ನು ಆಧರಿಸಿದ ಹೊಸ ಸಮಾಜದ ಕಾಣ್ಕೆಯನ್ನು ವಾಸ್ತವ ರೂಪಕ್ಕೆ ಇಳಿಸಲು ಅಂದಿನ ಜನತೆಯನ್ನು ಹೊಡೆದೆಬ್ಬಿಸಿದನು. ಅವನ ಚಳುವಳಿಯು ಹಿತಾಸಕ್ತ ವರ್ಗಗಳಿಗೆ ದುಃಸ್ವಪ್ನವಾದರೆ, ಜನಸಾಮಾನ್ಯರಿಗೆ ಸರ್ವಾಂಗೀಣ ಬಿಡುಗಡೆಯ ಮಾರ್ಗವಾಯಿತು. ಈ ಬಂಧಮುಕ್ತ ಜನರಲ್ಲಿ, ಶತಮಾನಗಳಿಂದಲೂ ಸರ್ವತೋಪರಿ ತುಳಿಯಲ್ಪಟ್ಟ ದಲಿತ ಜನಾಂಗವೂ ಸೇರಿದುದು ಭಾರತೀಯ ಇತಿಹಾಸದಲ್ಲೆ ಎರಡಿಲ್ಲದ ಮಹತ್ತರ ಸಾಧನೆಯಾಗಿದೆ.

ಕೆಳಸ್ತರೀಯ ಜನರಿಗೆ, ಅವರ ಕಸುಬುಗಳನ್ನೇ ಕಾಯಕದ ಉಚ್ಚ ಸಂಕಲ್ಪನೆಗೆ ಎತ್ತರಿಸುವ ಮೂಲಕ ಸನ್ಮಾನನೀಯ ಸಮಾನ ಸ್ಥಾನ ಮಾನಗಳು ದೊರೆತವಷ್ಟೆ ಅಲ್ಲ; ಅವರಿಗೆ ಅರಿವಿನ ದಾರಿಯೂ ತೆರೆದುಕೊಂಡಿತು, ಅಭಿವ್ಯಕ್ತಿಯ ಅವಕಾಶವೂ ಕೈಗೆ ಎಟುಕುವಂತಾಯಿತು. ಅವರ ಮೂಕ ವೇದನೆಗೆ, ಇಲ್ಲಿಯವರೆಗೂ ವಾಙ್ಮಯೀನ ಸಂಸ್ಕೃತಿಯಿಂದ ದೂರವೇ ಉಳಿದಿದ್ದ ಅವರ ಆಳವಾದ ವೈಶಿಷ್ಟ್ಯಪೂರ್ಣ ಅನುಭವಗಳಿಗೆ, ಅವರ ಮುಕ್ತ ಚೈತನ್ಯದ ಉತ್ಸಾಹಕ್ಕೆ, ಅವರ ಬೇಕು ಬೇಡುಗಳ ತಲ್ಲಣಗಳಿಗೆ, ಶಬ್ದಗಳನ್ನು ಧ್ವನಿಯನ್ನು ಅಭಿವ್ಯಕ್ತಿಯ ದಾರ್ಷ್ಟ್ಯವನ್ನು ಬಸವಾಂದೋಲನೆ ದೊರಕಿಸಿಕೊಟ್ಟಿತು. ಶರಣರ ಬಳಗಕ್ಕೆ ಸೇರಿದರೂ ಹಳೆಯ ಕುಲಾಚಾರಗಳನ್ನೂ ಸ್ಥಾವರ ಪೂಜೆ ಶೈವಾಚರಣೆಗಳನ್ನೂ ಬಿಡದೆ ಇದ್ದಂಥ ಅಪಕ್ವರನ್ನೂ ಢೊಂಗಿಗಳನ್ನೂ ಶಬ್ದಗಳ ಚಾಟಿಯ ಏಟಿನಿಂದ ತರಾಟೆಗೆ ತೆಗೆದುಕೊಳ್ಳುವ ಎದೆಗಾರಿಕೆ ಅವರಿಗೆ ದೊರೆಯಿತು. ದೇವರಿಗೇನೆ 'ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ, ಹಸಿದು ನೋಡಾ' ಎಂದು ಸವಾಲು ಎಸೆಯುವ ದಿಟ್ಟತನವನ್ನು ಅವರು ತೋರುವಂತಾದರು. ಒಬ್ಬ ಶಿವಶರಣೆಯಂತೂ ಭಕ್ತಿಗೆ ದೇವರೊಲಿದು ಏನೆಲ್ಲ ಮಾಡುವನೆಂಬ ಭಕ್ತರ ಕಥೆಗಳಲ್ಲಿಯ ಅತಿರೇಕವನ್ನು ಖಂಡಿಸುತ್ತ ಬಾಗಿಲು ಕಾಯುವುದು, ಕುಂಟಣಗಿತ್ತಿಯಾಗುವುದು, ಮಗನನ್ನೇ ಕೊಂದು ಅಡಿಗೆ ಮಾಡು ಎಂದು ಕೇಳುವುದು ಇವೆಲ್ಲ ನಿಮ್ಮ ಘನತನಕೆಯೋಗ್ಯವಾದ ಕೃತಿಗಳೆ ಎಂದು ದೇವರನ್ನೇ ಪ್ರಶ್ನಿಸುತ್ತಾಳೆ. ಅವಳು ಬಸವಣ್ಣನನ್ನೂ ಬಿಟ್ಟಿಲ್ಲ -ನಿನಗೆ ಇಬ್ಬರು ಹೆಂಡಿರಿರುವುದು ಯೋಗ್ಯವೆ ಎಂದು ಮೂದಲಿಸುತ್ತಾಳೆ.

ಬಸವಾಂದೋಲನೆಯ ಮಹತ್ತರ ಕೊಡುಗೆಯೆಂದರೆ ವಚನಗಳೆ ಜೀವನದ ಅನೇಕ ಸ್ತರಗಳಿಂದ ಬಂದ ಶರಣರು ವಚನಗಳನ್ನು ರಚಿಸಿದ್ದಾರೆ. ಅವರಲ್ಲಿ ಜೀವನದ ಕೆಳಸ್ತರಗಳಿಂದ ಬಂದ ವಚನಕಾರರೆ ಬಹುಸಂಖ್ಯೆಯಲ್ಲಿದ್ದಾರೆ. ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಅಲ್ಲಮಪ್ರಭು (ಇವರ ಮೂಲ ಸ್ತರ ಯಾವುದು ಎಂಬುದು ವಿವಾದಾಸ್ಪದ ವಿಷಯವಾಗಿದೆ) ಮುಂತಾದ ಹಿರಿಯ ವಚನಕಾರರ ವಚನಗಳಿಗೆ ಹೋಲಿಸಿದಾಗ ಈ ನಿಮ್ನಸ್ತರೀಯ ಮೂಲದ ವಚನಕಾರರ ರಚನೆಗಳು ಕಾವ್ಯ, ಅನುಭೂತಿ, ಪ್ರತಿಭೆ, ತಾತ್ವಿಕ ಚಿಂತನೆಗಳ ಅನುಷ್ಠಂಗದಿಂದ ಶ್ರೇಷ್ಠ ಕೃತಿಗಳು ಎಂದು ಹೇಳಲಾಗದು. ಆದರೂ ತಮ್ಮದೇ ಆದ ಸೊಗಡಿನಿಂದ, ಭಾಷೆಯಲ್ಲಿಯ ಸೊಕ್ಕಿನಿಂದ, ವಿಷಯದಲ್ಲಿಯ ವೈವಿಧ್ಯದಿಂದ, ಜೀವನಾನುಭವದ ಸಾಚಾತನದಿಂದ, ಆ ಅನುಭವದ ಅಭಿವ್ಯಕ್ತಿಯಲ್ಲಿ ಅವರು ತಮ್ಮ ಕಸುಬಿನ ಕ್ರಿಯೆಗಳ ರೂಪಕಗಳನ್ನು ಬಳಸುವ ನಾವಿನ್ಯಪೂರ್ಣ ಕುಶಲತೆಯಿಂದ ಅವರ ವಚನಗಳು ವೈಶಿಷ್ಟ್ಯ ಪೂರ್ಣವೂ ಸಾಹಿತ್ಯದಲ್ಲಿ ಮಹತ್ವದ ಸ್ಥಾನವನ್ನು ಪಡೆಯಬಲ್ಲಂಥವೂ ಆಗಿವೆ.

ದಲಿತ ಶರಣ-ವಚನಕಾರರ ಕುರಿತ ಈ ಲೇಖನದಲ್ಲಿ ಅಲ್ಲಲ್ಲಿ ವಿವೇಚನೆ ವಿಮರ್ಶೆಯ ಮಾತುಗಳು ಬರುವುದಾದರೂ ಪ್ರಾಮುಖ್ಯವಾಗಿ ಪರಿಚಯಾತ್ಮಕ ಸ್ವರೂಪ ಇದಕ್ಕಿದೆ. ಹಲವಾರು ಗ್ರಂಥಗಳಿಂದ ಸಾಮಗ್ರಿಯನ್ನು ಸಂಗ್ರಹಿಸಿ ಇಲ್ಲಿ ನಿರೂಪಿಸಲಾಗಿದೆ. ವಚನಕಾರರ ಆಯ್ಕೆಯ ಸಂದರ್ಭದಲ್ಲಿ ತಲೆದೋರಿದ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸುವದು ಅಗತ್ಯವೆನಿಸಿದೆ. ಕೀಳು ಕುಲದವರೆಂದು ಗುರುತಿಸಲ್ಪಡುವ ಜನಾಂಗವನ್ನು ಕುರಿತು ಬರೆಯುವಾಗ ಲೇಖಕರು ಶೂದ್ರ, ದಲಿತ, ಎಂಬ ಶಬ್ದಗಳನ್ನು ಎಚ್ಚರವಹಿಸದೆ ಬಳಸುತ್ತಿರುವದರಿಂದ ಈ ಶಬ್ದಗಳಿಗೆ ಖಚಿತ ಅರ್ಥವ್ಯಾಪ್ತಿ ಇಲ್ಲದೆ ಹೋಗಿದೆ. ಸಮಗ್ರ ವಚನ ಸಂಪುಟ (ಕರ್ನಾಟಕ ಸರಕಾರ) ಗಳಲ್ಲಿಯೆ ಇದನ್ನು ಕಾಣಬಹುದು. ಸಂಪುಟ ೬ರ ಪ್ರಸ್ತಾವನೆಯಲ್ಲಿ ಉರಿಲಿಂಗಪೆದ್ದಿ, ಅನಾಮಿಕ ನಾಚಯ್ಯ ಇವರನ್ನು ಶೂದ್ರರೆಂದು ಉಲ್ಲೇಖಿಸಲಾಗಿದೆ. ಸಂಪುಟ ೭ರ ಪ್ರಸ್ತಾವನೆಯಲ್ಲಿ ಕೆಳವರ್ಗಕ್ಕೆ ಸೇರಿದವರೆಂದು ಹೆಸರಿಸಲ್ಪಟ್ಟ ಎಲ್ಲರನ್ನೂ, ಸಗಟಾಗಿ ಅಸ್ಪೃಶ್ಯರೆಂದು ಕರೆಯಲಾಗಿದೆ. ಇಂಥ ಅನಿಶ್ಚಿತ ಶಬ್ದ ಪ್ರಯೋಗ ಸಾಮಾನ್ಯವಾಗಿ ಹೋಗಿದೆ; ಇದು ಅನ್‌ಇಷ್ಟವಾದುದು.

ನಿಚ್ಚಳವಾಗಿ ಪರೀಕ್ಷಿಸಿದಾಗ ಕಂಡುಬರುವ ವಸ್ತುಸ್ಥಿತಿ ಹೀಗಿದೆ- ಶೂದ್ರರು ನಾಲ್ಕು ವರ್ಣಗಳಲ್ಲಿ ಬರುವ ಒಂದು ವರ್ಗ. ಇವರು ಎರಡು ಸಲ ಹುಟ್ಟುವವರಲ್ಲ-ಅಂದರೆ-ದ್ವಿಜರು ಅಲ್ಲ, ಕಾಲಿನಿಂದ ಹುಟ್ಟಿದವರಾಗಿದ್ದರಿಂದ ಕಾಲು ಕಸವಾದವರು, ದ್ವಿಜರ ದೃಷ್ಟಿಯಲ್ಲಿ ಈ ನಾಲ್ಕು ವರ್ಣಗಳ ಆಚೆಗೆ ಬಹಿರ್ದೆಸೆಯಲ್ಲಿ ವಾಸಿಸುವವರು

ಅಂತ್ಯಜರು, ಪಂಚಮರು. ಅಸ್ಪೃಶ್ಯತೆಯ ಸೋಂಕು ಇದ್ದುದು ಈ ಜನಾಂಗಕ್ಕೆ. ದಲಿತರು ಎಂದಾಗ ಪ್ರಾಮುಖ್ಯವಾಗಿ ಕಣ್ಣೆದುರು ಬರುವವರು ಇವರು. ಆದರೆ ಕಾಲಾಂತರದಲ್ಲಿ ಶೂದ್ರ ವರ್ಗಗಳಲ್ಲಿಯ ಕೆಲವು ಜನಾಂಗಗಳು ತಮ್ಮ ವೃತ್ತಿ ಹಾಗು ಸಾಮಾಜಿಕ ಆರ್ಥಿಕ ಸ್ಥಿತಿಯಿಂದಾಗಿ ಅಸ್ಪೃಶ್ಯತೆಯ ಛಾಯೆಯೊಳಗೆ ಬಂದವರಾಗಿದ್ದಾರೆ.

ಇಂದಿನ ನಮ್ಮ ಸಮಾಜದಲ್ಲಿ ಬ್ರಾಹ್ಮಣರು ಹಾಗು ಉಪನಯನ ಸಂಸ್ಕಾರವನ್ನು ಇಟ್ಟುಕೊಂಡಿರುವ ಕೆಲ ವರ್ಗಗಳು ಮಾತ್ರ ತ್ರೈವರ್ಣಿಕರು, ಉಳಿದವರೆಲ್ಲ ಶೂದ್ರರು. ಇದು ಸಮಾಜ ಶಾಸ್ತ್ರೀಯ ವಸ್ತು ಸ್ಥಿತಿಯಷ್ಟೆ ಅಲ್ಲ ಕಾಯದೆಯ ದೃಷ್ಟಿಯಲ್ಲೂ ಸ್ವೀಕೃತವಾದ ಸತ್ಯ. ಈ ಶೂದ್ರರೆಲ್ಲರೂ ಒಂದೇ ಸ್ತರದಲ್ಲಿ ಇರುವಂಥವರಲ್ಲ ಸಾಮಾಜಿಕ ಆರ್ಥಿಕ ದೃಷ್ಟಿಯಿಂದ ಅವರಲ್ಲಿ ಮೇಲು ಕೀಳು ಸ್ತರಗಳಿವೆ. ಈ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ನಿರೀಕ್ಷಿಸಿದಾಗ ಮೂರು ವರ್ಗಗಳು ನಿಚ್ಚಳವಾಗಿ ಗೋಚರಿಸುತ್ತವೆ. ಒಂದು ಪಂಚಮರು ಮೂಲತಃ ಅಸ್ಪೃಶ್ಯರು; ಎರಡು ಕೆಳವರ್ಗದ ಶೂದ್ರರು, ಅಸ್ಪೃಶ್ಯರಂತೆಯೆ ನಡೆಯಿಸಿಕೊಳ್ಳಲ್ಪಟ್ಟವರು; ಮೂರು ಮೇಲ್ವರ್ಗದ ಶೂದ್ರರು. ಮೊದಲ ಎರಡು ವರ್ಗಗಳನ್ನು ದಲಿತ ಎಂದು ಕರೆಯುವುದು ಯಥೋಚಿತವಾದುದು. ಇಂದಿನ ಲಿಂಗಾಯತ ಸಮಾಜದಲ್ಲಿ, ಬಣಜಿಗನೂ ಶೂದ್ರನೆ, ಆದರೆ ಅವನು ಕೆಳವರ್ಗದವನಲ್ಲ; ಹಡಪದವನೂ (ನಾಯಿಂದ) ಶೂದ್ರನೆ, ಆದರೆ ಅವನು ದಲಿತ.

ಈ ಲೇಖನದಲ್ಲಿ ಅಂತ್ಯಜರಾಗಿದ್ದು ಅಸ್ಪೃಶ್ಯರೆನಿಸಿಕೊಂಡ ಶರಣ ವಚನಕಾರರನ್ನು ಪರಿಚಯಿಸಲಾಗಿದೆ. ಡಾ॥ಚಿದಾನಂದ ಮೂರ್ತಿಯವರು ತಮ್ಮ ಆಳವಾದ ಅಭ್ಯಾಸ ಸಂಶೋಧನೆಯ ಆಧಾರದ ಮೇಲೆ ಅಸ್ಪೃಶ್ಯರೆಂದು ನಿಶ್ಚೈಸಿರುವ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಸಂಬೋಳಿ ನಾಗಿದೇವ, ಅನಾಮಿಕ ನಾಚಯ್ಯ, ಮಾದಾರ ಧೂಳಯ್ಯ, ಉರಿಲಿಂಗ ಪೆದ್ದಿ ಹೆಂಡದ ಮಾರಯ್ಯ, ಢಕ್ಕೆಯ ಮಾರಯ್ಯ, ಕಾಳವ್ವೆ ಈ ಒಂಬತ್ತು ಜನ ವಚನಕಾರ ಶರಣರನ್ನು ಕುರಿತು ಇಲ್ಲಿ ನಿರೂಪಣೆಯಿದೆ. ಇವರೆ ಬಸವಾಂದೋಲನೆಯ ದೃಷ್ಟಿಯಲ್ಲಿ ನಿಜವಾದ ಕುಲಜರು, ಹಿರಿಯ ಕುಲದವರು.

ಹಿರಿಯ ಕುಲ

ಮಾನವ ನಿರ್ಮಿತ ವಿಷಮತೆಯ ಆಧಾರದ ಮೇಲೆ ರಚಿತವಾದ ಸಮಾಜ ವ್ಯವಸ್ಥೆಯನ್ನು ಮುರಿದು ಹಾಕಲು ಬಸವ ಆಂದೋಲನೆಯು ತನ್ನೆಲ್ಲ ಆಲೋಚನಾ ಶಕ್ತಿಯನ್ನು ಕ್ರಿಯಾಶೀಲತೆಯನ್ನು ಈ ಕಾರ್ಯದಲ್ಲಿ ತೊಡಗಿಸಿತ್ತು. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ನೊಂದೆ ಎಂಬೆ' ಎಂಬ ವಿಚಾರವನ್ನು ಬಸವಣ್ಣ ಹಲವಾರು ವಚನಗಳಲ್ಲಿ ಒತ್ತಿ ಒತ್ತಿ ಹೇಳಿದ್ದಾರೆ. ಇಷ್ಟಾದರೂ ಈ ವಿಚಾರ ಶಬ್ದದಲ್ಲಿ ಉಳಿದು ಕೃತಿಯಲ್ಲಿ ಬಾರದೆ ಇರಬಹುದಾಗಿದ್ದ ಪರಿಸ್ಥಿತಿ ಆಗಲೂ ಇದ್ದಿರಲು ಸಾಕು. ಅಂತೆಯೇ ಅಂಬಿಗರ ಚೌಡಯ್ಯ, 'ಕುಲಹೀನ ಶಿಷ್ಯರಿಗೆ ಅನುಗ್ರಹವ ಮಾಡಿ ತಿರುಗಿ ಅವನ ಮನೆಯಲ್ಲಿ ಉಣ್ಣಬಾರದೆಂದು ಅಕ್ಕಿ ಕಣಕವ ಕೊಂಡು ಹೋಗುವ ಗುರುವಿನ ಕಂಡರೆ' ಅವರನ್ನು ಕೆಡವಿ ಹಾಕಿ ಮೂಗಕೊಯ್ಯುವ ಇತ್ಯಾದಿ ಘೋರ ಶಿಕ್ಷೆಯನ್ನು ವಿಧಿಸಬೇಕೆಂದು ಅಬ್ಬರಿಸುತ್ತಾನೆ. ಉಚ್ಚವರ್ಣೀಯ ಮಧುವರಸ 'ಜಾತಿ'ಯನ್ನು ಕೊಲ್ಲುವ ಮಾತನಾಡುತ್ತಾನೆ.

ಶೂದ್ರರು ನಾಲ್ಕು ವರ್ಣಗಳಲ್ಲಿ ಬರುವ ಒಂದು ವರ್ಗ. ಇವರು ಎರಡು ಸಲ ಹುಟ್ಟುವವರಲ್ಲ - ಅಂದರೆ - ದ್ವಿಜರು ಅಲ್ಲ. ಕಾಲಿನಿಂದ ಹುಟ್ಟಿದವರಾಗಿದ್ದರಿಂದ ಕಾಲು ಕಸವಾದರು, ದ್ವಿಜರ ದೃಷ್ಟಿಯಲ್ಲಿ ಈ ನಾಲ್ಕು ವರ್ಣಗಳ ಆಚೆಗೆ ಬಹಿರ್ದೆಸೆಯಲ್ಲಿ ವಾಸಿಸುವವರು ಅಂತ್ಯಜರು, ಪಂಚಮರು. ಅಸ್ಪೃಶ್ಯತೆಯ ಸೋಂಕು ಇದ್ದುದು ಈ ಜನಾಂಗಕ್ಕೆ. ದಲಿತರು ಎಂದಾಗ ಪ್ರಾಮುಖ್ಯವಾಗಿ ಕಣ್ಣೆದುರು ಬರುವವರು ಇವರು. ಆದರೆ ಕಾಲಾಂತರದಲ್ಲಿ ಶೂದ್ರ ವರ್ಗಗಳಲ್ಲಿಯ ಕೆಲವು ಜನಾಂಗಗಳು ತಮ್ಮ ವೃತ್ತಿ ಹಾಗೂ ಸಾಮಾಜಿಕ ಆರ್ಥಿಕ ಸ್ಥಿತಿಯಿಂದಾಗಿ ಅಸ್ಪೃಶ್ಯತೆಯ ಛಾಯೆಯೊಳಗೆ ಬಂದವರಾಗಿದ್ದಾರೆ.

ಬಸವಣ್ಣನಂತೂ ತನ್ನನ್ನು ಕೀಳು ಜಾತಿಯ ಶರಣರೊಂದಿಗೆ ಸಮೀಕರಿಸುವ ಪ್ರಯತ್ನವನ್ನು ಹಲವಾರು ವಚನಗಳಲ್ಲಿ ಮಾಡಿದ್ದಾನೆ. ಸಮಾನತೆಯನ್ನು ಪ್ರತಿಪಾದಿಸುತ್ತಿರುವಂತೆಯೇ ಹಾಗು ಕುಲಸೂತಕವನ್ನು ಕಿತ್ತು ಹಾಕುತ್ತಿರುವಂತೆಯೇ ಕೀಳು ಕುಲದ ಸಂಕಲ್ಪನೆ, ಅದರ ಪ್ರಜ್ಞೆ ಕೆಲವರ ಮನದಲ್ಲಿ ಉಳಿದೆ ಹೋಗಿರುವುದು ಅಸಂಭವನೀಯವೇನಲ್ಲದೆ. ಈ ಹಿರಿಯರಿಮೆಯನ್ನು ಉಚ್ಚ ಕುಲದವರ ಮನದಲ್ಲಿ ಸುಪ್ತವಾಗಿ ಸುಳಿಯುತ್ತಿರುವ ಜಾತಿಯ ಸೊಂಪು ಜನ್ಮದ ಪೆಂಪು (ಹರಿಹರನ ಶಬ್ದಗಳು) ಭಾವನೆಗಳನ್ನು ಅಳಿಸಿ ಹಾಕಲು ಬಸವ ಆಂದೋಲನೆಯು ನಾವಿನ್ಯ ಪೂರ್ಣ ಉಪಕ್ರಮವೊಂದನ್ನು ಯೋಜಿಸಿ ಕಾರ್ಯರೂಪಕ್ಕಿಳಿಸಿತು. ಶ್ರೇಣಿಗಳನ್ನು ತಲೆಕೆಳಗೆ ಮಾಡಿ ಇಟ್ಟುಬಿಡುವ ಪ್ರಯೋಗವಿದು. ಅಂತ್ಯಜ ಮೊದಲುಗೊಂಡು ಎಲ್ಲ ದಲಿತ ವರ್ಗದ ಭಕ್ತರನ್ನು 'ಹಿರಿಯ ಕುಲ' ದವರು ಎಂದು ಸಂಬೋಧಿಸಲು ಬಸವಾದಿ ಶರಣರು ಪ್ರಾರಂಭಿಸಿದರು. ಸಕಳೇಶ ಮಾದರಸರ ವಚನದಲ್ಲಿ ಮೊದಲ ಬಾರಿಗೆ ಇಂತಹ ಉಲ್ಲೇಖ ದೊರೆಯುತ್ತದೆ. ಅಜಾತರನ್ನು ಅಂದರೆ ಕೀಳು ಕುಲದವರನ್ನು ಹಿರಿಯ ಕುಲದವರಿಗಿಂತ ಹಿರಿಯರೆಂದು ಕರೆಯುತ್ತೇನೆ; ಅವರನ್ನು 'ಹಿರಿಯ ಮಾಹೇಶ್ವರ ನೆಂಬೆನು' ಎಂದು ಅವರು ಘೋಷಿಸುತ್ತಾರೆ. ಬಸವ ಆಂದೋನೆಯು ದಲಿತರನ್ನು ಹಿರಿಯ ಕುಲದವರೆಂದು ಕರೆಯುವ ಪರಿಪಾಠವನ್ನು ರೂಢಿಸಿತು. ಅದು ದಿನ ಬಳಕೆಯ ಮಾತಾಗಿ ಮುಂದುವರೆಯಿತು ಎಂಬುದಕ್ಕೆ ಮುಂದಿನ ೫-೬ ನೂರು ವರುಷಗಳ ಅವಧಿಯಲ್ಲಿ ರಚಿತವಾದ ಲಿಂಗಾಯತ ಸಾಹಿತ್ಯದಲ್ಲಿ ವಿಪುಲವಾದ ಆಧಾರಗಳು ದೊರೆಯುತ್ತವೆ. ಹರಿಹರ ಕವಿ ಹೊಲಗೇರಿಯನ್ನು 'ಹಿರಿಯ ಮಾಹೇಶ್ವರರ ಕೇರಿ' ಎಂದು ವರ್ಣಿಸುತ್ತಾನೆ; ದಲಿತ ಭಕ್ತರನ್ನು ಹಿರಿಯ ಮಾಹೇಶ್ವರ, ಹಿರಿಯ ಭಕ್ತ ಎಂದು ಕರೆಯುತ್ತಾನೆ. ಭೀಮ ಕವಿಯ ಬಸವಪುರಾಣ, ಆರಾಧ್ಯ ಚರಿತ್ರೆ, ಸಿಂಗಿರಾಜಪುರಾಣ, ರಾಘವಾಂಕ ಚರಿತ್ರೆ ಇತ್ಯಾದಿ ಇನ್ನೂ ಹಲವಾರು ಗ್ರಂಥಗಳಲ್ಲಿ 'ಹಿರಿಯ ಭಕ್ತ' ಹಿರಿಯ ಮಾಹೇಶ್ವರ, 'ಹಿರಿಯ ಕುಲ' ಹಿರಿಯನ್ವಯ ಎಂಬುದಾಗಿ ದಲಿತ ವರ್ಗದವರನ್ನು ಕರೆಯಲಾಗಿದ್ದು ಕಂಡುಬರುತ್ತದೆ. 'ಕೀಳು-ಕುಲದವರು ಎಂದು ಕರೆಯುವುದನ್ನೇ ಉಗ್ರವಾಗಿ ಪ್ರತಿಭಟಿಸಿ, ಲಿಂಗಾಯತ ಚಳುವಳಿ ಅವರನ್ನು ಹಿರಿಯ ಕುಲದವರು ಎಂದು ಕರೆದು ಅವರಿಗೆ ಪ್ರತಿಷ್ಠೆಯನ್ನು ಒದಗಿಸಿಕೊಟ್ಟಿತು. ವರ್ಣವ್ಯವಸ್ಥೆಯ ಚೌಕಟ್ಟನ್ನು ಬಿಟ್ಟುಕೊಡದೆಯೆ ಕೇವಲ ಅಸ್ಪೃಶ್ಯತೆಯನ್ನು ಹೋಗಲಾಡಿಸಲೆಂದು ದಲಿತರನ್ನು ಹರಿಜನರೆಂದು ಕರೆಯುವ ಧೋರಣೆಯು, ಬಸವ ಚಳವಳಿಯ ಶ್ರೇಣಿಯನ್ನೇ ತಲೆಕೆಳಗೆ ಮಾಡುವ ಸಾಹಸದ ಕ್ರಾಂತಿಕಾರಿ ಹೆಜ್ಜೆಗೆ ಹೋಲಿಸಿದಾಗ ಎಷ್ಟೊಂದು ಹಸಿ, ಹುಸಿ ಎಂಬುದರ ಅರಿವಾಗದೆ ಇರದು.

ಡೋಹರ ಕಕ್ಕಯ್ಯ

ವಚನಗಳಲ್ಲಿ ಹನ್ನೊಂದು ಸಲ ಬಸವಣ್ಣನಿಂದ ಸ್ಮರಿಸಲ್ಪಟ್ಟ ಡೋಹರ ಕಕ್ಕಯ್ಯ, ಲಿಂಗಾಯತ ಸಮಾಜೋ ಧಾರ್ಮಿಕ ಆಂದೋಲನೆಯಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದ ವ್ಯಕ್ತಿ. ಕನಿಷ್ಠರೆಂದನಿಕೊಂಡವರ ಜತೆಯಲ್ಲಿ ತನ್ನನ್ನು ಸಮೀಕರಣಗೊಳಿಸಿಕೊಳ್ಳುವ ಬಸವಣ್ಣ ಕಕ್ಕಯ್ಯನನ್ನು ತನ್ನ ಬೊಪ್ಪ ಕಿರಿಯಯ್ಯ, ಅಪ್ಪ ಎಂದು ಆತ್ಮೀಯವಾಗಿ ಸಂಬೋಧಿಸುತ್ತಾನೆ. ಇಷ್ಟೆ ಅಲ್ಲ ಕಕ್ಕಯ್ಯನ ದಾಸಿಯ ಮಗ ಹಾಗು ಚನ್ನಯ್ಯನ ದಾಸಿಯ ಮಗಳ ಸಂಗದಿಂದ ಹುಟ್ಟಿದವ ತಾನು ಎಂದು ಹೇಳಿಕೊಳ್ಳುವ ಮಟ್ಟಕ್ಕೂ ಬಸವಣ್ಣ ಹೋಗುತ್ತಾನೆ. ಭಕ್ತಿ ಭಂಡಾರಿ ಎನ್ನಿಸಿಕೊಳ್ಳುವ ಬಸವಣ್ಣ ಕಕ್ಕಯ್ಯನ ಮನೆಯಲ್ಲಿ ಭಕ್ತಿಯ ಭಿಕ್ಷೆ ಬೇಡಿದೆ ಎನ್ನುತ್ತಾನೆ; ಗೋತ್ರ ಯಾವುದು ಎಂದು ಕೇಳಿದರೆ ನಾಚಿಕೆ ಪಟ್ಟುಕೊಳ್ಳವದೇಕೆ, ನಮ್ಮ ಗೋತ್ರ ಡೋಹರ ಕಕ್ಕಯನ ಗೋತ್ರ ಎಂದು ಹೇಳಿ ಎನ್ನುತ್ತಾನೆ.

ತಾನು ಉತ್ತಮ ಕುಲದವನು ಎಂದು ಹೇಳಿಕೊಂಡರೆ ಕಕ್ಕಯ್ಯ ತನಗೆ ಒಕ್ಕುದನಿಕ್ಕ - ಪ್ರಸಾದ ನೀಡಲಾರ ಎಂದು ಒಂದು ವಚನದಲ್ಲಿ ಬಸವಣ್ಣ ಹೇಳಿದ ಮಾತಿಗೆ ನಂತರ ಕೈಕಾಲು ಮೂಡಿ ಒಂದು ಪುರಾಣ ಕಥೆಯಾಗಿ, ಕಕ್ಕಯ್ಯನ ಹಾಗು ಅಕ್ಕನಾಗಮ್ಮನ ಚಾರಿತ್ರ್ಯ ಹನನಕ್ಕೂ ಕಾರಣ ವಾಗುವಂಥ ಊಹಾಪೋಹಗಳ ಪತಂಗದಾಟಕ್ಕೂ ಮಾರ್ಗ ಮಾಡಿಕೊಟ್ಟಿತು. ಪ್ರಸಾದ ಮಹಾತ್ಮೆಯನ್ನು ಹೇಳಿಕೊಳ್ಳುವ ಹುಚ್ಚುವ್ಯಾಮೋಹದಲ್ಲಿ ಹುಟ್ಟಿ ಚನ್ನಬಸವಣ್ಣನ ಹುಟ್ಟಿನ ಬಗ್ಗೆ ಅಸಂಬದ್ಧ ವಾದಗ್ರಸ್ತ ಸಮಸ್ಯೆಯನ್ನೂ ಹುಟ್ಟುಹಾಕಿತು.

ಸ್ಥೂಲವಾಗಿ ಈ ಕಥೆ ಹೀಗಿದೆ : ದಿನಾಲು ಕಕ್ಕಯ್ಯನ ಮನೆಯಲ್ಲಿ ಪ್ರಸಾದ ಸ್ವೀಕರಿಸುವ ಬಸವಣ್ಣ ಒಂದು ದಿನ ಕೆಲಸದ ಗಡಿಬಿಡಿಯಲ್ಲಿ ಆ ಮೇಲೆ ಬರುತ್ತೇನೆ ಎಂದು ಕಕ್ಕಯ್ಯನಿಗೆ ಹೇಳಿ ಹೋದನು. ನಂತರ ಬಂದಾಗ ಕಕ್ಕಯ್ಯ ಬಾಗಿಲನ್ನೆ ತೆಗೆಯಲಿಲ್ಲ, ಮುನಿಸಿಕೊಂಡ ಆತ, ಹಲವಾರು ವರುಷ ಹೀಗೆಯ ಬಸವಣ್ಣನನ್ನು ಮನೆಯೊಳಕ್ಕೆ ಕರೆದುಕೊಳ್ಳದೆ ಪ್ರಸಾದ ನೀಡದೆ ಇದ್ದುಬಿಟ್ಟನು. ಒಂದು ದಿನ ಬಸವಣ್ಣನು ಕಕ್ಕಯ್ಯನ ಮನೆಬಾಗಿಲಡಿಯಿಂದ ಹೊರಬರುತ್ತಿದ್ದ ಇರುವೆಯ ಬಾಯಲ್ಲಿ ಅನ್ನದ ಅಗಳು ಕಂಡನು. ಪ್ರಸಾದ ಸಿಕ್ಕಿತು ಎಂಬ ಸಂತೋಷದಿಂದ ಇರುವೆಗೆ ಸಕ್ಕರೆ ಹಾಕಿ ಅನ್ನದ ಅಗುಳನ್ನು ಬಿಡಿಸಿಕೊಂಡು ಮನೆಗೆ ತೆಗೆದುಕೊಂಡು ಬಂದನು. ಅದನ್ನು ಅಕ್ಕ ನಾಗಾಂಬಿಕೆಯು ಕಂಡು ಆ ಪ್ರಸಾದವನ್ನು ತಾನೇ ಸೇವಿಸಿಬಿಟ್ಟಳು. ಪರಿಣಾಮವಾಗಿ ಅವಳು ಗರ್ಭವತಿಯಾಗಿ ಚೆನ್ನಬಸವಣ್ಣನಿಗೆ

ಜನ್ಮವಿತ್ತಳು. ಶರಣ ಶ್ರೇಷ್ಠ ಕಕ್ಕಯ್ಯನ ಬಗ್ಗೆ ಬಸವಣ್ಣನಿಗಿದ್ದ ಗೌರವ ಹಾಗು ಪೂಜ್ಯ ಭಾವನೆಗಳನ್ನು ವ್ಯಕ್ತಪಡಿಸುವ ಉತ್ಸಾಹದಲ್ಲಿ ಈ ರೀತಿ ದಂತಕಥೆ ಹುಟ್ಟಿ ಶೋಚನೀಯವೆ.

ಈ ಪ್ರಸಾದ ಕಥೆ ಹಾಗು ಕಕ್ಕಯ್ಯನ ಇತರ ಪವಾಡ ಸದೃಶ ಕೃತಿಗಳು ಎಲ್ಲ ಕಾವ್ಯ ಗ್ರಂಥಗಳಲ್ಲೂ ನಿರೂಪಿತವಾಗಿವೆ.

ಹರಿಹರ ಮಾತ್ರ ಈ ಕಥೆಯನ್ನು ಹೇಳದೆ ಇರುವದು ಗಮನಾರ್ಹ ಸಂಗತಿಯಾಗಿದೆ. ಚರ್ಮ ಹದಮಾಡುವ ಉದ್ಯೋಗದಲ್ಲಿ ಪರಿಣಿತರಾದ ಢೋರ ಜನ ಅಸ್ಪೃಶ್ಯರೆನ್ನಿಸಿಕೊಂಡಿದ್ದಾರೆ. ಈ ಜನಾಂಗ ಹೆಚ್ಚಾಗಿ ಮಹಾರಾಷ್ಟ್ರದಲ್ಲಿ ಹಾಗು ಕರ್ನಾಟಕದ ಉತ್ತರ ಗಡಿಯ ಭಾಗಗಳಲ್ಲಿ ನೆಲೆಸಿದೆ. ಕಕ್ಕಯ್ಯನೂ ಮಾಳವದೇಶದಿಂದ ಅಂದರೆ ಮಹಾರಾಷ್ಟ್ರ ದೇಶದ ಉತ್ತರ ಭಾಗದಿಂದ ಬಂದವನು. ಬಸವಣ್ಣನ ಆಂದೋಲನೆಯ ಹಿರಿಯ ಸಮರ್ಥಕನೂ ಶರಣರಿಗೆ ಆಧಾರ ಸ್ತಂಭನೂ ಆಗಿದ್ದನು. ಧರ್ಮಾಂಧತೆಯ ಕ್ರೌರ್ಯದಿಂದ ಉಂಟಾದ ಕ್ರಾಂತಿಯ ನಂತರ ಕಲ್ಯಾಣದಿಂದ ಚದರಿ ಹೋದ ಶರಣರ ಬೆಂಗಾವಲಾಗಿ ನಿಂತವನೂ, ಅವರ ರಕ್ಷಣೆಗಾಗಿ ಕತ್ತಿ ಹಿಡಿದು ಕಾದಿದವನೂ ಆದ ಕಕ್ಕಯ್ಯನು ಚನ್ನಬಸವಣ್ಣನ ನೇತೃತ್ವದಲ್ಲಿಯ ಶರಣರ ಉಳವಿಯತ್ತ ಪ್ರಯಾಣದ ಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿದ್ದನು. ಶರಣರ ಪಡೆಯೊಂದಿಗೆ ಉಳವಿಯ ಹತ್ತ ಹತ್ತಿರಕ್ಕೆ ಬಂದ ಅವನು ಕಿಕ್ಕೇರಿಯಲ್ಲಿ ಮರಣ ಹೊಂದಿದನು. ಅಳ್ನಾವರ ಹತ್ತಿರದ ಈ ಹಳ್ಳಿಯಲ್ಲಿ ಕಕ್ಕಯ್ಯನ ಸಮಾಧಿ ಇದೆ. 'ಭಿಷ್ಟಾದೇವಿ' ಎಂಬ ಹೆಸರಿನ ಅವನ ಪತ್ನಿಯೂ ಅದೇ ರಾತ್ರಿ ಪ್ರಾಣಬಿಟ್ಟಳು. ಅವಳ ಸಮಾಧಿಯೂ ಅಲ್ಲಿ ಇದೆ. ವಚನಕಾರ ಮಾದಾರ ಧೂಳಯ್ಯ ಕಕ್ಕಯ್ಯನ ಮಗ ಎಂಬ ಪ್ರತೀಯೂ ಇದೆ. ಆದರೆ ಖಚಿತವಾಗಿ ಹೇಳಲು ಸಾಕಷ್ಟು ಆಧಾರಗಳು ದೊರೆತಿಲ್ಲ. ಶಾಸನವೊಂದರಲ್ಲಿ ಉಲ್ಲೇಖಿತರಾದ, ಚೋಳ, ನಂಬಿ, ಕಕ್ಕ, ಚೆನ್ನ ಎಂಬ ವ್ಯಕ್ತಿಗಳಲ್ಲಿಯ ಕಕ್ಕ ಡೋಹರ ಕಕ್ಕಯ್ಯನಾಗಿರಬಹುದು ಎಂದೂ ಊಹಿಸಲಾಗಿದೆ.

(ಡಾ।। ಎಂ.ಎಂ. ಕಲಬುರ್ಗಿ)

ಡೋಹರ ಕಕ್ಕಯ್ಯನ ಆರು ವಚನಗಳು ದೊರೆತಿವೆ. 'ಅಭಿನವ ಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿರುವ ಈ ವಚನಗಳಲ್ಲಿ ಕಕ್ಕಯ್ಯನು 'ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ ಕರ್ಮವ ಕಳೆದು ಮುಟ್ಟಿ ಪಾವನ ಮಾಡಿ ಕೊಟ್ಟನಯ್ಯಾ ಎನ್ನ ಕರಸ್ಥಳಕ್ಕೆ ಲಿಂಗವ' ಎಂದು ಬಸವಣ್ಣನನ್ನು ಸ್ತುತಿಸಿದ್ದಾನೆ. ಅಲ್ಲದೆ ಪ್ರಭುದೇವರು, ಸಿದ್ಧರಾಮ, ಚೆನ್ನಬಸವಣ್ಣ ಅಜಗಣ್ಣ ಸೊಡ್ಡಳ ಬಾಚರಸ ಮೊದಲಾದ ಶರಣರನ್ನು ತನಗೆ ಷಟ್‌ಸ್ಥಳದ ಅರಿವು ಮಾಡಿಕೊಟ್ಟವರು ಎಂದು ಹೇಳಿಕೊಂಡಿದ್ದಾನೆ. ತನ್ನ ಅಸ್ಪೃಶ್ಯತೆಯ ಆಳವಾದ ನೋವನ್ನು ಅವನು 'ನಿಮ್ಮ ಹಸ್ತ ಮುಟ್ಟದಲ್ಲಿ' 'ನಿಮ್ಮ ಮುಟ್ಟಲೊಡನೆ' 'ಮುಟ್ಟಿ ಪಾವನ ಮಾಡಿ' ಎಂಬಂತಹ ನುಡಿಗಳಲ್ಲಿ ಹುದುಗಿರಿಸಿದಂತೆ ಭಾಸವಾಗುತ್ತದೆ. ಈ ಕೆಳಗಿನ ವಚನವಂತೂ ಕಕ್ಕಯ್ಯನ ಒಳಗುದಿಯ ಆರ್ತತೆಯನ್ನು ಶಬ್ದಗಳಲ್ಲಿ ಹಿಡಿದಿಟ್ಟಿದೆ:

ಎನ್ನ ಕಷ್ಟ ಕುಲದಲ್ಲಿ ಹುಟ್ಟಿಸಿದೆಯಯ್ಯಾ, ಎಲೆಲಿಂಗ ತಂದೆ, ಕೆಟ್ಟೆನಯ್ಯಾ, ನಿಮ್ಮ ಮುಟ್ಟಿಯೂ ಮುಟ್ಟದಿಹನೆಂದು ಎನ್ನ ಕೈ ಮುಟ್ಟದಿರ್ದಡೆ ಮನ ಮುಟ್ಟಲಾಗದೆ ಅಭಿನವ ಮಲ್ಲಿಕಾರ್ಜುನಾ?

ಎನ್ನ ಕಷ್ಟ ಕುಲದಲ್ಲಿ ಹುಟ್ಟಿಸಿದೆಯಯ್ಯಾ,
ಎಲೆಲಿಂಗ ತಂದೆ,
ಕೆಟ್ಟೆನಯ್ಯಾ, ನಿಮ್ಮ ಮುಟ್ಟಿಯೂ ಮುಟ್ಟದಿಹನೆಂದು
ಎನ್ನ ಕೈ ಮುಟ್ಟದಿರ್ದಡೆ ಮನ ಮುಟ್ಟಲಾಗದೆ
ಅಭಿನವ ಮಲ್ಲಿಕಾರ್ಜುನಾ?

'ಎನ್ನ ಕೈ ಮುಟ್ಟದಿರ್ದಡೆ ಮನೆ ಮುಟ್ಟಲಾಗದೆ' ಎಂಬ ವಾಕ್ಯ ದಲಿತೋದ್ಧಾರ ಚಳವಳಿಯ ಬ್ರೀದ ವಾಕ್ಯವೆ ಎನ್ನಿಸುವಂತಿದೆ.

ಕಕ್ಕಯ್ಯ ಐಕ್ಯ ಸ್ಥಳವನ್ನು ಮುಟ್ಟಿದ ಅನುಭವಿ ಎಂಬುದು ಈ ವಚನದಿಂದ ಸ್ಪಷ್ಟವಾಗಿ ತೋರುತ್ತದೆ:

ನೆನೆಯಲರಿಯೆ ನಿರ್ಧರಿಸಲರಿಯೆ ಮನವಿಲ್ಲವಾಗಿ
ಭಾವಿಸಲರಿಯೆ ಬೆರಸಲರಿಯೆ ಭಾವ
ನಿರ್ಭಾವವಾಯಿತ್ತಾಗಿ
ಧ್ಯಾನ ಮೌನವನರಿಯೆ ಧ್ಯಾನಾತೀತ ತಾನೆಯಾಯಿತ್ತಾಗಿ
ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವ ಮೀರಿ
ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾಗಿರ್ದೆ.

ಪರಮ ಅನುಭಾವಿಗಳ ಸಾಲಿನಲ್ಲಿ ಕಕ್ಕಯ್ಯನನ್ನು ನಿಲ್ಲಿಸುವಂಥ ವಚನವಿದು. ಸಿದ್ದಯ್ಯ ಪುರಾಣಿಕರು ಹೇಳುವಂತೆ, 'ಡೋಹರ ಕಕ್ಕಯ್ಯ ಒಬ್ಬ ದೇವ ಮಾನವ'

ಸಂಬೋಳಿ ನಾಗಿದೇವ

ತಮ್ಮ ನೆರಳೂ ಉಚ್ಚವರ್ಣೀಯರ ಮೇಲೆ ಬೀಳಕೂಡದೆಂದು ಬೀದಿಯಲ್ಲಿ ಬರುವಾಗ 'ಸಂಬೋಳಿ' ಎಂದು ಕೂಗುತ್ತ ಎಚ್ಚರಿಕೆ ಕೊಡುವ ಬಂಧನಕ್ಕೊಳಗಾಗಿದ್ದ ನಾಗೋಜಿಯುವರ್ಧಾಡ ಕಡೆಯಿಂದ ಕಲ್ಯಾಣಕ್ಕೆ ಬಂದವನು. ಕಲ್ಯಾಣದ ಬೀದಿಗಳಲ್ಲಿ ಸಂಬೋಳಿ, ಸಂಬೋಳಿ ಎಂದು ಕೂಗುತ್ತಲೆ ಪ್ರವೇಶಿಸಿದ್ದರಿಂದ ಅವನಿಗೆ ಸಂಬೋಳಿ ದೇವ ಎಂಬ ಹೆಸರು ಬಿದ್ದಂತಿದೆ. ಸಂಬೋಳಿ ಎಂಬುದು 'ಸಂಭಾಳ' ಎಂಬ ಮರಾಠಿ ಶಬ್ದದ ರೂಪಾಂತರ ಆಗಿರಬಹುದಾಗಿದೆ. ಶಿವನಾಗಮಯ್ಯ, ಕಂಬಳಿ ನಾಗಿದೇವ ಎಂದೂ ಇವನನ್ನು ಹೆಸರಿಸಲಾಗಿದೆ. ಇಷ್ಟಲಿಂಗೋಪಾಸಕ ಶರಣನಾದ ಮೇಲೆ ಅವನು ಸಂಬೋಳಿ ಎಂದು ಕೂಗುವುದನ್ನು ಬಿಟ್ಟು ಕೊಟ್ಟು ಅರಸನ ಕೋಪಕ್ಕೆ ಕಾರಣವಾದರೂ ಸಂಬೋಳಿ ಎಂಬ ನಿರ್ದೇಶಕ ಅವನ ಹೆಸರಿಗೆ ಅಂಟಿ ಕೊಂಡೆ ಬಿಟ್ಟಿದೆ. 'ಕಂಬಳಿ' ಎನ್ನು ವದೂ ಸಂಬೋಳಿಯ ಕಾಲಾಂತರ ದಲ್ಲಿಯ ರೂಪಾಂತರವಾಗಿರಲು ಸಾಧ್ಯ.

ನೆನೆಯಲರಿಯೆ ನಿರ್ಧರಿಸಲರಿಯೆ ಮನವಿಲ್ಲವಾಗಿ ಭಾವಿಸಲರಿಯೆ ಬೆರಸಲರಿಯೆ ಭಾವ ನಿರ್ಭಾವವಾಯಿತ್ತಾಗಿ ಧ್ಯಾನ ಮೌನವನರಿಯೆ ಧ್ಯಾನಾತೀತ ತಾನೆಯಾಯಿತ್ತಾಗಿ ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವ ಮೀರಿ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾಗಿರ್ದೆ.

ಬಸವಣ್ಣನ ದಲಿತೋದ್ಧಾರ ಮೂಲಕ ಸಮತಾದಿಷ್ಟಿತ ಸಮಾಜ ಧರ್ಮ ನಿರ್ಮಿತಿಯ ಆಂದೋಲನೆ ಯಲ್ಲಿ ಒಂದು ಆದರ್ಶ ಹೆಜ್ಜೆಯ ಅಂಗವಾಗಿ ನಾಗಿದೇವ ಮುಂದೆ ಬರುತ್ತಾನೆ. 'ಶ್ವಪ ಚೋಪಿಯಾದ ರೇನು ಶಿವಭಕ್ತನೆ ಕುಲ ಜನು' ಎಂಬ ಸಿದ್ಧಾಂತವನ್ನು ಮಂಡಿಸಿ ಅದನ್ನು ಪ್ರತ್ಯಕ್ಷ ಕಾರ್ಯರೂಪ ಕ್ಕಿಳಿಸಲು ಪ್ರಯತ್ನಿಸಿದ ಭಂಡಾರಿ ಬಸವಣ್ಣನಿಗೆ ನಾಗಿದೇವ ಲಾಭಾರ್ಥಿಯಾಗಿ ದೊರೆಯುತ್ತಾನೆ. ಹೊಲಗೇರಿಯನ್ನು ತನ್ನ ಮುಖ್ಯ ಕಾರ್ಯಕ್ಷೇತ್ರವನ್ನಾಗಿಸಿದ್ದ ಬಸವಣ್ಣ ದಿನವೂ ಅಲ್ಲಿಗೆ ಹೋಗಿ ಶಿವಭಕ್ತರ ಮನೆಯಲ್ಲೂ ಹೊಕ್ಕು ಪ್ರಸಾದ ಸ್ವೀಕರಿಸಿಯೆ ಅರಸನ ಒಡ್ಡೋಲಗಕ್ಕೆ ಹೋಗುತ್ತಿದ್ದನು. ತನಗೆ ದೊರೆತ ಈ ಸನ್ಮಾನ ಪೂರ್ವಕ ಜೀವನದ ಫಲವಾಗಿ ಅವನು ಸಂಬೋಳಿ ಎಂದು ಕೂಗುವದನ್ನು ಬಿಟ್ಟುಕೊಟ್ಟನು.

ಈ ಘಟನೆಗಳು ಉಚ್ಚವರ್ಣೀಯ ಮುಖಂಡರು ಹಾಗು ಬಿಜ್ಜಳನ ಅಧಿಕಾರಿಗಳಿಗೆ ಕಣ್ಣು ಕೀಸರಾದವು. ಬಸವಣ್ಣನು ಹೊಲೆಯರ ಮನೆಯಲ್ಲಿ ಊಟಮಾಡಿ ಬಂದು ರಾಜನ ಒಡ್ಡೋಲಗವನ್ನು ಅಪವಿತ್ರಗೊಳಿಸುತ್ತಾನೆ, ಅಸ್ಪೃಶ್ಯರನ್ನೆಲ್ಲ ಹಿರಿಯಕುಲದವರೆಂದು ತಲೆಯ ಮೇಲೆ ಕೂರಿಸಿಕೊಂಡಿದ್ದಾನೆ, ಅವರು ಜಾತಿ ಕಟ್ಟಳೆಗಳನ್ನು ಮೀರಿ ನಡೆಯುತ್ತಿದ್ದಾರೆ ಎಂದು ಅವರು ಬಿಜ್ಜಳನಿಗೆ ದೂರಿದರು. ಅರಸನು ಬಸವಣ್ಣನನ್ನು ಕರೆಯಿಸಿ ವಿಚಾರಣೆ ನಡೆಸಿದಾಗ ಬಸವಣ್ಣನು ನಾಗಿದೇವ ಸಹಿತ ಬಂದು ಕುಲಜರೆಂಬುದಕ್ಕೆ ಯಾವುದು ದೃಷ್ಟ? ಎಂದು ಸವಾಲು ಹಾಕಿ ಶರಣಕುಲದ ಉಚ್ಚತೆಯನ್ನು ವಿಶದಪಡಿಸಿ ವಿರೋಧಿಗಳ ಸೊಲ್ಲನ್ನು ಅಡಗಿಸಿದನು. ಜಿಡ್ಡುಗಟ್ಟಿದ ಸನಾತನಿ ಮನದ ವಿಷಮತೆಯ ವಿಷವನ್ನು ಬಸವಣ್ಣ ಅವರ ಮನಸ್ಸು ದೇಹಗಳಿಂದ ಇಳಿಸಿದನು. ಈ ಕಥೆಗೆ ಪುರಾಣ ಸ್ಪರ್ಶವೂ ಆಗಿದೆ. ಬಿಜ್ಜಳನ 'ವಿಪ್ರರ ಮೈಯಂ ಕೊಯ್ಯೆನೆತ್ತರ್ ಸುರಿದು, ಭಕ್ತರ ಮೈಯೊಳು ಪಾಲ್ ಸುರಿದಪುದೆ' ಎಂಬ ಆಕ್ಷೇಪಕ್ಕೆ ಸಮಾಧಾನವೆಂಬಂತೆ, ನಾಗಿದೇವನ ಕಾಲಿನ ಹೆಬ್ಬೆರಳಿನ ತುದಿಯನ್ನು ಚುಚ್ಚಿ ಅಲ್ಲಿಂದ ಹಾಲು ಸುರಿಯುತ್ತಿರುವುದನ್ನು ಬಸವಣ್ಣ ತೋರಿಸಿದನೆಂದು ಈ ಕಥೆಯಲ್ಲಿ ಹೇಳಲಾಗಿದೆ.

ಬಸವಣ್ಣನ ಹಿರಿಮೆಯನ್ನು ತೋರಿಸುವ ಈ ಕಥೆ ಹರಿಹರನಿಂದ ಮೊದಲುಗೊಂಡು ಎಲ್ಲ ಪ್ರಮುಖ ಕವಿಗಳ ಚರಿತ್ರ ಕಾವ್ಯಗಳಲ್ಲಿ ನಿರೂಪಿತವಾಗಿದೆ. ಬಸವಣ್ಣನ ಆಂದೋಲನದಲ್ಲಿ ಈ ಘಟನೆ ಎಂಥ ಮಹತ್ವದ ಪಾತ್ರವನ್ನು ನಿಭಾಯಿಸಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಕಥೆ ಇಷ್ಟೊಂದು ಪ್ರಚಾರಗೊಂಡರೂ ಎಲ್ಲಿಯೂ ನಾಗಿದೇವನ ಜೀವನದ ಕುರಿತು ವಿವರಣೆಗಳು ದೊರೆಯುವದಿಲ್ಲ. ಅವನ ಒಂದು ವಚನದಿಂದ ಅವನು ಹುಲ್ಲು ಕೊಯ್ದು ಹೊರೆಕಟ್ಟಿ ತಂದು ಪೂರೈಸುವ ಕಾರ್ಯವನ್ನು ಕೈಕೊಂಡಿದ್ದನೆಂದು ಊಹಿಸುಬಹುದಾಗಿದೆ.

ನಾಗಿದೇವನ ಮೂರೆ ವಚನಗಳು ದೊರೆತಿದ್ದು ಅವುಗಳಲ್ಲೊಂದು ಹೀಗಿದೆ:

ಘನ ಸುಖ ಮಹಾಸುಖ ಮುಟ್ಟಲು
ಸಮಸುಖಗಳ ಸುಖಿಸಬಲ್ಲ
ಸುಖವನಲ್ಲಿಯೇ ಕೊಯ್ದು ಸೂಡ ಕಟ್ಟಬಲ್ಲ
ನಾಗ ಪ್ರಿಯ ಚನ್ನ ರಾಮೇಶ್ವರಾ
ನಿಮ್ಮ ಶರಣನು ಸುಖಿಸಬಲ್ಲ ಸುಖವನು.

ಲಿಂಗಾಂಗ ಸಾಮರಸ್ಯದ ಅನುಭಾವವನ್ನು ತನ್ನ ಕಸುಬಿನ ಪ್ರತಿಮೆಯನ್ನು ಬಳಸಿ ಅಭಿವ್ಯಕ್ತಿಗೊಳಿಸಿದ ಅವನ ಈ ವಚನವು ಕಾವ್ಯ ದೃಷ್ಟಿಯಿಂದಲೂ ಗಮನಾರ್ಹವಾಗಿದೆ.

ಉರಿಲಿಂಗ ಪೆದ್ದಿ

ಅಸ್ಪೃಶ್ಯತೆಯ ಕಳಂಕದ ಸೋಂಕಿಗೆ ಈಡಾದ ಶರಣ ವಚನಕಾರರಲ್ಲಿ ಉರಿಲಿಂಗ ಪೆದ್ದಿ ಒಂದು ಅದ್ಭುತ ಚಮತ್ಕಾರವೇ ಎನ್ನಿಸುವಂಥ ವ್ಯಕ್ತಿ. ಅಡವಿಯಲ್ಲಿ ಕಟ್ಟಿಗೆ ಕಡಿದು ಸೌದೆ ಪೂರೈಸುವ ವೃತ್ತಿಯಲ್ಲಿದ್ದು ಆಗೀಗ ಕಳ್ಳತನವನ್ನು ಮಾಡುವ ಅಂತ್ಯಜ, ಪರಿವರ್ತನೆಗೊಂಡು ಸಂಸ್ಕೃತ ಭಾಷೆ ಸಾಹಿತ್ಯಗಳಲ್ಲಿ ಅಗಾಧ ಪಾಂಡಿತ್ಯವನ್ನು ಸಂಪಾದಿಸಿ, ಕನ್ನಡದಲ್ಲಿ ಉತ್ತಮ ಪ್ರತಿಯ ವಚನಗಳನ್ನು ರಚಿಸಿದ್ದಲ್ಲದೆ, ತನ್ನ ಗುರುವಿನ ಮಠಕ್ಕೆ ಉತ್ತರಾಧಿಕಾರಿಯಾಗಿ ಮಠಾಧೀಶ್ವರನಾದುದು, ಒಂದು ಪವಾಡ ಸದೃಶ ಸಾಧನೆಯಾಗಿದೆ. ಬಸವಣ್ಣನ ಆಂದೋಲನೆಯ ಪರಿಪಕ್ವಗಳಿಕೆಯ ಗರಿಮೆಯ ಪ್ರತೀಕವಾಗಿದ್ದಾನೆ ಉರಿಲಿಂಗ ಪೆದ್ದಿ.

ಇಂದಿನ ಮಹಾರಾಷ್ಟ್ರದಲ್ಲಿಯ ನಾಂದೇಡ ಜಿಲ್ಲೆಗೆ ಸೇರಿದ ಕಂದಹಾರದವನಾದ್ದರಿಂದ ಉರಿಲಿಂಗ ಪೆದ್ದಿ ಬಸವ ಆಂದೋಲನೆಗೆ ಮಹಾರಾಷ್ಟ್ರದ ಕೊಡುಗೆ ಎಂದು ಹೇಳಿಕೊಳ್ಳುವದೂ ಉಂಟು. ಅದು ಅಸಮಂಜಸವಲ್ಲವಾದರೂ, ೧೨ನೆಯ ಶತಮಾನದಲ್ಲಿ ನಾಂದೇಡದ ಪ್ರದೇಶ ಕರ್ನಾಟಕದ ಭಾಗವಾಗಿತ್ತು ಎಂಬುದಕ್ಕೆ ಆ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳೆಲ್ಲ ಕನ್ನಡ ಭಾಷೆಯಲ್ಲಿರುವದೆ ಸಾಕ್ಷಿಯಾಗಿದೆ.

ಪೆದ್ದಿಯು ಒಂದು ರಾತ್ರಿ ಕಳ್ಳತನಕ್ಕೆಂದು ಕಂದಹಾರದಲ್ಲಿ ಉರಿಲಿಂಗ ಮಠಕ್ಕೆ ಹೋಗಿ ಮಾಳಿಗೆಯೇರಿ ಬೆಳಕಿಂಡಿಯಿಂದ ಒಳಗೆ ಇಳಿಯುವ ಹವಣಿಕೆಯಲ್ಲಿರುವಾಗಲೆ ಒಳಗೆ ನಡೆದಿದ್ದ ಲಿಂಗದೀಕ್ಷೆಯ ಕ್ರಿಯೆಯನ್ನೆಲ್ಲ ಕಂಡು ಪ್ರಭಾವಿತನಾದನು. ಆ ಮಠದ ಸ್ವಾಮಿಗಳಾದ ಉರಿಲಿಂಗ ದೇವರು ಆಂಧ್ರದ ಸುಪ್ರಸಿದ್ಧ ಪಂಡಿತತ್ರಯರಲ್ಲಿ ಒಬ್ಬರಾದ ಶಿವಲೆಂಕ ಮಂಚಣ್ಣರ ಪುತ್ರರು. ದೊಡ್ಡ ವಿದ್ವಾಂಸರು. ಪೆದ್ದಣ್ಣ ಮರುದಿನ ಒಂದು ಕಟ್ಟಿಗೆಯ ಹೊರೆಯನ್ನು ಒಯ್ದು ಮಠದಲ್ಲಿ ಹಾಕಿ, ತನಗೂ ಲಿಂಗ ಕೊಡಲು ಕೇಳಿಕೊಂಡನು. ಹಾಗೆಯೆ ದಿನಾಲು ಸ್ವಾಮಿಗಳನ್ನು ಲಿಂಗ ದೀಕ್ಷೆಗಾಗಿ ಕಾಡಿ ಬೇಡತೊಡಗಿದನು. ಅವನು ಕಳ್ಳನೆಂಬುದು ತಿಳಿದಿದ್ದ ಸ್ವಾಮಿಗಳಿಗೆ ಅವನಲ್ಲಿ ಆಸಕ್ತಿ ಉಂಟಾಗಲಿಲ್ಲ. ಒಂದು ದಿನ ಪೆದ್ದಿ ಹೀಗೇ ಆಗ್ರಹಪಡಿಸಿದಾಗ ಸ್ವಾಮಿಗಳು ಅಲ್ಲಿಯೆ ಬಿದ್ದ ಕಲ್ಲೊಂದನ್ನು ಎತ್ತಿ ಅವನೆಡೆಗೆ ಒಗೆದು 'ಘೇ ದಗಡಿ ಜಾ' ಎಂದು ಹೇಳಿದರು. ಪೆದ್ದಿ ಆ ಕಲ್ಲನ್ನೆ ಲಿಂಗವೆಂದು ಎತ್ತಿಕೊಂಡು ಅವರ ಶಬ್ದಗಳನ್ನೇ ಮಂತ್ರವೆಂದು ಪರಿಗಣಿಸಿ ಮನೆಗೆ ಬಂದು ಶುದ್ಧ ಮನಸ್ಸಿನಿಂದ ಪೂಜಿಸತೊಡಗಿದನು. ಅವನಲ್ಲಿ ಉಂಟಾದ ಪರಿವರ್ತನೆ ಎಲ್ಲರನ್ನೂ ಚಕಿತಗೊಳಿಸಿತು.

ಅಲ್ಲಿಯ ರಾಜನು ಕಟ್ಟಿಸುತ್ತಿದ್ದ ಕೆರೆಯಲ್ಲಿ ನೀರು ಬಾರದೆ ಇರಲು ತಜ್ಞರನ್ನು ಕರೆದು ಕೇಳಿದಾಗ, ಕೆರೆಯ ಮಧ್ಯದ ವಿಶಾಲ ಬಂಡೆಯನ್ನು ಒಡೆದರೆ ನೀರು ಬರುವುದು ಎಂದು ಅವರು ಹೇಳಿದರು. ಈ ವಿಷಯದಲ್ಲಿ ಮಾರ್ಗದರ್ಶನಕ್ಕೆಂದು ಮಹಾಮಹಿಮರಾದ ಉರಿಲಿಂಗ ದೇವರನ್ನೆ ಕರೆಸಿದಾಗ, ಅವರು ಪೆದ್ದಿಗೆ ಆಜ್ಞಾಪಿಸಿದರು. ಪೆದ್ದಣ್ಣ ಇಷ್ಟಲಿಂಗವೆಂದು ಪೂಜಿಸುತ್ತಿದ್ದ ಸ್ವಾಮಿಗಳೆ ಕೊಟ್ಟ ಕಲ್ಲನ್ನು ಕೈಗೆತ್ತಿಕೊಂಡು 'ಘೇ ದಗಡಿ ಜಾ' ಎಂದು ಮಂತ್ರೋಚ್ಚಾರ ಮಾಡಿದನು. ಆ ಕಲ್ಲು-ಲಿಂಗ ಹೋಗಿ ಬಂಡೆಗೆ ಅಪ್ಪಳಿಸಿದಾಗ ಬಂಡೆ ಒಡೆದು ನೀರು ಚಿಮ್ಮಿತು. ಪೆದ್ದಣ್ಣನ ಸತ್‌ಶೀಲ ನಿಷ್ಠೆಯನ್ನು ಮನಗಂಡು ಉರಿಲಿಂಗದೇವರು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಚಮತ್ಕೃತಿ ಎನ್ನಿಸುವಂಥ ಈ ಕಾರ್ಯ ಅಸಂಭವನೀಯವಲ್ಲ. ಈ ಘಟನೆಯಲ್ಲಿ ಒಂದು ಸಾಂಕೇತಿಕ ಅರ್ಥವೂ ಹುದುಗಿದೆ. ಉರಿಲಿಂಗ ದೇವರು ಮಹಾವಿದ್ವತ್ ಪರಂಪರೆಯಲ್ಲಿ ಬಂದ ವಿದ್ವಾಂಸರಾಗಿದ್ದರೂ ಪೆದ್ದಣ್ಣನ ಕೀಳು ಕುಲ, ಅವನ ಪೂರ್ವಾಶ್ರಮದ ಹೀನ ವೃತ್ತಿಗಳ ಹಿನ್ನೆಲೆಯಿಂದ ಸಂಕುಚಿತಗೊಂಡ ಅವರ ಮನಸ್ಸು ಕಠಿಣಗೊಂಡಿತ್ತು. ಅವರ ಹೃದಯದ ಕಾಠಿಣ್ಯದ ಬಂಡೆಯನ್ನೊಡೆದು ಅಲ್ಲಿ ಕಾರುಣ್ಯದ ಮಾನವೀಯ ಅಮೃತಜಲ ಚಿಮ್ಮುವಂತೆ ಮಾಡಿದ ಪೆದ್ದಣ್ಣ.

ಪೆದ್ದಣ್ಣನ ಪರಿವರ್ತನೆಯಷ್ಟೇ ರೋಚಕವಾಗಿತ್ತು ಉರಿಲಿಂಗ ದೇವರ ಕ್ರಾಂತಿಕಾರಿ ಪರಿವರ್ತನೆ. ಅವರು ಪೆದ್ದಣ್ಣನಿಗೆ ತಮ್ಮೆಲ್ಲ ವಿದ್ಯೆ ಜ್ಞಾನಗಳನ್ನು ಕೊಡಮಾಡಿದರಷ್ಟೇ ಅಲ್ಲ, ಅವನನ್ನು ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ನಿಯಮಿಸಿದರು. ಬಸವಣ್ಣನ ವಿಷಮತಾ ವಿರೋಧಿ ಆಂದೋಲನೆಯ ಪರಿಪಾಕವಾದ ಈ ಅನನ್ಯ ಕೃತಿ ಅಂದಿನ ಸಮಾಜವನ್ನು ಕದಡಿಸಿಬಿಟ್ಟಿತು. ಈ ಕೃತಿಯಿಂದ ವೈದಿಕೀಯ ವರ್ಗಗಳಲ್ಲಿ ಶೈವಾಚಾರ್ಯ ಬಳಗಗಳಲ್ಲಿ ಎದ್ದಿರಬಹುದಾದ ಅಸಹನೆ, ವಿರೋಧಗಳ ಪಡಿನೆರಳನ್ನು ಉರಿಲಿಂಗ ಪೆದ್ದಿಗಳ ವಚನಗಳಲ್ಲಿ ಕಾಣಬಹುದು.

ಹೀನ ಜಾತಿಯ ಅಸ್ಪೃಶ್ಯನಾದ ಹಾಗು ಗೃಹಸ್ಥನಾದ ವ್ಯಕ್ತಿಯೊಬ್ಬನನ್ನು ಧಾರ್ಮಿಕ ಸಂಸ್ಥೆಯಾದ ಮಠವೊಂದರ ಗುರುವನ್ನಾಗಿ ನಿಯಮಿಸಿದ್ದು ಭಾರತದ ಇತಿಹಾಸದಲ್ಲೆ ಇದೊಂದು ಪ್ರಪ್ರಥಮ ಉದಾಹರಣೆ, ಅತ್ಯಂತ ವಿರಳವಾದ ಘಟನೆ. ಉರಿಲಿಂಗ ದೇವರ ಮಠವು ಉರಿಲಿಂಗ ಪೆದ್ದಿಯ ಮಠವೆಂದೆ ಪ್ರಸಿದ್ಧಿ ಪಡೆಯಿತು. ಈ ಮಠದ ಶಾಖೆಗಳು, ಕಲ್ಯಾಣ, ಕೊರಳಿ, ಚಿಂಚೋಳಿ, ಭಾಲ್ಕಿ, ಮುಂತಾದ ಉರುಗಳಲ್ಲಿ ಈಗಲೂ ಅಸ್ತಿತ್ವದಲ್ಲಿವೆ. ಮೈಸೂರು ಕಡೆಯಲ್ಲೂ ಉರಿಲಿಂಗ ಪೆದ್ದಿಯ ಸಂಪ್ರದಾಯದ ಅನುಯಾಯಿಗಳು ಇದ್ದಾರೆ. ಈ ಮಠಗಳಿಗೆ ಲಿಂಗಾಯತರ ಜತೆಯಲ್ಲಿಯೇ ದಲಿತ ವರ್ಗದವರೂ ನಡೆದುಕೊಳ್ಳುತ್ತಾರೆ. ಆದರೆ ಉರಿಲಿಂಗ ಪೆದ್ದಿಯ ನಂತರ ಈ ಮಠಗಳ ಸ್ವಾಮಿಗಳು ಮಾತ್ರ ದಲಿತೇತರರೆ ಆಗಿರುವರು. ಬಸವಣ್ಣನ ನಂತರ ಅವನ ವಿಚಾರ ಕ್ರಾಂತಿಯು ಸಂಪ್ರದಾಯ ವಾದಿಗಳ ಕೈಯಲ್ಲಿ ಕೃತಿಶೂನ್ಯತೆಯಲ್ಲಿ ಕರಗಿ ಹೋಗುವ ಸ್ಥಿತಿಗೆ ಬಂದುದರ ದ್ಯೋತಕವಾಗಿದೆ ಈ ಬೆಳವಣಿಗೆ.

ಪೆದ್ದಣ್ಣನು ಮಠಾಧೀಶನಾದ ಮೇಲೆ, ಗುರುವಿನ ಹೆಸರನ್ನು ತನ್ನ ಹೆಸರಿನ ಜತೆ ಸೇರಿಸಿ ಉರಿಲಿಂಗ ಪೆದ್ದಿ ಎಂದು ಕರೆದುಕೊಂಡನು. ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರ ಎಂಬ ಅಂಕಿತದಲ್ಲಿ ಅವನು ರಚಿಸಿದ ೩೩೬ ವಚನಗಳು ಉಪಲಬ್ಧವಿವೆ. ಎಲ್ಲ ವಚನಕಾರರಿಗಿಂತಲೂ ಹೆಚ್ಚು ೩೦೦ಕ್ಕೂ ಮೇಲ್ಪಟ್ಟು ಸಂಸ್ಕೃತ ಉಕ್ತಿಗಳನ್ನು ಉಲ್ಲೇಖಿಸಿದ್ದುದು ಇವನ ವಚನಗಳ ಹಿರಿಮೆಯಾಗಿದೆ. ಉಲ್ಲೇಖಗಳ ಮೂಲ ಆಕರಗಳನ್ನು ಹೆಸರಿಸಿರುವುದು ವಚನಗಳ ಗುಣಾತ್ಮಕ ಮಟ್ಟವನ್ನು ಹೆಚ್ಚಿಸಿದೆ. ಸುಮಾರು ೫೦ ರಷ್ಟು ಹೆಸರುಗಳುಳ್ಳ ಆಕರಗಳ ಪಟ್ಟಿಯಲ್ಲಿಯ ಕೆಲ ಕೃತಿಗಳು ಈಗ ಉಪಲಬ್ಧವಿಲ್ಲದ ಪರಿಸ್ಥಿತಿಯಿದೆ. ಈ ದೃಷ್ಟಿಯಿಂದ ಉರಿಲಿಂಗ ಪೆದ್ದಿಯ ವಚನಗಳು ಸಂಸ್ಕೃತ ಸಾಹಿತ್ಯ ಇತಿಹಾಸಕ್ಕೆ ಅಮೂಲ್ಯ ಕೊಡುಗೆಯಾಗಿವೆ.

ಉರಿಲಿಂಗ ಪೆದ್ದಿಗೆ, ಅವನ ಸಂಸ್ಕೃತ ಪಾಂಡಿತ್ಯ ಪ್ರದರ್ಶನದ ವಸ್ತುವಾಗಿರಲಿಲ್ಲ. ಅಲ್ಲದೆ ತಾನು ಕೀಳು ಜಾತಿಯವನಾದರೂ ಸಂಸ್ಕೃತ ಪಾಂಡಿತ್ಯದಲ್ಲಿ ಯಾರಿಗೂ ಕಡಿಮೆಯಿಲ್ಲ ಎಂದು ತೋರಿಸಿಕೊಳ್ಳಲು ಪ್ರಯತ್ನಪೂರ್ವಕವಾಗಿ ಅವನು ಸಂಸ್ಕೃತ ಉಕ್ತಿಗಳನ್ನು ವಚನಗಳಲ್ಲಿ ಪೋಣಿಸುತ್ತಿರಲಿಲ್ಲ. 'ತಾನು ಓದಿದ್ದನ್ನು ಪೃಥಕ್ಕರಿಸಿ ತನ್ನ ನಂಬುಗೆ, ತನ್ನ ಬದುಕಿನ ಸರ್ವಾಂಗೀಣ ವಿಕಸನಕ್ಕೆ ಎಷ್ಟು ಬೇಕೊ ಅಷ್ಟನ್ನು ಸ್ವೀಕರಿಸಿರುವನು'. "(ಡಾ|| ವಿದ್ಯಾಶಂಕರ)". ದಲಿತ ವರ್ಗದಿಂದ ಮೂಡಿಬಂದ ಅತಿಶ್ರೇಷ್ಠ ಸಂಸ್ಕೃತ ಪಂಡಿತ, ಅವನ ಸಂಸ್ಕೃತ ಬಳಕೆ ಅವನ ಅಭಿವ್ಯಕ್ತಿಯ ಬಹುಮುಖ್ಯ ವೈಶಿಷ್ಟ್ಯ' (ಡಾ|| ಚಿದಾನಂದಮೂರ್ತಿ) ಎಂದು ವಚನ ಸಾಹಿತ್ಯದ ಅಭ್ಯಾಸಿಗಳು ಅಭಿಪ್ರಾಯ ಪಟ್ಟಿದ್ದಾರೆ. ಸಂಸ್ಕೃತ ಉಕ್ತಿಗಳನ್ನೊಳಗೊಂಡ ಅವನ ವಚನಗಳ ಕನ್ನಡ ಭಾಷೆ ಮಾತ್ರ ಶಿಷ್ಟರ ಭಾಷೆಯಾಗಿಲ್ಲ. ಢಾಂಬಿಕತೆಯನ್ನೂ ಆಚಾರ ಹೀನತೆಯನ್ನೂ ಖಂಡಿಸುವಾಗಿನ ಅವನ ಬಿಚ್ಚು ಮಾತುಗಳು ಅವನ ದಲಿತ ಜೀವನದಿಂದಲೆ ಬಂದಂಥವು.

ಉರಿಲಿಂಗ ಪೆದ್ದಿಗೆ 'ಸಜ್ಜೆ ಶಿವದಾರ ವಸ್ತ್ರದಲ್ಲಿ ಹುದುಗಿಸಿ ಲಿಂಗವ ಧರಿಸಿಕೊಂಡೂ.... ತನು ಗುಣ ವಿರಹಿತವಾಗಿ ಮಜ್ಜನಕ್ಕೆರೆಯಲರಿಯದವರು' ಭಕ್ತರಲ್ಲ ಅವನು

ಮನವೇ ಸಜ್ಜೆ ನೆನಹೇ ಶಿವದಾರವಾಗಿ, ಸಮತೆಯೇ ಲಿಂಗವಾಗಿ ತನ್ನ ಮರೆದು ಮಜ್ಜನಕ್ಕೆರೆವರ ಭಕ್ತರೆಂಬೆನಯ್ಯ ಎನ್ನುತ್ತಾನೆ. ಸಮತೆಯ ಲಿಂಗ ಎಂಬುದು ಬಸವಣ್ಣನ ಸಮಗ್ರ ವಿಚಾರ, ಕೃತಿಗಳ ಸಾರರೂಪ ಪ್ರತೀಕವಾಗಿದೆ. □

ಮುಂದುವರಿಯುವುದಿದೆ)

ಘನ ಸುಖ ಮಹಾಸುಖ ಮುಟ್ಟಲು
ಸಮಸುಖಿಂಗಳ ಸುಖಿಸಬಲ್ಲ
ಸುಖವನಲ್ಲಿಯೇ ಕೊಯ್ದು ಸೂಡ ಕಟ್ಟಬಲ್ಲ
ನಾಗ ಪ್ರಿಯ ಚನ್ನ ರಾಮೇಶ್ವರಾ
ನಿಮ್ಮ ಶರಣನು ಸುಖಿಸಬಲ್ಲ ಸುಖವನು.

ಅಸ್ಪೃಶ್ಯತೆಯ ಕಳಂಕದ ಸೋಂಕಿಗೆ ಈಡಾದ ಕಾರಣ ವಚನಕಾರರಲ್ಲಿ ಉರಿಲಿಂಗ ಪೆದ್ದಿ ಒಂದು ಅದ್ಭುತ ಚಮತ್ಕಾರವೇ ಎನ್ನಿಸುವಂಥ ವ್ಯಕ್ತಿ. ಅಡವಿಯಲ್ಲಿ ಕಟ್ಟಿಗೆ ಕಡಿದು ಸೌದೆ ಪೂರೈಸುವ ವೃತ್ತಿಯಲ್ಲಿದ್ದು ಆಗೀಗ ಕಳ್ಳತನವನ್ನು ಮಾಡುವ ಅಂತ್ಯಜ, ಪರಿವರ್ತನೆಗೊಂಡು ಸಂಸ್ಕೃತ ಭಾಷೆ ಸಾಹಿತ್ಯಗಳಲ್ಲಿ ಅಗಾಧ ಪಾಂಡಿತ್ಯವನ್ನು ಸಂಪಾದಿಸಿ, ಕನ್ನಡದಲ್ಲಿ ಉತ್ತಮ ಪ್ರತಿಯ ವಚನಗಳನ್ನು ರಚಿಸಿದ್ದಲ್ಲದೆ, ತನ್ನ ಗುರುವಿನ ಮಠಕ್ಕೆ ಉತ್ತರಾಧಿಕಾರಿಯಗಿ ಮಠಾಧೀಶ್ವರನಾದುದು, ಒಂದು ಪವಾಡ ಸದೃಶ ಸಾಧನೆಯಾಗಿದೆ. ಬಸವಣ್ಣನ ಆಂದೋಲನೆಯ ಪರಿಪಕ್ವಗಳಿಕೆಯ ಗರಿಮೆಯ ಪ್ರತೀಕವಾಗಿದ್ದಾನೆ ಉರಿಲಿಂಗ ಪೆದ್ದಿ.

ದೇಶೀವಾದ ಎಂಬ ಪರುಷ

ವಿಶ್ಲೇಷಣೆ

○ ಡಾ|| ಅರವಿಂದ ಮಾಲಗತ್ತಿ

೨ ಜಾಗತೀಕರಣ ಮತ್ತು ದೇಶೀದಂಗೆ

(ಕಳೆದ ಸಂಚಿಕೆಯಿಂದ)

'ದೇಶೀ' ಎಂಬ ಪದವನ್ನು ಕನ್ನಡದಲ್ಲಿ ಈಗಾಗಲೇ ಅಭಿವ್ಯಕ್ತಿ ಮತ್ತು ಭಾಷೆಯ ಬಳಕೆಯ ಹಿನ್ನೆಲೆಯಲ್ಲಿ ಬಳಸುತ್ತೇವೆ. ಇದಲ್ಲದೆ ಇದಕ್ಕೆ ಪ್ರತಿಯಾಗಿ 'ಮಾರ್ಗ' ಎಂಬ ಪದವನ್ನೂ ಬಳಸುತ್ತೇವೆ. ಆದರೆ ಇಲ್ಲಿ ಬಳಸುವ 'ದೇಶೀ' ಎಂಬ ಪದ ಅದಕ್ಕಿಂತಲೂ ವಿಶಿಷ್ಟವಾದುದ್ದು ಮತ್ತು ಹೆಚ್ಚಿನ ಅರ್ಥವ್ಯಾಪ್ತಿಯನ್ನು ಪಡೆದುಕೊಳ್ಳುವಂತಹುದು. ದೇಶೀವಾದದ ಕ್ಷೇತ್ರಕ್ಕೆ ಬಂದಾಗ 'ದೇಶೀ' ಎನ್ನುವ ಪದ, ಸಾಹಿತ್ಯ ಮತ್ತು ಸಾಹಿತ್ಯೇತರ ಎರಡೂ ವಲಯಕ್ಕೆ ಸಂಬಂಧಪಡುವಂತಹುದು. ಭಾಷೆ–ಬರಹ ಎರಡನ್ನೂ ಮೀರಿ ನಿಲ್ಲುವಂತಹುದು. ಇದರಲ್ಲಿ ಸಾಂಸ್ಕೃತಿಕ ಸಂದರ್ಭ ಪ್ರಧಾನವಾಗುತ್ತದೆ. ಪ್ರಾದೇಶಿಕ, ಚಾರಿತ್ರಿಕ, ಭೌಗೋಳಿಕ ಇಂಥವೆಲ್ಲ ಅವಿಭಾಜ್ಯ ಅಂಗಗಳಾಗಿ ಬರುತ್ತವೆ. ದೇಶೀವಾದ ಎಂಬುದು ಇವುಗಳೊಂದಿಗೆ ಹಾಸುಹೊಕ್ಕಿರುತ್ತದೆ. ಅವುಗಳಿಂದ ದೇಶೀವಾದವನ್ನು ಪ್ರತ್ಯೇಕವಾಗಿ ಬಿಡಿಸಿ ನೋಡಲು ಆಗುವುದಿಲ್ಲ. ಒಂದು ಜನಾಂಗದ ಹಾಗೂ ನೆಲೆ ನಿಂತ ಮಣ್ಣಿನ ವಾಸನೆಯಿಂದ ಹೊರಬಂದ ಸೂತ್ರಬದ್ಧವಾದ ಎಲ್ಲ ಮೊತ್ತವನ್ನು 'ದೇಶೀವಾದ' ಎಂದು ಕರೆಯಬಹುದು. ಒಂದು ದೇಶದಿಂದ ಇನ್ನೊಂದು ದೇಶದ ಸಾಂಸ್ಕೃತಿಕ ಸಂದರ್ಭಗಳು ಬೇರೆ ಬೇರೆಯಾಗಿರುತ್ತವೆ. ಜಾತಿ–ಮತ, ಧರ್ಮ, ಕುಲ, ಸಂಸ್ಕೃತಿ ಇವೆಲ್ಲ ಪರಸ್ಪರ ಅಂತರವನ್ನು ಹೊಂದಿದ್ದು ಇವು ಉಪಾಂಗಗಳಾಗುತ್ತವೆ. ಇವೆಲ್ಲದರ ಜಿಜ್ಞಾಸೆಯ ಸಂವಾದವೇ 'ದೇಶೀವಾದ' (Nativism)ದಲ್ಲಿ ಸೇರಿಕೊಳ್ಳುತ್ತದೆ. ದೇಶೀವಾದದ ಮೂಲ ಮಾತೃಕೆಯ ಬಗ್ಗೆ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಬೇರೆ ಬೇರೆ ಸಮಾಜಗಳ ಚಾರಿತ್ರಿಕ ಪರಿಣಾಮದಿಂದಾಗಿ ಅದು ರೂಪಧಾರಣ ಮಾಡಿಕೊಳ್ಳುತ್ತ, ಪರಿಷ್ಕರಿಸಿಕೊಳ್ಳುತ್ತ ಅಮೂರ್ತವಾದ ರೂಪದಲ್ಲಿ ಕಾಣಿಸಿಕೊಂಡಿರುತ್ತದೆ.

ಈ ದೃಷ್ಟಿಯಲ್ಲಿ ದೇಶೀವಾದ ಎಂದರೆ ಕಳೆದು ಹೋದುದ್ದಲ್ಲ; ಬದುಕುತ್ತಿರುವ ಸ್ಥಿತಿ, ಬದುಕಬೇಕಾದ ಸ್ಥಿತಿ. ಒಂದು ವಸ್ತುವನ್ನು ನಿರ್ಬಂಧಿಸುವುದು, ಮತ್ತೊಂದು ವಸ್ತುವನ್ನು ಹರಿಬಿಟ್ಟು ಬೆಳೆಸುವುದು, ದೇಶೀವಾದದ ಮೂಲಭೂತ ಮೌಲ್ಯದ ಪರಿಕಲ್ಪನೆಗೆ ಸಂಬಂಧಿಸಿದ್ದು ಎಂದರೆ ದೇಶೀವಾದ ಎನ್ನುವುದು ಕೇವಲ ಒಂದು ವಾಙ್ಮಯ ರೂಪ ಅಲ್ಲ, ಸಿದ್ಧ ಸ್ವರೂಪವೂ ಅಲ್ಲ. ಭವಿಷ್ಯತ್ತಿನ ಸುತ್ತ, ಹಿಂದಿನದು ಇಂದಿನದು ಕೂಡಿಸಿ – ಕಳೆದು ತೆಗೆದ ಮೊತ್ತ. ಭೌತಿಕವಾಗಿ ಚಿಂತಿಸಿದಾಗ ಸಂಸ್ಕೃತಿಯ ಪರಸ್ಪರ ವಿವೇಚನೆಯಲ್ಲಿ ಪ್ರತ್ಯೇಕವಾಗಿ ಎದ್ದು ಕಾಣುವಂತಹುದು. ಇದೂ ಕೂಡ ಹಲವು ಆರ್ಥಿಕ–ಸಾಮಾಜಿಕ–ರಾಜಕೀಯ–ಧಾರ್ಮಿಕ ಸ್ಥಿತ್ಯಂತರಗಳ ಪರಿಣಾಮದ ಕೂಸು ಎನ್ನುವುದನ್ನು ಮರೆಯಲಾಗದು.

ಒಂದು ಸಂಸ್ಕೃತಿಯ ಸೃಜನಾತ್ಮಕವಾದ ಎಚ್ಚರ ಮತ್ತು ಪ್ರತಿಭಟನೆಯ ಹಿಂದೆ ದೇಶೀವಾದ ಮನೆಮಾಡಿಕೊಂಡಿರುತ್ತದೆ. ಹೀಗಾಗಿ ದೇಶೀವಾದ ಎನ್ನುವುದು 'ಸಮಷ್ಟಿಯ ನೆಲೆಯಿಂದ ಕೂಡಿದ ಭೂತ, ವರ್ತಮಾನ – ಮತ್ತು ಭವಿಷ್ಯತ್ತಿನ ಪ್ರಜ್ಞೆಯನ್ನೊಳಗೊಂಡ ಸೃಜನಾತ್ಮಕವಾದ ಹೊಸ ಎಚ್ಚರ'. ಈ ಸೃಜನಾತ್ಮಕವಾದ ಎಚ್ಚರ, ಏಕಕಾಲದಲ್ಲಿಯೇ ಕಾಯುವ ಕೊಲ್ಲುವ ಎರಡೂ ಬಗೆಯ ಕೆಲಸಗಳನ್ನು ಮಾಡುತ್ತದೆ. ಅದು ಸ್ವಕೀಯದ್ದೆ ಆಗಿರಬಹುದು ಅಥವಾ ಪರಕೀಯದ್ದೆ ಆಗಿರಬಹುದು. ಈ ಕಾಯುವ–ಕೊಲ್ಲುವ ಕ್ರಿಯೆಯ ನಡುವೆಯೇ ಒಂದು ಸೃಜನಾತ್ಮಕ ಶಕ್ತಿ ಇದೆ. ಆ ಶಕ್ತಿಯೇ ದೇಶೀವಾದದ ಜೀವಾಳ. ಹೀಗಾಗಿ ಜಾನಪದ/ಸಂಸ್ಕೃತಿ ಹುಟ್ಟು ಸಾವಿನೊಡನೆಯೂ ನಿತ್ಯನೂತನವಾದುದ್ದಾಗಿದೆ.

ಸಂಸ್ಕೃತಿ ಮುಖಿಯಾದ ಚಿಂತನೆಯೇ ದೇಶೀವಾದ. ಆದರೆ ಸಂಸ್ಕೃತಿಯೇ ದೇಶೀವಾದವಲ್ಲ. ದೇಶೀಯತೆ ಎನ್ನುವುದು ಹರಿವ ನೀರಿನೊಂದಿಗೆ ಇರುವಂತಹದು ವಿನಃ ನಿಂತ ನೀರಿನೊಂದಿಗೆ ಇರುವಂತಹದ್ದಲ್ಲ. ಪರಸ್ಪರ 'ವಿರುದ್ಧ' ಸಂಸ್ಕೃತಿಗಳ ಮುಖಾಮುಖಿಯಾದಾಗಲೇ 'ದೇಶೀವಾದದ ಪ್ರಜ್ಞೆ' ಜಾಗೃತವಾಗುತ್ತದೆ. ಈ ಪ್ರಜ್ಞೆ ಗ್ರಾಮೀಣ ಪ್ರದೇಶಕ್ಕಿಂತ ನಗರದಲ್ಲಿ ತೀವ್ರವಾಗಿ

ಗೋಚರವಾಗುವಂತಹದು. ಅನಂತರ ಅದರ ಬಿಸಿ ಗ್ರಾಮೀಣ ಪ್ರದೇಶಕ್ಕೂ ಹಬ್ಬುತ್ತದೆ. ಇದರರ್ಥ ಹಿಮ್ಮುಖ ಚಲನೆಯಿಂದ ಕೂಡಿರುತ್ತದೆ ಎಂದಲ್ಲ. ಕೊಡು–ಕೊಳ್ಳುವಿಕೆಯಿಂದ ಬೆಳೆಯುತ್ತ ಹೋಗುತ್ತದೆ. ಹೀಗಾಗಿ ದೇಶೀವಾದ ಎನ್ನುವುದು ಹಳೆಯದನ್ನು ಆರಾಧಿಸು ವಂತಹದ್ದೂ ಅಲ್ಲ, ಹೊಸದನ್ನು ನಿರಾಕರಿಸುವಂತಹದ್ದೂ ಅಲ್ಲ. ಈ ಎರಡರ ಕೊಡುಕೊಳ್ಳುವಿಕೆಯಿಂದ ಅಥವಾ ಮಂಥನದಿಂದ ಕಾಣಿಸಿಕೊಳ್ಳುವಂತಹದು. ಅದೇ ಅಂದಿನ ಸಾಂಸ್ಕೃತಿಕ ಸಂದರ್ಭಕ್ಕೆ ಮಾದರಿಯಾಗಿ ದೇಶೀಯತೆಯ ಛಾಪು ಪಡೆಯುತ್ತದೆ.

ದೇಶೀಯತೆ ಎನ್ನುವುದು ಜನತೆಯೊಂದಿಗೆ ಸದಾಕಾಲ ಇರುವಂತಹದು. ಕೆಲವೊಮ್ಮೆ ಇದರ ಒತ್ತಡ ತ್ವರಿತವಾಗಿದ್ದರೆ ಮತ್ತೊಮ್ಮೆ ಮಂದಗತಿಯ ಸ್ವಭಾವದ್ದಾಗಿರಬಹುದು. ಇವೆರಡರ ನಡುವೆ ಎಂದರೆ ಸಂಧಿಕಾಲದಲ್ಲಿ ಒಡಂಬಡಿಕೆಗೆ ಮುಂದಾಗುವ ಸ್ವರೂಪದ್ದೂ ಆಗಿರುತ್ತದೆ. ಈ ದೇಶೀಯತೆ ಎನ್ನುವುದು ಇಲ್ಲದೆ ಹೋದರೆ ವಿವಿಧ ಜಾನಪದಗಳಿರು

> ದೇಶೀಯತೆ ಎನ್ನುವುದು ಜನತೆಯೊಂದಿಗೆ ಸದಾಕಾಲ ಇರುವಂತಹದು. ಕೆಲವೊಮ್ಮೆ ಇದರ ಒತ್ತಡ ತ್ವರಿತವಾಗಿದ್ದರೆ ಮತ್ತೊಮ್ಮೆ ಮಂದಗತಿಯ ಸ್ವಭಾವದ್ದಾಗಿರಬಹುದು. ಇವೆರಡರ ನಡುವೆ ಎಂದರೆ ಸಂಧಿಕಾಲದಲ್ಲಿ ಒಡಂಬಡಿಕೆಗೆ ಮುಂದಾಗುವ ಸ್ವರೂಪದ್ದೂ ಆಗಿರುತ್ತದೆ. ಈ ದೇಶೀಯತೆ ಎನ್ನುವುದು ಇಲ್ಲದೆ ಹೋದರೆ ವಿವಿಧ ಜಾನಪದಗಳಿರುವುದಿಲ್ಲ. ಬಹುಮುಖಿ ಸಂಸ್ಕೃತಿಗಳಿರುವುದಿಲ್ಲ. ವಿವಿಧ ತಾತ್ವಿಕ ನೆಲೆಗಳೂ ಇರುವುದಿಲ್ಲ. ಸ್ಥೂಲವಾಗಿ ನಾವು ಈ ದೇಶೀಯ ವಾದವನ್ನು ಅಂತರರಾಷ್ಟ್ರೀಯ ದೇಶೀಯವಾದ, ಉಪ ರಾಷ್ಟ್ರೀಯ ದೇಶೀಯವಾದ, ಸ್ಥಳೀಯ ದೇಶೀಯವಾದವೆಂದು ಭಿನ್ನ ನೆಲೆಗಳಲ್ಲಿ ಗುರುತಿಸಿಕೊಂಡು ಅಧ್ಯಯನಕ್ಕೆ ಮುಂದಾಗಬಹುದಾಗಿದೆ.

ದೇಶೀವಾದದ ಕ್ಷೇತ್ರಕ್ಕೆ ಬಂದಾಗ 'ದೇಶೀ' ಎನ್ನುವ ಪದ, ಸಾಹಿತ್ಯ ಮತ್ತು ಸಾಹಿತ್ಯೇತರ ಎರಡು ವಲಯಕ್ಕೆ ಸಂಬಂಧಪಡು ವಂತಹುದು. ಭಾಷೆ–ಬರಹ ಎರಡನ್ನೂ ಮೀರಿ ನಿಲ್ಲು ವಂತಹುದು. ಇದರಲ್ಲಿ ಸಾಂಸ್ಕೃತಿಕ ಸಂದರ್ಭ ಪ್ರಧಾನವಾಗುತ್ತದೆ. ಪ್ರಾದೇಶಿಕ, ಚಾರಿತ್ರಿಕ, ಭೌಗೋಳಿಕ ಇಂಥವೆಲ್ಲ ಅವಿಭಾಜ್ಯ ಅಂಗಗಳಾಗಿ ಬರುತ್ತವೆ. ದೇಶೀವಾದ ಎಂಬುದು ಇವುಗಳೊಂದಿಗೆ ಹಾಸುಹೊಕ್ಕಿರುತ್ತದೆ. ಅವು ಗಳಿಂದ ದೇಶೀವಾದವನ್ನು ಪ್ರತ್ಯೇಕವಾಗಿ ಬಿಡಿಸಿ ನೋಡಲು ಆಗುವುದಿಲ್ಲ. ಒಂದು ಜನಾಂಗದ ಹಾಗೂ ನೆಲೆ ನಿಂತ ಮಣ್ಣಿನ ವಾಸನೆಯಿಂದ ಹೊರಬಂದ ಸೂತ್ರಬದ್ಧವಾದ ಎಲ್ಲ ಮೊತ್ತವನ್ನು 'ದೇಶೀವಾದ' ಎಂದು ಕರೆಯಬಹುದು.

ವುದಿಲ್ಲ. ಬಹುಮುಖಿ ಸಂಸ್ಕೃತಿಗಳಿರುವುದಿಲ್ಲ. ವಿವಿಧ ತಾತ್ವಿಕ ನೆಲೆಗಳೂ ಇರುವುದಿಲ್ಲ. ಸ್ಥೂಲವಾಗಿ ನಾವು ಈ ದೇಶೀಯ ವಾದವನ್ನು ಅಂತರರಾಷ್ಟ್ರೀಯ ದೇಶೀಯವಾದ, ಉಪ ರಾಷ್ಟ್ರೀಯ ದೇಶೀಯವಾದ, ಸ್ಥಳೀಯ ದೇಶೀಯವಾದವೆಂದು ಭಿನ್ನ ನೆಲೆಗಳಲ್ಲಿ ಗುರುತಿಸಿಕೊಂಡು ಅಧ್ಯಯನಕ್ಕೆ ಮುಂದಾಗಬಹುದಾಗಿದೆ. ಉಪರಾಷ್ಟ್ರೀಯ ದೇಶೀಯವಾದ ಮತ್ತು ಸ್ಥಳೀಯ ದೇಶೀಯವಾದದ, ದೇಶೀಯತೆಯನ್ನು ಗುರುತಿಸಿಕೊಳ್ಳುವಾಗ ಒಂದೊಂದು ಸಮೂಹ ಸೃಷ್ಟಿಸಿಕೊಂಡ ವಿಶಿಷ್ಟತೆ ಸೃಜನಾತ್ಮಕ - ಬೆಳವಣಿಗೆಯ ಸ್ವರೂಪಗಳೆಂದು ಭಾವಿಸಬೇಕು.

'ದೇಶೀವಾದ' ಒಂದು ಸ್ವಯಂ ವ್ಯವಸ್ಥೆಯನ್ನುಳ್ಳದೆನ್ನುವುದು ಚರಿತ್ರೆ ಸ್ಪಷ್ಟಪಡಿಸುತ್ತದೆ. ಇದರರ್ಥ ಇದು ಸಂಪರ್ಕರಹಿತವಾದುದು. ಸಂವೇದನಾ ರಹಿತವಾದುದ್ದೆಂದಲ್ಲ. ಎಲ್ಲರೊಳಗಿದ್ದೂ ಎಲ್ಲರಂತಾಗದೆ ಬೆಳೆದು ನಿಲ್ಲುವ ಶಕ್ತಿ ಇದಕ್ಕಿದೆ. ತನ್ನೊಳಗಿಂದಲೇ ಬೆಳೆಯುವ ತನ್ನನ್ನು ತಾನು ವಿಮರ್ಶೆಗೆ ತೊಡಗಿಸಿಕೊಳ್ಳುವ ಸಾಮರ್ಥ್ಯವುಳ್ಳದ್ದು. ಈ ಹಿನ್ನೆಲೆಯಲ್ಲಿ ದೇಶೀವಾದ ಎನ್ನುವುದು ಒಂದು ಜಾನಪದ/ಸಂಸ್ಕೃತಿಯನ್ನು ಒಡೆದು ಇನ್ನೊಂದು ಸಂಸ್ಕೃತಿ/ಜಾನಪದವನ್ನು ಕಟ್ಟುವಂತಹದ್ದಾಗಿದೆ. ಇದು ಹೊರಗಣ್ಣಿಗೆ ಗೋಚರವಾಗುವ ಅಥವಾ ಪಾರದರ್ಶಕ ಸ್ವರೂಪದ್ದಲ್ಲ. ಪರಕೀಯತೆಯನ್ನು ತಂದು ದೇಶೀಯತೆಗೆ ಹೇರಿದರೂ ತನಗೆಷ್ಟು ಬೇಕೋ ಅಷ್ಟು ತೆಗೆದುಕೊಂಡು ಇನ್ನುಳಿದುದ್ದನ್ನು ಅಥವಾ ನಿರ್ಜೀವ ಎನಿಸಿದ್ದನ್ನು ಸಮುದ್ರ ಹೊರಹಾಕುವಂತೆ ಹೊರಹಾಕಿ ಬಿಡುತ್ತದೆ. ಇದರ ಬೇರುಗಳನ್ನರಿತವರು ಎಂದರೆ, ಭೂತ ಮತ್ತು ವರ್ತಮಾನದ ನಡಿಗೆಯನ್ನರಿತವರು ಇದರ ಸವಾರಿಯನ್ನು ಮಾಡಬಲ್ಲರು. ತಮ್ಮ ನಿರೀಕ್ಷೆಯಂತೆ ಭವಿಷ್ಯತ್ತನ್ನು ಸೃಷ್ಟಿಸಿಕೊಳ್ಳಬಲ್ಲರು. ಇದರ ನಡಿಗೆಯನ್ನು ಅರಿಯಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಆಗ ಮಳೆ ಬಿದ್ದು ಎತ್ತೆತ್ತಲೋ ಹರಿದು ಹೋಗುವ ನೀರನ್ನು ನಿರ್ದಿಷ್ಟವಾದದೆಡೆಗೆ ಹರಿಯುವಂತೆ ಮಾಡಬಲ್ಲ ಸಾಮರ್ಥ್ಯ ನಮ್ಮಲ್ಲಿರುತ್ತದೆ. ಆದ್ದರಿಂದ ದೇಶೀವಾದ ಎನ್ನುವುದು ಯಾರೊಬ್ಬರ ವಿಚಾರದ ಹೇರಿಕೆಯಲ್ಲ ಅಥವಾ ವ್ಯಕ್ತಿನಿಷ್ಟವಾದುದಲ್ಲ. ಅದು ಸಮೂಹನಿಷ್ಟವಾದುದು. ಹೀಗಾಗಿ ದೇಶೀವಾದವೆಂಧರೆ ವಿಭಿನ್ನ ಸಮೂಹಗಳ ಬಹುಮುಖಿ ಅಸ್ತಿತ್ವವಾದವಾಗಿದೆ.

ಜಾನಪದವನ್ನು ಒಡೆದು ಜಾನಪದವನ್ನು ಕಟ್ಟುವ ಕ್ರಿಯೆ, ವಿರುದ್ಧ ಸಂಸ್ಕೃತಿಯ ಮುಖಾಮುಖಿಯ ಸಂದರ್ಭದಲ್ಲಾಗಿರಬಹುದು ಅಥವಾ ಪರಸ್ಪರ ಸೃಜನಾತ್ಮಕ ಶಕ್ತಿಯ ಮುಖಾಮುಖಿಯ ಸಂದರ್ಭವಾಗಿರಬಹುದು. ಆದರೆ ಸವಾರಿಯ ಪ್ರಶ್ನೆ ಬರುವುದು ಹರಿವ ನೀರು ನಿಂತ ನೀರಾಗುವ ಸಂದರ್ಭದಲ್ಲಿ ಎನ್ನುವುದರ ಅರಿವಿರಬೇಕು. ಇಲ್ಲಿಯ ಹೊಸ ಎಚ್ಚರ ಸಾವು–ನೋವುಗಳ ಸಂಭ್ರಮವಾಗಿರುತ್ತದೆ ಮತ್ತು ಇಲ್ಲಿಯ ನಡಿಗೆ ಅಷ್ಟೇ ತ್ವರಿತಗತಿಯದ್ದಾಗಿರುತ್ತದೆ. ಇವೆಲ್ಲದರ ಹಿನ್ನೆಲೆಯಲ್ಲಿ ದೇಶೀವಾದ ಎನ್ನುವುದು ವರ್ತಮಾನ, ಭೂತ ಮತ್ತು ಭವಿಷ್ಯತ್ತಿಗೆ ಸಂಬಂಧಿಸಿದ ವಿಭಿನ್ನ ಆಯಾಮಗಳಿದ್ದು ಅವು ಒಂದೇ ಸ್ವರೂಪದವು ಆಗಿರುವುದಿಲ್ಲ ಎನ್ನುವುದು ಸ್ಪಷ್ಟ.

ಪಾಶ್ಚಾತ್ಯ ಸಿದ್ಧಾಂತಗಳನ್ನು ನಿರಾಕರಿಸುವುದು ಅಥವಾ ತಳ್ಳಿ ಹಾಕುವುದು ಇಲ್ಲಿಯ ಉದ್ದೇಶವಲ್ಲ. ನಮ್ಮ ಚಾರಿತ್ರಿಕ ದೇಶೀವಾದವೂ ಇದನ್ನೇ ಹೇಳುತ್ತದೆ. (ದಶವತಾರಗಳನ್ನು ಪರಿಶೀಲಿಸಿರಿ) ಈ ಸಿದ್ಧಾಂತಗಳನ್ನು ಹೊಸ ಎಚ್ಚರಿಕೆಯಿಂದ ಬಳಸಲು ನಿರ್ದೇಶಿಸುವಂತಹದು. ಬೌದ್ಧಿಕ ದಾಸ್ಯದಿಂದ ಹೊರತರುವಂತಹದು. ಆಕ್ರಮಣಕಾರಿ 'ವಿದೇಶೀಯತೆ' ಹೆಚ್ಚು ಪ್ರಭಾವಶಾಲಿ ಮತ್ತು ಪರಿಣಾಮಕಾರಿಯಾಗಿದ್ದು ಅದನ್ನು ಸ್ವೀಕರಿಸುವ ಅನಿವಾರ್ಯತೆ ಇದ್ದಾಗಲೂ, ಮೊದಲು ಪ್ರತಿಭಟಿಸಿ ಕಾಲಾಂತರದಲ್ಲಿ ಸಾಂಸ್ಕೃತೀಕರಣಗೊಳಿಸಿ ತನ್ನದಾಗಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ಮುಂದೆ ತಾನೇ ಅದರ ಅಧಿಪತಿ, ಸೃಷ್ಟಿಕರ್ತ ಎಂದೂ ಘೋಷಿಸುತ್ತದೆ !

ನವೋದಯದ ದೇಶೀಯತೆ, ಸ್ವದೇಶಿ ಅಥವಾ ರಾಷ್ಟ್ರೀಯತೆ ಈ ಪರಿಕಲ್ಪನೆಗಳು ಇಂದಿನ ದೇಶೀವಾದದಿಂದ ಭಿನ್ನವಾದುವು. ಅಂದಿನ ಸಂದರ್ಭದಲ್ಲಿ ರಾಷ್ಟ್ರೀಯತೆ ಎನ್ನುವುದು ಅಥವಾ ದೇಶೀಯತೆ ಎನ್ನುವುದು ವ್ಯಾಮೋಹ, ಭಕ್ತಿ ಆವೇಶ, ಅನನ್ಯತೆಯೆಡೆಗೆ ಮುಖಮಾಡಿ ನಿಲ್ಲುವ ಸ್ವರೂಪದ್ದಾದರೆ ಇಂದಿನ ದೇಶೀವಾದ ಈ ಕಟ್ಟೆಯನ್ನು ಒಡೆದು ಹೊರಬರುವಂತಹುದು. ತಪ್ಪು ಒಪ್ಪುಗಳೆರಡನ್ನೂ ತನ್ನದೆಂದು ಸ್ವೀಕರಿಸಿ ಹೆರವರ ತಟ್ಟೆಯನ್ನು ಆಕ್ರಮಿಸದೆ, ತನ್ನ ತಟ್ಟೆಯನ್ನೂ ಇತರರಿಂದ ಆಕ್ರಮಿಸದಂತೆ ಎಚ್ಚರ ವಹಿಸಿ ಅಭಿವೃದ್ಧಿಯ ಪಥದತ್ತ ಮುನ್ನುಗ್ಗುವುದು.

ಇಂಥ ಐತಿಹಾಸಿಕವಾದ ಉದಾಹರಣೆಗಳು ಪುರಾಣಗಳಲ್ಲಿ ನಮಗೆ ಸಾಕಷ್ಟು ದೊರೆಯುತ್ತದೆ.

ಹೀಗಾಗಿ ನಮ್ಮ ಸ್ವಂತಿಕೆಯೇ ನಮ್ಮನ್ನು ನಮ್ಮತನವನ್ನು ದೇಶವನ್ನು ಉಳಿಸಬಲ್ಲುದು. ಇಲ್ಲದೆ ಹೋದರೆ ಎಲ್ಲವೂ ಮಾರಾಟಕ್ಕಿಟ್ಟ ವಸ್ತುವಿನಂತಾಗುತ್ತದೆ. ನಾವು–ನಮ್ಮ ತನವಿಲ್ಲದ ಧರೆಯಲಿ ಇದ್ದರೂ ಅಷ್ಟೇ, ಸತ್ತರೂ ಅಷ್ಟೇ.

<u>ದೇಶೀವಾದದ ಬೆನ್ನ ಹಿಂದಿನ ನೆರಳು</u>

ಭಾರತದಲ್ಲಿ ದೇಶೀಯತೆ ತಲೆ ಎತ್ತಿದ್ದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ಇದರಲ್ಲಿ ಎರಡು ಹಂತಗಳಿವೆ

1. ಉದಾರ ಸಮಾಜವಾದಿ ನಿಲುವು
2. ಸಮಾನ ಸಮಾಜವಾದಿ ನಿಲುವು

ನವೋದಯದ ದೇಶೀಯತೆ, ಸ್ವದೇಶಿ ಅಥವಾ ರಾಷ್ಟ್ರೀಯತೆ ಈ ಪರಿಕಲ್ಪನೆಗಳು ಇಂದಿನ ದೇಶೀವಾದದಿಂದ ಭಿನ್ನವಾದುವು. ಅಂದಿನ ಸಂದರ್ಭದಲ್ಲಿ ರಾಷ್ಟ್ರೀಯತೆ ಎನ್ನುವುದು ಅಥವಾ ದೇಶೀಯತೆ ಎನ್ನುವುದು ವ್ಯಾಮೋಹ, ಭಕ್ತಿ ಆವೇಶ, ಅನನ್ಯತೆಯೆಡೆಗೆ ಮುಖಮಾಡಿ ನಿಲ್ಲುವ ಸ್ವರೂಪದ್ದಾದರೆ ಇಂದಿನ ದೇಶೀವಾದ ಈ ಕಟ್ಟೆಯನ್ನು ಒಡೆದು ಹೊರಬರುವಂತಹುದು. ಆದರ್ಶದ ಗುಂಗಿಲ್ಲದೆ ನೆಲದ ಮಣ್ಣಿನೊಂದಿಗೆ ನಿಂತು ಸಂವಾದಿಸುವಂತಹುದು. ತಪ್ಪು ಒಪ್ಪುಗಳೆರಡನ್ನೂ ತನ್ನದೆಂದು ಸ್ವೀಕರಿಸಿ ಹೆರವರ ತಟ್ಟೆಯನ್ನು ಆಕ್ರಮಿಸದೆ, ತನ್ನ ತಟ್ಟೆಯನ್ನೂ ಇತರರಿಂದ ಆಕ್ರಮಿಸದಂತೆ ಎಚ್ಚರವಹಿಸಿ ಅಭಿವೃದ್ಧಿಯ ಪಥದತ್ತ ಮುನ್ನುಗ್ಗುವುದು.

ಮೊದಲ ರೀತಿಯ ನಿಲುವಿನಿಂದಾಗಿ ಭಾರತದ ತುಂಬ ಧರ್ಮವಾದಿ, ಜನಾಂಗವಾದ, ಭಾಷಾವಾದಗಳು ಹುಟ್ಟಿಕೊಂಡವು. ನಮ್ಮ ಆಡಳಿತ ಕೇಂದ್ರ ಇಂಗ್ಲೆಂಡ್ ಆಗಬಾರದು, ನಮ್ಮ ಚಿಂತನಾ ಭಾಷೆ ಇಂಗ್ಲಿಷ್ ಆಗಬಾರದು. ದೆಹಲಿ ಮತ್ತು ಹಿಂದೀ ಆಗಬೇಕು ಎಂದು 'ಸ್ವಾತಂತ್ರ್ಯ ಚಳುವಳಿ' ಮೊದಲ ಹಂತದಲ್ಲಿ ವಾದಿಸಿತು. ಈ ಹಂತ ಬೆಳೆದು ಎರಡನೆಯ ಹಂತಕ್ಕೆ ಅಡಿ ಇಟ್ಟಾಗ, ಭಾಷಾವಾರು ಪ್ರಾಂತ್ಯ ಮತ್ತು ದೇಶ ವಿಭಜನೆಯ ಸ್ಥಿತಿಗೆ ಬಂದು ನಿಂತಿತು. ಈ ಎರಡೂ ಹಂತಗಳಲ್ಲಿ ಮೇಲುಜಾತಿಯ ಶಿಷ್ಟರು ಮತ್ತು ಮೇಲು ಮಧ್ಯಮ ಜಾತಿಯ ಜನಪದರು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾಯಿತು. ಇಷ್ಟೆಲ್ಲ ಇತಿಹಾಸದ ಹೆಜ್ಜೆಗಳು ನಮ್ಮೊಂದಿಗಿದ್ದಾಗಲೂ ಬಹುತೇಕ ಈವರೆಗಿನ ಜಾನಪದ ಅಧ್ಯಯನ, ವರ್ಗೀಕೃತ ಅಧ್ಯಯನ ಮತ್ತು ಅನುವಾದಿತ, ಅನ್ವಯಿಕ, ಜನಪದ – ಜಾನಪದ ಚಿಂತನೆಯ ಹಂತದಲ್ಲಿಯೇ ಇದೆಯೆನ್ನುವುದು ವಿಷಾದನೀಯ ಸಂಗತಿ.

ಸ್ವಾತಂತ್ರ್ಯ, ಕೆಳವರ್ಗಗಳಿಗೆ ಇಳಿಯತೊಡಗಿದಂತೆ 'ಸಮಾನ ಸಮಾಜ' ಪರಿಕಲ್ಪನೆಯಲ್ಲಿ

ವರ್ಣಗಳು ತಮ್ಮ ಸಮೀಪದ ಪ್ರಬಲ ಸಂಸ್ಕೃತಿಗಳಿಗೆ ವಿರುದ್ಧವಾಗಿ, ತಮ್ಮ ಸ್ವದೇಶಿ ಗುಣವನ್ನು ಕಟ್ಟಿಕೊಳ್ಳತೊಡಗಿದವು. ಹೀಗೆ ಜನಪದ - ಜಾನಪದಗಳು ಮುಖಾಮುಖಿಯಾಗುವ ಮೂಲಕ ಎರಡನೆಯ ಹಂತದ 'ದೇಶೀ ಚಳುವಳಿ'; 'ದೇಶೀ ಜಾನಪದ ' 'ದೇಶಿ ಸಂಸ್ಕೃತಿ' ಚಿಂತನೆಗೆ ತಿರುಗಿಕೊಂಡಿತು.

ಕರ್ನಾಟಕದಲ್ಲಿ 'ದೇಶೀಯತೆಯು ಮೂರು ನೆಲೆಗಳಲ್ಲಿ ಕಾಣಿಸಿಕೊಂಡಿದೆ. 1. ಭಾವನಾತ್ಮಕ ನಿಲುವು, 2. ಭಾವನಾತ್ಮಕ ಮತ್ತು ಬೌದ್ಧಿಕ ನಿಲುವು, 3. ಬೌದ್ಧಿಕ ನಿಲುವು. ಇವು ಅಸ್ಪಷ್ಟತೆಯಿಂದ ಸ್ಪಷ್ಟತೆಯ ಕಡೆಗೂ, ಭಾವನಾತ್ಮಕದಿಂದ ಬೌದ್ಧಿಕ ಮಾರ್ಗದೆಡೆಗೂ ಹೋಗುವುದನ್ನು ಕಾಣುತ್ತೇವೆ. ಒಂದು ರೀತಿಯಲ್ಲಿ ಅಭೌತದಿಂದ ಭೌತಕ್ಕೆ ಬರುವ ಬಗೆ ಇದು. ಹೀಗೆ ಬರುವ ಬಗೆಯಲ್ಲಿಯೇ ನಾವು ಒಂದನ್ನು ಮೀರಿ ಇನ್ನೊಂದಕ್ಕೆ ತಲುಪುವುದನ್ನು ಕಾಣುತ್ತೇವೆ. ಇದು ಆವರ್ತನ ಸ್ವರೂಪದ್ದು ಹೊರಟಲ್ಲಿಗೆ ಬಂದು ನಿಲ್ಲುವಂತಹುದು.

ಹೀಗೆ ಕಟ್ಟುವ ಮುರಿಯುವ ಕ್ರಿಯೆಯಲ್ಲಿಯೇ ಜೀವವಿದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಿಂದ ಹಿಂದಕ್ಕೆ ಸರಿದು ನೋಡಿದಾಗಲೂ ಈ ಇರುವಿಕೆ ಗೋಚರವಾಗುತ್ತದೆ. ಈ ಚಲನಕ್ರಿಯೆಯ ನಡಿಗೆಗೆ 'ವಿಧಿಬಂಧ ', 'ವಿಧಿಮುಕ್ತ ' ಎಂದು ಕರೆಯಬಯಸುತ್ತೇನೆ.

ದೇಶೀವಾದದ ಸಾಮಾನ್ಯ ಸೂತ್ರ ವಿಧಿಬಂಧ - ವಿಧಿಮುಕ್ತ ಕ್ರಿಯಾವಿದಾನ

ಮಾನವನ ಬದುಕು ನಾವೆಂದುಕೊಂಡಷ್ಟು ಸರಳವಾದುದಲ್ಲ, ಅದು ಸಂಕೀರ್ಣವಾದುದು. ಆದರೆ ಚರಿತ್ರೆಯನ್ನು ಅವಲೋಕಿಸುತ್ತ ಬಂದರೆ, ಆ ಚರಿತ್ರೆಯಲ್ಲಿ ಪದೇ ಪದೆಯಾಗಿ ಕಾಣಿಸಿಕೊಳ್ಳುವ ಗುಣಲಕ್ಷಣಗಳ ಮೇಲಿಂದ ಅದರ ಏಕಸೂತ್ರತೆಯನ್ನು' ಬಿಡಿಸಿ ತೋರಿಸಬಹುದಾಗಿದೆ. ಇಂಥ ಒಂದು ಹುಡುಕಾಟ ಕಾರ್ಲ್ ಮಾರ್ಕ್ಸ್ ಮಾಡಿದ್ದನ್ನು ಸ್ಮರಿಸಬಹುದು.

ಮಾನವನ ಬದುಕು ಹಲವಾರು ವಿಧಿ ನಿಷೇಧಗಳಿಂದ ಕೂಡಿದೆ. ಧರ್ಮ, ಮತ, ವರ್ಣ, ಜನಾಂಗ, ಜಾತಿ, ಕುಲ, ರಾಜಕೀಯ, ಕೌಟುಂಬಿಕ - ಈ ಎಲ್ಲ 'ಬಣ' ವ್ಯವಸ್ಥೆಗಳಿಗೂ ತನ್ನವೇ ಆದ ನಿಯಮಗಳಿವೆ. ಒಂದರ್ಥದಲ್ಲಿ ಈ ಎಲ್ಲ ಬಣಗಳು ಒಂದು ಇನ್ನೊಂದರ ಅಧೀನವಾಗಿದ್ದರೂ, ಇವೆಲ್ಲ ತಮ್ಮವೇ ಆದ ತೋಂಡಿ (ಮೌಖಿಕ) ಸಂವಿಧಾನ ಮತ್ತು ಲಿಖಿತ ಸಂವಿಧಾನಗಲೆರಡನ್ನೂ ಹೊಂದಿವೆ. ಲಿಖಿತ ಸಂವಿಧಾನಗಳಿಗಿಂತ ತೋಂಡಿ ಸಂವಿಧಾನ ಹೆಚ್ಚು ಪ್ರಬಲವಾಗಿದೆ. ಈ ಎರಡು ಪರಂಪರೆಯ (ತೋಂಡಿ - ಲಿಖಿತ) ವಿಧಿ - ನಿಷೇಧಗಳು ಒಂದು ಇನ್ನೊಂದರ ಮೇಲೆ ಸವಾರಿ ಮಾಡುತ್ತ ಮತ್ತೊಮ್ಮೆ ಸಂಘರ್ಷಕ್ಕಿಳಿದು, ಒಪ್ಪಂದ ಮಾಡಿಕೊಂಡು ಬದುಕುತ್ತವೆ. ಇದು ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ನಿಯಮ,

ಈ ಸ್ವರೂಪದ ವಿಧಿ - ನಿಷೇಧಗಲು ಮನುಷ್ಯನ ಬದುಕನ್ನು ವಿಭಿನ್ನ ರೀತಿಯಲ್ಲಿ ನಿಯಂತ್ರಿಸುತ್ತವೆ. ಹೀಗೆ ನಿಯಂತ್ರಿಸುವಾಗ, ಕಟ್ಟು - ಕಟ್ಟಳೆಗಳು ಹೆಚ್ಚು ಜಟಿಲವಾದಾಗ ವ್ಯವಸ್ಥೆಯ ಬದುಕು ಸ್ಥಗಿತಗೊಳ್ಳುತ್ತದೆ. ಆಗ ಸಮಾಜ ಜೀವಿಗೆ ವ್ಯವಸ್ಥೆಯ ನಿಯಮಗಳು ಸಡಿಲವೆನಿಸಿ ಆ ಕಡೆಗೆ ವಾಲುತ್ತಾನೆ. ಇದರಿಂದಾಗಿ ಭಿನ್ನ ವ್ಯವಸ್ಥೆಯ ಬಣಗಳ ನಡುವೆ ಸಂಘರ್ಷ ನಡೆದು ಜಟಿಲವಾದ ಬಣ ವ್ಯವಸ್ಥೆ ಸಡಿಲಗೊಳ್ಳುತ್ತದೆ. ವ್ಯವಸ್ಥೆಯಲ್ಲಿ ಈ ಪ್ರಕ್ರಿಯೆ ಸದಾಕಾಲ ನಡೆಯುತ್ತಲೇ ಇರುತ್ತದೆ.

ಈ ಸ್ವರೂಪದ ವಿಧಿ - ನಿಷೇಧಗಲು ಮನುಷ್ಯನ ಬದುಕನ್ನು ವಿಭಿನ್ನ ರೀತಿಯಲ್ಲಿ ನಿಯಂತ್ರಿಸುತ್ತವೆ. ಹೀಗೆ ನಿಯಂತ್ರಿಸುವಾಗ, ಕಟ್ಟು - ಕಟ್ಟಳೆಗಳು ಹೆಚ್ಚು ಜಟಿಲವಾದಾಗ ವ್ಯವಸ್ಥೆಯ ಬದುಕು ಸ್ಥಗಿತಗೊಳ್ಳುತ್ತದೆ. ಆಗ ಸಮಾಜ ಜೀವಿಗೆ ವ್ಯವಸ್ಥೆಯ ನಿಯಮಗಳು ಸಡಿಲವೆನಿಸಿ ಆ ಕಡೆಗೆ ವಾಲುತ್ತಾನೆ. ಇದರಿಂದಾಗಿ ಭಿನ್ನ ವ್ಯವಸ್ಥೆಯ ಬಣಗಳ ನಡುವೆ ಸಂಘರ್ಷ ನಡೆದು ಜಟಿಲವಾದ ಬಣ ವ್ಯವಸ್ಥೆ ಸಡಿಲಗೊಳ್ಳುತ್ತದೆ. ವ್ಯವಸ್ಥೆಯಲ್ಲಿ ಈ ಪ್ರಕ್ರಿಯೆ ಸದಾಕಾಲ ನಡೆಯುತ್ತಲೇ ಇರುತ್ತದೆ. ಇದನ್ನೇ ನೇರವಾಗಿ ಹೇಳುವುದಾದರೆ ಸಂಘಜೀವಿಯಾದ ಮಾನವ ತನ್ನ ಬದುಕಿನುದ್ದಕ್ಕೂ ವಿಧಿಗಳನ್ನು ಹಾಕಿಕೊಳ್ಳುತ್ತಾನೆ ಮತ್ತು ಅವುಗಳನ್ನು ಮೀರುತ್ತ ಹೋಗುತ್ತಾನೆ. ಈ 'ವಿಧಿಬಂಧ' ಮತ್ತು 'ವಿಧಿ ಮುಕ್ತ' ಕ್ರಿಯೆಯಲ್ಲಿಯೇ ಆತನ ಉನ್ನತಿ, ಅವನತಿಗಳು ಅಡಗಿವೆ.

ಇದನ್ನೇ ನೇರವಾಗಿ ಹೇಳುವುದಾದರೆ ಸಂಘಜೀವಿಯಾದ ಮಾನವ ತನ್ನ ಬದುಕಿನುದ್ದಕ್ಕೂ ವಿಧಿಗಳನ್ನು (Rules+Rituals) ಹಾಕಿಕೊಳ್ಳುತ್ತಾನೆ ಮತ್ತು ಅವುಗಳನ್ನು ಮೀರುತ್ತ (Exceed) ಹೋಗುತ್ತಾನೆ. ಈ 'ವಿಧಿಬಂಧ ' (Ritual Free) ಮತ್ತು 'ವಿಧಿ ಮುಕ್ತ ' (Ritual Bound) ಕ್ರಿಯೆಯಲ್ಲಿಯೇ ಆತನ ಉನ್ನತಿ, ಅವನತಿಗಳು ಅಡಗಿವೆ. ಈ ಕ್ರಿಯೆಯೇ ಆತನ ಬಣ ವ್ಯವಸ್ಥೆಯ ಬೆಳವಣಿಗೆಗೆ ಹಾದಿ ಮಾಡಿಕೊಡುತ್ತದೆ. ಅಂತೆಯೇ ಅದು ವಿನಾಶದೆಡೆಗೂ ಕರೆದುಕೊಂಡು ಹೋಗುತ್ತದೆ. ಇದನ್ನೇ ಹಿಂದೆ ಜಟಿಲಗೊಳ್ಳುವುದು, ಜಡಗೊಳ್ಳುವುದು ಎಂದು ಗುರುತಿಸಿದೆ. ಈ ಅರಳುವ ಮತ್ತು ಮುದುಡುವ ಕ್ರಿಯೆಯನ್ನು ವಿಧಿಬಂಧ - ವಿಧಿಮುಕ್ತ ಎಂದು ಕರೆಯಲಾಗಿದೆ. ಮಾನವ ನಿರ್ಮಿತವಾದ ಎಲ್ಲ ಬಣಗಳಲ್ಲಿಯೂ ಇದು ಇದ್ದೇ ಇರುತ್ತದೆ.

'ವಿಧಿಬಂಧ' ಎಂದರೆ ವಿಧಿನಿಷೇಧಗಳಿಂದ ಸಂಪೂರ್ಣವಾಗಿ ಜಡವಾದದ್ದು ಎಂದರ್ಥ. ನಿಯಮಗಳ ಭಾರದಿಂದ ಮನುಷ್ಯ ಮೇಲೆಳಲಾಗದೆ ನರಳುವ ಸ್ಥಿತಿ ಇಲ್ಲಿಯದು. ಇಲ್ಲಿಯ ವಿಧಿನಿಷೇಧಗಲೇನಿದ್ದರೂ ಹೇರಿಕೆಯಿಂದ ಬಂದವುಗಳಾಗಿರುತ್ತವೆ. 'ವಿಧಿಮುಕ್ತ' ಎಂದರೆ ವಿಧಿ - ನಿಷೇಧಗಳು ಹೇರಿಕೆ ಎನಿಸದೆ ಜೀವನೋತ್ಸಾಹವವನ್ನು ಚಿಮ್ಮಿಸುವುದಕ್ಕಾಗಿ ಇರುವಂತಹವು. ಇಲ್ಲಿ ಸ್ವಾತಂತ್ರ್ಯ ಅಧಿಕ. ಧರ್ಮ, ಮತ, ವರ್ಣ, ಜನಾಂಗ, ಜಾತಿ, ಕುಲ ಯಾವುದೇ ವ್ಯವಸ್ಥೆಗೆ ಸಂಬಂಧಿಸಿದ ವಿಧಿ- ನಿಷೇಧಗಳಿರಬಹುದು. ವಿಧಿ - ನಿಷೇಧಗಳು ಜನವಿರೋಧಿ ನಿಲುವಿನಿಂದ ಎಂದೂ ಆರಂಭವಾಗುವುದಿಲ್ಲ, ಇವು ಜನಪರವಾಗಿಯೇ ಇರುತ್ತವೆ. ಆದರೆ ಕಾಲಂತರದಲ್ಲಿ ಸಮಷ್ಟೀಯ ಹಿತಾಸಕ್ತಿಗಿಂತ ವ್ಯಕ್ತಿಗತ, ಜಾತಿಗತ ಅಥವಾ ಜನಾಂಗಿಕ ಹಿತಾಶಕ್ತಿ ಪ್ರಧಾನವಾದಾಗ ವಿಧಿ ನಿಷೇಧಗಳು ಜನಪರವಾಗದೆ. ವ್ಯಕ್ತಿಪರ, ಜಾತಿಪರ, ಜನಾಂಗಪರವಾಗಿ ನಿಲ್ಲುತ್ತವೆ. ಆಗ ವ್ಯವಸ್ಥೆ ಜಡಗಟ್ಟುತ್ತದೆ. ವಿಧಿ ನಿಷೇಧಗಳು ಸಡಿಲಗೊಂಡಾಗ ಅಥವಾ ಮೀರುವಿಕೆ ನಡೆದಾಗ ವ್ಯವಸ್ಥೆ ಮತ್ತೆ ಜೀವ ಚಿಲುಮೆಯಿಂದ ಕೂಡುತ್ತದೆ. ಹೀಗೆ ಸದಾಕಾಲ ವ್ಯವಸ್ಥೆಯಲ್ಲಿ ವಿಧಿಬಂಧ ಮತ್ತು ವಿಧಿಮುಕ್ತ ಕ್ರಿಯೆಗಳು ಚಲಾವಣೆಯಲ್ಲಿದ್ದು ವ್ಯವಸ್ಥೆಯನ್ನು ಪರಿಷ್ಕರಿಸುತ್ತವೆ, ಬೆಳೆಸುತ್ತವೆ ಮತ್ತು ನಿಯಂತ್ರಿಸುತ್ತವೆ.

ವಿಧಿಬಂಧ ಮತ್ತು ವಿಧಿಮುಕ್ತದ ಪ್ರಕ್ರಿಯೆಯಲ್ಲಿ ಕಟ್ಟುವ- ಬಿಚ್ಚುವ- ಬೆಳೆಸುವ- ಪರಿಷ್ಕರಿಸುವ ಎಲ್ಲ ಕ್ರಿಯೆಗಳು ನಡೆಯುತ್ತವೆ. ಬೆಳವಣಿಗೆಯ ಉತ್ತುಂಗ ಶಿಖರ ತಲುಪಿದಾಗ ವ್ಯವಸ್ಥೆ ಜಡವಾಗುತ್ತದೆ. ಹೀಗೆ ಜಡವಾಗುವುದರ ಜೊತೆಗೆ ಕಳೆದ ಬದುಕಿಗೆ ವ್ಯಾಖ್ಯಾನ ಬರೆದು ಹೊಸ ವ್ಯವಸ್ಥೆಗೆ ಬಂದು ನಿಲ್ಲುತ್ತೇವೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಈ ಪ್ರಕ್ರಿಯೆ ನಡೆಯುತ್ತಿರುತ್ತದೆ. ಆಯಾ ದೇಶದ ಬದುಕಿನ ಇರುವಿಕೆಗೆ ಅನುಗುಣವಾಗಿ ವ್ಯಾಖ್ಯಾನಗಳು ಹುಟ್ಟಿಕೊಳ್ಳುತ್ತವೆ. ಬದುಕಿನಲ್ಲಿ ವಿಧಿ - ನಿಷೇಧಗಳು ಹುಟ್ಟುತ್ತವೆ, ಮೀರಲ್ಪಡುತ್ತವೆ. ಮುರಿಯಲ್ಪಡುತ್ತವೆ. ಮತ್ತೆ ಹೊಸ ವಿಧಿನಿಶೇಧಗಳೂ ಹುಟ್ಟುತ್ತವೆ. ಈ ಚಲನೆಯ ಬದುಕಿನಲ್ಲಿ ಇದು ನಿರಂತರವಾದ ಪ್ರಕ್ರಿಯೆ ಎನ್ನುವುದು ಲಕ್ಷಿಸಬೇಕು.

ಸಾರ್ವತ್ರಿಕ ಮತ್ತು ಅಸಾರ್ವತ್ರಿಕ ಎರಡೂ ಕ್ಷೇತ್ರಗಳಲ್ಲೂ ದೇಶೀ ವಿಚಾರಗಳ ಸ್ವರೂಪ ಬೇರೆಯಾಗುತ್ತದೆ. ಇಲ್ಲಿ ಸಾಮಾಜಿಕ ಸತ್ಯ ಒಂದೇ ಇರುವುದಿಲ್ಲ - ಹಲವಾರಿರುತ್ತವೆ. ಒಂದೊಂದು 'ಸತ್ಯ' ಆಯಾ ಕ್ಷೇತ್ರದ ಜನತೆಗೆ ಸತ್ಯವೆನಿಸಿದಂತೆ ಮತ್ತೊಂದು ಕ್ಷೇತ್ರದವರಿಗೆ ಅವು ಅಸತ್ಯವೆನಿಸಬಹುದು. ಈ ಭಾವಗಳ ಸಂಘರ್ಷದ ಬದುಕಿನ ನಡುವೆಯೇ ಬೆಳವಣಿಗೆ ಇದೆ. 'ಸತ್ಯಂ, ಶಿವಂ, ಸುಂದರಂ' ಎನ್ನುವುದು ಎಲ್ಲರಿಗೂ ಒಂದೇ ಸ್ವರೂಪದ್ದಲ್ಲ, ಬಹುಮುಖಿ ಸಂಸ್ಕೃತಿಗಳ ನಡುವೆ ಬಹುಮುಖಿ ಬದುಕಿದೆ, ಬಹುಮುಖಿ ಸತ್ಯಗಳಿವೆ. ಇದರೊಳಗಿನ ಹೊರಣವೇ ದೇಶೀವಾದ. ಇವುಗಳ ಜೀವನಾಡಿಯನ್ನು ಗುರುತಿಸಿ, ಈ ಬಿಸಿಲುಗುದುರೆಯ ಸವಾರಿ ಮಾಡಿ ನಮ್ಮ ಆಶಯದ ಮಾರ್ಗದೆಡೆಯಿಂದ ಗುರು ಸೇರಲು ಹವಣಿಸುವುದೇ ದೇಶೀವಾದದ ಉದ್ದೇಶ.

<u>ನೈಮಿತ್ತಿಕ ಹಾಗೂ ಮಹಾಉತ್ಪಾತಗಳ ಸಮರಕ್ರಿಯೆಃ</u>

ಈ ಮೇಲೆ ಗಮನಿಸಿದಂತೆ 'ವಿಧಿಬಂಧ ' ಮತ್ತು 'ವಿಧಿಮುಕ್ತ' ಪ್ರಕ್ರಿಯೆಗೆ ಜೀವ ನೀಡುವಂಥ ಶಕ್ತಿಗಳು ಮತ್ತು ನಿಯಂತ್ರಕಗಳು ಎರಡು.

1. ಅರ್ಥನಿಷ್ಠ ಕ್ರಿಯಾ ವಿಧಾನ
2. ಧರ್ಮನಿಷ್ಠ ಕ್ರಿಯಾ ವಿಧಾನ

ಸಂಪತ್ತಿನ ವ್ಯಾಪ್ತಿಗೆ ಸೇರುವ, ಎಲ್ಲ ಭೌತ ವಸ್ತುಗಳನ್ನು ಬಂಡವಾಳ ಮಾಡಿಕೊಂಡು ಬದುಕುವ ವ್ಯವಸ್ಥೆಯೇ ಅರ್ಥನಿಷ್ಠ ಕ್ರಿಯಾ ವಿಧಾನ ವ್ಯವಸ್ಥೆ, ಇದು 'ರಾಜಕೀಯ ' ವ್ಯವ ಸ್ಥೆಗೆ ಸಂಬಂಧಿಸಿದ್ದ ಮತ್ತೊಂದು ಧರ್ಮಮೂಲವಾದುದು, ನೈತಿಕತೆ ಮತ್ತು ಅತಿಮಾನುಷ ಗುಣದ ಮೌಲ್ಯಗಳನ್ನೇ ಬಂಡವಾಳ ಮಾಡಿಕೊಂಡು ಬದುಕುವಂತಹುದು. ಅಧಿಕೃತವಾಗಿ, ಭಾವನಾತ್ಮಕ ಮತ್ತು ಬೌದ್ಧಿಕ ಜಗತ್ತಿಗೆ ಸಂಬಂಧಿಸಿದ್ದು ಧರ್ಮನಿಷ್ಠ ಕ್ರಿಯಾವಿಧಾನವೆಂದು ಪರಿಗಣಿಸಲಾಗಿದೆ. ಇವು ಎರಡೂ ವ್ಯವಸ್ಥೆಗಳು ಸಾಮಾಜಿಕ ವ್ಯವಸ್ಥೆಯ ಮೇಲೆ ಅಥವಾ ದೇಶದ ಜನತೆಯ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಲು ಸದಾಕಾಲ ಪ್ರಯತ್ನಿಸುತ್ತವೆ.

ಈ ಸಾಧನಾ ಕ್ರಿಯೆಯಲ್ಲಿ ಆಗುವ ಬದಲಾವಣೆಗಳಿಂದಾಗಿ 'ವಿಧಿಬಂಧ ' ಮತ್ತು 'ವಿಧಿಮುಕ್ತ ' ಕ್ರಿಯೆ ಚಲಾವಣೆಯಲ್ಲಿರುತ್ತದೆ ಎಂದರೆ ಮೇಲಿನ

ಕ್ರಿಯಾವಿಧಾನದ ಅಧೀನತೆಯ ಬದುಕು ಇವುಗಳದ್ದಾಗಿರುತ್ತದೆ. ಅವುಗಳಿಗೆ ಪ್ರತ್ಯೇಕ ಅಸ್ತಿತ್ವ ಇದೆ ಎನಿಸಿದರೂ ಅದು ಮೇಲುನೋಟಕ್ಕೆ ಮಾತ್ರ ಕಾಣುವಂತಹದ್ದೇ ವಿನಃ ಭೇದಿಸಿ ನೋಡಿದರೆ ಮೇಲಿನ ಅಧೀನತೆಯ ಕ್ರಿಯಾವಿಧಾನ ಸ್ಪಷ್ಟವಾಗಿ ಗೋಚರವಾಗುತ್ತದೆ.

ಈ ವಿಧಿಬಂಧ ಮತ್ತು ವಿಧಿಮುಕ್ತ ಕ್ರಿಯೆಗಳು ಅರ್ಥನಿಷ್ಠ ಮತ್ತು ಧರ್ಮನಿಷ್ಠ ಕ್ರಿಯಾ ವಿಧಾನದಲ್ಲಿಯೂ ಇರುತ್ತವೆ. ಅದೀನ ಕ್ರಿಯಾವಿಧಾನದಲ್ಲಾದ (ಅಕ್ರಿವಿ) ಬದಲಾವಣೆ ಸಾರ್ವತ್ರಿಕ ಕ್ರಿಯಾವಿಧಾನದಲ್ಲಿ (ಸಾಕ್ರಿವಿ) ಬದಲಾವಣೆಯನ್ನು ತರುತ್ತದೆ. ಅ.ಕ್ರಿ.ವಿ.ಗಳಲ್ಲಿ ಆಗುವ ಬದಲಾವಣೆ ತ್ವರಿತ ಗತಿಯದ್ದಾದರೆ ಸಾ.ಕ್ರಿ.ವಿ.ಗಳಲ್ಲಿಯ ಬದಲಾವಣೆ ಮಂದಗತಿಯದ್ದಾಗಿರುತ್ತದೆ. ಹೀಗಾಗಿ ವಿಧಿಬಂಧ ಮತ್ತು ವಿಧಿಮುಕ್ತ ಕ್ರಿಯೆ ಧರ್ಮ ಮತ್ತು ಅರ್ಥದ ಪೂರಕ ಉತ್ಪನ್ನಗಳಾಗಿವೆ.

ವಿಧಿಬಂಧ ಮತ್ತು ವಿಧಿಮುಕ್ತ ಪ್ರಕ್ರಿಯೆಯಲ್ಲಿ ಆಗುವ ಬದಲಾವಣೆ ಯಾವಾಗಲೂ ಒಂದೇ ಸ್ವರೂಪದ್ದಾಗಿರು ವುದಿಲ್ಲ. ನೀರು ಕುದ್ದು ಆವಿಯಾಗುತ್ತಿದೆ ಎಂದರೆ ಇದು ಒಮ್ಮೆಲೆ ಸಾಧ್ಯವಿಲ್ಲ. ಇದನ್ನು ಗುರುತಿಸಲು ಹಲವಾರು ಬೆಳವಣಿಗೆಯ ಹಂತಗಳಿವೆ. ನೀರು ಬೆಚ್ಚಗಿದೆ, ಉಗುರು ಬೆಚ್ಚಗಿದೆ, ಬಿಸಿ ಇದೆ, ಸುಡುತ್ತಾ ಇದೆ. ಹೆಸರುಬರುತ್ತಾ ಇದೆ (ಕುದಿಯಲು ಆರಂಭಾಗುವ ಮುನ್ನ ಬರುವ ಸಣ್ಣ ಸಣ್ಣ ಗುಳ್ಳೆಗಳು ಬರುವ ಹಂತ) ಕುದಿತಾ ಇದೆ, ಆವಿಯಾಗ್ತಾಇದೆ. ಹೀಗೆ ವ್ಯವಸ್ಥೆಯಲ್ಲಿ ಬೆಚ್ಚಗಾಗಿ ಉಗಿಯಾಗುವ ಕ್ರಿಯೆಯೇ ಬಂಧಮುಕ್ತದ ಸ್ಥಿತಿಯನ್ನು ತಿಳಿಸಿದರೆ, ಇದಕ್ಕೆ ಪ್ರತಿಯಾಗಿ ತಣ್ಣಗಾಗುತ್ತ ಮಂಜುಗಡ್ಡೆಯಾಗುವ ಕ್ರಿಯೆಯೇ ವಿದಿಬಂಧ ಸ್ಥಿತಿಯನ್ನು ತಿಳಿಸುತ್ತದೆ.

ಈ ಬೆಳವಣಿಗೆಯ ಹಂತಗಳಲ್ಲಿ ಕಂಡುಬರುವ ಬಂಧ ಮತ್ತು ಮುಕ್ತಕ್ರಿಯೆ ಪ್ರಧಾನವಾಗಿ ಎರಡೂ ರೀತಿಯಲ್ಲಿ ಗುರುತಿಸಬಹುದು.

1. ನೈಮಿತ್ತಿಕ ವಿಧಿಬಂಧ ಮತ್ತು ನೈಮಿತ್ತಿನ ವಿಧಿಮುಕ್ತ ಕ್ರಿಯೆ (ನೈಮಿತ್ತಿಕ ಉತ್ಪಾತ). 2. ಮಹಾವಿಧಿಬಂಧ ಮತ್ತು ವಿಧಿಮುಕ್ತ ಕ್ರಿಯೆ (ಮಹಾ ಉತ್ಪಾತ).

ನೈಮಿತ್ತಿಕ ವಿಧಿಬಂಧ ಎನ್ನುವುದು ಸಾಮಾನ್ಯ ನಿಯಮಗಳಿಂದ ಕೂಡಿದ್ದು ನಿಮಿತ್ತ ಮಾತ್ರ ಕಾಣಿಸಿಕೊಳ್ಳುವಂತಹುದು. ಈ ನೈಮಿತ್ತಿಕ ಬಂಧ ಅಥವಾ ಮುಕ್ತ ಕ್ರಿಯೆ ಘಟಿಸಿದಾಗ ವ್ಯವಸ್ಥೆಯ ಸಂರಚನೆಯಲ್ಲಿ ಪರಿಷ್ಕರಣಗಳಾಗುತ್ತವೆ. ಸಾಹಿತ್ಯಕವಾಗಿ ಗುರುತಿಸುವುದಾದರೆ ಹೊಸಗನ್ನಡದ ಸಂದರ್ಭದಲ್ಲಿ ಬಂದ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಇವು ನೈಮಿತ್ತಿಕ ವಿಧಿಬಂಧ ಮತ್ತು ವಿಧಿಮುಕ್ತ ಕ್ರಿಯೆಯಲ್ಲಿ ಕಾಣಿಸಿಕೊಂಡುಂಥವು. ಧಾರ್ಮಿಕ ಮತ್ತು ಸಾಮಾಜಿಕವಾಗಿ ಇದನ್ನು ಗುರುತಿಸುವುದಾದರೆ ರಾಮಜನ್ಮಭೂಮಿ- ಅಯೋಧ್ಯಾ ಘಟನೆ ಇದಕ್ಕೊಂದು ಒಳ್ಳೆಯ ಉದಾಹರಣೆ.

ಮಹಾ ವಿಧಿಬಂಧ ಮತ್ತು ವಿಧಿಮುಕ್ತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇದು ಒಡಂಬಡಿಕೆಯ ಅಥವಾ ಪರಿಷ್ಕರಣದ ಸ್ವರೂಪದ್ದಲ್ಲ. ವ್ಯವಸ್ಥೆಯ ಸಂಪೂರ್ಣ ಬದಲಾವಣೆಯನ್ನು ನಿರೀಕ್ಷಿಸುವಂತಹುದು. ಉದಾಹರಣೆಗೆ ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿ ವ್ಯವಸ್ಥೆಯಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಂದುದು. ಇಲ್ಲಿ ವ್ಯವಸ್ಥೆಯ ಸಂರಚನೆಯನ್ನೇ ಸಂಪೂರ್ಣವಾಗಿ ಪಲ್ಲಟಗೊಳಿಸಿ ಕ್ರಾಂತಿಕಾರಿ ಬದಲಾವಣೆಯನ್ನು ತರಲಾಯಿತು. ಎಂದರೆ, 1942ರ ಸ್ವಾತಂತ್ರ್ಯ, ರಾಜಕೀಯ ವ್ಯವಸ್ಥೆಯಲ್ಲಾದ ಬದಲಾವಣೆ ಇತರ ವ್ಯವಸ್ಥೆಗಳಲ್ಲಿಯೂ ಬದಲಾವಣೆಯನ್ನೂ ತಂದುಬಿಟ್ಟದ್ದನ್ನು ಸ್ಮರಿಸಿಕೊಳ್ಳಬಹುದು.

ನೈಮಿತ್ತಿಕ ಕ್ರಿಯಾವಿಧಾನ - ಇದು ಮೇಲಿಂದ ಮೇಲೆ ಘಟಿಸುತ್ತಲೇ ಹೋಗುತ್ತದೆ. ಹೀಗೆ ಘಟಿಸುವ ಈ ಕ್ರಿಯಾವಿಧಾನ ವ್ಯರ್ಥವಾಗಿ ಹೋಗುವಂತಹದ್ದಲ್ಲ. ಇದು ನಿಧಾನವಾಗಿ ನೀರು ಬೆಚ್ಚಗಾಗಿಸುತ್ತಾ, ಸುಡುವ ಹಂತದವರೆಗೂ ಕರೆತರುವಂತಹುದು, ನೀರು ಆವಿಯಾಗುವ ಕ್ರಿಯೆ ಎಂದರೆ, ಮಹಾವಿಧಿಮುಕ್ತ ಕ್ರಿಯಾವಿಧಾನ ಹೇಳುವಂತಹುದು ಎಂದರೆ ನೈಮಿತ್ತಿಕ ವಿಧಿಬಂಧ ವಿಧಿಮುಕ್ತಗಳ ಸತತ ಕ್ರಿಯೆಯಿಂದ ಮಹಾಮುಕ್ತ ಕ್ರಿಯೆ ಘಟಿಸುತ್ತದೆ.

ನಮ್ಮ ಪುರಾಣಗಳಲ್ಲಿ ಮನ್ವಂತರ ಮತ್ತು ಚತುರ್ಯುಗದ ಪರಿಕಲ್ಪನೆಗಳಿವೆ. ಇಲ್ಲಿ ಆಗುವ ಬದಲಾವಣೆಗಳನ್ನು
ಸಾಂಕೇತಿಕವಾಗಿ 'ಪ್ರಳಯ' ವೆಂದು ಕರೆಯಲಾಗಿದೆ. ಈ ಪ್ರಳಯದಲ್ಲಿಯೇ ಮತ್ತೆ ವಿಧ. 'ನೈಮಿತ್ತಿಕ ಪ್ರಳಯ' ಮತ್ತು 'ಮಹಾಪ್ರಳಯ'. ಈ ಪುರಾಣದ ಪ್ರಳಯದ ಪರಿಕಲ್ಪನೆ ಕ್ರಾಂತಿಯ ಕುರಿತೇ ಹೇಳುವಂತಹುದು. ದಶಾವತಾರಗಳು ಧರ್ಮ ಮತ್ತು ಅರ್ಥ ವ್ಯವಸ್ಥೆಯ ಸಂಘರ್ಷ ಹಾಗೂ ಕ್ರಾಂತಿಯ ಕುರಿತು ಚರ್ಚಿಸುವ ಅದ್ಭುತವಾದ ಸಾಂಕೇತಿಕ ಕೃತಿಗಳಾಗಿವೆ.

ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ, ನಮ್ಮ ಭಾರತೀಯ ವ್ಯವಸ್ಥೆಯಲ್ಲಿ ಆಗುವ ಬದಲಾವಣೆ ಧರ್ಮ ಮತ್ತು ಅರ್ಥಮೂಲದಿಂದ ಕೂಡಿದ್ದಾಗಿದೆ. ಕಾರ್ಲ್ ಮಾರ್ಕ್ಸ್ ಗುರುತಿಸುವಂತೆ ನಮ್ಮದು ಕೇವಲ ಅರ್ಥಕೇಂದ್ರಿತ ವ್ಯವಸ್ಥೆಯಲ್ಲಿ ಹಾಗೆಯೇ ಕಾರ್ಲ್ ಮಾರ್ಕ್ಸ್ ಹೇಳುವ ಹಾಗೆ ಉತ್ಪಾದನಾ ಶಕ್ತಿ' ಯಿಂದ 'ಉತ್ಪಾದನಾ ಸಂಬಂಧ' ಗಳ ಮೇಲೆ ಪರಿಣಾಮವುಂಟಾಗಿ ಬದಲಾವಣೆಯನ್ನು ತರುತ್ತದೆ. ಭಾರತದಂತಹ ದೇಶಗಳಲ್ಲಿ ಉತ್ಪಾದನಾ ಶಕ್ತಿಗಿಂತ ಉತ್ಪಾದನಾ ಸಂಬಂಧಗಳಲ್ಲಾಗುವ ಬದಲಾವಣೆ ಒಂದೇ ಸ್ವರೂಪದ್ದಾಗಿರುವುದಿಲ್ಲ. ಅಷ್ಟೇ ಅಲ್ಲ ಈ ಬದಲಾವಣೆಯ ಉತ್ಪಾದನಾ ಸಂಬಂಧಗಳೆಲ್ಲದರಲ್ಲೂ ತರುವುದಿಲ್ಲ ಎನ್ನುವುದು ನಿಜವಾದರೂ



ಜಾಗತೀಕರಣದ ಜಾದೂಗಾರ ಬುಷ್

ಹಾಗೆಯೇ ಪರಂಪರೆಯ ಬೇಡಿಕೆಗಳು ಇನ್ನೊಂದು ರೀತಿಯಲ್ಲಿ ಮುಖ ಮಾಡಿ ಬೆಳೆಯಲೂ ಸಹಕರಿಸುತ್ತವೆ. ಈ ಬೆಳವಣಿಗೆಯಲ್ಲಿ ಆಯಾ ಧರ್ಮ, ಮತ, ವರ್ಣ, ಜಾತಿಗಳಿಗೆ (ಭಾರತದ ಉತ್ಪಾದನಾ ಸಂಬಂಧಗಳು) ಅನುಗುಣವಾಗಿ ಅವುಗಳ ಬೆಳವಣಿಗೆಯ ಸ್ವರೂಪ ಭಿನ್ನವಾಗುತ್ತ ಹೋಗುತ್ತವೆ. ಒಂದೊಂದು ಧರ್ಮ, ಮತ, ಧರ್ಮ (ಜನಾಂಗ) ಜಾತಿಗಳ (ಕುಲ) ಒಂದೊಂದು ಬಣಗಳಿದ್ದಂತೆ. ಸರಕಾರ ಒಂದು ಬಣ್ಣ (ಉತ್ಪಾದನಾ ಶಕ್ತಿ) ತಯಾರಿಸಿ ಹಾಕಿದರೆ ಆ ಒಂದೇ ಬಣ್ಣ ಆಯಾ ಜನಾಂಗ, ಜಾತಿ, ಮತ, ಧರ್ಮಗಳ ಬಣ್ಣದಲ್ಲಿ ಸೇರಿದಾಗ ಬೇರೊಂದು ಬಣ್ಣ ಬರುತ್ತದೆಯೇ ವಿನಃ ಸರಕಾರದ ಬಣ್ಣದ ಮೂಲಗುಣವೇ ಇಲ್ಲಿ ಇರುವುದಿಲ್ಲ ಎನ್ನುವುದೇ ವಿಶೇಷ. ಇದೇ ಭಾರತೀಯತೆಯ ಮೂಲಭೂತ ಗುಣ. ಈ ಸ್ವರೂಪ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಎಲ್ಲ ರಂಗದಲ್ಲೂ ಕಾಣಿಸುವಂತಹುದು.

ನಮ್ಮಲ್ಲಿ ಒಂದೊಂದು ಧರ್ಮ ಒಂದೊಂದು ವರ್ಗಗಳಾದರೆ, ವರ್ಣ, ಜನಾಂಗ, ಜಾತಿ, ಕುಲಗಳು ಒಂದೊಂದು ಸ್ವತಂತ್ರ ವರ್ಗದಂತೆ ವರ್ತಿಸುತ್ತವೆ. ಹೀಗಾಗಿ ಭಾರತೀಯ ಕಸಿಅಂಗಿ - ಧೋತಿ ತೊಡುವ ಜನತೆಗೆ ಮಾರ್ಕ್ಸವಾದ ಎನ್ನುವುದು. ತಲೆಗೆ ಹ್ಯಾಟು, ಕಾಲಿಗೆ ಬೂಟ್ ಹಾಕಿ ನಡೆಸಿದಂತಾಗುತ್ತದೆ. ಮತ್ತೆ ವರ್ಣ, ಜನಾಂಗ, ಜಾತಿ, ಕುಲಗಳು ಇವು ಧರ್ಮ - ಅರ್ಥದಷ್ಟೇ ಪ್ರಧಾನವಾದವು. ಈ ನೈಮಿತ್ತಿಕ ಹಾಗೂ ಮಹಾಉತ್ಪಾತ ಕ್ರಿಯಾ ವಿಧಾನಗಳು, ಬದುಕಿನ ಇರುವಿಕೆ, ಕಟ್ಟುವಿಕೆ, ಒಡೆಯುವಿಕೆ, ತಂತ್ರಗಳ ಜೊತೆಗೆ ಬದುಕಿನ ಮಾರ್ಗ ಬಹುಮುಖಿ ಸಂಸ್ಕೃತಿ - ಸಮಾಜವನ್ನು ರೂಪಿಸಿವೆ. ಹಾಗೂ ಇತಿಹಾಸವನ್ನು ನಿರ್ಮಿಸಿವೆ. ಈ ಸೂತ್ರಗಳ ಹಿಡಿತದಿಂದಲೇ ನಾವು ಬೆಳೆಯುವುದು ಸಾಧ್ಯ. ಇವುಗಳ ಮೂಲಕ ನಮ್ಮ ಅಧ್ಯಯನ, ಸಂಶೋಧನೆ ನಡೆಯಬೇಕಿದೆ. ಇಲ್ಲವಾದಲ್ಲಿ ನಮ್ಮ ನಡಿಗೆ ಗುರಿ ಇಲ್ಲದ ನಡಿಗೆಯಾಗಿ ಮರುಭೂಮಿಯಲ್ಲಿ ಸಾಗಿದಂತಾಗುತ್ತದೆ. ಈ ನಿಯಂತ್ರಕಗಳಲ್ಲಿ ಅಥವಾ ಶಕ್ತಿಗಳಲ್ಲಿ (ಧರ್ಮ/ಅರ್ಥ, ವರ್ಣ/ಜನಾಂಗ, ಜಾತಿ/ಕುಲ) ಆಗುವ ಬದಲಾವಣೆಗಳೇ ದೇಶೀವಾದಕ್ಕೆ ಗ್ರಾಸ. ಈ ಬದಲಾವಣೆಯ ಇತಿಹಾಸವನ್ನು ವರ್ತಮಾನದೊಂದಿಗೆ ತೂಗಿ ಭವಿಷ್ಯತನ್ನು ಕಟ್ಟುವ ಕ್ರಿಯೆಗೆ ಮುಂದಾಗುವುದೇ ದೇಶೀವಾದದ ಗುರಿಯಾಗಬೇಕು. ಹೀಗಾಗಿ ಈ ದೇಶೀವಾದ ಬಳ್ಳದಿಂದ ಹಳ್ಳಿಗೂ, ಹಳ್ಳಿಯಿಂದ ದಿಳ್ಳಿಗೂ, ದಿಳ್ಳಿಯಿಂದ ಗೋಳಕ್ಕೂ, ಗೋಳದಿಂದ ಮತ್ತೆ ಗೋಮಾಳದ ಬಳ್ಳದೆಡೆಗೆ ಚಲಿಸುವಂತಾಗಬೇಕು. ಒಟ್ಟಾರೆಯಾಗಿ, ಮೇಲಿನ ಸಿದ್ಧಾಂತದ ಹಿನ್ನೆಲೆಯಲ್ಲಿ ಇಂದಿನ ಜಾಗತೀಕರಣದ ಸಂದರ್ಭವನ್ನು ಅರ್ಥೈಸಬೇಕಾಗಿದೆ.

ರಾಷ್ಟ್ರೀಯವಾದದಿಂದ ಸಂಯುಕ್ತವಾದದೆಡೆಗೆ ನಮ್ಮನ್ನು ನಾವು ಆಳಬೇಕೆಂಬ ದೃಷ್ಟಿಕೋನ ರಾಷ್ಟ್ರದ ಪರಿಕಲ್ಪನೆಗೆ ನಾಂದಿ ಹಾಡಿತು. ಇದೇ ಸಂದರ್ಭದಲ್ಲಿ ಕಾಣಿಸಿಕೊಂಡಿದ್ದು ರಾಷ್ಟ್ರೀಯತೆ. ಈ ರಾಷ್ಟ್ರೀಯತೆ ಜೀವನಾಡಿ 'ದೇಶೀ ಪ್ರಜ್ಞೆ' ಹೀಗಾಗಿ ರಾಷ್ಟ್ರದ ಪರಿಕಲ್ಪನೆಯೊಂದಿಗೆ ದೇಶೀಯತೆಯೂ ಮೂಡಿ ಬಂದಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಎಂದರೆ, ರಾಷ್ಟ್ರದ ಪರಿಕಲ್ಪನೆಗೆ ದೇಶೀಪ್ರಜ್ಞೆಯಿಂದ ರಾಷ್ಟ್ರೀಯತೆ ಎದ್ದು ನಿಂತ ಪರಿಕ್ರಮವನ್ನು ಸರ್ವಸಾಮಾನ್ಯವಾಗಿ ಎಲ್ಲ ರಾಷ್ಟ್ರದ ನಡೆಯಲ್ಲೂ ಕಾಣುತ್ತೇವೆ.

ದೇಶೀವಾದ ಎನ್ನುವುದು ರಾಷ್ಟ್ರೀಯತೆಯ ದೇಶೀಪ್ರಜ್ಞೆಯ ಇನ್ನೊಂದು ರೂಪವಲ್ಲ. ಏಕೆಂದರೆ, ರಾಷ್ಟ್ರ-ರಾಷ್ಟ್ರೀಯತೆ ಎನ್ನುವುದು ಬೀಜರೂಪದಲ್ಲಿದ್ದಾಗ

ಅದಕ್ಕೆ ಗಡಿ ಅಥವಾ ಸೀಮಾರೇಖೆಯೇ ಪ್ರಧಾನವಾಗುತ್ತದೆ. ಆದಕ್ಕಾಗಿ, ನಾವೆಲ್ಲ ಬೇರೆ ಬೇರೆ ಜನಾಂಗಗಳಿಂದ ಕೂಡಿದ್ದಾಗಲು ನಮ್ಮ ಚರಿತ್ರೆ, ನಮ್ಮ ಪರಂಪರೆ ಒಂದೇ, ಹೀಗಾಗಿ ನಾವೆಲ್ಲರೂ ಒಂದೇ ಎಂದು ಸಾರುವ ಅದಕ್ಕಾಗಿ ತ್ಯಾಗ, ಬಲಿದಾನ, ಎಲ್ಲರ ಏಳ್ಗೆಯೇ ನಮ್ಮ ಏಳ್ಗೆ ಎಂಬ ಭಾವಗಳು ಉದ್ದೀಪನಗೊಂಡು ರಾಷ್ಟ್ರಗಳು ಉದಯಿಸಿದ್ದನ್ನು ಗುರುತಿಸಿಕೊಳ್ಳುತ್ತೇವೆ.

'ರಾಷ್ಟ್ರ' ಎನ್ನುವುದು 'ಸಾಮ್ರಾಜ್ಯಶಾಹಿ' ಹಾಗೂ ವಸಾಹತುಶಾಹಿ ನಿರ್ನಾಮದ ಪ್ರತೀಕ. 'ಕ್ರಾಂತಿಗಳ ಮಾಲೆ' ಎಂದು ಹೆಸರಾದ, ಫ್ರಾನ್ಸ್ ನಲ್ಲಿ ನಡೆದ ಕ್ರಿ. ಶ. 1789ರ 'ಫ್ರೇಂಚ್ ಕ್ರಾಂತಿ' ಪ್ರಜಾಪ್ರಭುತ್ವಕ್ಕೆ ಮಣೆಹಾಕಿತು. ಇದು ಅಮೇರಿಕದ ಕ್ರಾಂತಿಯಿಂದ ಪ್ರೇರಣೆ ಪಡೆದುಕೊಂಡಿತ್ತು. ಆದರೆ ಫ್ರೆಂಚ್ ಕ್ರಾಂತಿಯ ನಂತರವೇ ಜರ್ಮನಿ, ಇಟಲಿ, ರಷ್ಯಾ, ಗ್ರೀಸ್, ಪೋಲಂಡ, ರಮೇನೆಯಾಗಳಲ್ಲಿ ರಾಷ್ಟ್ರ - ರಾಷ್ಟ್ರೀಯತೆಯ ಪ್ರಜ್ಞೆಮೂಡಿ ಪ್ರಜಾಪ್ರಭುತ್ವ ನೆಲೆಯೂರುವಂತಾಯಿತು ಎನ್ನುವುದು ಇತಿಹಾಸ ಸಾರುತ್ತದೆ.

ಪರಕೀಯರ ದಬ್ಬಾಳಿಕೆ ಅಥವಾ ಸ್ವದೇಶಿಯರೇ ನಾಡನಾಳುತ್ತಿದ್ದೂ ಅವರೇ ಪರಕೀಯರಂತೆ ವರ್ತಿಸಿದಾಗಲೆಲ್ಲ ದಬ್ಬಾಳಿಕೆಯನ್ನು ಕಿತ್ತೆಸೆಯಲು ನೆಲದ ಜನವೆಲ್ಲ ಸೇರಿ ಸ್ವದೇಶಾಭಿಮಾನದಿಂದ ಹೋರಾಡಿದ್ದರ ವೀರಗಾಥಾಗಳೇ ಇಂದು ಸ್ವಾತಂತ್ರ್ಯ ಹೋರಾಟಗಳಾಗಿ ನಿಂತಿವೆ. ನಾಡಿನ ನವನಿರ್ಮಾಣಕ್ಕೆ 'ದೇಶೀಪ್ರಜ್ಞೆ' ಅಥವಾ 'ಸ್ವದೇಶಾಭಿಮಾನ' ಪ್ರೇರಕವಾದದ್ದು ಒಂದು ಹಂತವಾದರೆ, ಇದರ ಮುಂದಿನ ಹಂತ ಮತ್ತೊಂದು. ಅದು 1917ರಲ್ಲಿ ರಾಷ್ಟ್ರದಲ್ಲಿ ನಡೆದ ಮಹಾಕ್ರಾಂತಿ ಮೂಲ ನೆಲೆ. ಎಂದರೆ, ರಷ್ಯಾದ ವಸಾಹತುಗಳೆಲ್ಲವೂ ಪೂರ್ಣ ಸ್ವಾತಂತ್ರ್ಯವನ್ನು ಪಡೆದವು. ಇದರೊಂದಿಗೆ ಪೋಲಾಂಡ್, ಫಿನ್ಲೆಂಡ್ ನಂತಹ ವಸಾಹತುಗಳು ಸ್ವಾತಂತ್ರವಾದವು. ರಷ್ಯಾಪ್ರತಿವಾದಿಸಿದಂತೆ. 'ಎಲ್ಲ ರಾಷ್ಟ್ರೀಯ ಜನಾಂಗಗಳಿಗೂ ಸಮಾನತೆ' 'ಎಲ್ಲ ದೇಶಗಳಿಗೂ ರಾಷ್ಟ್ರೀಯ ಸ್ವಯಂ-ನಿರ್ಧಾರ ಹಕ್ಕು' ಇವು ಎರಡೂ ಪ್ರಸ್ತುತ ಭಾರತೀಯ ಸಂದರ್ಭದಲ್ಲಿ ಹೆಚ್ಚು ಮಹತ್ವದವು ಎನಿಸುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಬರುವಾಗ ವಸಾಹತು ಮತ್ತು ಸಾಮ್ರಾಜ್ಯಶಾಹಿ ಎರಡೂ ಒಟ್ಟಿಗೆ ಹೆಗಲಿಗೆ ಹೆಗಲು ಕೊಟ್ಟು ಬದುಕಿದ ಕಾಲವಾದರೂ ಅದು ವಸಾಹತುಶಾಹಿ ನೆಲೆಯಿಂದಲೇ ಜೀವಿಸಿದ್ದು ಅಧಿಕ. ಭಾರತದ ಉದಾರೀಕರಣ ಮತ್ತು ಜಾಗತೀಕರಣದ ಈ ಸಂದರ್ಭದಲ್ಲಿ ನಾವು ನಿಂತು ಆಲೋಚಿಸಬೇಕಾಗಿದ್ದು - ಒಂದು, ನಮ್ಮನ್ನು ನಾವೇ ಆಳಿಕೊಳ್ಳುವ ವ್ಯವಸ್ಥೆಯನ್ನು ನಾವು ಪೂರೈಸಿಕೊಂಡಿದ್ದೇವೆ. ಎರಡು; ಈಗ ನಮ್ಮ ಗಮನ ಕೇಂದ್ರೀಕೃತವಾಗಬೇಕಾದದ್ದು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಉಳಿಸಿಕೊಂಡು ಹೋಗುವುದು ಹೇಗೆ ಎನ್ನುವುದರೆಡೆಗೆ ವಿನಃ ತಳ್ಳಿಕೊಂಡು ಹೋಗುವುದು ಹೇಗೆ ಎಂಬುದಲ್ಲ, ನಮ್ಮ ಸ್ಥಿತಿ ಈಗ ಮೊದಲನೆದಾಗದೆ ಎರಡನೆಯದಾಗಬೇಕಿದೆ. ಭಾರತೀಯ ಈ ನವ ವಸಾಹತೀಕರಣದ ಈ ಸಂದರ್ಭದಲ್ಲಿ ಲೆನಿನ್ ಪ್ರತಿಪಾದಿಸಿದ 'ಎಲ್ಲ ದೇಶಗಳಿಗೂ ರಾಷ್ಟ್ರೀಯ ಸ್ವಯಂ ನಿರ್ಧಾರದ ಹಕ್ಕು' ಮತ್ತು 'ಎಲ್ಲ ರಾಷ್ಟ್ರೀಯ ಜನಾಂಗಗಳಿಗೂ ಸಮಾನತೆ' ಎನ್ನುವ ಅಂತರರಾಷ್ಟ್ರೀಯ ನೆಲೆಯಲ್ಲಿ ದೇಶೀವಾದವನ್ನು ಮಂಡಿಸುವ ಅಗತ್ಯತೆ ಇದೆ.

ಸಂಪತ್ತಿನ ವ್ಯಾಪ್ತಿಗೆ ಸೇರುವ, ಎಲ್ಲ ಭೌತ ವಸ್ತುಗಳನ್ನು ಬಂಡವಾಳ ಮಾಡಿಕೊಂಡು ಬದುಕುವ ವ್ಯವಸ್ಥೆಯೇ ಅರ್ಥನಿಷ್ಠ ಕ್ರಿಯಾ ವಿಧಾನ ವ್ಯವಸ್ಥೆ ಇದು 'ರಾಜಕೀಯ' ವ್ಯವ ಸ್ಥೆಗೆ ಸಂಬಂಧಿಸಿದ್ದ ಮತ್ತೊಂದು ಧರ್ಮಮೂಲವಾದುದು, ನೈತಿಕತೆ ಮತ್ತು ಅತಿಮಾನುಷ ಗುಣದ ಮೌಲ್ಯಗಳನ್ನೇ ಬಂಡವಾಳ ಮಾಡಿಕೊಂಡು ಬದುಕುವಂತ ಹುದು. ಅಧಿಕೃತವಾಗಿ, ಭಾವನಾತ್ಮಕ ಮತ್ತು ಬೌದ್ಧಿಕ ಜಗತ್ತಿಗೆ ಸಂಬಂಧಿಸಿದ್ದು ಧರ್ಮನಿಷ್ಠ ಕ್ರಿಯಾವಿಧಾನವೆಂದು ಪರಿಗಣಿಸಲಾಗಿದೆ. ಇವು ಎರಡೂ ವ್ಯವಸ್ಥೆಗಳು ಸಾಮಾಜಿಕ ವ್ಯವಸ್ಥೆಯ ಮೇಲೆ ಅಥವಾ ದೇಶದ ಜನತೆಯ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಲು ಸದಾಕಾಲ ಪ್ರಯತ್ನಿಸು ತ್ತವೆ. ಈ ಸಾಧನಾ ಕ್ರಿಯೆಯಲ್ಲಿ ಆಗುವ ಬದಲಾವಣೆಗಳಿಂದಾಗಿ 'ವಿಧಿಬಂಧ' ಮತ್ತು 'ವಿಧಿಮುಕ್ತ' ಕ್ರಿಯೆ ಚಲಾವಣೆಯಲ್ಲಿರುತ್ತದೆ ಎಂದರೆ ಮೇಲಿನ ಕ್ರಿಯಾವಿಧಾನದ ಅಧೀನತೆಯ ಬದುಕು ಇವುಗಳದ್ದಾಗಿರುತ್ತದೆ.

ರಾಷ್ಟ್ರೀಯವಾದದ ಪರಿಕಲ್ಪನೆ

ನವೋದಯದ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರ, ರಾಷ್ಟ್ರೀಯತೆ ಎಂಬ ಪದಗಳು ತುಂಬ ತೀಕ್ಷ್ಣವಾಗಿದ್ದವು ಹಾಗೂ ರಚನಾತ್ಮಕ ನೆಲೆಯಲ್ಲಿ ಕೆಲಸ ಮಾಡಿದವು. ಆಗ ಈ ಶಬ್ದಗಳ ಹಿಂದಿನ ಒಟ್ಟು ಆಶಯ, ರಾಷ್ಟ್ರವನ್ನು ಒಗ್ಗೂಡಿಸುವ ಮತ್ತು ದೇಶದ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ ದುಡಿದಿವೆ. ಇಂದಿನ ಸಂದರ್ಭ ಅದಕ್ಕಿಂತ ಭಿನ್ನವಾದುದ್ದಾದರೂ ರಾಷ್ಟ್ರದ ಪರಿಕಲ್ಪನೆಯಿಂದ ಅತೀತವಾದುದ್ದಲ್ಲ. ಆದರೆ ಭಿನ್ನತೆಯ ಸ್ವರೂಪ ನಾವಂದುಕೊಳ್ಳುವಂತೆ ಸರಳ ಸ್ವರೂಪದ್ದೂ ಅಲ್ಲ.

ರಾಷ್ಟ್ರೀಯತೆ ರಾಷ್ಟ್ರೀಯವಾದ ಎನ್ನುವುದು 19ನೇ ಶತಮಾನದಲ್ಲಿಯೇ ಯುರೋಪಿನಲ್ಲಿ ಕಾಣಿಸಿಕೊಂಡಿತು. ದೇಶದ ಸ್ವಾತಂತ್ರ್ಯದ ಫಿನ್ಲೆಂಡ್‌ನಲ್ಲಿ ರಾಷ್ಟ್ರೀಯವಾದ ರೂಪ ಪಡೆಯಿತು ಜರ್ಮನಿಯಲ್ಲಿನ ನಾಜಿ ರಾಷ್ಟ್ರೀಯತೆ ಸರ್ವಾಧಿಕಾರದ ಹಿನ್ನೆಲೆಯಲ್ಲಿ ರೂಪ ಪಡೆದರೆ, ಭಾರತದಲ್ಲಿಯೂ ಇದು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿಯೇ ಮೂಡಿ ಬಂದಿತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ದೇಶ/ರಾಷ್ಟ್ರ, ದೇಶೀಯತೆ/ರಾಷ್ಟ್ರೀಯತೆ, ದೇಶೀವಾದ/ರಾಷ್ಟ್ರೀಯವಾದ ಇವುಗಳಿಗೆ ಪರಸ್ಪರ ಅಂತರವಿಲ್ಲದಂತೆ ಹಾಗೂ ಈ ಎರಡೂ ಪರಿಕಲ್ಪನೆಗಳು ಒಂದೇ ಎಂದು ಭಾವಿಸಿ ಅರ್ಥೈಸುತ್ತ ಹೋಗಿರುವುದು ಕಂಡು ಬರುತ್ತದೆ.

ನವವಸಾಹತುವಿನ ಈ ಕಾಲದ ಸಂದರ್ಭದಲ್ಲಿ 'ರಾಷ್ಟ್ರೀಯತೆ' ಯೇ 'ದೇಶೀಯತೆ' ಎಂದು ಹೇಳಲುಬಾರದು. ಇವೆಲ್ಲಾ ಬೇರೆ ಬೇರೆ ಅಸ್ತಿತ್ವವನ್ನು ಪಡೆದುಕೊಂಡಿವೆ ಎಂದರೆ ದೇಶಿಯ ಪರಿಕಲ್ಪನೆ ಜನಮುಖಿ/ಸಮಾಜಮುಖಿ/ಸಂಸ್ಕೃತಿ ಮುಖಿ ಯಾದರೆ, ರಾಷ್ಟ್ರೀಯ ಪರಿಕಲ್ಪನೆ ರಾಜಕೀಯ/ಆರ್ಥಿಕ/ ಆಡಳಿತಾತ್ಮಕ ನೆಲೆಯಿಂದ ಕೂಡಿದ್ದಾಗಿದೆ. ಹಿಂದೆ ವಿಧಿಬಂಧ - ವಿಧಿಮುಕ್ತ ಕ್ರಿಯೆಯಲ್ಲಿ ಚರ್ಚಿಸಿದಂತೆ ದೇಶಿ ವಾದಕ್ಕೆ ತೋಂಡಿ / ಮೌಖಿಕ ಸಂವಿದಾನ ಅಡಿಪಾಯವಾದರೆ ರಾಷ್ಟ್ರೀಯವಾದಕ್ಕೆ ಲಿಖಿತ ಸಂವಿಧನ ಅಡಿಪಾಯವಾಗಿರುತ್ತದೆ.

ರಾಷ್ಟ್ರೀಯತೆಯ ಗ್ರಹಿಕೆಯಲ್ಲಿಯೇ ವ್ಯತ್ಯಾಸವಾಗುತ್ತ ಬಂದಿದೆ. ಸ್ವಾತಂತ್ರ್ಯದ ಪೂರ್ವದಲ್ಲಿದ್ದ ಗ್ರಹಿಕೆ, ಸ್ವಾತಂತ್ರ್ಯದನಂತರ ಬದಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ದೇಶದ ಭೌಗೋಳಿಕ ವ್ಯಾಪ್ತಿಗೆ ರಾಷ್ಟ್ರೀಯತೆಯ ಭಾವನೆಗಳು ಸ್ಪಂದಿಸಿದರೆ, ಸ್ವಾತಂತ್ರ್ಯದ ನಂತರ ಆ ವ್ಯಾಪ್ತಿಗೆ ಮಿತಿ ಬಿದ್ದದ್ದನ್ನು, ಆ ಮಿತಿಗೆ ರಾಷ್ಟ್ರೀಯತೆ ಗ್ರಹಿಕೆ ವರ್ಗಾವಣೆಯಾದುದ್ದನ್ನು ಗಮನಿಸುತ್ತೇವೆ. ಅದೇ ರೀತಿ ಪ್ರಭುತ್ವಕ್ಕೂ, ರಾಷ್ಟ್ರೀಯತೆಗೂ ನಿಕಟ ಸಂಬಂಧವಿದೆ.

ಬ್ರಿಟಿಷ್ ಪ್ರಭುತ್ವದ ವಿರುದ್ಧ ಎತ್ತಿದ ದನಿ ಅಂದು 'ರಾಷ್ಟ್ರೀಯತೆ' ಎಂದು ಕರೆಯಿಸಿಕೊಂಡರೆ ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವ ನಮ್ಮದೇ ಆಗಿದ್ದರಿಂದ ಪ್ರಭುತ್ವದೊಂದಿಗೆ ವಿದೇಯತೆಯನ್ನು ಅಭಿವ್ಯಕ್ತಿಸುವ ರಾಷ್ಟ್ರೀಯತೆ ಸ್ವರೂಪ ಬಂದುದ್ದನ್ನು ಕಾಣುತ್ತೇವೆ. ಹೀಗೆ ರಾಷ್ಟ್ರೀಯತೆಯಲ್ಲಿ ಆಗುವ ಸ್ಥಿತ್ಯಂತರಗಳು ಕೆಲವೊಮ್ಮೆ ಭಾವನಾತ್ಮಕವಾಗಿ ಭೌಗೋಳಿಕವಾಗಿ ಸಂವಿಧಾನಾತ್ಮಕವಾಗಿ ರೂಪ ಪಡೆಯುತ್ತ ಹೋಗುತ್ತವೆ.

ರಾಷ್ಟ್ರೀಯವಾದ ಜಾಗತಿಕ ಸಂದರ್ಭದಲ್ಲಿ ಒಂದು ರಾಷ್ಟ್ರ ತನ್ನ ಹಿತರಕ್ಷಣೆಗೆ ಬದ್ಧವಾಗುವ ನಿಲುವು, ರಾಷ್ಟ್ರೀಯವಾದದ ಮೂಲದ್ರವ್ಯವಾಗುತ್ತವೆ. ಇದು ದೇಶೀವಾದದಂತೆ ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಪೂರಕವಾಗಿಯೇ ಎದ್ದು ನಿಲ್ಲುವಂತಹದ್ದಾಗಿರುತ್ತದೆ. ಇದು ಪೂರ್ವನಿರ್ಧಾರಿತ ಸ್ವರೂಪದ್ದಾಗಿರುವುದಿಲ್ಲ ಬದಲಾಗಿ ಎದುರಾದ ಸಂಘರ್ಷಾತ್ಮಕ ಸಂದರ್ಭಕ್ಕೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತುಡಿಯುವ ಮಾರ್ಗವಾಗಿದೆ. ಇದು ರಾಷ್ಟ್ರದ ರಾಜಕೀಯ ನೆಲೆಯಲ್ಲಿ ದೇಶ/ರಾಷ್ಟ್ರಪ್ರೇಮವನ್ನು ಉದ್ದೀಪನಗೊಳಿಸುವಂತಹದ್ದಾಗಿರುತ್ತದೆ.

ಒಂದು 'ರಾಷ್ಟ್ರ' ಎಂದು ಕರೆಯಿಸಿಕೊಳ್ಳಲು ರಾಜಕೀಯ ನೆಲೆಯಿಂದ ಅದಕ್ಕೆ ಅದರದ್ದೇ ಆದ ಗುಣ-ಸ್ವರೂಪ ಲಕ್ಷಣಗಳಿರುತ್ತವೆ. ರಾಷ್ಟ್ರದ ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರ ಪಕ್ಷಿ, ರಾಷ್ಟ್ರದ ಮಹಾಕಾವ್ಯ ಇಂಥ ಹಲವಾರು ನೆಲೆಯಿಂದ ಒಂದು ರಾಷ್ಟ್ರ, ತನ್ನ ಅಸ್ತಿತ್ವವನ್ನು ಘೋಷಿಸಿಕೊಂಡಿರುತ್ತದೆ. ಇದಕ್ಕೆ ಭೌಗೋಳಿಕ, ಜನಾಂಗಿಕ, ಸಾಂಸ್ಕೃತಿಕ ಅಂಶಗಳೂ ಅಂತರ್ಗತವಾಗಿರುತ್ತವೆ.

ದೇಶೀಯತೆ ಇಲ್ಲದೆ ರಾಷ್ಟ್ರೀಯತೆ ಪರಕೀಯವಾಗಿ ಬಿಡುತ್ತದೆ. ದೇಶೀಯತೆಯ ಅಡಿಪಾಯದಿಂದಲೇ ರಾಷ್ಟ್ರೀಯತೆ ರೂಪ ಪಡೆದಿರುತ್ತದೆ. ಈ ರಾಷ್ಟ್ರೀಯತೆ ಪರಿಕಲ್ಪನೆ ರಾಜಕಾರಣಕ್ಕೆ 'ಬಂಧ' ವ್ಯವಸ್ಥೆಯಿಂದ 'ಮುಕ್ತ' ವ್ಯವಸ್ಥೆಗೆ ಬರಲು ಅವಕಾಶವಿರುತ್ತದೆ. ಮತ್ತು ಪ್ರಜಾಪ್ರಭುತ್ವದಂತಹ ದೇಶದಲ್ಲಿ ಅದಕ್ಕೆ ಸಮಯ ಹಾಗೂ ಜನತೆಯ ಒತ್ತಡವನ್ನು ಅದು ನಿರೀಕ್ಷಿಸುತ್ತದೆ. ಹೀಗಾಗಿ ರಾಷ್ಟ್ರೀಯತೆಯ ಜೊತೆಗೆ ಕಾಣಿಸಿಕೊಳ್ಳುವಂತಹದು 'ರಾಷ್ಟ್ರೀಯವಾದ'.

ಇಂಥ ಸಂದರ್ಭದಲ್ಲಿ ನಾವು 'ರಾಷ್ಟ್ರೀಯವಾದ' ಎಂದರೆ 'ಸಂವಿಧಾನಿಕ ಸೃಜನಾತ್ಮಕ ಎಚ್ಚರ' ವೆಂದೇ ಗ್ರಹಿಸಬೇಕಾಗುತ್ತದೆ. ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಬದಲಾಗಬೇಕಾದ ತಿದ್ದುಪಡಿ, ಸೇರ್ಪಡಿಸುವಿಕೆ, ಪರಿವರ್ತಿಸುವಿಕೆ ಇವು ಪ್ರಧಾನ ವಾಗುವುದರೊಂದಿಗೆ ಅದನ್ನು ಕಾಲಕ್ಕೆ ತಕ್ಕಂತೆ ಪ್ರಸ್ತುತಗೊಳಿಸುವ ಅನಿವಾರ್ಯತೆ ಇರುತ್ತದೆ. ಹಾಗೆಯೇ ಇದಕ್ಕಿಂತಲೂ ಮುಖ್ಯವಾಗಿ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳ (ಒಡಂಬಡಿಕೆ) ನೀತಿ - ಧೋರಣೆಗಳು ಅಷ್ಟೇ ಪ್ರದಾನವಾಗುತ್ತವೆ. ಮುಂದುವರಿಯುವುಲಿದೆ)

ಸಮೃದ್ಧ ಕರ್ನಾಟಕ - ಸದೃಡ ಹೆಜ್ಜೆ

- ಕೃಷಿ - ಕೃಷಿ ವಲಯಕ್ಕೆ ಉತ್ತೇಜನ ನೀಡಲು 412 ಕೋಟಿ ರೂ.ಗಳ ಯೋಜನೆ ಅನುದಾನ 840 ಕೋಟಿ ರೂ.ಗಳಿಗೆ ಹೆಚ್ಚಳ.
- ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲಕ್ಕಾಗಿ 100 ಕೋಟಿ ರೂ.ಗಳ ಆವರ್ತನಿಧಿ.

ಗ್ರಾಮೀಣಾಭಿವೃದ್ಧಿ.

- ಗ್ರಾಮೀಣ ಜನತೆಯ ಬದುಕಿಗೆ ಹೊಸ ಚೇತನ ನೀಡಲು ರೂ.690 ಕೋಟಿಗಳ ಜಲಾಶಯನ ಯೋಜನೆ. ರೂ.670 ಕೋಟಿ ವೆಚ್ಚದಲ್ಲಿ ಕೆರೆ ನಿರ್ವಹಣಾ ಯೋಜನೆ ಮತ್ತು ರೂ.1035.00ಕೋಟಿ ವೆಚ್ಚದಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆ ಅನುಷ್ಠಾನ.
- ಹಿಂದುಳಿದ ವರ್ಗಗಳ ಸ್ವಯಂ ಉದ್ಯೋಗಕ್ಕಾಗಿ ರೂ.20 ಕೋಟಿಯೊಂದಿಗೆ ಶ್ರಮಶಕ್ತಿ ಯೋಜನೆ.

ಪ್ರಾಥಮಿಕ ಶಿಕ್ಷಣ

- ಅಕ್ಷರ ದಾಸೋಹ ಸರ್ಕಾರ ಮತ್ತು ಅನುದಾನಿತ ಶಾಲೆಗಳಲ್ಲಿರುವ 7ನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೂ ವಿಸ್ತರಣೆ. ಹೆಚ್ಚುವರಿಯಾಗಿ 25 ಲಕ್ಷ ಶಾಲಾ ಮಕ್ಕಳು ಫಲಾನುಭವಿಗಳು.
- **ಆರೋಗ್ಯ**

ಮುಂದಿನ 5 ವರ್ಷಗಳಲ್ಲಿ ರೂ.765 ಕೋಟಿ ವೆಚ್ಚದಲ್ಲಿ ಆರೋಗ್ಯ ಮತ್ತು ಪೌಷ್ಠಿಕಾಂಶ ಯೋಜನೆಯ ಅನುಷ್ಠಾನ, ಸಾರ್ವಜನಿಕ ಆರೋಗ್ಯ ರಕ್ಷಣೆಗೆ ಹೆಚ್ಚಿನ ಸೌಲಭ್ಯ.

- **ನೀರಾವರಿ**

ಕೃಷ್ಣಾ ಮೇಲ್ದಂಡೆ ಯೋಜನೆಯಡಿ ವಿವಿಧ ಹಂತದಲ್ಲಿರುವ ಎಲ್ಲಾ ನೀರಾವರಿ ಕಾಮಗಾರಿಗಳು ಡಿಸೆಂಬರ್ 2005ರೊಳಗೆ ಪೂರ್ಣ.

- **ಸಮಾಜಕಲ್ಯಾಣ**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಣ್ಣ ರೈತರಿಗೆ ಮತ್ತಷ್ಟು ಪ್ರೋತ್ಸಾಹ ನೀಡಲು ಗಂಗಾ ಕಲ್ಯಾಣ ಕಾರ್ಯಕ್ರಮದಡಿ ರೂ.13 ಕೋಟಿಗಳ ಹೆಚ್ಚುವರಿ ಅನುದಾನ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಯೋಜನೆ ಅನುದಾನ ರೂ.435 ಕೋಟಿ ಏರಿಕೆ.

- **ಕನ್ನಡ ಮತ್ತು ಸಂಸ್ಕೃತಿ**

ಈ ನಾಡಿನ ನೆಲ. ಜಲ ಮತ್ತು ವಿಶಿಷ್ಟ ಸಂಸ್ಕೃತಿಯ ಪಾಲನೆ ಪೋಷಣೆ ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು. ಐತಿಹಾಸಿಕ ಸ್ಥಳಗಳಾದ ಮೈಸೂರು. ಶ್ರೀರಂಗಪಟ್ಟಣ, ಬೀದರ್, ಬಿಜಾಪುರ, ಗುಲ್ಬರ್ಗಾ ಮತ್ತು ಕಿತ್ತೂರು ಪಟ್ಟಣಗಳನ್ನು ಪರಂಪರೆ ಕೇಂದ್ರ ಗಳೆಂದು ಘೋಷಿಸಲಾಗುವುದು. ಕೂಡಲ ಸಂಗಮ ಮಾದರಿಯಲ್ಲೇ ಬಸವ ಕಲ್ಯಾಣದ ಅಭಿವೃದ್ಧಿಗೆ ಕ್ರಮ

ಪ್ರಾದೇಶಿಕ ಅಸಮಾನತೆ ನಿವಾರಣೆಯತ್ತ ದಿಟ್ಟ ಹೆಜ್ಜೆ

- ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ಶ್ರೀ ನಂಜುಂಡಪ್ಪ ಸಮಿತಿ ಮಾಡಿರುವ ಶಿಫಾರಸ್ಸುಗಳು ಹಂತಹಂತವಾಗಿ ಜಾರಿ.
- ಉತ್ತರ ಕರ್ನಾಟಕದ ಅಭಿವೃದ್ಧಿರೂ.7,170 ಕೋಟಿಗಳ ಬೃಹತ್ ಯೋಜನಾ ಅನುದಾನ, ಇದು ರಾಜ್ಯದ ಒಟ್ಟಾರೆ ಯೋಜನಾ ಗಾತ್ರದ ಶೇ.54 ರಷ್ಟು
- ಉತ್ತರ ಕರ್ನಾಟಕದ ತೀರ ಹಿಂದುಳಿದ 37 ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ
- ಉತ್ತರ ಕರ್ನಾಟಕವೂ ಸೇರಿದಂತೆ ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಅವುಗಳಿಗೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ 371ನೇ ವಿಧಿಗೆ ತದ್ದುಪಡಿ ತರಲು ಕೇಂದ್ರಕ್ಕೆ ಒತ್ತಾಯ.

ರಾಷ್ಟ್ರದ ಸಂಪದಭಿವೃದ್ಧಿಯಲ್ಲಿ ನಾವೆಲ್ಲರೂ ಭಾಗಿಗಳು.

ಕರ್ನಾಟಕ ವಾರ್ತೆ

ಆರು ವರ್ಷಗಳ ಯಶೋಗಾಥೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

೮೦೦ ಪದಗಳ ದಲಿತ್ ಡೈರಿ ಒಂದು ಸಣ್ಣ ವಿಚಾರವಾಗಿಯಷ್ಟೆ ಆರಂಭಗೊಂಡದ್ದು. ಆಗ, ದಿ ಪಾಯನೀರ್‌ನ ಮುಖ್ಯ ಸಂಪಾದಕ ಚಂದನ್ ಮಿತ್ರ ಅಥವಾ ಅಭಿಜಿತ್ ಘೋಷ್ ಈ ವಿಚಾರವನ್ನು ನನಗೆ ನೀಡಿದಾಗ, ಅವರ‍್ಯಾರಿಗೂ ಇದೊಂದು ಚಾರಿತ್ರಿಕ ತಿರುವೆಂದು ತಿಳಿದಿರಲಿಲ್ಲ. ಆದರೆ ಏನೋ ಮಹತ್ವವಾದೊಂದು ಸಂಭವಿಸುತ್ತಿದೆಯೆಂದು ನನಗೆ ಭಾಸವಾಗಿತ್ತು. ಭಾರತದಲ್ಲೇ ಇದೊಂದು ಮೊದಲ ದಲಿತ ಕಾಲಂ. ಇದೊಂದು ಆಂದೋಲನವನ್ನು ಮಾಡಲು ಆರಂಭವಾಗಿದೆಯಷ್ಟೆ. ಆಗ ಡಾ॥ ಮಿತ್ರಾ ಅಥವಾ ಅಭಿಜಿತ್ ನನ್ನೊಡನೆ ಸಹಮತವನ್ನೇನೂ ಹೊಂದಿರಲಿಲ್ಲ. "ಮಹಾರಾಷ್ಟ್ರ, ದಕ್ಷಿಣಭಾರತ ಅಥವಾ ಪಶ್ಚಿಮ ಬಂಗಾಳಗಳಲ್ಲಿ ದಲಿತ ಕಾಲಂ ಬರಹಗಾರರು ಬೇಕಾದಷ್ಟು ಮಂದಿಯಿದ್ದಾರೆ" ಎಂದು ಅವರಿಬ್ಬರೂ ವಾದಿಸಿದ್ದರು. ಹೀಗಿದ್ದಾಗ್ಯೂ ೬ ವರ್ಷಗಳ ನಂತರವೂ ದಲಿತ್‌ಡೈರಿಯೊಂದೇ ದಲಿತ ಕಾಲಂ ಆಗಿ ನಿಂತಿರುವುದು.

೧೯೯೯ ಏಪ್ರಿಲ್ ೪ ರಂದು ದಲಿತ್ ಡೈರಿಯು ಉದಯಿಸಿತು. ಇದೊಂದು ಸಣ್ಣ ಪ್ರಯತ್ನವಾಗಿತ್ತಷ್ಟೆ. ಆದರೀಗ ಅದು ತನ್ನ ಓದುಗ ವರ್ಗವನ್ನು ವಿಸ್ತರಿಸಿಕೊಂಡಿದೆಯಲ್ಲದೆ, ಭಾಷೆ–ಗಡಿಗಳನ್ನು ಮೀರಿ ವ್ಯಾಪಿಸಿಬಿಟ್ಟಿದೆ. ಆಂಧ್ರಾದ **14** ನಗರಗಳಲ್ಲಿ ಪ್ರಕಟವಾಗುತ್ತಿರುವ ತೆಲುಗು ದಿನಪತ್ರಿಕೆ "ವಾರ್ತಾ" ದಲ್ಲಿ ದಲಿತ್ ಡೈರಿ ಕಾಲಂ ಪ್ರಕಟವಾಗಿ, ಬೆಂಗಳೂರಿನ ಕನ್ನಡದ ಮಾಸಪತ್ರಿಕೆ "ಸಂವಾದ"ದಲ್ಲೂ ಮರು ಮುದ್ರಣವನ್ನು ಕಾಣುತ್ತಿದೆ. ಹಾಗೆಯೇ ಮಲೆಯಾಳಂ ವಾರಪತ್ರಿಕೆಯಲ್ಲೂ ಬರುತ್ತಿದೆ. ಅಲ್ಲದೆ, ದಲಿತ್ ಡೈರಿಯ ಕೆಲವು ಲೇಖನಗಳು ತಮಿಳಲ್ಲೂ ಕಾಣಿಸಿಕೊಳ್ಳುತ್ತಿವೆ.

ಅನು : ಡಿ. ಡೊಮಿನಿಕ್

೧೯೯೯ ಏಪ್ರಿಲ್ ೪ ರಂದು *ದಲಿತ್ ಡೈರಿಯು* ಉದಯಿಸಿತು. ಇದೊಂದು ಸಣ್ಣ ಪ್ರಯತ್ನವಾಗಿತ್ತಷ್ಟೆ. ಆದರೀಗ ಅದು ತನ್ನ ಓದುಗ ವರ್ಗವನ್ನು ವಿಸ್ತರಿಸಿಕೊಂಡಿದೆಯಲ್ಲದೆ, ಭಾಷೆ–ಗಡಿಗಳನ್ನು ಮೀರಿ ವ್ಯಾಪಿಸಿಬಿಟ್ಟಿದೆ. ಆಂಧ್ರಾದ 14 ನಗರಗಳಲ್ಲಿ ಪ್ರಕಟವಾಗುತ್ತಿರುವ ತೆಲುಗು ದಿನಪತ್ರಿಕೆ *"ವಾರ್ತಾ"* ದಲ್ಲಿ ದಲಿತ್ ಡೈರಿ ಕಾಲಂ ಪ್ರಕಟವಾಗಿ, ಬೆಂಗಳೂರಿನ ಕನ್ನಡದ ಮಾಸಪತ್ರಿಕೆ *"ಸಂವಾದ"*ದಲ್ಲೂ ಮರು ಮುದ್ರಣವನ್ನು ಕಾಣುತ್ತಿದೆ. ಹಾಗೆಯೇ ಮಲೆಯಾಳಂ ವಾರಪತ್ರಿಕೆಯಲ್ಲೂ ಬರುತ್ತಿದೆ. ಅಲ್ಲದೆ, ದಲಿತ್ ಡೈರಿಯ ಕೆಲವು ಲೇಖನಗಳು ತಮಿಳಲ್ಲೂ ಕಾಣಿಸಿಕೊಳ್ಳುತ್ತಿವೆ.

ಎರಡು ವೆಬ್‌ಸೈಟ್‌ಗಳಾದ www.ambedkar.org ಹಾಗೂ www.countercurrents.org ಪ್ರತಿವಾರವೂ ದಲಿತ್‌ಡೈರಿಯನ್ನು ಪ್ರಕಟಿಸುತ್ತಿವೆ. www.ambedkar.orgಯು ಪ್ರೀತಿಯಿಂದ ಚಂದ್ರಭಾನ್ ಎಂಬ ಉಪ–ವಿಭಾಗವನ್ನು ತೆರೆದಿದ್ದು, ಓದುಗರಿಗೆ ನೇರ ಪ್ರವೇಶವನ್ನು ಒದಗಿಸುತ್ತಿದೆ. CBC ಕೆನಡಾದ ಜನಪ್ರಿಯ ರೇಡಿಯೋ *ದಿ ಪಾಯನಿಯರ್* (ದಲಿತ್ ಡೈರಿ)ಗೆ ನೇರ ಸಂಪರ್ಕವನ್ನು ಕಲ್ಪಿಸುವ ವೆಬ್‌ಸೈಟನ್ನು ಹೊಂದಿದೆ. www.sify.com ನ್ನು ಒಳಗೊಂಡಂತೆ ಜಗತ್ತಿನ ಸುಮಾರು 50 ವೆಬ್‌ಸೈಟ್‌ಗಳನ್ನು ನಾನು ಗಮನಿಸಿದ್ದೇನೆ. ಅಲ್ಲೂ ಸಹ ದಲಿತ್ ಡೈರಿಯ ಲೇಖನಗಳು ವಿರಳವಾಗಿಯಾದರೂ ಪ್ರಕಟಗೊಳ್ಳುತ್ತಿವೆ.

ಇದಲ್ಲದೆ ದಲಿತ್ ಡೈರಿ ಕಾಲಂ ಇತರೆ ಪರಿಣಾಮಗಳಿಗೂ ಕಾರಣವಾಗಿದೆ. ಮುಂಬೈ ಮತ್ತು ಅಹಮದಾಬಾದ್‌ಗಳಲ್ಲಿ ಪ್ರಕಟವಾಗುವ *ನವಭಾರತ್ ಟೈಮ್ಸ್* ಎಂಬ ಹಿಂದಿ ದಿನಪತ್ರಿಕೆಯಲ್ಲಿ ಎರಡು ವಾರಗಳಿಗೊಮ್ಮೆ ದಲಿತ್ ಡೈರಿ ಪ್ರಕಟಿಸುವ ಒಪ್ಪಂದವನ್ನು ಮಾಡಿಕೊಂಡಿದ್ದೇನೆ. ಇತರ ಪ್ರಕಟಣೆಗಳಲ್ಲೂ ನಾನು ಬರೆಯುತ್ತಿದ್ದೇನೆ. ಕಳೆದ ಆರು ವರ್ಷಗಳಲ್ಲಿ ಜಾಗತಿಕ ಮಟ್ಟದ ಮಾಧ್ಯಮ ಸಂಸ್ಥೆಗಳಾದ *ದಿ ವಾಷಿಂಗ್‌ಟನ್ ಪೋಸ್ಟ್, ನ್ಯಾಷನಲ್ ಜಿಯೋಗ್ರಫಿ ಮ್ಯಾಗಜಿನ್, ದಿ ಗಾರ್ಡಿಯನ್, ದಿ ಎಕನೋಮಿಸ್ಟ್, ಬಿಬಿಸಿ, ಸಿಬಿಸಿ* ಮುಂತಾದವು ನನ್ನ ಸಂದರ್ಶನಗಳನ್ನು ಪ್ರಕಟಿಸಿವೆ. ಫ್ರಾನ್ಸ್‌ನ ಪ್ರಸಿದ್ಧ ಚಾನೆಲ್ *ಫ್ರಾನ್ಸ್–2* ಹದಿನೈದು ನಿಮಿಷಗಳ ಸಾಕ್ಷ್ಯಚಿತ್ರವನ್ನು ಮಾಡಿದೆ. ನನ್ನ ಇತ್ತೀಚಿನ ಲೇಖನ *"ಮೀಸಲಾತಿಗಾಗಿ ಒಂದು ವಾಣಿಜ್ಯ ಪ್ರಕರಣ"* ಯೂರೋಪಿನ ಎಲ್ಲಾ ಭಾಷೆಗಳಿಗೂ ಅನುವಾದಗೊಂಡಿದೆ. ದೆಹಲಿಯ ಎಲ್ಲಾ ದಿನಪತ್ರಿಕೆಗಳು ಮತ್ತು ಟಿ.ವಿ. ಚಾನೆಲ್‌ಗಳು ನನ್ನ ಸಂದರ್ಶನಗಳನ್ನು ಪ್ರಕಟಿಸಿವೆ ಎಂದು ಮತ್ತೆ ಹೇಳಬೇಕಿಲ್ಲ. ಚಾರಿತ್ರಿಕ ಭೋಪಾಲ್ ಸಮ್ಮೇಳನವು ದಲಿತ್ ಡೈರಿಯ ಲೇಖನಗಳಿಂದಲೇ ಪ್ರೇರಣೆಗೊಂಡದ್ದು.

800 ಪದಗಳ ದಲಿತ್ ಡೈರಿ ಒಂದು ಸಣ್ಣ ವಿಚಾರವಾಗಿಯಷ್ಟೆ ಆರಂಭಗೊಂಡದ್ದು. ಆಗ, ದಿ ಪಾಯನೀರ್‌ನ ಮುಖ್ಯ ಸಂಪಾದಕ ಚಂದನ್ ಮಿತ್ರ ಅಥವಾ ಅಭಿಜಿತ್ ಘೋಷ್ ಈ ವಿಚಾರವನ್ನು ನನಗೆ ನೀಡಿದಾಗ, ಅವರ‍್ಯಾರಿಗೂ ಇದೊಂದು ಚಾರಿತ್ರಿಕ ತಿರುವೆಂದು ತಿಳಿದಿರಲಿಲ್ಲ. ಆದರೆ ಏನೋ ಮಹತ್ವವಾದೊಂದು ಸಂಭವಿಸುತ್ತಿದೆಯೆಂದು ನನಗೆ ಭಾಸವಾಗಿತ್ತು. ಭಾರತದಲ್ಲೇ ಇದೊಂದು ಮೊದಲ ದಲಿತ ಕಾಲಂ. ಇದೊಂದು ಆಂದೋಲನವನ್ನು ಮಾಡಲು ಆರಂಭವಾಗಿದೆಯಷ್ಟೆ. ಆಗ ಡಾ॥ ಮಿತ್ರಾ ಅಥವಾ ಅಭಿಜಿತ್ ನನ್ನೊಡನೆ ಸಹಮತವನ್ನೇನೂ ಹೊಂದಿರಲಿಲ್ಲ. "ಮಹಾರಾಷ್ಟ್ರ ದಕ್ಷಿಣಭಾರತ ಅಥವಾ ಪಶ್ಚಿಮ ಬಂಗಾಳಗಳಲ್ಲಿ ದಲಿತ ಕಾಲಂ ಬರಹಗಾರರು ಬೇಕಾದಷ್ಟು ಮಂದಿಯಿದ್ದಾರೆ" ಎಂದು ಅವರಿಬ್ಬರೂ ವಾದಿಸಿದ್ದರು. ಹೀಗಿದ್ದಾಗ್ಯೂ 6 ವರ್ಷಗಳ ನಂತರವೂ ದಲಿತ್‌ಡೈರಿಯೊಂದೇ ದಲಿತ ಕಾಲಂ ಆಗಿ ನಿಂತಿರುವುದು.

ವಾರದ ಈ ದಲಿತ ಧ್ವನಿಯು ಜಗತ್ತಿನಾದ್ಯಂತ ಮಿಲಿಯಗಟ್ಟಲೆ ಓದುಗರನ್ನು ಹೊಂದಿದೆಯಾದ್ದರಿಂದ ನಾನು ಇವರಿಗೆ ಜವಾಬ್ದಾರನಾಗಿದ್ದೇನೆ. ಮೊದಲನೆಯದಾಗಿ ನನ್ನ ಸ್ನೇಹಿತ ಡಿ.ಶ್ಯಾಮ್‌ಬಾಬುನ ಮಾತುಗಳಲ್ಲಿ "ದಲಿತನೊಬ್ಬನಿಗೆ ಅವಕಾಶವೊಂದು ದೊರೆತಲ್ಲಿ ಆತ ಕಾಲಮಿಸ್ಟ್‌ನಾಗಿ ತನ್ನ ಸಾಮರ್ಥ್ಯವನ್ನು ನಿರೂಪಿಸಬಲ್ಲ" ನೆಂಬುದನ್ನು ನಾನು ಸಾಧಿಸಬೇಕಿತ್ತು. ಏಪ್ರಿಲ್ 1999ರಿಂದ ದಕ್ಷಿಣ ಆಫ್ರಿಕಾ, ಅಮೇರಿಕಾ, ಕೆನಡಾ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ನಾನು ಪ್ರಯಾಣಿಸುತ್ತಿರುವಾಗಲೂ ವಾರದ ಈ ದಲಿತ್ ಡೈರಿಯನ್ನು ಎಂದೂ ನಿಲ್ಲಿಸಲಿಲ್ಲ. ಒಂದೇ ಒಂದು ಸಲ ನಾನು ಆ ಜಾಗವನ್ನು ನನ್ನ ಗೆಳೆಯನಿಗೆ ಬಿಟ್ಟುಕೊಟ್ಟಾಗಲಷ್ಟೇ ನಾನು ಬರೆಯದೆ ಇದ್ದದ್ದು.

ಈ ಆರು ವರ್ಷಗಳಲ್ಲಿ ನನ್ನದೇ ಆದ ಕೆಲವು ವಿಚಾರಗಳನ್ನು ನಾನು ಪರಿಶೀಲಿಸಬೇಕಿತ್ತು. ಸಾಮಾಜಿಕ ದ್ವಂದ್ವಗಳು ಈಗ ಪಲ್ಲಟಗೊಂಡಿವೆ. ಈ ಯುಗ ದಲಿತ್ Vs ಶೂದ್ರರದ್ದಾಗಿದೆ. ದಲಿತ ಚಳವಳಿಗಳು ಈ ವಾಸ್ತವವನ್ನು ಒಪ್ಪಿ, ತಮ್ಮ ಕಾರ್ಯತಂತ್ರಗಳನ್ನು ಮರು ರೂಪಿಸಿಕೊಳ್ಳಬೇಕಾಗಿವೆ.

ದೆಹಲಿಯ ಬುದ್ಧಿಜೀವಿಗಳೊಡನೆ ಏಪ್ರಿಲ್ 14, 1997ರಲ್ಲಿ ನಾನು ಈ ವಿಚಾರವನ್ನು ಮಂಡಿಸಿದೆ. ದಿ ಎಕನಾಮಿಕ್ ಟೈಮ್ಸ್ ಆಗಸ್ಟ್ 16, 1997ರಲ್ಲಿ ಈ ವಿಚಾರದ ಕುರಿತು ನಾನು ನೀಡಿದ ಉಪನ್ಯಾಸವನ್ನು ಪ್ರಕಟಿಸಿತ್ತು. ಆ ಉಪನ್ಯಾಸದಲ್ಲಿ ದಲಿತ ಒಂದು ಸಂಕ್ರಮಣಾವಸ್ಥೆಯಲ್ಲಿದ್ದು ಹೊಸ

ಸಮಾಜೋ-ರಾಜಕೀಯ ಹೊಂದಾಣಿಕೆಗೆ ತೊಡಗುತ್ತಿದ್ದಾರೆಂದು ಬಾದಿಸಿದ್ದೆ.

ಹೇಗೆ ಉಗಿಬಂಡಿಯ ಆವಿಷ್ಕಾರ ಕೈಗಾರಿಕಾಕ್ರಾಂತಿಯನ್ನು ಮುನ್ಸೂಚಿಸಿತ್ತೋ ಹಾಗೆಯೇ ಇಂಟರ್‌ನೆಟ್ ಜಾಗತೀಕರಣವನ್ನು ಯಾರೂ ತಡೆಯದಂತೆ ಮಾಡಿತ್ತು. ಯಾವುದನ್ನು ತಡೆಯಲು ಸಾಧ್ಯವಿಲ್ಲವೋ ಅದರಲ್ಲಿ ಶಕ್ತಿ ವ್ಯಯ ಮಾಡದೆ ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ದಲಿತರು ತಮ್ಮ ಜಾಗವನ್ನು ಗಳಿಸಿಕೊಳ್ಳಬೇಕಾಗಿದೆ.

ಅಮೇರಿಕಾದ "ಪಾಲುದಾರಿಕೆಯಲ್ಲಿ ವೈವಿಧ್ಯತೆ" ಎಂಬ ಸಾರ್ವಜನಿಕ ನೀತಿಯು ಅನುಸರಿಸಲು ಅರ್ಹವಾದುದು. 1997 ಆಗಸ್ಟ್ 14 ರಂದು ನಾನೇನು ವಾದಿಸಿದ್ದೆನೋ ಅದನ್ನೆ ಈಗ ಮಾಯಾವತಿ ಮತ್ತು ಪಾಸ್ವಾನ್ ಅನುಸರಿಸುತ್ತಿದ್ದಾರೆ. ಯಾವುದೇ ದಲಿತ ಚಳವಳಿ ದಿಟ್ಟಹೆಜ್ಜೆ ಇಡಬೇಕಾದರೆ ದಲಿತ್ ಡೈರಿಯ ವಿಚಾರಗಳನ್ನು ಗಮನಿಸಲೇಬೇಕಾಗಿದೆ. ಇಲ್ಲವಾದಲ್ಲಿ ಮತ್ತೆ ಅದೇ ಎಡೆಬಿಸಿದುಕೊಳ್ಳುವುದು ಸಾಗುತ್ತಲೇ ಇರುತ್ತದೆ.

ಉತ್ತರ ಪ್ರದೇಶದಲ್ಲಿ "ವೈವಿಧ್ಯತೆ"ಯ ನೀತಿಯ ಜಾರಿಗಾಗಿ ದೊಡ್ಡ ಚಳವಳಿಯೇ ನಡೆದಿದೆ. ಈ ನೀತಿ ಹಾಗೂ ದಲಿತ್ Vs ಶೂದ್ರ ಸಿದ್ಧಾಂತಗಳು ಅಂಬೇಡ್ಕರವರಲ್ಲೇ ಹುಟ್ಟನ್ನು ಕಾಣುತ್ತವೆ ಎಂದು ವಿವರಿಸಬೇಕಾಗಿಲ್ಲ. ಇಂದು ನನ್ನ ಸಾಧನೆಯ ಬಗ್ಗೆ ಸಂತೃಪ್ತಿ ಇದೆ.

೨

ಅಮೇರಿಕಾದ ಕಪ್ಪು ಬೂರ್ಸ್ವಾಗಳು 'ಬ್ಲಾಕ್ ಬೂರ್ಸ್ವಾ' ಎಂಬ ವಿವಾದಾತ್ಮಕ ಪುಸ್ತಕದ ಪ್ರಕಟನೆಯ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಎಡ್ವರ್ಡ್ ಫ್ರಾಂಕ್ಲಿನ್ ಫ್ರೇಜ್ ಹಾವರ್ಡ್ ವಿಶ್ವವಿದ್ಯಾಲಯದ ಒಬ್ಬ ಪ್ರಸಿದ್ಧ ಸಮಾಜಶಾಸ್ತ್ರಜ್ಞ. ಆತ ಒಬ್ಬ ಹೆಸರಾಂತ ಕಪ್ಪು ಜನರ ಬುದ್ಧಿಜೀವಿ ಎಂದು ಪರಿಗಣಿತನಾಗದೇ ಉಳಿಯಲು ಮುಖ್ಯ ಕಾರಣವಾದುದೇ ಈ ಬ್ಲಾಕ್ ಬೂರ್ಸ್ವಾ ಕೃತಿ. ಈತ ಮಧ್ಯಮವರ್ಗದವರಾದ ಕಪ್ಪು ಜನರನ್ನು ತನಗರಿವಿಲ್ಲದೆಯೇ ಅಣಕ ಮಾಡಿದ್ದ.

ತನ್ನ ಕೃತಿಯಲ್ಲಿ ಫ್ರೇಜರ್ ಈ ಕಪ್ಪು ಬೂರ್ಸ್ವಾಗಳನ್ನು ಹೀಗೆಂದು ಜರಿಯುತ್ತಾನೆ : 'ಬಿಳಿ ಕೊರಳು ಪಟ್ಟಿಯ ಈ ಕಾರ್ಮಿಕರು ಆಫ್ರಿಕಾ ಮೂಲಕ ಕಾರ್ಮಿಕ ವರ್ಗದಿಂದ ಪ್ರತ್ಯೇಕವಾಗಿ ಬಿಳಿಯ ಶ್ರೀಮಂತ ವರ್ಗದ ಅನುಯಾಯಿಗಳಾಗಲು ತೀವ್ರವಾಗಿ ಪ್ರೇರಿತರಾಗಿದ್ದಾರೆ.' ಆತನ ಪ್ರಕಾರ, "ಈ ಕಪ್ಪು ಬೂರ್ಸ್ವಾ ವರ್ಗವು ತನ್ನ ಮೂಲ ಜನಾಂಗೀಯ ಪರಂಪರೆಯಿಂದ ಬೇರ್ಪಟ್ಟಿದ್ದಾರೆ. ಇದರಿಂದಾಗಿ ನೀಗ್ರೋ ಸಂಸ್ಕೃತಿಯಾಗಲಿ ಅಥವಾ ಬಿಳಿಯರ ಸಂಸ್ಕೃತಿಯಾಗಲೀ ಇಲ್ಲದಂತಾಗಿದ್ದಾರೆ.' ಈ ಹೇಳಿಕೆಯನ್ನು ಎರಡು ರೀತಿಯಲ್ಲಿ ವಿಶ್ಲೇಷಿಸಬಹುದು. 1. ಈ ಕಪ್ಪು ಮಧ್ಯಮ ವರ್ಗವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡು ತಮ್ಮ ಮೂಲಕ್ಕೆ ಬದ್ಧರಾಗಿ ಕಪ್ಪು ಕಾರ್ಮಿಕ ವರ್ಗಕ್ಕೆ ಹಿಂತಿರುಗಲು ಕರೆ ನೀಡುತ್ತಿದ್ದಾರೆ. 2. ಆತ ನಿಜವಾಗಿಯೂ ಒಬ್ಬ ದಾರ್ಶನಿಕನಾಗಿರದೆ ಪ್ರತಿಗಾಮಿಯಾಗಿ ಕಾಣಿಸಿಕೊಳ್ಳುತ್ತಿದ್ದಾನೆ. ಏನಾದರಿರಲಿ ಆತ ಎಡಪಂಥೀಯನಾಗಿದ್ದರಿಂದ ಆತನನ್ನು ದೆವ್ವ ಹಿಡಿದವನಂತೆ ಚಿತ್ರಿಸಲಾಗಿದೆ. ಆದರೆ ಕಪ್ಪು ಮಧ್ಯಮ ವರ್ಗ ಮಾತ್ರ ಆತನ ವಿಶ್ಲೇಷಣೆಯಿಂದ ತೀವ್ರವಾದ ಪರಿಣಾಮಕ್ಕೆ ಒಳಗಾಯಿತು ಎನ್ನುವುದರಲ್ಲಿ ಸಂದೇಹವಿಲ್ಲ.

೫೦ ವರ್ಷಗಳ ನಂತರ ಆತನ ಕೃತಿ "Notorius" ಎಂಬ ಅನ್ವರ್ಥ ನಾಮವನ್ನು ಈ ಕಪ್ಪು ಬೂರ್ಸ್ವಾ ವರ್ಗದಿಂದ ಪಡೆದುಕೊಂಡಿದೆ. ಆದರೆ

ಮಧ್ಯಮ ವರ್ಗದ ಹೀಗೊಂದು ಸಂಗತಿ

ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಅಮೇರಿಕಾದಲ್ಲಿ ಇನ್ನೂ ಜನಾಂಗೀಯ ದೃಷ್ಟಿ ಬೇರು ಬಿಟ್ಟಿದೆ. ಅಮೇರಿಕಾದ ಅತ್ಯಂತ ಬಡಜನರೆಂದರೆ ಕಪ್ಪು ಜನರೇ ಆಗಿದ್ದಾರೆ. ಅಮೇರಿಕಾದ ಜೈಲುಗಳಲ್ಲಿ ಅನೇಕ ಮಂದಿ ಕಪ್ಪು ಜನರೇ ಇದ್ದಾರೆ. ಹೀಗಿರುವಾಗಲೂ ಅಮೇರಿಕಾದ ಕಪ್ಪುಜನ ತಮ್ಮ ದ್ವಂದ್ವಗಳಿಂದ ಹೊರಗೆ ಬರುವಲ್ಲಿ ಯಶಸ್ವಿಯಾಗಿದ್ದಾರೆ. ಭಾರತದ ದಲಿತ ಚಳವಳಿ ಇನ್ನೂ ಈ ಸವಾಲಿನಿಂದ ಹೊರಬಂದಿಲ್ಲ.

"ಮಾಂತ್ರಿಕ ದಂಡ ಶಕ್ತಿಯಿಂದ ಎಲ್ಲಾ ಕಪ್ಪುಜನ ಸಮಾನತೆಯನ್ನು ಪಡೆಯುವವರೆಗೆ ದುಡಿಯುವ ವರ್ಗವಾಗಿಯೇ ಉಳಿದುಕೊಳ್ಳಬೇಕೇ ? ಅಥವಾ ಒಂದು ಕಪ್ಪು ಬೂರ್ಸ್ವಾ ವರ್ಗವನ್ನು ಹುಟ್ಟು ಹಾಕಿ, ಅದು ಸಮಾನತೆಯನ್ನು ತರುವ ಪ್ರತಿನಿಧಿಯಾಗಿ ಕ್ರಿಯಾಶೀಲವಾಗುವಂತೆ

ಮಾಡಬಹುದಲ್ಲವೇ ?" ಈ ಎರಡನೇ ಪ್ರಮೇಯವನ್ನು ಅವರು ಒಪ್ಪಿದುದರಿಂದ ಇಂದು ಕಪ್ಪು ಬೂರ್ಸ್ವಾ ವರ್ಗವೊಂದು ಉದಯಿಸಿದೆ.

ಅಮೇರಿಕಾದಲ್ಲಿ ಅತ್ಯಂತ ಜನಪ್ರಿಯ ಜರ್ನಲ್ ಎಂದು ಹೆಸರಾಗಿರುವ "ದಿ ಬ್ಲಾಕ್ ಎಂಟರ್‌ಪ್ರೈಸಸ್' ವರದಿ ಮಾಡಿರುವ ಪ್ರಕಾರ ಎರಡು ಮುಖ್ಯ ಬ್ಲಾಕ್ ಕೈಗಾರಿಕೆಗಳಾದ : ಪ್ರೆಸ್ಟೀಜ್ ಆಟೋಮೋಟಿವ್ ಅಂಡ್ ಮಾರ್ಷ್ - ಹೊಡ್ಗೆ ಆಟೋಮೋಟಿವ್ ಕಂಪನಿಗಳು ೨೦೦೪ರಲ್ಲಿ ಒಟ್ಟು ೧.೩೨ ಬಿಲಿಯನ್ ವಹಿವಾಟನ್ನು ಗಳಿಸಿದ್ದವು. ಈ ಎರಡು ಕಂಪನಿಗಳು ಕಪ್ಪುಜನರ ಯಂತ್ರೋದ್ಯಮ ಕೈಗಾರಿಕೆಯಲ್ಲಿ ಖ್ಯಾತಿ ಗಳಿಸಿದವೆಂದು ದಿ ಬ್ಲಾಕ್ ಎಂಟರ್‌ಪ್ರೈಸಸ್ ವರದಿ ಮಾಡಿತ್ತು.

೨೦೦೩ ರಲ್ಲಿ ಭಾರತದ ಬಜಾಜ್ ಆಟೋ ಕಂಪನಿಯ ವಹಿವಾಟಿನ ಗಳಿಕೆ ೧.೧೫ ಬಿಲಿಯನ್ ಡಾಲರ್ ಆಗಿತ್ತು. ಅಂದರೆ ಈ ಬಜಾಜ್ ಆಟೋಗಿಂತ ಕಪ್ಪುಜನರ ಆ ಎರಡು ಕಂಪನಿಗಳು ಬೃಹತ್ತಾಗಿ ಬೆಳೆದಿದ್ದವು. ಈ ಬಜಾಜ್ ಕಂಪನಿ ಯಾವುದೇ ಸಕಾರಾತ್ಮಕ ಮೀಸಲಾತಿಯನ್ನು ಒಪ್ಪುವುದಿಲ್ಲ.

೨೦೦೫ರಲ್ಲಿ ಮಹೀಂದ್ರ ಮತ್ತು ಮಹೀಂದ್ರ ಕಂಪನಿಯು ೨.೨ ಬಿಲಿಯನ್ ಡಾಲರ್ ವಹಿವಾಟನ್ನು ನಡೆಸಿತ್ತು. ಆದರೆ ಅಮೇರಿಕಾದ ಮುಂಚೂಣಿಯಲ್ಲಿರುವ ಕಪ್ಪು ಜನರ ೫ ಉದ್ಯಮಗಳು ಅದೇ ವರ್ಷದಲ್ಲಿ ೨.೩೭ ಬಿಲಿಯನ್ ವಹಿವಾಟನ್ನು ಗಳಿಸಿದ್ದವು. ಬಜಾಜ್‌ನಂತೆಯೇ ಮಹೀಂದ್ರ ಮತ್ತು ಮಹೀಂದ್ರ ಕಂಪನಿಯು ಸಹ ಮೀಸಲಾತಿಯನ್ನು ವಿರೋಧಿಸುತ್ತದೆ. ೨೦೦೪ರಲ್ಲಿ ಹಾಗೆಯೇ ಅಮೇರಿಕಾದ ಕಪ್ಪುಜನರ ೧೦ ಉದ್ಯಮಗಳು ೩.೫ ಬಿಲಿಯನ್ ವಹಿವಾಟನ್ನು ನಡೆಸಿ, ಟಾಟಾ ಮೋಟಾರ್ಸ್‌ನವರ ೩.೫ ಬಿಲಿಯನ್ ವಹಿವಾಟಿಗೆ ಸಮನಾಗಿ ನಿಂತಿದ್ದವು.

ಕಪ್ಪು ಜನರ ೧೦೦ ಕಂಪನಿಗಳಲ್ಲಿ ಅತೀ ಸಣ್ಣದ್ದೆಂದು ಗುರುತಿಸಲಾಗಿರುವ ಕ್ರಾಸ್ ಕ್ರೀಕ್ ಮರ್ಕ್ಯುರಿ ೨೫.೯ ಮಿಲಿಯನ್ ಡಾಲರ್ ಅಥವಾ ರೂ. ೧೧೦ ಕೋಟಿ ವಹಿವಾಟನ್ನು ಮಾಡಿ ಭಾರತದ ಯಾವುದೇ ಯಂತ್ರೋದ್ಯಮಿಯನ್ನು ಹಿಂದಕ್ಕಟ್ಟಿತ್ತು. ತಾಳ್ಮೆಯಿಂದ ಈ ಎಲ್ಲಾ ೧೦೦ ಕಂಪನಿಗಳ ವಹಿವಾಟನ್ನು ಲೆಕ್ಕ ಮಾಡಿದ್ದೇ ಆದಲ್ಲಿ ಭಾರತದ ಎಲ್ಲಾ ಯಂತ್ರೋದ್ಯಮಿಗಳನ್ನು ಹಿಂದೆ ಸರಿಯುವಂತೆ ಮಾಡಿಯಾವು. ಈ ಪವಾಡ ಹೇಗಾಯಿತು?

"ಪಾಲುದಾರಿಕೆಯಲ್ಲಿ ವೈವಿಧ್ಯತೆ (ಡೈವರ್ಸಿಟಿ) ಎಂಬ ಪರಿಕಲ್ಪನೆಯು ಅಮೇರಿಕಾದಲ್ಲಿ ASNE (American Society of News Editors) ಅಸ್ತಿತ್ವಕ್ಕೆ ಬಂದ ಕ್ಷಣವೇ ಹುಟ್ಟಿಕೊಂಡಿತು. ಇದು ಸಾರ್ವಜನಿಕ ನೀತಿಯಾಗಿ ೧೯೭೫ರಲ್ಲಿ ಚಲಾವಣೆಗೆ ಬಂದಿತು. ಈ ಸಂಘಟನೆಯ ಸಮೀಕ್ಷೆಯ ಮೇರೆಗೆ ಮಾಧ್ಯಮ ಶ್ರಮಶಕ್ತಿಯಲ್ಲಿ ಕೇವಲ ೩.೯೫% ಮಾತ್ರ ಅಲ್ಪಸಂಖ್ಯಾತರಿದ್ದರು.

ASNE ನಡೆಸಿದ ಈ ಸಮೀಕ್ಷೆಯ ಮೇರೆಗೆ ೩ ವರ್ಷಗಳ ಕಾಲ ಸತತವಾದ ಚಲನೆ ತೀವ್ರಗೊಂಡು ೨೦೦೦ದ ಹೊತ್ತಿಗೆ "ಪಾಲುದಾರಿಕೆಯಲ್ಲಿ ವೈವಿಧ್ಯತೆ" ಆಗಲೇಬೇಕೆಂಬ ಗುರಿಯೊಡನೆ ಅಮೇರಿಕಾ ಸಮಾಜದ ಮಾಧ್ಯಮ ಸಂಪಾದಕರ ಗುಂಪು ಅಸ್ತಿತ್ವಕ್ಕೆ ಬಂದಿತು. ಹೀಗೆ ಅಲ್ಪಸಂಖ್ಯಾತ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಪತ್ರಕರ್ತರು ಸಾರ್ವಜನಿಕ ಮಾಧ್ಯಮಗಳಲ್ಲಿ ಸಮನಾಗಿ ನಿಲ್ಲಲಾರಂಭಿಸಿದರು. ಹೀಗೆ ೭೦ರ ದಶಕದಲ್ಲಿ "ಪಾಲುದಾರಿಕೆಯಲ್ಲಿ ವೈವಿಧ್ಯತೆ" ಎಂಬ ನೀತಿಯು ಸಾರ್ವಜನಿಕವಾಗಿ ಜನಾಂಗೀಯ ಸಂಬಂಧಗಳನ್ನು ಸರಿಪಡಿಸಲಾರಂಭಿಸಿತು.

ಈ ಮೇಲಿನ ಕಪ್ಪುಜನರ ಉದ್ಯಮಗಳ ಪಟ್ಟಿಯನ್ನು ವಿಮರ್ಶೆಗೆ ಒಳಪಡಿಸಿದಲ್ಲಿ ಎರಡು ಕಂಪನಿಗಳು ಮಾತ್ರ 1980ರ ಮುಂಚೆ ಅಸ್ತಿತ್ವದಲ್ಲಿದ್ದವು : 1. ಬಾಬ್ರಾಸ್ ಬೂಯಿಕ್ ಕಂಪನಿ (1974) 2. ಬರಾನೋ ಆಟೋಮೋಟಿವ್ (1979). ಅಂದರೆ ಉಳಿದ 73 ಉದ್ಯಮಗಳು 1989ರ ನಂತರ ಉದಯಿಸಿದಂತವು.

ಹೀಗೆ ಬ್ಲಾಕ್ ಬೂರ್ಸ್ವಾ ವರ್ಗವು ಬಹಳ ಹಿಂದೆಯೇ ಉದಯಿಸಿತಾದರೂ 50 ವರ್ಷಗಳ ನಂತರವೇ ಒಂದು ಪುಸ್ತಕವು ಅದರ ಬಗ್ಗೆ ಪ್ರಕಟವಾದುದು.

ವಿಶ್ರಾಂತ ವರ್ಗವೊಂದರ ಅಗತ್ಯತೆ

ಆದರೆ 1958ರಲ್ಲಿ ಜರ್ಮನಿ ಮೂಲದ ಅಮೇರಿಕಾದ ತತ್ವಶಾಸ್ತ್ರಜ್ಞ ಹರ್ಬರ್ಟ್ ಮರ್ಕೂಸ್ ಈ ಬ್ಲಾಕ್ ಬೂರ್ಸ್ವಾ ಬಗ್ಗೆ ಮಾತನಾಡಿದ್ದ. ಕಪ್ಪು ಜನರ ಚಳವಳಿಗಳಿಗೆ ಈ ಬೂರ್ಸ್ವಾ ವರ್ಗವು ಒಂದು ದೊಡ್ಡ ಶಕ್ತಿಯಾಗಿತ್ತೆಂದು ಒತ್ತಿ ಹೇಳಬೇಕಾಗಿಲ್ಲ. ಯಾವುದೇ ಸಮುದಾಯವೂ ಸಹ ಗೌರವದ ಸ್ಥಾನವನ್ನು ಪಡೆಯಬೇಕಾದರೆ ಅದಕ್ಕೆ ತನ್ನದೇ ಆದ ಬೂರ್ಸ್ವಾ ವರ್ಗವೊಂದು ಬೇಕಾಗುತ್ತದೆ.

ಆದ್ದರಿಂದ ದಲಿತರು ಸಹ ಈ ಮಾದರಿಯನ್ನು ಅನುಸರಿಸಿ ಒಂದು ದಲಿತ ಬೂರ್ಸ್ವಾ ವರ್ಗಕ್ಕೆ ಕಾರಣವಾಗಬಾರದೇಕೆ? ದುಡಿಯುವ ವರ್ಗವನ್ನು ಮಾತ್ರ ದಲಿತರಿಗೆ ಮೀಸಲಿಡುವುದು ಎಷ್ಟು ಸರಿ?

೩

ದಲಿತ ಸಮುದಾಯ ತನ್ನದೇ ಆದ ವಿಶ್ರಾಂತ ವರ್ಗ(Leisure Class)ವೊಂದನ್ನು ಹೊಂದಬಾರದೇಕೆ? ಇತ್ತೀಚೆಗೆ ನಾನು ಆಂಧ್ರಪ್ರದೇಶಕ್ಕೆ ಹೋದಾಗ ಈ ಪ್ರಶ್ನೆ ಪದೇ ಪದೇ ಎದುರಾಯಿತು. ಸುಧಾಕರ್‌ರಾವ್ ಎಂಬ ಕಾರ್ಯಕರ್ತ ಏಪ್ರಿಲ್ 16ರಂದು ಅಂಬೇಡ್ಕರ್ ಯಾತ್ರೆಯೊಂದನ್ನು ಏರ್ಪಡಿಸಿದ್ದಾಗ ನಾನು ಅದರಲ್ಲಿ ಭಾಗವಹಿಸಿದ್ದೆ. ಇಡೀ ರಾತ್ರಿಯುದ್ದಕ್ಕೂ ಏರ್ಪಡಿಸಿದ್ದ ಮೆಹಬೂಬ್ ನಗರದ ಕಾರ್ಯಕ್ರಮದಲ್ಲಿ ದಲಿತ ಗುಂಪುಗಳು ಪಾಲ್ಗೊಂಡಿದ್ದವು. ಆ ಕಾರ್ಯಕ್ರಮದಲ್ಲಿ ಸುಮಾರು ಆರು ಸಾವಿರ ಜನ ಭಾಗವಹಿಸಿದ್ದರು.

ದಲಿತ ನಾಯಕರು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬದುಕು ಮತ್ತು ಸಾಧನೆಯ ಬಗ್ಗೆ ಇಡೀ ರಾತ್ರಿಯುದ್ದಕ್ಕೂ ಮಾತನಾಡುತ್ತಿದ್ದರು. ಮಧ್ಯೆ ಮಧ್ಯೆ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಳ್ಳುತ್ತಿದ್ದವು. ರಾಜ್ಯ ಸರ್ಕಾರದಲ್ಲಿ ಒಂದು ಬಾರಿ ಕ್ಯಾಬಿನೆಟ್ ಸಚಿವರು ಹಾಗೂ ಎರಡು ಬಾರಿ ಎಂ.ಪಿ.ಯಾಗಿದ್ದ ಡಾ॥ ರವಿಮಲ್ಲು ನನ್ನ ಆರೈಕೆಗೆ ಅಗತ್ಯವಾದ ವ್ಯವಸ್ಥೆ ಮಾಡಿದ್ದರು. ಡಾ॥ಮಲ್ಲು ವೇದಿಕೆಯಲ್ಲಿರದೆ ಸಭಿಕರೊಂದಿಗೆ ರಾತ್ರಿಯುದ್ದಕ್ಕೂ ಆಸೀನರಾಗಿದ್ದರು.

ನನಗೆ ತಿಳಿಸಿದಂತೆ ಅಂದು ನಾನು ಮುಖ್ಯ ಭಾಷಣಕಾರನಾಗಿದ್ದುದ್ದರಿಂದ ಮುಂಜಾವಿನ ವೇಳೆ ಎರಡು ಗಂಟೆಗೆ ನಾನು ಮಾತನಾಡಬೇಕಾಗಿತ್ತು. ಆದ್ದರಿಂದ ಕೆಲವು ಗೆಳೆಯರೊಡನೆ ರಾತ್ರಿಯುದ್ದಕ್ಕೂ ಎಚ್ಚರದಿಂದ ಇರಬೇಕಾಯಿತು. ಅತಿಥಿ ಗೃಹವೊಂದರಲ್ಲಿ ವಿಶ್ರಾಂತಿ ಪಡೆಯುತ್ತಿರುವಾಗ ಸಾಂಸ್ಕೃತಿಕ ಸಿದ್ಧಾಂತಿ ಮತ್ತು ಸಿನಿಮಾ ತಯಾರಕನಾಗಿದ್ದ ಲೇಲೇಸುರೇಶ್ ನನಗೊಂದು ಪ್ರಶ್ನೆಯನ್ನು ಕೇಳಿದ. "ದಲಿತ ಬುದ್ಧಿಜೀವಿಗಳೇಕೆ ಒಂದು ಶಕ್ತಿಯಾಗಿ ಉದಯಿಸಲಾಗಿಲ್ಲ ?"

"ಏಕೆಂದರೆ ದಲಿತ ವಿಶ್ರಾಂತ ವರ್ಗವೊಂದು ಇಲ್ಲ" ಎಂದು ನಾನು ಉತ್ತರಿಸಿದೆ. ಈ ದಲಿತ ವಿಶ್ರಾಂತ ವರ್ಗವೊಂದರ ಬಗ್ಗೆ ಮಾತನಾಡುವುದು ನನ್ನ ಅನೇಕ ಮಾರ್ಕ್ಸಿಸ್ಟ್ ಗೆಳೆಯರಿಗೆ ರಾಜಕೀಯವಾಗಿ ತಪ್ಪಾಗಿದ್ದು ನೈತಿಕವಾಗಿಯೂ ಸರಿಯಿರಲಿಲ್ಲವಾದರೂ ದಲಿತರು ತಮ್ಮದೇ ಆದ ವಿಶ್ರಾಂತ ವರ್ಗವೊಂದನ್ನು ಹೊಂದಬೇಕೆಂಬುದರ ಬಗ್ಗೆ ನನ್ನ ನಿಲುವು ನಿಶ್ಚಲವಾಗಿತ್ತು. "ದಲಿತ ಬೂರ್ಸ್ವಾ ವರ್ಗವೊಂದು ಇಲ್ಲದಿದ್ದಲ್ಲಿ ದಲಿತ ವಿಶ್ರಾಂತ ವರ್ಗವೊಂದು ಇರಲಾರದು" ಎಂದು ನಾನು ಮತ್ತೂ ಸೇರಿಸಿದೆ.

ಹೈದ್ರಾಬಾದ್‌ನಲ್ಲಿ ಅರ್ಧ ಡಜನ್ ಯುವ ದಲಿತ ಬುದ್ಧಿಜೀವಿಗಳಿದ್ದಾರೆಂದು ನನಗೆ ಗೊತ್ತು. ಆಂಧ್ರಪ್ರದೇಶದ ಪಾರಂಪರಿಕ ಬೌದ್ಧಿಕ ಜಗತ್ತನ್ನು ಪಲ್ಲಟಗೊಳಿಸುವಂತಹ ಸಾಮರ್ಥ್ಯ ಇವರೆಲ್ಲರಿಗೂ ಇತ್ತು. ಆದರೂ ಈ ಎಲ್ಲಾ ಆರು ಮಂದಿ ಬುದ್ಧಿಜೀವಿಗಳು ಅಸಂಘಟಿತ ಕೇರಿಗಳಲ್ಲಿ ಬಾಡಿಗೆ ಮನೆಗಳಲ್ಲಿ ಜೀವಿಸುತ್ತಿದ್ದರು. ಇವರ್ಯಾರಿಗೂ ಮಲಗುವ ಕೋಣೆಗಳಲ್ಲಿ ಎ.ಸಿ.ಗಳು ಇಲ್ಲ. ಇವರ್ಯಾರೂ ಸಹ ಶ್ರೀಮಂತ ಕ್ಲಬ್‌ಗಳಲ್ಲಿ ಸದಸ್ಯತ್ವವನ್ನೂ ಸಹ ಹೊಂದಿಲ್ಲ. ಇವರ್ಯಾರೂ ಸಹ ತಮ್ಮ ಕುಟುಂಬಗಳನ್ನು ಸ್ಟಾರ್ ಹೋಟೆಲ್‌ಗಳಿಗೆ ಕರೆದೊಯ್ಯುವುದಿಲ್ಲ. ತಮ್ಮ ಮಕ್ಕಳ ಹುಟ್ಟುಹಬ್ಬಕ್ಕೆ ಇವರ್ಯಾರೂ ಕಾರುಗಳನ್ನು ಬಹುಮಾನವಾಗಿ ನೀಡಿಲ್ಲ. ದುರಂತವೆಂದರೆ ರಜೆಗಾಗಿ ಯುರೋಪ್ ನಗರಗಳಿಗೆ ಇವರೆಂದೂ ಹೋಗಲಾಗುವುದಿಲ್ಲ. ನಿಜಸಂಗತಿಯೆಂದರೆ ಇವರೆಲ್ಲರೂ ಸಹ ದುಡಿಯುವ ವರ್ಗಕ್ಕಿಂತ ಸ್ವಲ್ಪ ಉನ್ನತ ಸ್ಥಿತಿಯಲ್ಲಿರುವವರು.

ಭಾರತದ ಉದ್ದಗಲಕ್ಕೂ ಸಹ ಇದೇ ಕತೆಯು ಪುನರಾವರ್ತಿಸುತ್ತಿರುತ್ತದೆ. ಕಲ್ಕತ್ತಾ, ಪಾಟ್ನಾ, ಲಖನೌ, ಚಂಡೀಗಡ, ಡೆಲ್ಲಿ, ಜಯ್‌ಪುರ, ಅಹಮದಾಬಾದ್, ಮುಂಬೈ, ಬೆಂಗಳೂರು ಹಾಗೂ ಚೆನ್ನೈಗಳಲ್ಲಿ ದಲಿತ ಬುದ್ಧಿಜೀವಿಗಳು ಏಕಾಂತ ಒಂಟಿ ಬದುಕನ್ನು ದೂಡುತ್ತಿದ್ದಾರೆಂಬುದು ನನಗೆ ಗೊತ್ತು. ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್ ಅಥವಾ ಇಂಡಿಯಾ ಹ್ಯಾಬಿಟಾಟ್ ಸೆಂಟರ್‌ಗಳೆರಡೂ ದೆಹಲಿಯ ದೊಡ್ಡ ಗಾಸಿಪ್ (ಹರಟೆ) ಶಕ್ತಿ ಕೇಂದ್ರಗಳಾಗಿವೆ. ಇವುಗಳಲ್ಲಿ ದಲಿತ ಬುದ್ಧಿಜೀವಿಯೊಬ್ಬನೂ ಸಹ ತನ್ನ ಸದಸ್ಯತ್ವವನ್ನು ಹೊಂದಿಲ್ಲ.

"ಹಸಿರು ಮೈದಾನದಲ್ಲಿ ಒಂದು ಗೋಲ್ಫ್ ಟೋಪಿಯನ್ನು ಧರಿಸಿರುವ ದಲಿತ್ ಬುದ್ಧಿಜೀವಿಯೊಬ್ಬ ಕಾಣಿಸಿಕೊಳ್ಳುತ್ತಾನೋ ಆ ದಿನವೇ ದಲಿತ ಬುದ್ಧಿಜೀವಿಗಳ ಶಕ್ತಿಯ ಉದಯ" ಎಂದು ನಾನು ಮಂಡಿಸಿದೆ. ಸುತ್ತಲಿನ ಗಣ್ಯರೆಲ್ಲ ಕ್ಷಣ ಮೌನವಾದರು. ಉತ್ತರ ಪ್ರದೇಶದ ಕಾವಲ್‌ಭಾರತಿಯ ಅನಂತರದಲ್ಲಿ ನಾನು ಕಂಡ ಮತ್ತೊರ್ವ ಚುರುಕು ಬುದ್ಧಿಯ ದಲಿತನೆಂದರೆ ಕಾಲ್ಯೆಗಿರಿಪ್ರಸಾದ್. ಈತನ ಪೂಜಾ ಆಚರಣೆಗಳನ್ನು ನಾನು ಒಪ್ಪುವುದಿಲ್ಲವಾದರೂ ಈತನೇ ನನ್ನ ಒಗಟಿನಾರ್ಥವನ್ನು ಮೊದಲಿಗೆ ಗ್ರಹಿಸಿದವನು.

ದಲಿತ ಬುದ್ಧಿಜೀವಿಗಳೆಲ್ಲಾ ಬಹಳಷ್ಟು busy ಯಾಗಿದ್ದಾರೆ. ನಿಜ ಸಂಗತಿಯೆಂದರೆ ಒಬ್ಬ ದಲಿತ ಕಾರ್ಮಿಕನಂತೆ ದುಡಿಯುತ್ತಿದ್ದಾರೆ. ಇವರೆಲ್ಲಾ ಬೌದ್ಧಿಕವಾಗಿ ತಮ್ಮ ಗ್ರಾಮೀಣ ಸಮುದಾಯಗಳಿಂದ ಪ್ರತ್ಯೇಕಗೊಂಡವರಾಗಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕಮ್ಮ ಅಥವಾ ರೆಡ್ಡಿ ಮಹಿಳೆಯರೊಂದಿಗೆ ಕ್ಷಣ ಆರೋಗ್ಯಕರ ಬೌದ್ಧಿಕ ಹರಟೆಗಳಲ್ಲಿ ತೊಡಗಿಸಿಕೊಳ್ಳುವ ಗಳಿಗೆಗಳು ದಲಿತ ಭೂರಹಿತ ಕಾರ್ಮಿಕರಿಗೆ ಸಿಗುತ್ತವೆ. ಆದರೆ ನಗರ ಭಾಗಗಳಲ್ಲಿ ನಮ್ಮ ದಲಿತ ಬುದ್ಧಿಜೀವಿಗಳಿಗೆ ಈ ಅವಕಾಶ ಇದೆಯಾ ?

ಸಾಂಸ್ಕೃತಿಕವಾಗಿ ವಿಘಟಿತವಾಗಿರುವ ವೇದಿಕೆಗಳಲ್ಲಿ ದಲಿತ ಮತ್ತು ದಲಿತೇತರ ಮಧ್ಯೆ ವಾದ–ವಿವಾದಗಳು ನಡೆಯುತ್ತಾವಷ್ಟೆ. ಇದೆಲ್ಲಾ ನಿರ್ಜೀವವಾದ ಚರ್ಚೆಗಳಷ್ಟೆ. ಪ್ರತಿ ರಾಜ್ಯದ ದಲಿತೇತರ 10 ಮಂದಿ ಬುದ್ಧಿಜೀವಿಗಳ ಸಂಪತ್ತು ಸಾಂಸ್ಕೃತಿಕ ಬದುಕುಗಳನ್ನು ಪರೀಕ್ಷಿಸಿ ಅವುಗಳನ್ನು ನಮ್ಮ ದಲಿತ ಬುದ್ಧಿಜೀವಿಗಳೊಂದಿಗೆ ಹೋಲಿಸಿ ನೋಡಿ. ಅಲ್ಲಿರುವ ಅಂತರ ಹೇಗಿದೆಯೆಂದರೆ ಒಬ್ಬ ಬೂರ್ಸ್ವಾ ಮತ್ತು ಕಾರ್ಮಿಕನ ನಡುವಿನಷ್ಟೆ ಇದೆ. ಈ ಬುದ್ಧಿಜೀವಿ ವರ್ಗಗಳೆರಡೂ ಎಷ್ಟು ಭಾರಿ ಅನಧಿಕೃತವಾಗಿ ಕುಂತು ಊಟ ಮಾಡುತ್ತಾರೆ ?

ಈ ಸಾಂಸ್ಕೃತಿಕ ಪ್ರತ್ಯೇಕತೆ ಅಂತಿಮವಾಗಿ ಬೌದ್ಧಿಕ ಪ್ರತ್ಯೇಕತೆಯೇ ಆಗಿ ಬಿಡುತ್ತದೆ. ಇವರೆಲ್ಲ ವೇದಿಕೆ ಅಥವಾ ದಿನಪತ್ರಿಕೆ ಅಥವಾ ವಿಚಾರ ಸಂಕಿರಣಗಳ ಜಾಗಗಳಲ್ಲಷ್ಟೇ ಮಧ್ಯಾಹ್ನದ ಊಟ ಮಾಡಿ ಕೂಡಲೇ ತಮ್ಮ ತಮ್ಮ ದ್ವೀಪಗಳಿಗೆ ಮರಳಿಬಿಡುತ್ತಾರೆ.

ದಲಿತೇತರನಂತೆ ದಲಿತನೂ ಸಹ ವೇದಿಕೆಯಲ್ಲಿ ಮುಕ್ತವಾಗಿ ತನ್ನ ವಿಚಾರಗಳನ್ನು ಅಭಿವ್ಯಕ್ತಗೊಳಿಸುತ್ತಾನೆ ಅಷ್ಟೆ. ದಲಿತರು ಸಾಂಸ್ಕೃತಿಕವಾಗಿ ಪ್ರತ್ಯೇಕಗೊಂಡುದುದರಿಂದ ಅವರ ಕಾಣ್ಕೆಗಳು/ದರ್ಶನಗಳು ದಲಿತೇತರ ಪ್ರಜ್ಞೆಯೊಳಗೆ ನುಸುಳಲಾರವು. ಆದ್ದರಿಂದ ದಲಿತರು ತಮ್ಮ ತಮ್ಮ ಮಧ್ಯೆಯೇ ಚರ್ಚಿಸುತ್ತಾ ಈಗಾಗಲೇ ಪರಿವರ್ತನೆಗೊಂಡವರನ್ನೇ ಪರಿವರ್ತಿಸಲು ತೊಡಗುತ್ತಾರೆ. ಹೀಗೆ ತಮ್ಮ ಸಮುದಾಯದಿಂದಲೇ ವಿಚಾರಗಳು ಉದಯಿಸಿ, ಅದೇ ಸಮುದಾಯದಲ್ಲೇ ಹುದುಗಿ ಹೋಗುತ್ತವೆ.

ಆದ್ದರಿಂದ, ದಲಿತ ಬೂರ್ಸ್ವಾ ವರ್ಗವಿಲ್ಲದೆ ದಲಿತ ವಿಶ್ರಾಂತ ವರ್ಗವೊಂದು ಇರಲು ಸಾಧ್ಯವೇ ?

ಉತ್ತರ "ಖಂಡಿತವಾಗಿಯೂ ಇಲ್ಲ" ದಲಿತ ವಿಶ್ರಾಂತ ವರ್ಗವೊಂದನ್ನು ನಾವು ಹೊಂದಿಲ್ಲವಾದ್ದರಿಂದ ದಲಿತ ಕಾರ್ಮಿಕರ ಸ್ಥಿತಿಗತಿಯನ್ನು ಪ್ರತಿನಿಧಿಸುವ ದಲಿತ ಬುದ್ಧಿಜೀವಿಗಳ್ಯಾರೂ ಇರುವುದಿಲ್ಲ. ಇದು ಎಲ್ಲೀತನಕ ಮುಂದುವರಿಯಬೇಕು ? □

ದಲಿತ ಸಮುದಾಯ ತನ್ನದೇ ಆದ ವಿಶ್ರಾಂತ ವರ್ಗ(Leisure Class)ವೊಂದನ್ನು ಹೊಂದಬಾರದೇಕೆ? ಇತ್ತೀಚೆಗೆ ನಾನು ಆಂಧ್ರಪ್ರದೇಶಕ್ಕೆ ಹೋದಾಗ ಈ ಪ್ರಶ್ನೆ ಪದೇ ಪದೇ ಎದುರಾಯಿತು. ಸುಧಾಕರ್‌ರಾವ್ ಎಂಬ ಕಾರ್ಯಕರ್ತ ಏಪ್ರಿಲ್ 16ರಂದು ಅಂಬೇಡ್ಕರ್ ಯಾತ್ರೆಯೊಂದನ್ನು ಏರ್ಪಡಿಸಿದ್ದಾಗ ನಾನು ಅದರಲ್ಲಿ ಭಾಗವಹಿಸಿದ್ದೆ. ಇಡೀ ರಾತ್ರಿಯುದ್ದಕ್ಕೂ ಏರ್ಪಡಿಸಿದ್ದ ಮೆಹಬೂಬ್ ನಗರದ ಕಾರ್ಯಕ್ರಮದಲ್ಲಿ ದಲಿತ ಗುಂಪುಗಳು ಪಾಲ್ಗೊಂಡಿದ್ದವು. ಆ ಕಾರ್ಯಕ್ರಮದಲ್ಲಿ ಸುಮಾರು ಆರು ಸಾವಿರ ಜನ ಭಾಗವಹಿಸಿದ್ದರು.

ಹೊಸ ಪುಸ್ತಕ

ಮಿಯುವ ಆಟ(ಕಥಾ ಸಂಕಲನ)

ಲೇ: ಎಚ್ ನಾಗವೇಣಿ

ಬೆಲೆ: ರೂ.೬೦/-

ಕನ್ನಡದಲ್ಲಿ ಸಮರ್ಥ ಸಣ್ಣ ಕಥೆಗಳು ಅಪರೂಪವಾಗಿರುವ ಕಾಲದಲ್ಲಿ ನಾಗವೇಣಿಯವರ 'ಮಿಯುವ ಆಟ' ಬಂದಿದೆ. 'ಮಿಯುವ ಆಟ'ದ ಒಳತೋಟಿ ಕಥನ ಕಲೆ ಅವರ ಬಗೆಗಿನ ಕುತೂಹಲವನ್ನು ಹೆಚ್ಚಿಸಿದೆ. ಬಾಲ್ಯದ ನೆನಪಿನಲ್ಲಿ ಸಾಮಾಜಿಕ ಹೊಯ್ದಟವನ್ನು ಮಾನವೀಯ ನೆಲೆಗಟ್ಟಿ ಆತ್ಮೀಯವಾಗಿ ಪೋಣಿಸುವ ಹೆಗ್ಗಳಿಕೆ ಇಲ್ಲಿನ ಕಥೆಗಳಲ್ಲಿದೆ. ತುಳುನಾಡಿನ ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಸಂಭ್ರಮ ಈ ಕೃತಿಯ ಮೂಲಕ ಕನ್ನಡ ಓದುಗರಿಗೆ ಲಭ್ಯವಾಗಿದೆ.

ಪ್ರಕಾಶಕರು : ಲೋಹಿಯಾ ಪ್ರಕಾಶನ
ಕಪ್ಪಗಲು ರಸ್ತೆ, ಗಾಂಧಿನಗರ, ಬಳ್ಳಾರಿ.



ಉತ್ತರ ನಕ್ಷತ್ರ

ಲೇ. ಎಂ.ಆರ್.ಕಮಲ

ಬೆಲೆ: ರೂ.೮೦/-

'ಕಪ್ಪುಹಕ್ಕಿಯ ಬೆಳಕಿನ ಹಾಡು' ಪುಸ್ತಕದ ಮೂಲಕ ಆಫ್ರಿಕನ್. ಅಮೆರಿಕನ್ ಗುಲಾಮಿ ಮಹಿಳೆಯ ಧಾರುಣ ಹಾಗೂ ಹೋರಾಟದ ಬದುಕನ್ನು ಕನ್ನಡ ಸಾಹಿತ್ಯಲೋಕಕ್ಕೆ ತೆರೆದಿಟ್ಟ ಕಮಲಾ ಅವರ ಮತ್ತೊಂದು ಅದೇ ಹಾದಿಯ ಪುಸ್ತಕ ಇದು. ನಮ್ಮ ನಡುವಿನ ಮಹತ್ವದ ಲೇಖಕಿಯರಲ್ಲಿ ಒಬ್ಬರಾಗಿರುವ ಕಮಲಾ 'ಉತ್ತರ ನಕ್ಷತ್ರ'ದ ಮೂಲಕ ಶೋಷಿತ ಜನಾಂವೊಂದರ ಹೋರಾಟದ ಮೂಲಕ ಹೊಸ ಬದುಕಿನ ಅಧ್ಯಾಯ ತೆರೆದಿದ್ದನ್ನು ಕಣ್ಣಮುಂದೆ ಕಟ್ಟಿಕೊಡುತ್ತಾರೆ

ಪ್ರಕಾಶಕರು:
ಕಥನ ಪ್ರಕಾಶನ, ರಾಜಾಜಿನಗರ,
ಬೆಂಗಳೂರು - ೧೦

ಸಿಂದಗಿ ಪಟ್ಟಾಧ್ಯಕ್ಷರು

ಲೇ: ಚಂದ್ರ ಶೇಖರ್ ವಸ್ತ್ರದ

ಬೆಲೆ: ರೂ.೧೦/-

ಸಿಂದಗಿ ಶ್ರೀ ಶಾಂತವೀರ ಪಟ್ಟಾಧ್ಯಕ್ಷರ ಜೀವನ ಚರಿತ್ರೆ ಇದು. ಸಾವಿರಾರು ಬಡ ಅನಾಥ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡಿ ಅವರ ವ್ಯಕ್ತಿತ್ವಕ್ಕೊಂದು ಘನತೆಯನ್ನು ಒದಗಿಸಿದವರು ಸಿಂದಗಿ ಶಾಂತ ವೀರ ಪಟ್ಟಾಧ್ಯಕ್ಷರು. ಅಂತೆಯೇ ಹಳ್ಳಿ ಹಳ್ಳಿಗಳಲ್ಲಿ ನೋವಿನಿಂದ ಬಳಲುತ್ತಿದ್ದ ಸಹಸ್ರಾರು ಅಭಾಗಿನಿಯರಿಗೆ ಸಾಂತ್ವನ ನೀಡಿದರು. ಹಾನಗಲ್ಲ, ಧಾರವಾಡ, ಹಾವೇರಿ, ಗದಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪಟ್ಟಾಧ್ಯಕ್ಷರ ಪ್ರಭಾವ ಹೇರಳವಾಗಿದೆ.

ಪ್ರಕಾಶಕರು : ಲಿಂಗಾಯಿತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಧರಗೆ ದೊಡ್ಡವರು (ಮಹಾಪ್ರಬಂಧ)

ಲೇ: ಡಾ॥ಸುಭಾಷ್ ಭರಣಿ

ಬೆಲೆ: ರೂ . ೧೦೦/-

ಜನಪ್ರಿಯ ಹಿರಿಯ ಪೊಲೀಸ್ ಅಧಿಕಾರಿ ಸುಭಾಷ್ ಭರಣಿ ಅವರು ಡಿ. ಲಿಟ್ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ ಇದು. ಮೈಸೂರು ಜಿಲ್ಲೆಯ ಅಸ್ಪೃಶ್ಯ ಆದಿ ಕರ್ನಾಟಕ ಜನಾಂಗ ಕುರಿತ ಉತ್ತಮ ಸಂಶೋಧನಾ ಕೃತಿ ಶತಮಾನಗಳ ಕಾಲ ಕಗ್ಗತ್ತಲ ಕೂಪದಲ್ಲಿದ್ದ ಜನಾಂಗವೊಂದು ಹೇಗೆ ಉನ್ನತಿಗೇರಲು ಸಾಧ್ಯವಾಯಿತು ಎಂಬುದರ ವಿಸ್ತತ ಪರಿಶೀಲನೆಯೇ 'ಧರಗೆ ದೊಡ್ಡವರು' ಇತಿಹಾಸ ಹಾಗೂ ವರ್ತಮಾನಗಳೆರಡಕ್ಕೂ ಹಿಡಿದ ವಸ್ತು ನಿಷ್ಠ ಕನ್ನಡಿ ಇದು

ಪ್ರಕಾಶಕರು: ದ್ರಾವಿಡ್ ಪಬ್ಲಿಕೇಷನ್ಸ್
ಶ್ರೀರಾಂಪುರ, ಮೈಸೂರು–೨೩



ಶುದ್ಧ ಶೈವ ಮತ್ತು ಗೋಳಕಿಮಠ ಸಂಪ್ರದಾಯಿ

ಲೇ: ಎಂ. ಎಂ. ಕಲಬುರ್ಗಿ

ಬೆಲೆ: ರೂ –೫೦/-

ಹನ್ನೆರಡನೆ ಶತಮಾನದ ಶರಣ ಧರ್ಮ ಚಳುವಳಿಯಲ್ಲಿ ಆಗಿನ ಅನೇಕ ಸಮಕಾಲೀನ ಮತ ಸಂಘಗಳು ಕರಗಿ ಹೋಗಿವೆ ಇವುಗಳಲ್ಲಿ ಶಿವ ಪರವಾಗಿದ್ದ ಕಾರಣ ಪರಿಶಿಷ್ಟ ನೆಲೆಯ ನಾಥಶೈವ ಮತ್ತು ಶಿಷ್ಟ ನಲೆಯ ನಾಲ್ಕು ಧರ್ಮಗಳು ಸೇರಿವೆ. ಹೆಚ್ಚಿನ ಸಂಶೋಧನೆಗೆ ಒಳಗಾಗದ ಶುದ್ಧ ಶೈವ ಕುರಿತು ಸಂಶೋಧನೆಯಿಂದ ಸಿದ್ದ ಗೊಂಡ ಕೃತಿ ಇದು. ಇದರಿಂದಾಗಿ ಮುಚ್ಚಿ ಹೋಗಿದ್ದ ಬಾಗಿಲೊಂದು ತೆರದಂತಾಗಿದೆ.

ಪ್ರಕಾಶಕರು : ಲಿಂಗಾಯಿತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾ ಮಠ, ಗದಗ



ಕುಮಾರ ಗಂಧರ್ವ (ಜೀವನ ಚರಿತ್ರೆ)

ಲೇ: ಶಿರಾಷ್ ಜೋಶಿ

ಬೆಲೆ: ರೂ. ೩೦/-

ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ದಿಗ್ಗಜ ರಲ್ಲೊಬ್ಬರಾದ ಕುಮಾರ ಗಂದರ್ವರ ಜೀವನ ಸಾಧನೆ ಕುರಿತ ಕೃತಿ. ಕುಮಾರ ಗಂಧರ್ವರ ಗಾಯನ ಕೇಳಿಯೇ ಅವರ ಹಿರಿಮೆಯನ್ನು ಅರಿಯಬೇಕು ಕೇವಲ ೧೧ ವರ್ಷದ ಬಾಲಕನಿದ್ದಾಗಲೇ ಅಖಿಲ ಭಾರತಮಟ್ಟದ ಸಂಗೀತ ಗೋಷ್ಠಿಯಲ್ಲಿ ಭಾಗವಹಿಸಿ ಬೆನ್ನುತಟ್ಟಿಸಿಕೊಂಡು ಶಿವ ಪುತ್ರಯ್ಯ ಕೊಂಕಿಳಿಮಠ ಕುಮಾರ ಗಂಧರ್ವರಾಗಿ ಇಡೀ ದೇಶಕ್ಕೆ ಸಂಗೀತ ಉಣಬಡಿಸಿದ ಅಪರ್ವ ನಿರುಪಣೆ ಈ ಕೃತಿಯಲ್ಲಿದೆ.

ಪ್ರಕಾಶಕರು : ಲಿಂಗಾಯಿತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ



ನೆನಪು

ಕೆ.ವಿ. ಸುಬ್ಬಣ್ಣ ನಮ್ಮ ನಡುವಿನ ಅಪರೂಪದ ಹೋರಾಟಗಾರ, ಚಿಂತಕ ಹಾಗೂ ಸಾಂಸ್ಕೃತಿಕ ರಂಗದ ಅದಮ್ಯ ಚೇತನ. ಸುಮಾರು ೭೪ ವರ್ಷಗಳ ಕಾಲ ತುಂಬು ಜೀವನ ನಡೆಸಿದ ಅವರು ಎಂದೂ ನಿಂತ ನೀರಾಗಲಿಲ್ಲ. ಸದಾ ಹೊಸ ಚಿಂತನೆ ಮತ್ತು ಆಲೋಚನೆಗಳಿಗೆ ತಮ್ಮನ್ನು ಒಡ್ಡಿಕೊಳ್ಳು ತ್ತಲೇ ಬೆಳೆದ ಸುಬ್ಬಣ್ಣ ತಮ್ಮ ಸುತ್ತಲಿನ ಸಾಂಸ್ಕೃತಿಕ ಬದುಕನ್ನು ಬೆಳೆಸುತ್ತಲೇ ಬಂದರು. ಸ್ವಾರ್ಥ ಮತ್ತು ವಿಚಾರ ಶೂನ್ಯತೆಯಿಂದ ನರಳುತ್ತಿರುವ ಸಮಾಜಕ್ಕೆ ತಮ್ಮ ಚಿಕಿತ್ಸಕ ಮನಸ್ಸಿನಿಂದ ಸ್ಪಂದಿಸು ತ್ತಿದ್ದ ಸುಬ್ಬಣ್ಣ ಅವರ ವಿಚಾರಗಳು ಸದಾ ನಮ್ಮೊಂದಿಗೆ ಇರಲಿ ಎಂದು 'ಸಂವಾದ' ಹಾರೈಸುತ್ತದೆ.

○ ಕೆ.ವಿ. ಸುಬ್ಬಣ್ಣ

ಮೊತ್ತಮೊದಲಿಗೆ, ಈ ಪ್ರತಿಷ್ಠಿತ ಸಂಸ್ಥೆಯ ವೇದಿಕೆಯಲ್ಲಿ ಮಾತನಾಡಲು ಅವಕಾಶ ದೊರಕಿಸಿಕೊಟ್ಟದ್ದಕ್ಕಾಗಿ ಸಂಸ್ಥೆಯ ಬಂಧುಗಳಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದಾದ ಮೇಲೆ, ಈ ಸಂಸ್ಥೆಯ ಸ್ಥಾಪಕರಾದ ದಿ. ವಿ. ಕೆ. ಆರ್. ರಾವ್ ಅವರನ್ನು ಮತ್ತು ಇಲ್ಲಿ ಅಧ್ಯಯನ-ಸಂಶೋಧನಗಳನ್ನು ನಡೆಸಿರುವ ವಿದ್ವಾಂಸರುಗಳನ್ನೂ ಗೌರವದಿಂದ ಸ್ಮರಿಸುತ್ತೇನೆ. ದಿ.ರಾವ್ ಅವರು ದೇಶದ ಹಿರಿಯ ಚಿಂತಕರು ಎಂಬುದಲ್ಲದೆ, ಅವರು ಒಂದು ಕಾಲದಲ್ಲಿ ನಮ್ಮ ನೀನಾಸಮ್ ಸಂಸ್ಥೆಗೆ ಬಲು ಪ್ರೀತಿಯಿಂದ ನೆರವು ನೀಡಿದ್ದರು ಎನ್ನುವುದನ್ನು ನಾನಿಲ್ಲಿ ಸ್ಮರಿಸಬೇಕು. ಅಲ್ಲದೆ, ಇಲ್ಲಿನ ನಿರ್ದೇಶಕರಾದ ಪ್ರಿಯ ಡಾ॥ಗೋಪಲ್, ಕೆ.ಕಡೇಕೋಡಿ ಅವರು, ನಿಸ್ಸಂಚಾರಿಯಾಗಿದ್ದ ನನ್ನನ್ನು ಬೆನ್ನುಹತ್ತಿ ಇಲ್ಲಿಗೆ ಬರಮಾಡಿಕೊಂಡಿದ್ದಾರೆ. ಅವರ ಪ್ರೀತಿಗೆ ನಾನು ಋಣಿ.

ಇವತ್ತಿನ ನನ್ನ ಉಪನ್ಯಾಸಕ್ಕೆ ಆಯ್ದುಕೊಂಡಿರುವ ವಿಷಯ, 'ಸಮುದಾಯ ಮತ್ತು ಜನತಂತ್ರ' ಎಂಬುದು. ಸಮುದಾಯ ಎನ್ನುವ ಪದವನ್ನು ನಾನು ಬಹುದಿನಗಳಿಂದ ವ್ಯಾಪಕವಾಗಿ ಬಳಸುತ್ತ ಬಂದಿದ್ದೇನೆ. ಈಗ ನಿಮ್ಮೆದುರು, ನಮ್ಮ ದೇಶದ ಡೆಮೊಕ್ರಸಿ-ಆಡಳಿತ ವ್ಯವಸ್ಥೆಯನ್ನು ಉದಾಹವಣೆ 'ಯಾಗಿಟ್ಟುಕೊಂಡು ನಾನು ಬಳಸುವ ಸಮದಾಯ ಶಬ್ದದ ಸ್ಥೂಲಸ್ವರೂಪ (ಸ್ಥೂಲಲಕ್ಷಣ)ವನ್ನು ಗ್ರಹಿಸಿಕೊಳ್ಳಲಿಕ್ಕೆ ಸಾಧ್ಯವಾದೀತೆ ಅಂತ ಪ್ರಯತ್ನಿಸುತ್ತೇನೆ....ನನ್ನ ಕೌಮಾರ್ಯದ ಕಥನವೊಂದರಿಂದ ಪ್ರಾರಂಭಿಸುತ್ತೇನೆ.



ಕೆ. ವಿ. ಸುಬ್ಬಣ್ಣ

ಸಮುದಾಯ ಮತ್ತು ಜನತಂತ್ರ

೧೯೪೮ರ ಬೇಸಿಗೆಯೆಂದು ನೆನಪು ಆಗ ನಾನು ಸಾಗರದ ಮುನಿಸಿಪಲ್ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ಒಂದು ದಿನ, ಮಧ್ಯಾಹ್ನ ಸು. ೨ ಗಂಟೆ ಸಮಯಕ್ಕೆ, ಅಲ್ಲೇ ಸಮೀಪದ ದೊಡ್ಡ ಕಟ್ಟಡವೊಂದಕ್ಕೆ ಬೆಂಕಿ ಹೊತ್ತಿದೆಯೆಂಬ ಸುದ್ದಿ ಬಂತು. ಶಾಲೆಗೆ ರಜೆ ಘೋಷಿಸಿದರು. ನಾವು ಹತ್ತಿಪ್ಪತ್ತು ಹಳ್ಳಿಯ ಹುಡುಗರು-ಹಳ್ಳಿಗೆ ಮರಳಲು ಹೇಗೂ ಸಂಜೆಯ ತನಕ ಅವಕಾಶವಿದೆಯಲ್ಲ ಎಂಬ ಯೋಚನೆಯಿಂದ-ಆ ಕಟ್ಟಡದ ಕಡೆಗೆ ಹೋದೆವು. ಅದು ಪೇಟೆಯ ಮಧ್ಯದಲ್ಲೇ ಇದ್ದ, ಸು. ಏಳೆಂಟು ಸಾವಿರ ಚದರಡಿಗಳಷ್ಟು ವಿಸ್ತೀರ್ಣ ಹರಡಿಕೊಂಡ, ಮೂರು ಅಂತಸ್ತಿನ ಭಾರೀ ಕಟ್ಟಡವಗಿತ್ತು. ಆಗಲೇ ಹತ್ತಾರು ಕಡೆಗಳಲ್ಲಿ ಬೆಂಕಿ ಹೊತ್ತಿ ಉರಿಯುತ್ತಿತ್ತು, ಎಲ್ಲ ಕಡೆ ಹೊಗೆ ಆವರಿಸಿತ್ತು, ಹೆಂಚುಗಳು ಸಿಡಿದು ಹಾರುತ್ತಿದ್ದವು. ಅದಾಗಲೇ ಅಲ್ಲಿ ಹಲವಾರು ನೂರು ಮಂದಿ-ಎಲ್ಲ ವೃತ್ತಿ-ವರ್ಗ-ಜಾತಿ ವಯಸ್ಸುಗಳ ಜನರೂ-ಜಮಾಯಿಸಿ, ಬೆಂಕಿ ಆರಿಸುವ ಸಾಹಸದಲ್ಲಿ ತೊಡಗಿದ್ದರು. ನಾವೂ ಜತೆಗೆ ಕೂಡಿಕೊಂಡೆವು ಆಮೇಲೆ ಕೂಡ ಜನರು -ಅನೇಕಾನೇಕ ಹೆಂಗಸರು ಕೂಡಾ-ಬಂದು ಸೇರಿಕೊಳ್ಳುತ್ತಲೇ ಇದ್ದರು.

ಕೊಡ-ಹಂಡೆ-ಪಾತ್ರಗಳು ಎಲ್ಲೆಲ್ಲಿಂದಲೋ ಒಟ್ಟುಗೊಂಡು ಬಂದಿದ್ದವು. ಸುತ್ತಣ ಎಲ್ಲ ಮನೆಗಳ ಬಾವಿಗಳಿಂದಲೂ ನೀರು ಸರಬರಾಜಾಗುತ್ತಿತ್ತು.ದೂರದ ಕೆರೆಗಳಿಂದಲೂ ನೀರನ್ನು ವಾಹನಗಳ ಮೇಲೆ ತುಂಬಿ ತರುತ್ತಿದ್ದರು; ಮಣ್ಣು ಮರಳುಗಳನ್ನೂ ಹೊತ್ತು ತಂದು ಬೆಂಕಿಗೆ ಸುರಿಯುತ್ತಿದ್ದರು. ಹೀಗೆ ಹರಸಾಹಸ ನಡೆದು ಬೆಂಕಿಯನ್ನು ಪೂರ್ತಾ ಆರಿಸುವ ಹೊತ್ತಿಗೆ ಸಂಜೆ ಎಂಟು ಗಂಟೆಯಾಗಿತ್ತು. ಕಡೆಗೂ ಉಳಿದದ್ದು ದೊಡ್ಡ ಬೂದಿರಾಶಿಯೇ ಆದರೂ ಇಡೀ ಊರು ಬಚಾವಾಗಿತ್ತು.

ಐವತ್ತಕ್ಕೂ ಹೆಚ್ಚು ವರ್ಷಗಳ ಅನಂತರ, ಇವತ್ತು ಈಗ ನೆನೆದರೆ ಕೂಡ, ಆ ಚಿತ್ರವು ಪ್ರತ್ಯಕ್ಷವಾಗಿ ಕಣ್ಣು ಕಟ್ಟುತ್ತದೆ. ಅವತ್ತಿನ ಆ ಕಾರ್‍ಯಾಚರಣೆಯು ಒಂದು ಭಾರೀ ಕಾರ್ಖಾನೆಯ ಬಹುದಕ್ಷ ನಿರ್ವಹಣೆಯಂತೆ ಕಾಣಿಸಿತ್ತು. ಯಾವ ಯೋಜನೆ-ಕಾರ್ಯನಕ್ಷೆ ಮತ್ತು, ಯಾವುದೇ ಭಾರೀ ಯಂತ್ರಸರಣಿಯೂ ತರಬೇತುಗೊಂಡ ಕಾರ್ಮಿಕರೂ ಉಸ್ತುವಾರಿ-ಮೇಲುಸ್ತುವಾರಿ-ನಿರ್ವಾಹಕ ದಳವೂ ಇಲ್ಲದೆಯೇ ಈ ಕಾರ್ಯ ಚಟುವಟಿಕೆಯು ಅತ್ಯಂತ ದಕ್ಷವಾಗಿ ಯಶಸ್ವಿಯಾಗಿ ನಡೆದುಮುಗಿದಿತ್ತು. ಅತ್ಯನಿರೀಕ್ಷಿತವಾದ ತುರ್ತಿನಲ್ಲಿ ಜಮಾಯಿಸಿಕೊಂಡ ಬೀದಿ ಜನರ ಪಡೆಯು, ಒಂದು ಸಮರ್ಥ ಕಾರ್ಖಾನೆಯೆಂಬಂತೆ ಸಂಘಟಿತವಾಗಿ ದುಡಿದ ಈ ಪರಿ ವಿಸ್ಮಯ ಕಾರಕವಾಗಿತ್ತು.

ಎತ್ತಿ ಕಥಿಸಿದ ಈ ಘಟನೆಯ ಬಗ್ಗೆ ಮತ್ತು ಅನಂತರ ಮುಂದೆಯೂ ನಿತ್ಯಜೀವನದಲ್ಲಿ ನಾನು ಕಂಡ ಅಥವಾ ಯಾರೂ ಕಾಣಬಹುದಾದ ಇಂಥ ಘಟನೆಗಳ ಬಗ್ಗೆ, ಒಂದು ಅರ್ಥ-ಆಕೃತಿಯನ್ನು ಕಟ್ಟಿಕೊಳ್ಳಲು, ನನ್ನ ಉದ್ದ ಬದುಕಿನ ಉದ್ದಾನುದ್ದವೂ ಪ್ರಯತ್ನಿಸಿದ್ದೇನೆ.

ಇಲ್ಲಿ ನಡೆದದ್ದೇನು? ಒಂದು ತುರ್ತು ಘಟನೆಯು ಅನಿರೀಕ್ಷಿತವಾಗಿ ಸಂಭವಿಸಿ, ವಿಭಿನ್ನ ರೀತಿಯ ಹಲವು ಮಂದಿಯನ್ನು ಸೆಳೆಯುತ್ತದೆ ಮತ್ತು ಅವರೆಲ್ಲರನ್ನೂ ಕ್ರಿಯೆಗೆ ಪ್ರಚೋದಿಸುತ್ತದೆ. ಆ ಏಕೋಕ್ರಿಯೆಯ ಬೆಂಕಿಯಲ್ಲಿ ಭಿನ್ನ ವ್ಯಕ್ತಿಗಳೆಲ್ಲ ಕರಗಿ, ಅವರೆಲ್ಲರ ಸಂಯೋಜಿತ ಶ್ರದ್ಧೆಯ ಏಕೋಶರೀರವೊಂದು ಕಲ್ಪಿತವಾಗುತ್ತದೆ ಮತ್ತು ಅಂಥ ಏಕೋ ಶರೀರವು ಕ್ರಿಯೆಯನ್ನು ನಿರ್ವಹಿಸುತ್ತದೆ. ಅತಿಸರಳ ಅತಿಸ್ಥೂಲವಾಗಿ ನಾನು ನಿರುಪಿಸಿರುವ ಇಂಥ ಪ್ರಕ್ರಿಯೆಯನ್ನು ನಾನು 'ಕ್ರಿಯಾ ಸಮುದಾಯ' ಎಂದು ಗುರುತಿಸುತ್ತೇನೆ.

ಈಗ ನಾನು ಇನ್ನೊಂದು ಕಥನವನ್ನು ನಿಮ್ಮ ಮುಂದಿಡುತ್ತೇನೆ. ಹಿನ್ನೆಲೆಯನ್ನು ಕೊಂಚ ಹೇಳಬೇಕು. ನನ್ನಂಥ ನಮಗೆ, ಎಂದರೆ ಭಾರತ ಸ್ವಾತಂತ್ರ್ಯ ಆಂದೋಲನದ ತುದಿಯಲ್ಲಿ ಹುಟ್ಟಿ ಸ್ವತಂತ್ರ ಭಾರತದ ಜತೆ ಒಡನಾಡಿಕೊಂಡು ಬಂದ ಪೀಳಿಗೆಯವರಿಗೆ, ನಮ್ಮ ರಾಜಕಾರಣದಲ್ಲಿ ಅಪಾರ ಆಸಕ್ತಿ; ಇಲ್ಲಿ ನಡೆವ ಘಟನೆಗಳು ಮರ್ಮಕ್ಕೇ ತಾಗಿ ವಿಚಲಿತಗೊಳಿಸುತ್ತವೆ. ಈ ಹಿನ್ನೆಲೆಯ ನಮಗೆ,

೧೯೭೫ರ 'ತುರ್ತುಪರಿಸ್ಥಿತಿ' ಯೆಂಬುದು ಭಾರೀ ಆಘಾತವೆನಿಸಿತ್ತು. ಕಾಲುಶತಮಾನ ಕಳೆಯುವುದರಲ್ಲಿ, 'ಚರ್ಚಿಲ್ ಭವಿಷ್ಯ ನುಡಿದಿದ್ದ ಹಾಗೇ, ನಮ್ಮ ಜನತಂತ್ರ ನಾಶವಾಯಿತಲ್ಲ' ಅಂತ ಅನೇಕರು ಹೆದರಿದ್ದರು. ಇಂದಿರಾಜೀ, ನೆಹರೂನಂತರ ತಾನೇ ಎಂದೂ, ಅವರ ಹಾಗೆ ತಾನೂ ಆಜನ್ಮ ಪ್ರಧಾನಿ ಎಂದೂ ಬಹುಶಃ ನಂಬಿಕೊಂಡಿದ್ದರು, ಅದೇ ಸ್ಥೈರ್ಯದಿಂದ ೧೯೭೭ರಲ್ಲಿ ಮುಂದಾಗಿ ಘೋಷಿಸಿದರು, ಆಗ ಒಂದು ಪವಾಡವೇ ನಡೆಯಿತು. ಆ ಚುನಾವಣೆಯಲ್ಲಿ ಜನರು ಚುನಾವಣೆಯನ್ನು ಎಲ್ಲ ನಿರೀಕ್ಷೆಗಳನ್ನೂ ಸುಳ್ಳುಮಾಡಿ ಆಕೆಯನ್ನೂ ಅವರ ಪಕ್ಷವನ್ನೂ ಕಿತ್ತು ಹಾಕಿದರು. ಅದೊಂದು ಮಹಾ ವಿಸ್ಮಯ. ಕಾಶ್ಮೀರದಿಂದ ಕನ್ಯಾಕುಮಾರಿಯತನಕ ಇಡೀ ಉಪಖಂಡ ವನ್ನೇ ವ್ಯಾಪಿಸಿ ಕೊಂಡಿದ್ದ ಇಲ್ಲಿನ ಜನವರ್ಗಗಳು– ಎಲ್ಲರೂ ಒಂದೆಡೆ ಸೇರಿ ಕೂತು ಚರ್ಚಿಸಿ ಮೊದಲೇ ನಿರ್ಣಯ ಕೈಗೊಂಡಿದ್ದರು ಎಂಬ ರೀತಿಯಲ್ಲಿ ರಾತ್ರಿ ಬೆಳಗಾಗುವುದ ರೊಳಗೆ ರಾಷ್ಟ್ರಾಡಳಿತವನ್ನು ಬದಲಿಸಿಬಿಟ್ಟಿದ್ದರು. ಅದಾದ ಮೇಲೆ ಇಂದಿರಾಜೀ, ದೀರ್ಘಕಾಲ ಅಧಿಕಾರವಿಲ್ಲದೆ ಅನೇಕ ರೀತಿಯ ಬೇರೆ ಸಂಕಷ್ಟಗಳನ್ನೂ ಎದುರಿಸಬೇಕಾಯಿತು.

ನಮಗೆ ಅದಕ್ಕಿಂತಲೂ ಹೆಚ್ಚಿನ ಕೌತುಕದ ಅನುಭವವಾದದ್ದು ಅದಕ್ಕೆ ಮುಂದಣ ೧೯೮೦ರ ಚುನಾವಣೆಯಲ್ಲಿ. ಈ ಸಲ ನಮ್ಮ ಅದೇ ಜನವರ್ಗಗಳು– ಹಿಂದಣ ಅದೇ ವಿಸ್ಮಯಕಾರಕ ರೀತಿಯಲ್ಲಿ–ಇಂದಿರಾಜಿ ಮತ್ತು ಅವರ ಪಕ್ಷವನ್ನು ದೊಡ್ಡ ಬಹುಮತದಿಂದ ಗೆಲ್ಲಿಸಿದರು. 'ಹಿಂದೆ ನೀನು ಜನರ ಆದೇಶಕ್ಕೆ ವಿರುದ್ಧವಾಗಿ ಪ್ರಜಾತಂತ್ರವನ್ನು ಧಿಕ್ಕರಿಸಿ ಸರ್ವಾಧಿಕಾರಿಯಾಗಲು ಯತ್ನಿಸಿದ್ದೆ; ಆದರೆ ನೀನು ನಮ್ಮವಳೇ, ನಮ್ಮ ಬುದ್ಧಿವಂತ ಮಗಳು; ನಿನ್ನ ಬಗ್ಗೆ ನಮಗೆ ಭಯವಿಲ್ಲ, ಬೇಸರವೂ ಇಲ್ಲ; ಈಗ ಪುನಃ ಅಧಿಕಾರ ಕೊಟ್ಟಿದ್ದೇವೆ, ಹಿಂದಿನ ಪಾಠದಿಂದ ಕಲಿತವಳಾಗಿ, ಈಗ ಹೆಚ್ಚು ವಿವೇಕವಂತಳಾಗಿ ಆಳು ಬಾ' ಎಂದು ಎಲ್ಲ ಒಗ್ಗೂಡಿ ಪಟ್ಟ ಕಟ್ಟಿವಂತೆ ಆಕೆಯನ್ನು ಗೆಲ್ಲಿಸಿದ್ದರು. ಇಡೀ ಜನಸಮೂಹದ ಇಂಥ ಐಕಮತ್ಯವೂ ಸ್ಥೈರ್ಯವೂ ವಿವೇಕವೂ ನಮ್ಮನ್ನು ದಂಗುಬಡಿಸಿತ್ತು.

... ...

ಈ ಘಟನೆಗಳಿಂದಾಗಿ ನಾನು ನಮ್ಮ ಜನತಂತ್ರ ಸಂಘಟನೆಯ ಬಗ್ಗೆ ಬಹುಕಾಲ ಯೋಚಿಸುವಂತಾಯ್ತು. ಈ ನಮ್ಮ ಜನತಂತ್ರ ಸಂಘಟನೆಯು 'ಸಮುದಾಯ'ದ ಕಿಂಚಿತ್ ಲಕ್ಷಣಗಳನ್ನು ಕಾಣಿಸಬಹುದೆ–ಎನ್ನುವ ಕುತೂಹಲದಿಂದ ನಮ್ಮ ಜನತಂತ್ರ ನಿರ್ವಹಣೆಯ ಇತಿಹಾಸವನ್ನು ಸಾವಧಾನವಾಗಿ ಪರಿಶೀಲಿಸ 'ತೊಡಗಿದೆ. ಹಾಗೆ ಪರಿಶೀಲಿಸುವಾಗ, ಈ ಜನರ ಕೈಯಲ್ಲಿರುವ ವಾಸ್ತವ ಅಧಿಕಾರವನ್ನು–ಅದರ ಮಿತಿಯನ್ನು–ಗಮನದಲ್ಲಿಟ್ಟು ಕೊಳ್ಳಬೇಕು. ಸು. ಐದು ವರ್ಷದಲ್ಲೊಮ್ಮೆ ಚಲಾಯಿಸಬಹು ದಾದ ತಲಾ ಒಂದು ಓಟು ಮಾತ್ರವೇ ಇವರ ಕೈಯಲ್ಲಿರುವ ಪ್ರಧಾನ ಹತ್ಯಾರ. ಇಂಥ ಓಟುಗಳ ಒತ್ತಡದಿಂದಲೇ ಏನೇನು ಸಾಧ್ಯ ಎಂಬುದನ್ನು ಪರಿಗಣಿಸಿ ಇವರ ಸಾಧನೆಗಳನ್ನು ಅರಿತುಕೊಳ್ಳಬೇಕು. ಈ ಬಗೆಯ ಕಸರತ್ತಿನಲ್ಲಿ ನಾನು ಕಂಡುಕೊಂಡ ಅಂಶಗಳನ್ನು ಈಗ ನಿರೂಪಿಸುತ್ತೇನೆ.

ಮೊದಲನೆಯದಾಗಿ, ರಾಜಕೀಯ ಪಕ್ಷಗಳನ್ನು ಅಧಿಕಾರಕ್ಕೆ ಆಯ್ಕೆ ಮಾಡುವಾಗ ಇವರು ತೋರಿಸಿರುವ ವಿವೇಕವನ್ನು ಗಮನಿಸಬಹುದು. ಈ ೫೫ ವರ್ಷಗಳ ನಮ್ಮ ಜನತಂತ್ರದ ಇತಿಹಾಸವನ್ನು ಪರಿಶೀಲಿಸಿದರೆ, ಇದರಲ್ಲಿ ಸ್ಥೂಲವಾಗಿ ನಾಲ್ಕು ಭಿನ್ನ ಹಂತಗಳನ್ನು ಗುರುತಿಸಬಹುದು. ಮೊದಲ ಸು. ಎರಡು ದಶಕಗಳ ಅವಧಿಯಲ್ಲಿ–ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಕೂಡ ಸ್ಥಿರಪರಂಪರೆಯುಳ್ಳ ಕಾಂಗ್ರೆಸ್ ಪಕ್ಷವೇ ಆಯ್ಕೆಯಾಗುತ್ತ ಬಂದಿತು; ಅನಂತರದ ಹಂತದಲ್ಲಿ–ಕೇಂದ್ರದಲ್ಲಿ ಕಾಂಗ್ರೆಸ್ ಮತ್ತು ರಾಜ್ಯಗಳಲ್ಲಿ ಭಿನ್ನ ಪಕ್ಷಗಳು ಎಂಬ ವಿನ್ಯಾಸ ಕಾಣಿಸಿತು; ಮೂರನೇ ಹಂತದಲ್ಲಿ ರಾಜ್ಯದಲ್ಲಿಯಂತೆ ಕೇಂದ್ರದಲ್ಲೂ ಭಿನ್ನ ಪಕ್ಷಕ್ಕೇ ಅವಕಾಶ ದೊರೆಯಿತು; ನಾಲ್ಕನೇ ಹಂತ – ಮಿಶ್ರಪಕ್ಷಗಳ ಅವಧಿಯಾಯಿತು.

> **ನನ್ನಂಥ ನಮಗೆ, ಎಂದರೆ ಭಾರತ ಸ್ವಾತಂತ್ರ್ಯ ಆಂದೋಲನದ ತುದಿಯಲ್ಲಿ ಹುಟ್ಟಿ ಸ್ವತಂತ್ರ ಭಾರತದ ಜತೆ ಒಡನಾಡಿಕೊಂಡು ಬಂದ ಪೀಳಿಗೆಯವರಿಗೆ, ನಮ್ಮ ರಾಜಕಾರಣದಲ್ಲಿ ಅಪಾರ ಆಸಕ್ತಿ; ಇಲ್ಲಿ ನಡೆವ ಘಟನೆಗಳು ಮರ್ಮಕ್ಕೇ ತಾಗಿ ವಿಚಲಿತಗೊಳಿಸುತ್ತವೆ. ಈ ಹಿನ್ನೆಲೆಯ ನಮಗೆ, ೧೯೭೫ರ 'ತುರ್ತುಪರಿಸ್ಥಿತಿ' ಯೆಂಬುದು ಭಾರೀ ಆಘಾತವೆನಿಸಿತ್ತು. ಕಾಲುಶತಮಾನ ಕಳೆಯುವುದರಲ್ಲಿ, 'ಚರ್ಚಿಲ್ ಭವಿಷ್ಯ ನುಡಿದಿದ್ದ ಹಾಗೇ, ನಮ್ಮ ಜನತಂತ್ರ ನಾಶವಾಯಿತಲ್ಲ' ಅಂತ ಅನೇಕರು ಹೆದರಿದ್ದರು. ಇಂದಿರಾಜೀ, ನೆಹರೂನಂತರ ತಾನೇ ಎಂದೂ, ಅವರ ಹಾಗೆ ತಾನೂ ಆಜನ್ಮ ಪ್ರಧಾನಿ ಎಂದೂ ಬಹುಶಃ ನಂಬಿಕೊಂಡಿದ್ದರು, ಅದೇ ಸ್ಥೈರ್ಯದಿಂದ ೧೯೭೭ರಲ್ಲಿ ಮುಂದಾಗಿ ಘೋಷಿಸಿದರು, ಆಗ ಒಂದು ಪವಡವೇ ನಡೆಯಿತು. ಆ ಚುನಾವಣೆಯಲ್ಲಿ ಜನರು ಚುನಾವಣೆಯನ್ನು ಎಲ್ಲ ನಿರೀಕ್ಷೆಗಳನ್ನೂ ಸುಳ್ಳುಮಾಡಿ ಆಕೆಯನ್ನೂ ಅವರ ಪಕ್ಷವನ್ನೂ ಕಿತ್ತು ಹಾಕಿದರು. ಅದೊಂದು ಮಹಾ ವಿಸ್ಮಯ. ನಮಗೆ ಅದಕ್ಕಿಂತಲೂ ಹೆಚ್ಚಿನ ಕೌತುಕದ ಅನುಭವವಾದದ್ದು ಅದಕ್ಕೆ ಮುಂದಣ ೧೯೮೦ರ ಚುನಾವಣೆಯಲ್ಲಿ. ಈ ಸಲ ನಮ್ಮ ಅದೇ ಜನವರ್ಗಗಳು–ಹಿಂದಣ ಅದೇ ವಿಸ್ಮಯಕಾರಕ ರೀತಿಯಲ್ಲಿ–ಇಂದಿರಾಜಿ ಮತ್ತು ಅವರ ಪಕ್ಷವನ್ನು ದೊಡ್ಡ ಬಹುಮತದಿಂದ ಗೆಲ್ಲಿಸಿದರು,**

ಆಯ್ಕೆಯ ವಿನ್ಯಾಸದಲ್ಲಿ ಈ ಜನರ ತರ್ಕ ಮತ್ತು ವಿವೇಕಗಳನ್ನು ಗುರುತಿಸಬಹುದು. ಮೊದಲ ಹಂತದಲ್ಲಿ ಇವರು ಕೇಂದ್ರೀಕರಿಸಿದ್ದು ರಾಷ್ಟ್ರದ ಅಖಂಡತೆ ಮತ್ತು ಭದ್ರತೆಯ ಬಗ್ಗೆ. ಸ್ವಾತಂತ್ರ್ಯ ಪ್ರಾಪ್ತಿಯಾದ ಹೊತ್ತಿನಲ್ಲಿ ದೇಶವಿಭಜನೆಯ ದೊಡ್ಡ ಅಘಾತವಾದದ್ದು ಮತ್ತು ಅನಂತರದ ಮತೀಯ ಹಿಂಸಾಚಾರ ಇತ್ಯಾದಿಗಳಲು ಬಹುಶಃ ಇದಕ್ಕೆ ಕಾರಣವಾಗಿತ್ತು. ರಾಷ್ಟ್ರದ ಅಖಂಡತೆಗೆ ಇನ್ನು ಭಂಗವಿಲ್ಲ ಎಂಬುದು ಒಮ್ಮೆ ಮನದಟ್ಟಾದ ಮೇಲೆ, ರಾಜ್ಯಗಳ ಅಧಿಕಾರಗಳನ್ನು, ಹೆಚ್ಚು ಸ್ಥಳೀಯಾಸಕ್ತಿಯುಳ್ಳ ಭಿನ್ನ ಪಕ್ಷಗಳಿಗೆ ನೀಡುವ ನಿರ್ಣಯ ಮೂಡಿತು. ಅದಾದಮೇಲೆ, ಭಿನ್ನ ಪಕ್ಷಗಳೂ ಕಾಂಗ್ರೆಸ್‌ನಷ್ಟೇ ಸಮರ್ಥವಾದವು–ಅಥವಾ ಅಸಮರ್ಥವಾದವು ಎಂಬುದು ಸಾಬೀತಾಗಿ, ಕೇಂದ್ರದಲ್ಲೂ ಕಾಂಗ್ರೆಸ್ಸೇತರ ಪಕ್ಷಕ್ಕೆ ಅವಕಾಶ ನೀಡಲಾಯ್ತು. ಮುಂದಣದು ಮಿಶ್ರಪಕ್ಷಗಳ ಅವಧಿ. ಈ ಹೊತ್ತಿಗೆ ಎಲ್ಲ ಪಕ್ಷಗಳೂ ಸಿದ್ಧಾಂತಹೀನವಾಗಿ ಬರೀ ಪಕ್ಷಗಳಷ್ಟೇ ಆಗಿ ಉಳಿದಿದ್ದವು. ಆದ್ದರಿಂದ, ಹಲವು ಪಕ್ಷಗಳಲ್ಲಿ ಹಂಚಿರುವ ಸಮರ್ಥರು ಒಗ್ಗೂಡಿ ಆಡಳಿತವನ್ನು ನಡೆಸುವ ಮಿಶ್ರವಿನ್ಯಾಸವನ್ನು ಒತ್ತಾಯಿಸಲಾಯಿತು.

ಇತ್ತೀಚಿನ ೨೦೦೪ರ ಮಹಾ ಚುನಾವಣೆ ಯಂತೂ ಜಗತ್ತಿನ ಆಸಕ್ತರನ್ನೆಲ್ಲ ದಂಗುಬಡಿ ಸುವಂಥ ಫಲಿತಾಂಶವನ್ನು ಕೊಟ್ಟಿದೆ. ಇದರಲ್ಲಿ ಯಾವ ಪಕ್ಷವೂ ನಮ್ಮದಲ್ಲವೆಂದು ನಿರಾಕೃತವಾಗಲಿಲ್ಲ ಅಥವಾ ಯಾವ ಪಕ್ಷವೂ ನಮ್ಮ ನಿಜ ಹಿತೈಷಿಯೆಂದು ಪುರಸ್ಕೃತವಾಗಿಲ್ಲ. ಎಲ್ಲ ಪಕ್ಷಗಳಿಗೂ ಅವರವರಿಗೆ ಅವರವರ ಸ್ಥಳ ಯಾವುದು ಎಂಬುದನ್ನು ಕಾಣಿಸಿ ಕೊಡಿಸಲಾಗಿದೆ. ಈ ಸಲದ ಆಯ್ಕೆಯು ಪಕ್ಷ ಮತ್ತು ಪ್ರತಿನಿಧಿಗಳಿಗೆ ಹಿಂದಿನ ಥರದ ಸುಲಭ ನಿರ್ಣಯಗಳ ಅವಕಾಶವನ್ನೇ ಕಿತ್ತುಹಾಕಿ, ಶ್ರಮಪಟ್ಟು ಹೆಚ್ಚಿನ ವಿವೇಕಗಳಿಸಿಕೊಳ್ಳುತ್ತ ಬಲು ಎಚ್ಚರದಲ್ಲಿ ಮಿಶ್ರಾಡಳಿತ ನಿರ್ವಹಿಸಬೇಕಾದ ದೊಡ್ಡ ಸವಾಲಿಟ್ಟು, ದೊಡ್ಡ ಜವಾಬ್ದಾರಿ ಯನ್ನು ವಿಧಿಸಲಾಗಿದೆ.

ಪಕ್ಷಗಳ ಆಯ್ಕೆಯ ವಿಷಯವಾದ ಮೇಲೆ ಎರಡನೆಯದಾಗಿ–ಈ ದೇಶದಲ್ಲಿ ಸಾಧಿತವಗಿರುವ ಮೌಲಿಕ ಸಾಧನೆಗಳಲ್ಲಿ ಈ ಜನರ ಪಾತ್ರವೇನು ಎಂಬುದನ್ನು ಗಮನಿಸಬಹುದು. ಭೂಸುಧಾರಣೆ, ಅಸ್ಪೃಶ್ಯತಾ ನಿವಾರಣೆ, ಪಂಚಾಯತಿ ರಾಜ್ಯವ್ಯವಸ್ಥೆ, ಮೀಸಲಾತಿಯ ವಿಧೇಯಕ, ರಾಷ್ಟ್ರೀಕರಣ ನೀತಿ ಮುಂತಾದವು–ಇವೆಲ್ಲವೂ ಅದೆಷ್ಟೇ ದೋಷಪೂರ್ಣವಾಗಿರಲಿ ಅಥವಾ ಕ್ರಮವಾಗಿ ಜಾರಿಗೊಳ್ಳದೆ ಉಳಿದಿರಲಿ ದೇಶದ ಮೌಲಿಕ ರಾಜನೀತಿಯಾಗಿ ಒಪ್ಪಿತವಾಗಿರುವುದು ಬಹುದೊಡ್ಡ ಸಾಧನೆ; ಜಗತ್ತಿನ ಯಾವುದೇ ಅಭಿವೃದ್ಧಿಶೀಲ ರಾಷ್ಟ್ರವೂ ಹೆಮ್ಮೆ ಪಟ್ಟುಕೊಳ್ಳುವಂಥ ಸಾಧನೆಗಳು, ಇವು ಒಂದೊಂದೂ ನಮ್ಮ ಯಾವುದೇ ರಾಜಕೀಯ ಪಕ್ಷದ ತೆವಲು ಹೋರಾಟಗಳಿಂದ ಸಾಧಿತ ವಾದ್ದಲ್ಲ; ಈ ಎಲ್ಲ ವಿಷಯಗಳ ಬಗ್ಗೆಯೂ ನಮ್ಮ ಎಲ್ಲಾ ಪಕ್ಷಗಳಲ್ಲೂ ಅರೆಮನಸ್ಸು–ಅನುಮಾನ– ವಿರೋಧಗಳಿದ್ದವು. ಇದೇನಿದ್ದರೂ ಜನರು, ತಮ್ಮ ಓಟಿನ ಅಧಿಕಾರದ ಒತ್ತಡ ತಂದು ಸರ್ಕಾರಕ್ಕೆ ಆದೇಶಕೊಟ್ಟು ತಾವೇ ಮಾಡಿಸಿಕೊಂಡದ್ದು. ಮೂರನೆಯದಾಗಿ, ಅಭಿವೃದ್ಧಿಯೆಂಬ ವಿಷಯಕ್ಕೆ ಬಂದರೆ–ಮುಖ್ಯವಾಗಿ ಆಹಾರ ಸ್ವಾವಲಂಬನೆ ಕ್ಷೀರೋದ್ಯಮ ಬೆಳವಣಿಗೆ ಇತ್ಯಾದಿಗಳಲ್ಲಿ ಜನರು ಸರ್ಕಾರಿ ಯೋಜನೆಗಳನ್ನು ಒಪ್ಪಿ ಅವನ್ನು ಸ್ವತಃ ಶ್ರಮದಿಂದ ಆಗುಗೊಳಿಸಿದ್ದಾರೆ; ಗ್ರಾಮಾಂತರ ಸುಧಾರಣೆಗಳನ್ನು (ರಸ್ತೆ- ಶಾಲೆ–ಆಸ್ಪತ್ರೆ–ಅಂಚೆ–ವಿದ್ಯುತ್ತು ಇ.) ಒತ್ತಡ ಹೇರಿ ಮಾಡಿಸಿಕೊಂಡಿದ್ದಾರೆ. ಅಭಿವೃದ್ಧಿಗೆ ಸಂಬಂಧಿಸಿ ಜನರಿಗೆ ಅರಿತುಕೊಳ್ಳಲು ಮತ್ತು, ಪಾಲುಗೊಳ್ಳಲು ಸಾಧ್ಯವಾಗದೆ ಹೋಗಿರುವ ಸಂಗತಿಗಳೆಂದರೆ–ತಜ್ಞರಿಂದಲೇ ಯೋಜಿತ ವಾಗಿ ನಿರ್ವಹಣೆಗೊಂಡ ಆಧುನಿಕ ಬೃಹತ್ ಯೋಜನೆಗಳು.

ಈವಿಭಾಗದಲ್ಲಿ ಜನರು ರಾಷ್ಟ್ರಪ್ರಕ್ರಿಯೆಯಿಂದ ಸಂಪೂರ್ಣ ಪ್ರತ್ಯೇಕಗೊಂಡು ಹೊರಗೆ ನಿಲ್ಲುವಂತಾಯಿತು. ನಮ್ಮ ಮಹಾನೇತಾರ ನೆಹರೂ ಅವರೇ ಕ್ರಮಕ್ರಮೇಣ, ಜನರ ಉತ್ಪಾದನ ಸಾಮರ್ಥ್ಯವನ್ನು ಕಡೆಗಣಿಸಿ ತಜ್ಞರ ಉದ್ಯಮ ಸಾಮರ್ಥ್ಯವನ್ನು ಅತಿಯಾಗಿ ನಂಬಿಕೊಂಡದ್ದನ್ನು ನಾವು ಕಂಡಿದ್ದೇವೆ. ಇಂಥ ನಂಬಿಕೆಯಲ್ಲಿ ನೆಹರೂ ತಜ್ಞರ ಬಲವಿರುವ ತನ್ನ ಸರ್ಕಾರವೇ ಎಲ್ಲವನ್ನೂ ಸಾಧಿಸಬಲ್ಲುದು ಮತ್ತು ಜನರೇನಿದ್ದರೂ ತನಗೆ ಬೆಂಬಲಕೊಟ್ಟು ನಿಲ್ಲವ ಶಕ್ತಿಯಾಗಬೇಕು ಎಂದು ಅಪೇಕ್ಷಿಸತೊಡಗಿದರು. ಹೀಗೆ ಬಹುದೊಡ್ಡ ಜನತಂತ್ರವಾದಿ ನೆಹರೂ., ಅರಿವಿಲ್ಲದೆಯೇ ಜನರನ್ನು ಓಟಿನ ಭಂಡಾರವೆಂದಷ್ಟೇ ಗಣಿಸುವ ಸ್ಥಿತಿಗೆ ತಲುಪುವಂತಾದ್ದು ಒಂದು ಕ್ರೂರ ವ್ಯಂಗ್ಯ.

ಹೀಗೆ, ನನ್ನ ಅರಿವಿನ ಮಿತಿಯೊಳಗೆ, ಎಲ್ಲವನ್ನೂ, ಆಲೋಚಿಸುತ್ತ, ಕ್ರಮೇಣ ನನಗೆ, ನಮ್ಮ ಜನತಂತ್ರವು ಸಮುದಾಯ ಲಕ್ಷಣಗಳನ್ನು ಕಾಣಿಸುವಂಥದು ಎನ್ನುವುದು ದೃಢವಾಯಿತು.

....

ಈ ಹಂತದಲ್ಲಿ, ನಾನು ಈತನಕ ಹೇಳುತ್ತ ಬಂದ 'ಜನರು' ಎಂಬ ಮಾತನ್ನು ವಿವರಿಸಬೇಕು. ಒಟ್ಟೂ ಭಾರತೀಯ ನಾಗರಿಕರಲ್ಲಿ ಯಾರನ್ನು ನಾನು 'ಜನರು' ಎಂದು ನಿರ್ದೇಶಿಸುತ್ತಿದ್ದೇನೆ? ಆಧುನಿಕ ಕಾಲದ ಭಾರತೀಯ ಜನಪದದಲ್ಲಿ ಬಹು ಸ್ಪಷ್ಟವಾದ ವಿಭಜನೆಯೊಂದು ಕಲ್ಪಿತವಾಗಿಬಿಟ್ಟಿದೆ ಅಂತ ಬಹುತೇಕ ಎಲ್ಲರೂ ಈಗಾಗಲೇ ಗುರುತಿಸಿದ್ದಾರೆ ಮತ್ತು ಆ ವಿಭಜನೆಯನ್ನು, ಅಕ್ಷರಸ್ಥ ಮತ್ತು ಅನಕ್ಷರಸ್ಥ ಎಂದೋ ಅಥವಾ ನಗರಭಾರತ ಮತ್ತು ಗ್ರಾಮಭಾರತ ಎಂದೋ ಅಥವಾ ಇಂಡಿಯಾ ಮತ್ತು ಭಾರತ ಎಂದೋ ಭಿನ್ನ ಹೆಸರುಗಳನ್ನಿಟ್ಟು ವ್ಯಾಖ್ಯಾನಿಸಿದ್ದಾರೆ. ಹೀಗೇ ನಾನು ಎರಡು ಹೆಸರಿಟ್ಟು ಹೇಳಬೇಕೆಂದರೆ, ಸ್ಥೂಲವಾಗಿ, ಶಿಕ್ಷಿತ ಆಧುನಿಕರು ಮತ್ತು ಅಂಥ ವಿಶೇಷಣವನ್ನು ಹಚ್ಚಲಿಕ್ಕಾಗದಿರುವ 'ಜನರು' ಎನ್ನುತ್ತೇನೆ. ಇಂಡಿಯಾ ಮತ್ತು ಭಾರತ ಇತ್ಯಾದಿ ಮೇಲಿನ ವಿಭಜನೆಗಳಿಗೆ ಇದೂ ಹೆಚ್ಚು ಕಡಿಮೆ ಹೊಂದಿಕೊಳ್ಳವಂಥ ವಿಭಜನೆಯೇ.

ವಿಭಜನೆಯು ಹೆಚ್ಚು ಮೂರ್ತ ಸ್ವರೂಪದ್ದಾಗಿರಲಿ ಎಂದು, ಇದಕ್ಕೆ ನಾನು ಮತಚಲಾವಣೆಯ ಮಾನದಂಡವನ್ನು ಬಳಸುತ್ತೇನೆ. ಕಳೆದ ಸು. ಐವತ್ತೈದು ವರ್ಷಗಳ ನಮ್ಮ ಚುನಾವಣೆಗಳು ಮತ್ತು ಅದರಲ್ಲಿ ಮತಚಲಾಯಿಸಿದವರ ಅಂದಾಜು ಸಂಖ್ಯೆ ಇವುಗಳನ್ನು ಗಮನಿಸಿದರೆ, ನಮ್ಮ ಜನಸಂಖ್ಯೆಯಲ್ಲಿನ ಸು. ಶೇ. ಅರುವತ್ತೆಪ್ಪತ್ತು ಮಂದಿ, ಸತತವಾಗಿ ಶ್ರದ್ಧೆಯಿಂದ ಮತಚಲಾಯಿಸುತ್ತ ಬಂದಿರು ವುದನ್ನು ಕಾಣುತ್ತೇವೆ. ಇಂಥವರನ್ನು, ಎಂದರೆ ಅದಾವುದೋ ಗಾಢವಾದ ನಂಬಿಕೆಯಿಂದ ಮತಚಲಾಯಿಸುತ್ತ ಬಂದವರನ್ನು ನಾನು 'ಜನರು' ಎನ್ನುತ್ತೇನೆ. ಇವರೇ ನಮ್ಮ 'ಸಮುದಾಯ'ದ (ಅಥವಾ ಸಮುದಾಯಜನತಂತ್ರದ) ಗಟ್ಟಿ ತಿರುಳು. ಇನ್ನುಳಿದ ಮೂವತ್ತು ನಲವತ್ತರಷ್ಟು ಮಂದಿ ಶಿಕ್ಷಿತ ಆಧುನಿಕರು ಎನ್ನಬಹುದು. ಈ ಶಿಕ್ಷಿತ ಆಧುನಿಕರಲ್ಲಿ ಪುನಃ ಹಲವಾರು ವಿವಿಧ ನೇಸಲುಗಳ ಜನರಿದ್ದು, ಅವರು ಸಮುದಾಯ ತಿರುಳಿನ ಸುತ್ತ, ಅದಕ್ಕೆ ತಾಗಿಕೊಂಡು ಆದರೆ ಅದರೊಳಕ್ಕೆ ಅಂತರ್ಗತವಾಗದೆ. ಹೊರ ಕವಚಗಳಾಗಿ ಸುತ್ತಿಕೊಂಡಿ ರುವವರು.

> **ಈ ದೇಶದಲ್ಲಿ ಸಾಧಿತವಗಿರುವ ಮೌಲಿಕ ಸಾಧನೆಗಳಲ್ಲಿ ಈ ಜನರ ಪಾತ್ರವೇನು ಎಂಬುದನ್ನು ಗಮನಿಸಬಹುದು. ಭೂಸುಧಾರಣೆ, ಅಸ್ಪೃಶ್ಯತಾ ನಿವಾರಣೆ, ಪಂಚಾಯತಿ ರಾಜ್ಯವ್ಯವಸ್ಥೆ, ಮೀಸಲಾತಿಯ ವಿಧೇಯಕ, ರಾಷ್ಟ್ರೀಕರಣ ನೀತಿ ಮುಂತಾದವು–ಇವೆಲ್ಲವೂ ಅದೆಷ್ಟೇ ದೋಷಪೂರ್ಣವಾಗಿರಲಿ ಅಥವಾ ಕ್ರಮವಾಗಿ ಜಾರಿಗೊಳ್ಳದೆ ಉಳಿದಿರಲಿ ದೇಶದ ಮೌಲಿಕ ರಾಜನೀತಿಯಾಗಿ ಒಪ್ಪಿತವಾಗಿರುವುದು ಬಹುದೊಡ್ಡ ಸಾಧನೆ; ಜಗತ್ತಿನ ಯಾವುದೇ ಅಭಿವೃದ್ಧಿಶೀಲ ರಾಷ್ಟ್ರವೂ ಹೆಮ್ಮೆ ಪಟ್ಟುಕೊಳ್ಳುವಂಥ ಸಾಧನೆಗಳು, ಇವು ಒಂದೊಂದೂ ನಮ್ಮ ಯಾವುದೇ ರಾಜಕೀಯ ಪಕ್ಷದ ತೆವಲು ಹೋರಾಟಗಳಿಂದ ಸಾಧಿತ ವಾದ್ದಲ್ಲ; ಈ ಎಲ್ಲ ವಿಷಯಗಳ ಬಗ್ಗೆಯೂ ನಮ್ಮ ಎಲ್ಲಾ ಪಕ್ಷಗಳಲ್ಲೂ ಅರೆಮನಸ್ಸು–ಅನುಮಾನ–ವಿರೋಧಗಳಿದ್ದವು. ಇದೇನಿದ್ದರೂ ಜನರು, ತಮ್ಮ ಓಟಿನ ಅಧಿಕಾರದ ಒತ್ತಡ ತಂದು ಸರ್ಕಾರಕ್ಕೆ ಆದೇಶಕೊಟ್ಟು ತಾವೇ ಮಾಡಿಸಿಕೊಂಡದ್ದು.**

ಇಂಥವರಲ್ಲಿ, ನಮ್ಮ ಪ್ರಜಾತಂತ್ರದ ಬಗ್ಗೆ ಆಳವಾದ ನಂಬಿಕೆಯಿಲ್ಲದೆ ಕಾಲಕಾಲಕ್ಕೆ ಬೇಸರ–ಸಂದೇಹ–ಸಿನಿಕತೆಗಳಿಂದ ವಿಚಲಿತರಾಗುತ್ತ ಒಮ್ಮೊಮ್ಮೆ ಉಮೇದು ಬಂದಾಗ ಮಾತ್ರ ಗೊಣಗುತ್ತಲೇ ಮತಚಲಾಯಿ ಸುವವರಿದ್ದಾರೆ. ಅಥವಾ–ಸಂವಿಧಾನದಲ್ಲಿ ಬದಲಾವಣೆ ಯಾಗಬೇಕು, ಚುನಾವಣಾ ಕ್ರಮವನ್ನು ಕ್ರಾಂತಿಕರಕವಾಗಿ ಪುನರ್ರೂಪಿಸಬೇಕು. ನಮ್ಮ ಪಕ್ಷರಾಜಕಾರಣದ ಪದ್ಧತಿಯಲ್ಲೇ ದೊಡ್ಡ ದೋಷಗಳಿವೆ–ಇತ್ಯಾದಿ ಇತ್ಯಾದಿ ತಮ್ಮ ಯೋಚನೆಯ ಗೊಂದಲಗಳನ್ನೆಲ್ಲ ಬಹಿರಂಗವಾಗಿ ಚರ್ಚಿಸುತ್ತ ಪ್ರಕಟಿಸುತ್ತ ಪ್ರಸಾರಗೊಳಿಸುತ್ತ ಆ ಮೂಲಕ ಪ್ರಜಾತಂತ್ರವನ್ನು ದಾರಿಗೆ ಹಚ್ಚಬೇಕೆನ್ನುವ ಧೀರಸುಧಾರಕರಿದ್ದಾರೆ. ಆದರೆ ಇಂಥವರಲ್ಲಿ ಹೆಚ್ಚು ಮಂದಿ ತಮ್ಮ 'ವೈಚಾರಿಕತೆ'ಯ ಬಹಿರಂಗ ಪ್ರದರ್ಶನದ ಕಡೆಗೇ ಕೇಂದ್ರೀಕರಿಸಿ ಮತಚಲಾವಣೆಯಲ್ಲಿ ಮಾತ್ರ ಪಾಲುಗಳ್ಳೊದೆ ಹೊರಗೇ ಉಳಿಯುತ್ತಾರೆ.

ಈ ಮೇಲೆ ಹೇಳಿದ ತಿರುಳು ಜನವರ್ಗವನ್ನು (ಸು.ಶೇ. ೬೦–೭೦) ಜನತಂತ್ರ ಕಲ್ಪನೆಯ 'ಆಸ್ತಿಕರು' ಎಂದೂ ಉಳಿದವರನ್ನು 'ಅಸ್ಥಿರರು' ಅಥವಾ 'ನಾಸ್ತಿಕರು' ಎಂದೂ ವಿಭಜಿಸಿ ಹೇಳಬಹುದು. ಯಾಕೆಂದರೆ, ಸಮುದಾಯ ಕಲ್ಪನೆಯು ಮೂಲತಃ ಭಾವನಾತ್ಮಕ ಕಲ್ಪನೆ–ಸುಮಾರಾಗಿ ಭಾರತಮಾತೆ ಅಥವಾ ಕನ್ನಡತಾಯಿ ಇ. ಕಲ್ಪನೆಗಳ ಹಾಗೆ. ಇದೇನಿದ್ದರೂ ದೃಶ್ಯ ಭೌತಿಕ ಆಸ್ತಿತ್ವಕ್ಕಿಂತ ಹೆಚ್ಚಾಗಿ, ಅಥವಾ ಅದಿಲ್ಲದಿದ್ದಾಗ್ಯೂ, ಕಲ್ಪಿತವಾಗುವ ಒಂದು ಮನೋರಚನೆ. ಇಲ್ಲಿ ನಂಬಿಕೆಯೇ ಆದ್ಯಪ್ರಮಾಣ: ಉಳಿದವು ಗೌಣ. ಇದನ್ನು ಪ್ರತ್ಯಕ್ಷ ಅಥವಾ ತಾರ್ಕಿಕ ಪ್ರಮಾಣದಿಂದ ಅಳೆಯಲಿಕ್ಕೆ ಬರುವುದಿಲ್ಲ. ಇಲ್ಲಿ ಈ ನಿಶ್ಚಿತ ತಿರುಳು ಜನವರ್ಗ ಮತ್ತು ಸಮುದಾಯ ವೆಂಬೆರಡನ್ನು ಸಮೀಕರಿಸುತ್ತಿರುವುದರಿಂದ, ಇದರಿಂದ ಅದನ್ನೂ ಅದರಿಂದ ಇದನ್ನೂ ಪರಸ್ಪರ ತಾಳೆನೋಡಿಕೊಳ್ಳುತ್ತ ಹೋಗಬೇಕಾಗುತ್ತದೆ.

ಪ್ರಾರಂಭದಲ್ಲೇ ನಾನು ಪ್ರಸ್ತಾಪಿಸಿದ 'ಬೆಂಕಿಯ ಘಟನೆ'ಯನ್ನು ಪುನಃ ನೆನಪಿಸಿಕೊಳ್ಳಬೇಕು. ಅವತ್ತು ಅಲ್ಲಿ ಬೆಂಕಿ ಆರಿಸಲು ಬಂದು ಕೂಡಿಕೊಂಡವರು–

೧.ಯಾವುದೇ ಕರೆ ಅಥವಾ ಕಟ್ಟಳೆಗಳಿಂದ ನೇರ ಬದ್ಧರಾಗಿ ಬಂದವರಲ್ಲ; ಬಹುತೇಕ ತಮ್ಮದೇ ಒಳ ಒತ್ತಡದಿಂದ ಪ್ರೇರಿತರಾಗಿ ಸ್ವಯಮೇವ ಬಂದವರು. ೨. ಯಾವದೋ ನಿರ್ದಿಷ್ಟವಾದ ನಿಶ್ಚಿತ ಅಂತಿಮ ಫಲವನ್ನು ಕಲ್ಪಿಸಿಕೊಂಡು ಅದನ್ನು ಪಡೆದುಕೊಳ್ಳುವೆವೆಂಬ ಸಂಕಲ್ಪದಿಂದ ಬಂದವರಲ್ಲ; (ಉದಾ–ಅಂಗಡಿಗೆ ಹೋಗಿ ಇಂಥದೊಂದು ವಸ್ತುವನ್ನು ಕೊಂಡು ತರಬೇಕು ಎನ್ನುವಂತೆ, ಅಥವಾ ಮಕ್ಕಳನ್ನು ಶಾಲೆಗೆ ಕಳಿಸಿ ಅವರ ಶಿಕ್ಷಣ ಮತ್ತು ಉತ್ತೀರ್ಣತೆಯನ್ನು ಗಳಿಸಿಕೊಳ್ಳ ಬೇಕು ಎನ್ನುವಂತೆ ಅಲ್ಲ.) ಇದನ್ನು ೧. ಸ್ವಯಂ ಸೇವೆ, ೨ ಫಲತಾಟಸ್ಥ್ಯ ಎನ್ನೋಣ.

ನಮ್ಮ ಪ್ರಜಾತಂತ್ರದ ವಿಧಾನಚಟುವಟಿಕೆ (ಮುಖ್ಯವಾಗಿ ಚುನಾವಣಾಕ್ರಿಯೆಗಳಲ್ಲಿ ತೊಡಗಿಕೊಂಡು 'ಜನರು' (ಸಮುದಾಯ ತಿರುಳು) ಕೂಡಾ–೧.ಯಾವ ಕಟ್ಟು ಕಡ್ಡಾಯಗಳಿಲ್ಲದೆ ಸ್ವಂತ ಉಮೇದು ಉತ್ಸಹ ಪ್ರೇರಣೆಗಳಿಂದ ಬರುವವರು ಮತ್ತು ಅದೊಂದು ಊರಿನ ಉತ್ಸಹವವೆನ್ನುವಂತೆ ನಂಬಿಕೆಯಿಂದ ಹಾಗೂ ಖುಶಿಯಿಂದ ಬರುವವರು;೨. ಇದರಲ್ಲಿ ಪಾಲ್ಗೊಳ್ಳವುದರಿಂದ ದೊಡ್ಡ ದೇಶೋದ್ಧಾರವಾಗುತ್ತದೆ ಅಂತಲೋ ಅಥವಾ ತನ್ನ ಸ್ವಂತ ಹಸಿವು–ಬಡತನ–ಬವಣೆ–ಅರಕೆಗಳು ಮರುದಿನದಿಂದಲೇ ದೂರವಾಗುತ್ತವೆ ಅಂತಲೋ ನಿಶ್ಚಿತ ಉದ್ದೇಶವಿಟ್ಟುಕೊಂಡು ಅದನ್ನು ಸಾಧಿಸಿಕೊಳ್ಳಲಿಕ್ಕಾಗಿ ಬರುವವರೂ ಅಲ್ಲ. ಅಂದರೆ, ಸಮುದಾಯವೆಂಬ ದೃಷ್ಟಾಂತದಲ್ಲಿ ಕಂಡ ಗುಣಗಳನ್ನು ಈ ತಿರುಳುಜನ ವರ್ಗದಲ್ಲೂ ಕಾಣುತ್ತೇವಾದ್ದರಿಂದ ಇದನ್ನು ನಾನು ಸಮುದಾಯವೆಂದು ಭಾವಿಸುತ್ತೇವೆ.

....

ಈತನಕದ ನನ್ನ ಮಾತುಗಳ ಹಿನ್ನೆಲೆಯಲ್ಲಿ ಮತ್ತು, ಈ ಒಂದು ಹಂತದಲ್ಲಿ, ನಮಗೆ ಉಂಟಾಗಬಹುದಾದ ಮುಖ್ಯ ಸಂದೇಹವನ್ನು ಪೂರ್ವಪಕ್ಷವಾಗಿ ಮಂಡಿಸಿಕೊಂಡು ಅದಕ್ಕೆ ಉತ್ತರ ಹೇಳಬೇಕು. ನಮ್ಮ ಈ ಇಂಡಿಯಾ ದೇಶವು ನೂರುಕೋಟಿ ಮಿಕ್ಕು ಜನ ಬಾಹುಳ್ಯವಿರುವ, ಬಹುಶಃ ಜಗತ್ತಿನಲ್ಲೇ ಹೆಚ್ಚು ವೈವಿಧ್ಯ ವೈರುದ್ಧ್ಯಗಳಿಂದ ತುಂಬಿರುವ ಪ್ರದೇಶ. ಈ ಅಪಾರ ವ್ಯಾಪ್ತಿ ಭಿನ್ನತೆಗಳಿರುವ ಜನವರ್ಗವು 'ಜನತಂತ್ರ'ವೆಂಬ ಕಲ್ಪನೆಯಲ್ಲಿ, ಅದೂ ವಿಧಾನರಾಜಕಾರಣ ಚಟುವಟಿಕೆಯ ವಿರಳ ಸಂದರ್ಭಗಳಲ್ಲಿ ಏಕ ಕಾಲಕ್ಕೆ ಏಕೋ ಮನಸ್ಸಿನ ಏಕೋ ಸಮುದಾಯವಾಗಿ ಕರಗಿಕೊಂಡು ಬಿಡುತ್ತದೆ ಅಂತ ಯೋಚಿಸುವುದೂ ಕಷ್ಟವಲ್ಲವೆ? ಇದು ಒಂದು ಮುಖದ ಸಂದೇಹವಾದರೆ, ಇದೇ ಸಂದೇಹದ ಇನ್ನೊಂದು ಮುಖವಿದೆ. ನಮ್ಮ ಆಧುನಿಕ ಅಥವಾ ಅಕ್ಷರಸ್ಥ ಜನವರ್ಗದಲ್ಲಿ ಸಾಮಾನ್ಯವಾಗಿರುವ (ಮತ್ತು, ಇದೇ ಈಗಾಗಲೇ ಇದ್ದುಬಿಟ್ಟಿದೆ) ಹೀಗೆ: ಪ್ರಜಾತಂತ್ರವೆಂಬ

ಆಡಳಿತಪದ್ಧತಿಯನ್ನು ನಾವು ಪಶ್ಚಿಮದಿಂದ, ಮುಖ್ಯವಾಗಿ, ಇಂಗ್ಲೀಷರಿಂದ ಸ್ವೀಕರಿಸಿ, ರೂಢಿಗೊಳಿಸಿಕೊಳ್ಳಲು ತೊಡಗಿದ್ದೇವೆ; ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಅದನ್ನು ಅನೇಕ ಶತಮಾನಗಳಿಂದ ಕ್ರಮವಾಗಿ ರೂಢಿಗೊಳಿಸಿಕೊಂಡು ಮುಂದುವರಿದಿದ್ದಾರೆ. ನಾವೂ ಅವರ ಹಾಗೆ ಈ ಪದ್ಧತಿಯನ್ನು ರೂಢಿಸಿ ಕೈವಶಗೊಳಿಸಿಕೊಳ್ಳಲು ಅನೇಕ ಶತಮಾನಗಳೇ ಬೇಕು; ನಮಗೆ ಮತ್ತು ನಮ್ಮ ಉಪಖಂಡದ ಜೀವನ ಪರಂಪರೆಗೆ ಇದು ತೀರಾ ಹೊಸತು-ಇಂಥ ತಿಳಿವಳಿಕೆ ಯನ್ನಿಟ್ಟುಕೊಂಡೇ ನಾವು (ಆಧುನಿಕರು) ಈ ಪದ್ಧತಿಯ ಬಾಳಿಕೆ ಮತ್ತು ಯಶಸ್ಸಿನ ಬಗ್ಗೆ ಕಾತರರಾಗಿದ್ದೇವೆ; ಸಾಮಾನ್ಯ ಜನರ ಅಶಿಕ್ಷಿತತೆ ಅಜ್ಞಾನಗಳ ಬಗ್ಗೆ ಚಿಂತಿಸುತ್ತ, ಅವರನ್ನು ಶಿಕ್ಷಿತ ನಾಗರಿಕ ಪ್ರಜೆಗಳನ್ನಾಗಿಸುವ ಬಗ್ಗೆ ಯೋಜನೆ ಚಟುವಟಿಕೆಗಳನ್ನು ನಡೆಸುತ್ತಿದ್ದೇವೆ, ಬಲು ಕಾಳಜಿಯಿಂದ. ಈ ಹಿನ್ನೆಲೆಯಲ್ಲಿ, ತೀರಾ ಭಿನ್ನವಾದ 'ಸಮುದಾಯ' ವೆಂಬ ಯಾ ಕಾಲದ್ದೋ ಒಂದು ಕಲ್ಪನೆಯನ್ನು ತೂರುಸಿಬಿಟ್ಟರೆ, ಅದರಿಂದ ಇನ್ನೂ ಬೇರುಕೊಡದ ಹೊಸ ವ್ಯವಸ್ಥೆಯನ್ನು ಶಿಥಿಲಗೊಳಿಸಿ ಹಾಳುಮಾಡಿದಂತಾಗುವುದಿಲ್ಲವೆ?.

ಉತ್ತರಿಸುತ್ತೇನೆ: ಜನತಂತ್ರ ವ್ಯವಸ್ಥೆಯು ನಮಗೆ ಹೊಚ್ಚಹೊಸದು ನಿಜ. ಅದರೆ ಹೊಸತು-ಹಳತೆಂಬ ಮಾತು ಅಷ್ಟು ಸರಳವಾದದ್ದಲ್ಲ. ಹೊಚ್ಚಹೊಸತೆಂಬುದು ಹಚ್ಚ ಹಳೆಯದೂ ಆಗಿರಲಿಕ್ಕೆ ಸಾಧ್ಯ. ಇತಿಹಾಸದ ವಿನ್ಯಾಸವು ಕಾಲಕಾಲಕ್ಕೆ ಬದಲಾಗುತ್ತಲೆ ಇರುವಂಥದು ಎನ್ನುವಹಾಗೆ, ಇತಿಹಾಸವು ಸದಾ ಮರುಕಳಿಸುತ್ತಿರುತ್ತದೆ ಅಂತಲೂ ಹೇಳುತ್ತಾರಲ್ಲ? ಹತ್ತೈವತ್ತು ವರ್ಷಗಳಲ್ಲಿ ನಾವೇ ಆಶ್ಚರ್ಯವಾಗುವಷ್ಟು ಬದಲಾವಣೆಗಳನ್ನು ಕಂಡಿರುತ್ತೇವೆ; ಹಾಗಾದರೂ ಮನುಷ್ಯನ ಮನಸ್ಸು ಬುದ್ಧಿ ಇ., ಮೂಲ ದ್ರವ್ಯಗಳಲ್ಲಿ ಅದೆಷ್ಟು ಸಹಸ್ರಮಾನ ಕಳೆದರೂ ಬದಲಾಗಲೇ ಇಲ್ಲವಲ್ಲ ಅಂತಲೂ ಅಚ್ಚರಿಗೊಳ್ಳುತ್ತೇವೆ.

ಉದಾಹಣೆಗೆ, ಡೆಮಾಕ್ರಸಿಯೆಂಬ ಕಲ್ಪನೆಯು ಅಂಕುರಗೋಳ್ಳವುದಕ್ಕೆ ಮೊದಲೇ ಎಷ್ಟೋ ಹಿಂದೆ ಗ್ರೀಕರ 'ನಗರರಾಜ್ಯ'ಗಳಲ್ಲಿ ಆಯ್ಕೆಗೊಂಡ ಜನಪ್ರತಿನಿಧಿಗಳೇ ಆಡಳಿತ ನಡೆಸುತ್ತಿದ್ದರು. ಅಥವಾ ಬೌದ್ಧಯುಗದ ಉತ್ತರ ಭಾರತದಲ್ಲಿ ಜನಪ್ರತಿನಿಧಿಗಳಿಂದ ನಡೆಯುತ್ತಿದ್ದ 'ಗಣರಾಜ್ಯ'ಗಳಿದ್ದವು. ಆ ಕಾಲದಲ್ಲಿ ಮತಚಲಾವಣೆಯ ಪ್ರಕ್ರಿಯ ಹೇಗೆ ನಡೆಯುತ್ತಿತ್ತು ಎಂಬ ವಿವರಗಳೂ ಪ್ರಾಚೀನ ಶಾಬ್ದಿಕ ದಾಖಲೆಗಳಲ್ಲಿ ದೊರೆತಿವೆ.ಅಥವಾ ಆಧುನಿಕ ಕಾಲದಲ್ಲೂ ಇತಿಹಾಸಪೂರ್ವ ಅವಸ್ಥೆಯಲ್ಲೇ ಬದುಕುತ್ತಿದ್ದ ಅಮೆರಿಕದ ಬುಡಕಟ್ಟು ಜನರ ಜೀವನಕ್ರಮವು 'ಪ್ರಿಮಿಟಿವ್ ಕಮ್ಯುನಿಸಮ್' ಎಂಬ ಸ್ವರೂಪದ್ದೆಂದು ಕಂಡು, ಎಂಗೆಲ್ಸ್ ಮತ್ತು ಮಾರ್ಕ್ಸ್‌ರ ಹೊಚ್ಚಹೊಸ 'ಕಮ್ಯುನಿಸಮ್' ಸಿದ್ಧಾಂತಕ್ಕೆ ಅದು ಪೂರ್ವಮಾದರಿಯಾಯಿತು. ಹೀಗೆ ಹಳತು-ಹೊಸತು ಗಳೆಂಬ ಜಿಜ್ಞಾಸೆಗಳು ಅತ್ಯಂತ ಸಂಕೀರ್ಣವಾದವು.

ಭಾರತವೆಂಬ ಬೃಹದ್ದೇಶವೊಂದು ಇತಿಹಾಸದಲ್ಲಿ ಯಾವತ್ತೂ ವಾಸ್ತವಿಕವಾಗಿ ಇರಲೇ ಇಲ್ಲ. ಎಲ್ಲಕ್ಕಿಂತ ದೊಡ್ಡದಾಗಿತ್ತೆನ್ನುವ ಅಶೋಕನ ಸಾಮ್ರಾಜ್ಯವು ಕೂಡಾ, ಇಂಗ್ಲೀಷರ ಒಗ್ಗೂಡಿಸಿ ನಿರ್ಮಿಸಿದ ಇಂಡಿಯಾಕ್ಕೆ ಹೋಲಿಸಿದರೆ ಇದರ ಅರ್ಧವೋ ಮುಕ್ಕಾಲೋ ಇದ್ದಿರಬಹುದು. ಹೀಗೆ ಏಕಾಡಳಿತದ ಭೂಘಟಕವಾಗಿ ಯಾವತ್ತೂ ಇದ್ದಿಲ್ಲದ ಈ ಉಪಖಂಡವು ಭಾರತ-ಭರತವರ್ಷ ಆರ್ಯಾವರ್ತ-ದಕ್ಷಣಾಪಥ ಮುಂತಾದ



ಹೆಸರುಗಳಿಂದ ಜನಪದ ಭಾವಕಲ್ಪನೆಯಲ್ಲಿ ಮೈದಾಳಿಕೊಂಡಿದ್ದವು. ಭಾವದ ನೆಲೆಯ ಈ ಮನೋರಚನೆಗಳು ನಮ್ಮಲ್ಲಿ ಹಲವು ಸಹಸ್ರ ವರ್ಷಗಳಿಂದ ಬಾಳೀಬಂದಿವೆ. ಹಿಮಾಲಯ ವಿಂಧ್ಯ ಮುಂತಾದ ಮಹಾಪರ್ವತಗಳು, ಉತ್ತರ ತುದಿಯಿಂದ ದಕ್ಷಿತುದಿ ತನಕವಿದ್ದ ಹಲವು ಮಹಾನದಿಗಳು ಹಾಗೂ ಎಲ್ಲಕಡೆ ಹರಡಿಕೊಂಡಿದ್ದ ಯಾತ್ರಾಕ್ಷೇತ್ರಗಳು ಮುಂತಾದ ಆ ಕಲ್ಪನೆಗೆ ಸೂಕ್ತ ಭೌತಿಕ ನೆಲೆಗಳನ್ನು ಒದಗಿಸಿದ್ದವು ಮತ್ತು ರಾಮಾಯಣ ಮಹಾಭಾರತ ಮುಂತಾದ ಕಾವ್ಯ ಇತಿಹಾಸಗಳು ವಾಙ್ಮಯದ ಆಕೃತಿಯಲ್ಲಿ ಅದನ್ನು ಸ್ಥಿರಗೊಳಿಸಿದ್ದವು. ರಾಮಾಯಣ ಮಹಾಭಾರತಗಳು (ಜತೆಗೆ ಇನ್ನೂ ಹಲವು ಪುರಾಣಗಳು) ಬರಿಯ ಇತಿಹಾಸ ಕಾವ್ಯಕಥಾನಕಗಳಾಗದೆ ಉಪಖಂಡದ ವಿಶಿಷ್ಟ 'ಭಾಷೆ' ಗಳಾದವು; ವಿವಿಧ ಪ್ರಾಂತಪ್ರದೇಶಗಳ ಜನವರ್ಗಗಳು ತಮ್ಮ ತಮ್ಮದೇ ಹೊಸಹೊಸ ಕಥೆಗಳನ್ನು ಕಟ್ಟಿ ಅದಕ್ಕೆ ಸೇರಿಸುತ್ತ, ಆ ಮುಖಾಂತರ ಪರಸ್ಪರ ಚರ್ಚಿಸಿಕೊಳ್ಳುವ ಅರ್ಥ ಮಾಡಿಕೊಳ್ಳುವ ಮಾಧ್ಯಮದಂತೆ ಅವುಗಳನ್ನು ಬಳಸಿ ಕೊಂಡರು. ಇಂಥ ವಾಙ್ಮಯ ಪರಂಪರೆಯಿಂದಲೂ ನಮ್ಮ 'ಭಾರತ ಸಮುದಾಯ'ವೆಂಬ ಆಕೃತಿಯು ಬೆಳೆದುಕೊಳ್ಳತ್ತ ಬಂದಿದೆ.

ಇನ್ನು ಇತಿಹಾಸದುದ್ದಕ್ಕೂ ನಮ್ಮಲ್ಲಿ ಗ್ರಾಮ ಸ್ವಯಮಾಡಳಿತ ಕಲ್ಪನೆ ಹಾಗೂ ಅದರ ಅನುಷ್ಠಾನಗಳು ಬಹು ಹಿಂದಿನಿಂದಲೂ ಅಖಂಡವಾಗಿ ಮುಂದುವರಿದು ಕೊಂಡು ಬಂದಿವೆ. ಕಲಕಾಲಗಳಲ್ಲಿ ಮತ್ತು ಪ್ರಾಂತ್ಯಪ್ರಾಂತ್ಯಗಳಲ್ಲಿ ಗ್ರಾಮ ಸ್ವಯಮಾಡಳಿತ ರೂಢಿಯು ಏರಿಳಿತಗಳಲ್ಲಿದ್ದಿರ ಬಹುದಾದರೂ ಅದು ದೇಶಾದ್ಯಂತ ಯಾವತ್ತೂ ಖಿಲವಾದದ್ದಿಲ್ಲ. ೧೮ನೇ ಶತಮನದ ಅಂತ್ಯದ ತನಕವೂ ನಮ್ಮಲ್ಲಿ ಗ್ರಾಮ, ಸ್ವಯಮಾಡಿಳತ ಪದ್ಧತಿಯು ಪ್ರಚಲಿತವಿತ್ತು ಎಂಬುದಕ್ಕೆ ದಾಖಲೆಗಳಿವೆ. ಪರಂಪರೆಯಲ್ಲದೆ, ನಮ್ಮ ನಿಕಟಪೂರ್ವ ಇತಿಹಾಸವನ್ನು ಗಮನಿಸಬಹುದು. ನಮ್ಮ ಸ್ವಾತಂತ್ರ್ಯ ಹೋರಾಟದ ಸು. ಒಂದು ಶತಮಾನದ (೧೮೫೭-೧೯೪೭) ಇತಿಹಾಸವನ್ನು ಅವಲೋಕಿಸಿದರೆ-ಇದರ ಮೊದಲ ಅರ್ಧದ ಕಾಲದಲ್ಲೇ ನಮಗೆ ಪಶ್ಚಿಮದ ಡೆಮೋಕ್ರಸಿಯ ಬಗ್ಗೆ ಪರಿಚಯವಾಗತೊಡಗಿತ್ತು. ಇದರ ದ್ವಿತೀಯಾರ್ಧದ ಸಂಘಟನೆ ಹೋರಾಟಗಳಲ್ಲಿ ನಾವು ಜನತಾಂತ್ರಿಕತೆಯನ್ನು ಪಳಗಿಸಿ ರೂಢಿಗೋಳಿಸಿಕೋಳ್ಳಲು ಪ್ರಾರಂಭಿಸಿದ್ದೆವು. ನಮ್ಮ ರಾಜಕೀಯ ಪಕ್ಷಗಳು ಸ್ವತಃ ಜನತಾಂತ್ರಿಕ ಸರ್ಕಾರಗಳನ್ನು ನಿರ್ವಹಿಸಿ ಅದರ ತಾಲೀಮು ಪಡೆದುಕೊಂಡಿದ್ದವು.

....

ಗಾಂಧೀಜಿ ಈ ದೇಶಕ್ಕೆ ಮರಳಿಬಂದು ಇಲ್ಲಿಯ ರಾಷ್ಟೀಯ ಕಾಂಗ್ರೆಸ್‌ನ ನಾಯಕತ್ವವನ್ನು ವಹಿಸಿಕೊಳ್ಳುವುದಕ್ಕೆ ಮೊದಲೇ, ಎಂದರೆ ಹೋರಾಟದ ಪ್ರಥಮಾರ್ಧದಲ್ಲೇ ಭಾರತದ ಸಮಸ್ತ ಜನರೂ ಎರಡು ದೃಢನಿರ್ಧಾರಗಳನ್ನು ಕೈಗೊಂಡಿದ್ದರು ಎನ್ನಿಸುತ್ತದೆ. ಇದು ಬಹಿರಂಗವಾಗಿ ಎಲ್ಲರೂ ಸೇರಿ ಕೈಗೊಂಡ ಘೋಷಿತ ನಿರ್ಧಾರವೇನೂ ಅಲ್ಲ. ಆದರೆ ಅಂಥದೊಂದು ಸಾಮಾನ್ಯ- ದೃಢ- ಜನಾಭಿಪ್ರಾಯವು ಮನೋಸಂಕಲ್ಪವಾಗಿ ರೂಪುಗೊಂಡಿತ್ತು. ಆ ನಿರ್ಧಾರಗಳೆಂದರೆ:

೧. ಯಾವ ನಮ್ಮ ಭಾರತವನ್ನು ಇಂಗ್ಲಿಷರು ಮೊತ್ತಮೊದಲ ಸಲ ಅಖಂಡ ಭೌತಿಕ ರಾಷ್ಟವಾಗಿ ಒಗ್ಗೂಡಿಸಿದ್ದರೋ ಅದನ್ನು ಮುಂದಿನ ಕಾಲದಲ್ಲಿ ಕೂಡಾ ಭೌತಿಕ ಅಖಂಡರಾಷ್ಟವಾಗಿಯೇ ಉಳಿಸಿಕೊಳ್ಳತಕ್ಕದ್ದು; ೨.ಹಾಗೆ ಅಖಂಡವಾಗಿ ಉಳಿಸಿಕೊಳ್ಳುವ ನೆಲೆಯಲ್ಲಿ ಈಗಿರುವ ರಾಜಾಡಳಿತ ಪ್ರಾಂತಾಡಳಿತಗಳನ್ನು ವಿಸರ್ಜಿಸಿ, ಪಾಶ್ಚಾತ್ಯ ಕಲ್ಪನೆಯ ಪ್ರಜಾಪ್ರಭುತ್ವ ಆಡಳಿತ ಪದ್ಧತಿಯನ್ನು ತಂದುಕೊಳ್ಳತಕ್ಕದ್ದು ಅಂದರೆ, ಪ್ರಜಾತಂತ್ರವು ಈ ದೇಶದ ಜನರ ಪೂರ್ವಸಂಕಲ್ಪವಾಗಿ ಜಾರಿಗೊಂಡಿದ್ದು; ಸ್ವಾತಂತ್ರ್ಯ ಬರುವ ಕಾಲಕ್ಕೆ ಧಿಡೀರ್ ಆಗಿಬಂದದ್ದಲ್ಲ.

ಸ್ವಾತಂತ್ರ್ಯ ಹೋರಾಟದ ಮಧ್ಯಭಾಗ ಸುಮಾರಿನ್ಲಲಿ ಗಾಂಧಿಜಿ ಇಲ್ಲಿಗೆ ಬಂದದ್ದು ಮತ್ತು ದೇಶಕ್ಕೆ ಆತನ ಮಾರ್ಗದರ್ಶನ ದೊರೆತದ್ದು ನಮ್ಮ ಸಮುದಾಯದ ಪುಣ್ಯ. ಜನರಾದರೂ ಗಾಂಧಿಯನ್ನು ನಮ್ಮ ನಾಯಕನೆಂದಷ್ಟೇ ಅಲ್ಲ, ಏಕೈಕ ಮಾರ್ಗದರ್ಶಕ ಮಹಾನಾಯಕವೆಂದು ಭಾವಿಸಿ ಪಟ್ಟವೆರಿಸಿಕೊಂಡರು, ಗಾಂಧಿ ನಾಯಕತ್ವದ ಆ ಸು. ಮೂವತ್ತು ವರ್ಷಗಳು ನಮ್ಮ ಪ್ರಸ್ತುತ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮುಖ್ಯವಾದ ಅವಧಿ: ಪ್ರಾಚೀನ-ಆಧುನಿಕಗಳು ಬಹು ಭದ್ರವಾಗಿ, ಬೆಸೆದುಕೊಂಡ ಕೊಂಡಿಕಾಲ. ಆ ಕಾಲದಲ್ಲಿ ಗಾಂಧಿಯ ಮಾರ್ಗದರ್ಶನ ದೊರೆಯದೇ ಹೋಗಿದ್ದರೆ ಈ ದೇಶವು ಈಗಿರುವ ಹಾಗೆ ಉಳಿದಿರುತ್ತಿರಲಿಲ್ಲ-ನಿಶ್ಚಿತವಾಗಿ. ಒಂದೋ, ಪಾಕಿಸ್ತಾನದ ಮಾದರಿಯಲ್ಲಿ 'ಹಿಂದುರಾಷ್ಟ'ವಾಗಿರುತ್ತಿತ್ತು ಅಥವಾ ಆಧುನಿಕ ಚೀನಾದ ಹಾಗೆ, ತನ್ನ ಪೂರ್ತಿಪರಂಪರೆಗಳನ್ನು ತಟ್ಟನೆ ಕತ್ತರಿಸಿ ಆಧುನಿಕವನ್ನಪ್ಪಿಕೊಂಡಿರುತ್ತಿತ್ತು. ಆ ಎರಡೂ ದಾರಿಗಳನ್ನು ಬಿಟ್ಟು ಇಂಡಿಯಾ ತನ್ನ ಪೂರ್ವಸ್ಮೃತಿ ಪರಂಪರೆಗಳಾವುದನ್ನೂ ನಷ್ಟಗೊಳಿಸಿಕೊಳ್ಳದೆ, ಅವನ್ನೆಲ್ಲ ಮುಂದುವರಿಸಿಕೊಂಡೇ ಆಧುನಿಕವಾಗಲು ಹೆಣಗಿತು. ಇಂಥ ಸಂಕೀರ್ಣ ಸಂಕಲ್ಪದ ಫಲವಾಗಿ ಉದ್ಭವಿಸಿದ ಹೊಸ ಸ್ವತಂತ್ರ ಭಾರತವು, ಈಗ ನಮಗೆ ಅದೆಷ್ಟೇ ಅವ್ಯವಸ್ಥಿತ-ಅಸಹ್ಯ-ವಿಷಕ-ವಿಕಟ ಇತ್ಯಾದಿಯಾಗಿ ಕಾಣುತ್ತಿದ್ದರೂ-ನನಗೆ ಕಾಣುವಂತೆ-ಈಯೊಂದು ಕಿರುಘಟ್ಟದಲ್ಲಿ (ಸು.೫ ದಶಕ) ಇಂಡಿಯಾ ಹೀಗೆ ತನ್ನನ್ನು ಮನರ್ರೂಪಿಸಿಕೊಂಡದ್ದು ಇತಿಹಾಸದಲ್ಲಿನ ಒಂದು ದೊಡ್ಡ ಪವಾಡವೇ ಅಂತ ನಾನು ದೃಢವಾಗಿ ನಂಬಿದ್ದೇನೆ. ಅದನ್ನು ಕೊಂಚ ವಿಶದವಾಗಿ ಪರಿಶೀಲಿಸಬೇಕು. ಈ ಪವಾಡವು ಸಾಧಿತವಾಗಲು ಸೂಕ್ತ ಮಾರ್ಗದರ್ಶನ

ಒದಗಿದ್ದು, ಏಕೋ ಪ್ರಧಾನವಾಗಿ ಗಾಂಧಿಯಿಂದಲೇ.

ಗಾಂಧಿಯು ಅಪ್ಪಟ ಸಾಮುದಾಯಿಕ. ಅಂದರೆ ತನ್ನ ಬಳಕೆಯ ಸಮುದಾಯಗಳ ಸುಸಂಸ್ಕಾರಗಳನ್ನೆಲ್ಲ ತನ್ನದೇ ಸ್ವಂತ ಅರಿವಾಗಿಸಿಕೊಳ್ಳುತ್ತ ಅಂತಿಮವಾಗಿ ತಾನು ಮತ್ತು ಸಮುದಾಯಗಳನ್ನು ಅಭಿನ್ನವಾಗಿಸಿಕೊಂಡವನು ಸಾಮುದಾಯಿಕ; ಅದರ ಆದರ್ಶ ಮಾದರಿ ಗಾಂಧಿ.

ಗಾಂಧಿಯು ಕಲಿಯಲಿಕ್ಕೆಂದು ಇಂಗ್ಲಂಡ್‌ಗೆ ಹೋದಾಗ, ಆ ದೇಶ-ಜನ-ನಡವಳಿಗಳನ್ನೆಲ್ಲ ಕಂಡು ಬಹುವಾಗಿ ಮೆಚ್ಚಿಕೊಂಡು. ತಾನೂ ಅಪ್ಪಟ ಇಂಗ್ಲಿಷನಾಗಲು ಬಲು ಶ್ರಮಪಟ್ಟು, ಕಡೆಯಲ್ಲಿ ಯಶಸ್ವಿಯೂ ಆದ. ಇಲ್ಲಿಯೂ ಆತನ ಆಳವಾದ ಚಹರೆಯು, ಕಾಥೆವಾಡಿ ವೈಷ್ಣವ ಸಮುದಾಯ ಮತ್ತು ಜೈನಸಮುದಾಯ ಇವುಗಳಿಂದ ಸಂಸ್ಕಾರಗೊಂಡದ್ದು ಎಂಬುದು ವ್ಯಕ್ತಗೊಳ್ಳುತ್ತಿತ್ತು. ಅಲ್ಲಿನ ಕ್ರಿಶ್ಚಿಯನ್ ಧಾರ್ಮಿಕತೆ ಮತ್ತು ನೀತಿಗಳು ಆತನಿಗೆ ಹೊಸದೆನಿಸದೆ ಪರಿಚಿತವೇ ಎನ್ನಿಸಿದ್ದವು. ಅಲ್ಲೇ ಮೊದಲ ಬಾರಿಗೆ 'ಭಗವದ್ಗೀತೆ'ಯನ್ನು (ಆರ್ನಾಲ್ಡ್ ಇಂಗ್ಲಿಷ್ ಅನುವಾದದಲ್ಲಿ) ಮಿತ್ರರ ಜತೆ ಅಭ್ಯಾಸಮಾಡುವಾಗ, ಆ ಗ್ರಂಥವನ್ನು ಹಿಂದೆ ತಾನು ಕಂಡದ್ದೇ ಇಲ್ಲವಾದರೂ, ಅದರ ಸಾರವೆಲ್ಲ ತನಗೆ ತನ್ನ ಸಮುದಾಯ ನಡಾವಳಿಗಳಿಂದ, ತಾಯಿಯಿಂದ ದತ್ತವಾಗಿ ಬಂದಂಥದೇ ಅಂತ ಭಾಸವಾಗುತ್ತಿತ್ತು.

ಮುಂದೆ ಆತನು ದಕ್ಷಿಣ ಆಫ್ರಿಕಕ್ಕೆ ಹೋಗಿ, ಅಲ್ಲಿನ ಭಾರತೀಯರು ಮತ್ತು ಕಪ್ಪು ಜನಗಳ ಸನಿಹದಲ್ಲೇ ಹೆಚ್ಚಾಗಿ ಇದ್ದು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿಕೊಳ್ಳುತ್ತ ನಡೆದಾಗ, ತನ್ನ ಹೊಸ ಗಳಿಕೆಯ ಹೊಸ ಹೊರಚಹರೆಯಿಂದ ಬಿಡುಗಡೆಗೊಂಡು ತಾನು ತಾನೇ ಆಗಲು ಪ್ರಯತ್ನಿಸಿದ. ಈ ಸಾಧನೆಯಲ್ಲಿ ಆತನಿಗೆ, ತನ್ನ ಮೂಲದ ಮತ್ತು ಅನಂತರ ಹಾದುಬಂದ ಸಮುದಾಯಗಳ ಸಂಸ್ಕಾರಗಳಿಂದ (ಪರಿಣಾಮದಿಂಡ ಹಾಗೂ ಫಲವಾಗಿ) ಚಹರೆಗೊಳ್ಳುವ ವಿಶಿಷ್ಟ ವ್ಯಕ್ತಿಯೇ 'ತಾನು' ಎಂಬುದರ ಅರಿವಾಯ್ತು. ಆತ ಕಲಿತದ್ದೆಲ್ಲವೂ ಸಮುದಾಯದಿಂದ, ನೇರವಾಗಿ. ಗಾಂಧಿಯ ಆತ್ಮ ಕಥೆಯ ಉದ್ದಕ್ಕೂ ಇದಕ್ಕೆ ಸಾಕ್ಷ್ಯಗಳಿವೆ.

ಗಾಂಧಿಯೇ ಬರೆದ ಆತನ ಆತ್ಮ ಕಥೆಯ ಎರಡು ಘಟನೆಗಳನ್ನು ಸೂಚಿಸುತ್ತೇನೆ. ಮೊದಲನೆಯದು– ಗಾಂಧಿಯು ಪ್ರಿಟೋರಿಯದಲ್ಲಿ ಪ್ರಥಮದರ್ಜೆ ರೈಲಲ್ಲಿ ಪ್ರಯಾಣ ಮಾಡುವಾಗ ಇನ್ನೊಬ್ಬ ಬಿಳಿಯ ಪ್ರಯಾಣಿಕನಿಂದ ಅವಮಾನಗೊಂಡದ್ದು; ಬಿಳಿಯನು ಪೇದೆಯೊಬ್ಬನ ಮೂಲಕ ತನ್ನನ್ನು ಗಾಡಿಯಿಂದ ಎಳೆದು ಹೊರಕ್ಕೆ ತಳ್ಳಿದ್ದು. ಇನ್ನೊಂದು ಘಟನೆ (ಆತ್ಮ ಕಥೆಯಲ್ಲಿ ಮುಂದೆಲ್ಲೋ ಬೇರೆ ಸಂದರ್ಭದಲ್ಲಿ, ನೆನಪಿಸಿಕೊಂಡದ್ದು)–ಪತ್ನಿ ಕಸ್ತೂರಿ ಬಾರ ಜೊತೆಗಿನ ಜಗಳ: ದರ್ಬಾನ್‌ನಲ್ಲಿ ನೆಲೆಸಿಕೊಂಡಿದ್ದಾಗ ಮನೆಯಲ್ಲಿ ನಡೆದದ್ದು (ಎರಡೂ ಘಟನೆ ರಾತ್ರಿ ವೇಳೆ ನಡೆದದ್ದು). ತನ್ನ ಅಪೇಕ್ಷೆಯನ್ನು ಆಕೆ ಸಂತೋಷವಾಗಿಯೆ ನಿರ್ವಹಿಸಲಿಲ್ಲ ಎಂಬ ಕಾರಣಕ್ಕೆ ಕೋಪಗೊಂಡು, ಆಕೆಯನ್ನು ದರದರ ಎಳೆದುಕೊಂಡುಹೋಗಿ ಮನೆಯಿಂದ ಹೊರಹಾಕಲು ತುಡುಕಿದ ಪ್ರಸಂಗ. ಆಕೆ ಅಳುತ್ತಳುತ್ತ, 'ಇದೇನು ನಾಚಿಕೆಯಾಗುವುದಿಲ್ಲವೆ? ನಡುರಾತ್ರಿ ಹೀಗೆ ಹೊರ ಹಾಕಿದರೆ ನಾನೆಲ್ಲಿ ಹೋಗಲಿ? ನನ್ನ ತಾಯಿ ತಂದೆಯರೂ ಬಳಿಯಿಲ್ಲ... ಯಾರಾದರೂ ಕಂಡಾರು, ಬಾಗಿಲು ಹಾಕಿ ರಾದ್ಧಾಂತ ಮಾಡಬೇಡ' ಅಂತ ಗೋಗರೆದಾಗ, ಗಾಂಧಿಗೆ ತನ್ನ ಬಗ್ಗೆಯೇ ನಾಚಿಕೆಯೆನಿಸಿತು: ಆತನಿಗೆ ಬಹುಶಃ ಅವತ್ತು ಬಿಳಿಯನೊಬ್ಬನು ತನ್ನನ್ನು ಹೀಗೆ ಎಳೆದುಬಿಟ್ಟದ್ದು ನೆನಪಾಗಿರಬಹುದು. ಹೀಗೆ ತನ್ನದೇ ಕಿರುಕುಟುಂಬದಿಂದ ಪ್ರಾರಂಭಿಸಿ ಆತ ಕಲಿತ. ಗಾಂಧಿಯು ಮಧ್ಯದಲ್ಲಿ ಒಮ್ಮೆ ಒಂದೆರಡು ವರ್ಷ ಇಂಡಿಯಾಕ್ಕೆ ಮರಳಿ ಬಂದು ನೆಲೆಸಿದ್ದಾಗ, ಸಾರ್ವಜನಿಕ ಕೆಲಸಗಳಲ್ಲಿ ತೊಡಗಿಕೊಳ್ಳದೆ ಇಡೀ ಇಂಡಿಯಾ ದೇಶವನ್ನು ಸಂಚರಿಸಿ ಕಂಡುಕೊಂಡಿದ್ದ ವೈವಿಧ್ಯ ವೈರುಧ್ಯಗಳಿಂದ ತುಂಬಿದ ಇಲ್ಲಿನ ಅಸಂಖ್ಯಾತ ಸಮುದಾಯ ಗಳನ್ನು ಕಾಣುವ ಮೂಲಕವೇ ಆತನ 'ಭಾರತೀಯ ಮಹಾ ಸಮುದಾಯ'ದ ಕಲ್ಪನೆಯು ಹರಳುಗಟ್ಟಿತು.

ಗಾಂಧಿಯು ಪ್ರಾಚೀನ ಗ್ರಂಥಗಳ ಅಭ್ಯಾಸ ಅಧ್ಯಯನಗಳಿಂದ ಏನನ್ನೂ ನೇರ ಪಡೆದದ್ದಿಲ್ಲ; ಸಮುದಾಯದಿಂದ ಮೊದಲು ಕಲಿತು ಆಮೇಲೆ ಕೆಲವೊಮ್ಮೆ ಶಾಸ್ತ್ರಗ್ರಂಥಗಳಿಂದ ಸಮರ್ಥನೆ ಪಡೆದುಕೊಂಡದ್ದಷ್ಟೇ.. ಹಳೆಯ ಸಂಸ್ಕೃತ ಧಾರ್ಮಿಕ-ಆಧ್ಯಾತ್ಮಿಕ-ತಾತ್ತ್ವಿಕ ವಾಙ್ಮಯದಲ್ಲಿ ಆತನಿಗೆ ಹೆಚ್ಚಿನ ಪ್ರವೇಶವಿರಲಿಲ್ಲ. ಬಹುಶಃ ಅವನು ಕೂತು ತಜ್ಞರ ಸಹಾಯದಿಂದ ಪಟ್ಟುಹಿಡಿದು ಅಧ್ಯಯನ ಮಾಡಿದ್ದು ಭಗವದ್ಗೀತೆ, ಈಶಾವಾಸ್ಯೋಪನಿಷತ್,ಪತಂಜಲಿಯ ಯೋಗಸೂತ್ರಗಳ ಕೆಲವು ಭಾಗ ಇತ್ಯಾದಿ ಕೆಲವೇ. ರಾಮಾಯಣ ಮಹಾಭಾರತಗಳನ್ನೂ ಆತನು ಮೂಲದಲ್ಲಿ ಆದ್ಯಂತ ಓದಿದಂತೆ ಕಾಣುವುದಿಲ್ಲ.

ಗಾಂಧಿಯು ಗ್ರಂಥಜ್ಞಾನದಿಂದ ಪಡೆದುಕೊಳ್ಳಲು ಕಾತರಿಸಲಿಲ್ಲ ಎಂಬುದಷ್ಟೇ ಅಲ್ಲದೆ, ಕೆಲವೊಮ್ಮೆ, ಸ್ವಂತ ಜ್ಞಾನದ ಬಗ್ಗೆಯೂ ವಿಶೇಷ ಪ್ರಾಮುಖ್ಯ ಕೊಟ್ಟವನಲ್ಲ. ೧೯೦೮ರಲ್ಲಿ ಪ್ರಕಟವಾದ ಪ್ರಸಿದ್ಧ 'ಹಿಂದ್ ಸ್ವರಾಜ್ಯ' ಗ್ರಂಥದಲ್ಲಿ-ಭಾರತದ ಬಡತನ ನಿವಾರಣೆಗೆ ರಾಟೆಮತ್ತು ಕೈಮಗ್ಗಗಳೇ ನಿಜವಾದ ಮದ್ದು ಎಂದು-ತನ್ನ ಸಮುದಾಯ ವಿವೇಕದ ಬೆಳಕಿನಲ್ಲಿ ವಾದಿಸಿದ್ದ. ಮುಂದೆ ೧೯೧೮ರಲ್ಲಿ ಕಷ್ಟಪಟ್ಟು ಹುಡುಕಿದಾಗ, ಗುಜರಾತಿನ ಒಂದು ಹಳ್ಳಿಯಲ್ಲಿ ಚರಖಾ (ರಾಟೆ) ನೋಡಲು ಸಿಕ್ಕಿತು; ನೂಲಿಗೆ ಬೇಡಿಕೆಯೇ ಇಲ್ಲವಾಗಿ ಆ ಕಸಬುಗಾರರು ಚರಖಾವನ್ನು ಅಟ್ಟಕ್ಕೆ ಸೇರಿಸಿದ್ದರು. ಆದಾದಮೇಲೆ, ನೂಲುವುದು ನೆಯ್ಯುವುದು, ಖಾದಿಬಟ್ಟೆ ತಯಾರಿ ಇತ್ಯಾದಿಗಳನ್ನೆಲ್ಲ-ಚಳುವಳಿಯ ಅಂಗವಾಗಿ-ಪ್ರಚಲಿತಗೊಳಿಸಲಾಯ್ತು.

ಗಾಂಧಿಯು ಕಲಿಯಲಿಕ್ಕೆಂದು ಇಂಗ್ಲಂಡ್‌ಗೆ ಹೋದಾಗ, ಆ ದೇಶ-ಜನ-ನಡವಳಿಗಳನ್ನೆಲ್ಲ ಕಂಡು ಬಹುವಾಗಿ ಮೆಚ್ಚಿಕೊಂಡು. ತಾನೂ ಅಪ್ಪಟ ಇಂಗ್ಲಿಷನಾಗಲು ಬಲು ಶ್ರಮಪಟ್ಟು, ಕಡೆಯಲ್ಲಿ ಯಶಸ್ವಿಯೂ ಆದ. ಇಲ್ಲಿಯೂ ಆತನ ಆಳವಾದ ಚಹರೆಯು, ಕಾಥೆವಾಡಿ ವೈಷ್ಣವ ಸಮುದಾಯ ಮತ್ತು ಜೈನ ಸಮುದಾಯ ಇವುಗಳಿಂದ ಸಂಸ್ಕಾರ ಗೊಂಡದ್ದು ಎಂಬುದು ವ್ಯಕ್ತಗೊಳ್ಳುತ್ತಿತ್ತು. ಅಲ್ಲಿನ ಕ್ರಿಶ್ಚಿಯನ್ ಧಾರ್ಮಿಕತೆ ಮತ್ತು ನೀತಿಗಳು ಆತನಿಗೆ ಹೊಸದೆನಿಸದೆ ಪರಿಚಿತವೇ ಎನ್ನಿಸಿದ್ದವು. ಅಲ್ಲೇ ಮೊದಲ ಬಾರಿಗೆ 'ಭಗವದ್ಗೀತೆ'ಯನ್ನು ಮಿತ್ರರ ಜತೆ ಅಭ್ಯಾಸಮಾಡುವಗ, ಆ ಗ್ರಂಥವನ್ನು ಹಿಂದೆ ತಾನು ಕಂಡದ್ದೇ ಇಲ್ಲವಾದರೂ, ಅದರ ಸಾರವೆಲ್ಲ ತನಗೆ ತನ್ನ ಸಮುದಾಯ ನಡಾವಳಿಗಳಿಂದ, ತಾಯಿಯಿಂದ ದತ್ತವಾಗಿ ಬಂದಂಥದೇ ಅಂತ ಭಾಸವಾಗುತ್ತಿತ್ತು.

'ವಿದೇಶೀ ವಸ್ತ್ರದಹನ ಚಳುವಳಿ' ಪ್ರಾರಂಭಿಸಿದಾಗ, ಬಡವರಿಗಿದ್ದ ತುಂಡು ಬಟ್ಟೆಗಳನ್ನೂ ಈತ ಸುಡಿಸ ತೊಡಗಿದ್ದಾನಲ್ಲ, ಎಂಬ ಆಕ್ಷೇಪ ಬಂದಿತು. ಖಾದಿಯು ದುಬಾರಿಯಾಗಿತ್ತು ಮತ್ತು ಅದರ ಉತ್ಪಾದನೆ ಕೂಡ ಮಿತವಾಗಿತ್ತು. ಇದರ ಬಗ್ಗೆ ಗಾಂಧಿಯು ಬಹುಕಾಲ ಚಿಂತಿಸಿದ. ಮಧುರೆಯಲ್ಲಿದ್ದಾಗ ಒಮ್ಮೆ, ಒಂದು ದಿನ ಆತನು ತನ್ನ ಬಟ್ಟೆಗಳನ್ನೆಲ್ಲ ಕಳಚಿಹಾಕಿ ಟೊಂಕವಸ್ತ್ರ ಮಾತ್ರವನ್ನೇ ತೊಡುವ ಪ್ರತಿಜ್ಞೆ ಕೈಗೊಂಡ. ಕಾರ್ಯಕರ್ತರೆಲ್ಲ ಮುಜುಗರಗೊಂಡು ಆಕ್ಷೇಪಿಸಿದರೂ ಲಕ್ಷಿಸದೆ ಅದನ್ನು ಜನ್ಮಪರ್ಯಂತ ಪಾಲಿಸಿದ. ಹೀಗೆ ಇನ್ನೊಮ್ಮೆ, ತಾನು ಸ್ವತಃ ಭಾರತೀಯರ ಸಾಮಾನ್ಯ ಚಹರೆಯನ್ನು ಪಡೆದಿರಬೇಕು ಎಂದು ಯೋಚಿಸಿದ. ಸಾಮಾನ್ಯವೆಂದು ಆತನಿಗೆ ಅನ್ನಿಸಿದ ಲಾಂಛನ ಗಳು ಎರಡು-ಜುಟ್ಟು ಮತ್ತು ಜನಿವಾರ. ಇದರಲ್ಲಿ ಜನಿ ವಾರವು ಸರ್ವತ್ರವಾದದ್ದಲ್ಲ ಮತ್ತು ಜಾತಿಸೂಚಕ ಎಂಬ ಕಾರಣಕ್ಕೆ ಅದನ್ನು ಕೈಬಿಟ್ಟು ಜುಟ್ಟನ್ನು ಖಾಯಂ ಆಗಿ ಆಯ್ದುಕೊಂಡ.

ಈತನಕ ಕೊಂಚ ಒತ್ತಿ ಹೇಳಿದ ಆತನ 'ಸಾಮುದಾಯಿಕತ್ವ'ವೆಂಬುದು ಕೇವಲ ಪ್ರಾಚೀನದ ಪುನರುತ್ಥಾನವೇ ಭಾವನೆಯನ್ನು ಹುಟ್ಟಿಸಬಹುದು. ಅದು ಅಲ್ಲವೇ ಅಲ್ಲ. ತಾನು ಆಧುನಿಕ ಎಂಬ ಪ್ರಜ್ಞೆಯು ಸದ ಆತನಲ್ಲಿ ಜಾಗ್ರತವಾಗಿಯೇ ಇತ್ತು ಎಂಬ ಇನ್ನೊಂದು ಮುಖವನ್ನು ಮರೆಯಕೂಡದು. ಇಂಗ್ಲಂಡಿನಲ್ಲೇ ಅವನು 'ಆಧುನಿಕತೆ'ಯೆಂಬುದನ್ನು ಸ್ವತಃ ಕಂಡು ಅದರ ನಡುವಿನಲ್ಲೇ ಬದುಕಿದ್ದ, ಅದರ ಅಪೇಕ್ಷಣೀಯ ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದ್ದ. ಮುಖ್ಯವಾಗಿ ಆಧುನಿಕ ಇಂಗ್ಲಿಷ್ ಬದುಕಿನ, ಶ್ರಮ- ಶ್ರದ್ಧೆ -ಕ್ಲಪ್ತತೆ- ವೇಳೆಯಪ್ರಜ್ಞೆ- ಶಿಸ್ತು - ಕಾನೂನುನಿಷ್ಠೆ - ಸಾಮಾಜಿಕ ಅನುಕಂಪ- ಪ್ರಾಮಾಣಿಕತೆ ಇಂಥವನ್ನೆಲ್ಲ ತಿಳಿದು ಮೆಚ್ಚಿ ತನ್ನಲ್ಲಿ ಖಾಯಂ ಆಗಿ ರೂಢಿಸಿಕೊಂಡ. ಅವರ ಡೆಮೊಕ್ರಸಿ ಆಡಳಿತ ಪದ್ಧತಿ- ನ್ಯಾಯವ್ಯವಸ್ಥೆ ಇವುಗಳನ್ನು ಆತನು ವಿಶೇಷವಾಗಿ ಮೆಚ್ಚಿ ಅವೆಲ್ಲ ನಮ್ಮಲ್ಲಿಯೂ ರೂಢಗೊಳ್ಳತಕ್ಕದೆಂದು ತೀರ್ಮಾನಿಸಿಕೊಂಡಿದ್ದ. ಮುಂದೆ ಇಂಡಿಯಾದಲ್ಲಿ ಆತನು ತನ್ನ ಟೊಂಕವಸ್ತ್ರ ತೊಡಿಗೆಯನ್ನು ಅಂತಿಮಗೊಳಿಸಿಕೊಂಡಾಗ, ಆಧುನಿಕತೆಯ ಸ್ಮರಣಿಕೆಯೆಂಬಂತೆ, ಜೇಬುಗಡಿಯಾರವನ್ನು ಟೊಂಕಕ್ಕೆ ನೇಲಿಸಿಕೊಳ್ಳತೊಡಗಿದ.

....

ಗಾಂಧಿಯು ಇಂಡಿಯಾಕ್ಕೆ ಮರಳಿದಾಗ ಕಾಂಗ್ರೆಸ್ ಸಂಸ್ಥೆಯು, ಆಯ್ದ ಕೆಲವು ನಾಯಕರು ಮತ್ತು ಕೆಲವೇ ಕಾರ್ಯಕರ್ತರುಗಳ, ಹೆಚ್ಚಾಗಿ ರಾಜಕೀಯ ಚಟುವಟಿಕೆಯ ಒಂದು ಸಂಘಟನೆಯಾಗಿತ್ತು. ಲಾಯರುಗಳು, ಪತ್ರಕರ್ತರು, ಸಾರ್ವಜನಿಕ ಸೇವೆಮಾಡಬೇಕೆಂಬ ಸುಶಿಕ್ಷಿತ ಉದಾರಿಗಳು ಮುಂತಾದ ಮಿತ ವರ್ಗಗಳ

ಮಿತಸಂಖ್ಯಾತರು ಅದರಲ್ಲಿದ್ದರು. ಸರ್ಕಾರವನ್ನು ತಿದ್ದುವ ಉದ್ದೇಶವುಳ್ಳ ಹೇಳಿಕೆಗಳು ಮನವಿಗಳನ್ನು ಸಲ್ಲಿಸುವುದು, ಅಷ್ಟೋ ಇಷ್ಟೋ ಜನಸಂಘಟನೆ ಶಿಕ್ಷಣ ಇ. ಅದರ ಮುಖ್ಯ ಚಟುವಟಿಕೆ ಗಳಾಗಿದ್ದವು. ಗಾಂಧಿಯು ಕಾಂಗ್ರೆಸಿನೊಳಕ್ಕೆ ಪ್ರವೇಶಿಸಿ ಅದರ ಮುಂದಾಳುವೆನಿಸಿಕೊಂಡಾಗ ಆತನ ಮೊತ್ತಮೊದಲು ಮಾಡಿದ ಕೆಲಸ, ಸಂಸ್ಥೆಯ ಸ್ವರೂಪವನ್ನೇ ಪಲ್ಲಟಿಸುವ ಕೆಲಸ. ಎಲ್ಲಾ ಜನಾಂಗ ಜಾತಿ ಮತ ವರ್ಗ ಸ್ತ್ರೀ ದಲಿತ ಕಾರ್ಮಿಕ ವ್ಯಾಪರಿ ಇ., ಸಮಸ್ತರನ್ನೂ ಒಳಗೊಂಡ ಬಹುವ್ಯಾಪಕ ಸಂಸ್ಥೆಯನ್ನಾಗಿ–ಭಾರತೀಯ ಜನಪದದ ಒಂದು ಕಿರು ಆಕೃತಿಯೆನ್ನುವಷ್ಟು ವ್ಯಾಪಕ ಅಸ್ತಿವಾರವುಳ್ಳದ್ದಾಗಿ–ಕಾಂಗ್ರೆಸ್ಸನ್ನು ಪರಿವರ್ತನೆ ಮಾಡಿದ. ಮೊದಲಿಂದ ಸಂಸ್ಥೆಯಲ್ಲಿ ರೂಢಿಗೊಂಡು ಬಂದಿದ್ದ 'ಪಾರ್ಲಿಮೆಂಟರಿ ನಡಾವಳಿ'ಯೆಂಬುದನ್ನು ವ್ಯಾಪಕ ಗೊಳಿಸಿದ, ಭದ್ರಗೊಳಿಸಿದ. (ಇಲ್ಲಿಯೇ ಗಮನಿಸಬಹು ದಾದ ಒಂದು ಸಂಗತಿಯೆಂದರೆ, ೧೯೩೩ರಷ್ಟು ಹಿಂದೆಯೇ ಕಾಂಗ್ರೆಸ್ ಭಾವೀ ಭಾರತದ 'ಸಂವಿಧಾನ ಮಾದರಿ'ಯನ್ನು ತಯಾರಿಸಿ ಅನುಮೋದನೆ ಪಡೆದಿತ್ತು.) ಬಹುಮುಖ್ಯವಾಗಿ, ರಾಜಕೀಯ ಉದ್ದೇಶದ ಸಂಸ್ಥೆಯನ್ನು ಗಾಂಧಿ, ಭಾರತೀಯ ಜನಜೀವನದ ಸಮಸ್ತ ಅಂಗ–ಅಂಶಗಳನ್ನೂ ಅಭಿನ್ನವಾಗಿಸಿ ಆವರಿಸಿಕೊಳ್ಳುವಂತೆ ಮಾಡಿದ. ಅದಕ್ಕಾಗಿ ಆತನು ವಿಧಾನ ರಾಜಕಾರಣದ ಜತೆಗೆ, ಅದಕ್ಕೆ ಹತ್ತಾರು ಪಟ್ಟು ವ್ಯಾಪಕವಾಗಿ ವಿಧಾಯಕ (ಕನ್‌ಸ್ಟ್ರಕ್ಟಿವ್) ಕಾರ್ಯಕ್ರಮಗಳನ್ನು ಪ್ರಾರಂಭಿಸಿದ. ಹಲವಾರು ಬಗೆಯ ಪ್ರತಿರೋಧ ಚಳುವಳಿಗಳನ್ನೂ, ಅದಕ್ಕಿಂತ ವ್ಯಾಪಕವಾಗಿ ಸ್ವಯಂಶಿಕ್ಷಣ ನಿಯಂತ್ರಣ ಚಳುವಳಿಗಳನ್ನು ರೂಪಿಸಿದ. 'ಭಾರತಕ್ಕೆ ಸ್ವಾತಂತ್ರ್ಯ'ವೆಂಬ ಉದ್ದೇಶವು ಗಾಂಧಿಗೆ ಒಂದು ಅನುಷಂಗಿಕ ಸಂಗತಿಯಷ್ಟೇ. ಆತನ ಮೂಲ ಉದ್ದೇಶವು, ಸಂಭಾವಿತ ಭಾರತೀಯ ಸಮುದಾಯದ ನಿರ್ಮಾಣ ಮತ್ತು, ಅ ಮೂಲಕ ಆಧುನಿಕ ಮಾನವ ಜನಾಂಗಕ್ಕೆ ಒಂದು ಪರ್ಯಾಯ ಜೀವನಕ್ರಮವನ್ನು ಕಾಣಿಸುವುದು. ಈ ಉದ್ದೇಶಕ್ಕಾಗಿ ಆತ ಬಳಸಿದುದು, ಸಮುದಾಯ ವಿವೇಕ: ಅದೇ ಆತನ ತತ್ತ್ವಜ್ಞಾನ ಕೂಡಾ. ಈ ವಿವೇಕದಿಂದಾಗಿ ಆತನ ದೃಷ್ಟಿ ಅಥವಾ ಲೋಕಾಕಾರವು ಸಮಗ್ರವಾದ್ದಾಗಿತ್ತು ಧರ್ಮ–ಆಧ್ಯಾತ್ಮ–ರಾಜಕಾರಣ–ಅರ್ಥಶಾಸ್ತ್ರ–ನಿತ್ಯ ದುಡಿಮೆ ಇವೆಲ್ಲ ಆತನಿಗೆ ಒಂದರೊಳಗೊಂದು ಬೆರತು ಏಕಾಕಾರಗೊಳ್ಳುವ ಬದುಕಿನ ಒಳಸಂಗತಿಗಳಾಗಿದ್ದವು.



ಪಶ್ಚಿಮ ಕಲ್ಪನೆಯ 'ಡೆಮೊಕ್ರಸಿ'ಗೆ ಸೂಕ್ತ ಸೂತ್ರವಾಕ್ಯವನ್ನು ನಿರೂಪಿಸಿದವನು, ಅಬ್ರಹಾಮ್ ಲಿಂಕನ್: 'ಗವರ್ನಮೆಂಟ್ ಆಫ್ ದಿ ಪೀಪಲ್, ಬೈದಿ ಪೀಪಲ್ ಅಂಡ್ ಫಾರ್ ದಿ ಪೀಪಲ್' ಎಂಬ ಸೂತ್ರ. ಆದರೆ ಅದರ ಜತೆಜತೆಯಲ್ಲೇ ಈ ಸೂತ್ರಕ್ಕೆ ವಿರುದ್ಧವಾದ ಮನೋ ಸಂಕಲ್ಪವೊಂದು ಪಶ್ಚಿಮ ರಾಷ್ಟ್ರಗಳಲ್ಲಿ (ಅಮೆರಿಕ ಮತ್ತು ಯುರೋಪು) ಮೂಡಿ ಬೆಳೆಯಿತು; ವೀರ ಪೌರುಷದಿಂದ ಕಾರ್ಯಗತವಾಗತೊಡಗಿತು – ಅದೇ ವಸಾಹತುಗಳ ಆಕ್ರಮಣ, ನಿಯಂತ್ರಣ ಮತ್ತು ಆ ಮೂಲಕ ಅನ್ಯರ ಸಂಪತ್ತುಗಳ ಲೂಟಿ. ಈ ಸಂಕಲ್ಪ ಮತ್ತು ದುಸ್ಸಾಹಸಗಳೇ ಡೆಮೊಕ್ರಸಿಯೆಂಬ ಕಲ್ಪನೆಯನ್ನು ಜಾಗತಿಕವಾಗಿ ನಿಷೇಧಿಸಿತು, ಅಸಾಧ್ಯಗೊಳಿಸಿತು. ಜಗತ್ತಿನ ತುಂಬ ವ್ಯಾಪಕವಾಗಿ ಬೆಳೆದ ವಸಾಹತು ಸಂಖ್ಯೆಯು ೨೦ನೇ ಶತಮಾನದಲ್ಲಿ ಬಹುತೇಕ ಪೂರ್ತಾಕರಗಿಹೋದರೂ, ಬೇರೆ ಬಲು ಸೂಕ್ಷ್ಮ ಹೊಸಹೊಸ ಸಾಧನಗಳನ್ನು ಹುಡುಕಿ ಆ ತಂತ್ರಗಾರಿಕೆಯಿಂದ ಅಘೋಷಿತ ಅಸಾಹತುಗಳನ್ನು ಗಳಿಸಿಕೊಳ್ಳುವ ಹುನ್ನಾರದಲ್ಲಿ, ಜಗತ್ತಿನ ಬಹುಭಾಗ ವಸಾಹತು ಸ್ಥಿತಿಗೇ ತಲುಪಿ ನಿಂತಿರುವುದನ್ನು ಈಗ ನಾವೇ ಕಾಣುತ್ತಿದ್ದೇವೆ. ಗಾಂಧಿಯ ಕಲ್ಪನೆಯ ಜನತಂತ್ರವು ಈ ದೋಷಕ್ಕೆ ಅವಕಾಶವಿಲ್ಲದ ಒಂದು ಆಕೃತಿಯಾಗಿತ್ತು.

ಪಶ್ಚಿಮದ ಮಹಾ ಚಿಂತಕರನೇಕರು (ಪ್ಲೇಟೋ ನಿಂದ ಮೊದಲುಗೊಂಡು), ಮನುಷ್ಯ ನಾಗರಿಕತೆಯು ಬೆಳೆಯುತ್ತ ಹೋಗಿ ಅಂತಿಮವಾಗಿ, ಆಡಳಿತವೇ ಅನಗತ್ಯವಾಗುವ, 'ರಾಜ್ಯವು ಉದುರಿಹೋಗುವ' ಹಂತ ವನ್ನು ತಲುಪಿಕೊಳ್ಳುತ್ತದೆ ಎಂದು ನಂಬಿದ್ದರು; ನಾಗರಿಕತೆಯ ಅಂತಿಮ ಅವಸ್ಥೆಯಾಗಿ ಸಿದ್ಧಿಸುವ, ಆಡಳಿತವೇ ಇಲ್ಲದ, 'ಆದರ್ಶರಾಜ್ಯ' ಅದು ಎಂದು ಹೆಸರಿಸಿದ್ದರು. ಇನ್ನು 'ಅರಾಜಕತೆ'ಯನ್ನೇ ಪ್ರತಿಪಾದಿಸಿದವರೂ ಕೆಲವರಿದ್ದರು. ಗಾಂಧಿಯು 'ಅರಾಜಕತೆ'ಗೆ ತೀವ್ರ ವಿರೋಧಿಯಾಗಿದ್ದ; ಪ್ರಕೃತಿಧರ್ಮವು ಅರಾಜಕತೆಯನ್ನು ಕ್ಷಣವೂ ಸಹಿಸುವುದಿಲ್ಲ ಎಂದು ಆತನು ನಂಬಿದ್ದ. ಮನುಷ್ಯರಲ್ಲಿ ವ್ಯಕ್ತಿಯ ನೆಲೆ ಮತ್ತು ಸಮುದಾಯದ ನೆಲೆ ಎರಡರಲ್ಲೂ 'ನಿಯಂತ್ರಣ'ವು ಅನಿವಾರ್ಯವೆಂದೂ ಆದರೆ ಅದು, ಬಾಹ್ಯ ನಿಯಂತ್ರಣವಾಗದೆ 'ಸ್ವಯಂನಿಯಂತ್ರಣ' ವಾಗಬೇಕೆಂದೂ ಆತನು ಪ್ರತಿಪಾದಿಸಿದ. ಆತನ ಪ್ರಕಾರ ಬಾಹ್ಯ (ಅನ್ಯ) ನಿಯಂತ್ರಣವೇ 'ಅಸ್ವಾತಂತ್ರ್ಯ' ಮತ್ತು ಸ್ವಯಂ ನಿಯಂತ್ರಣವೇ 'ಸ್ವಾತಂತ್ರ್ಯ'ವಾಗಿತ್ತು. ಇನ್ನು, 'ಆದರ್ಶರಾಜ್ಯ'ವೆಂಬುದು ಆತನ ಪ್ರಕಾರ ದೊಡ್ಡ ಭ್ರಮೆ. ಬದುಕಿನಲ್ಲಿ ಜೀವಗಳು ದುಡಿಯುವುದು, ಸವೆಯುವುದು ಮತ್ತು ಕಶ್ಮಲಗೊಳ್ಳುವುದು ಪ್ರಕೃತಿ ಧರ್ಮ; ಮನುಷ್ಯನು ಪ್ರತಿದಿನವೂ ತನ್ನ ಪಾಲಿನ ಶ್ರಮವನ್ನು ಪ್ರಯತ್ನ ಪೂರ್ವಕ ಸಲ್ಲಿಸತಕ್ಕದ್ದು ಹಾಗೂ ದಿನದಿನವೂ ಪ್ರಯತ್ನ ಪೂರ್ವಕವಾಗಿ ತನ್ನನ್ನು ತೊಳೆದು ಶುಚಿಗೊಳಿಸಿಕೊಳ್ಳತಕ್ಕದ್ದು; ಇಂಥ ಪ್ರಕೃತಿ ಧರ್ಮವು ಅನಂತಕಾಲಕ್ಕೂ ಇರುವಂಥದು, ಅದಕ್ಕೆ ಕೊನೆಯೆಂಬು ದಿಲ್ಲ–ಎಂಬುದು ಗಾಂಧಿಯ ತೀರ್ಮಾನವಾಗಿತ್ತು.

ಈ ತತ್ತ್ವಗಳ ಅಥವಾ ಇನ್ನೂ ಸೂಕ್ತವಾಗಿ ಹೇಳಬೇಕೆಂದರೆ 'ಸಮುದಾಯ ವಿವೇಕ'ದ ಭದ್ರ ಅಸ್ತಿವಾರದ ಮೇಲೆ ಆತನ ಜನತಂತ್ರವು ಕಲ್ಪಿತವಾಗಿತ್ತು. ಈ ಕಾರಣದಿಂದಲೇ ಆತನು ಡೆಮೊಕ್ರಸಿ ಎಂಬುದಕ್ಕಿಂತಲೂ 'ಸ್ವರಾಜ್ಯ' ಎಂಬ ಹೆಸರಲ್ಲಿ ಅದನ್ನು ಪ್ರತಿಪಾದಿಸಿದ. ಅದು ಸಮುದಾಯ ರೂಪದ್ದು ಎನ್ನುವ ಕಾರಣಕ್ಕಾಗಿ ಅದನ್ನು 'ಗ್ರಾಮರಾಜ್ಯ'ವೆಂತಲೂ ಕರೆದ. ಜತೆಗೆ ಇದಕ್ಕಿರುವ ಪರಂಪರೆಯ ಬೇರುನ್ನು ಸೂಚಿಸಲಿಕ್ಕಾಗಿ 'ರಾಮರಾಜ್ಯ' ವೆಂಬ ಹೆಸರನ್ನು ಪ್ರಚಲಿತಗೊಳಿಸಿದ. (ಬಹುಶಃ ಸ್ವರಾಜ್ಯ ವೆಂಬ ಹೆಸರು ಭಗವದ್ಗೀತೆಯ ಸ್ವಧರ್ಮ ಎಂಬುದರಿಂದ ಪ್ರೇರಿತವಾದ್ದು; 'ರಾಮರಾಜ್ಯ' ಎಂಬುದು ತುಲಸಿದಾಸನ 'ರಾಮಚರಿತ' ದಿಂದ ಪ್ರೇರಿತವಾದ್ದು.) ಗಾಂಧಿಯ ಮಾರ್ಗ ದರ್ಶನದ ಕಿರು ಅವಧಿಯಲ್ಲಿ ಆ ಕಾಲದ ಭಾರತ ಜನ ಪದವು ಪೂರ್ವಸ್ಮೃತಿಗಳಿಂದ ದೀಪ್ತಗೊಂಡು, ಆಧುನಿಕ ಸಮುದಾಯ–ಜನತಂತ್ರವೆಂಬ \ ಒಂದು ಆಕೃತಿಯಾಗಿ ತಕ್ಕಷ್ಟು ಗಟ್ಟಿಗೊಂಡಿತು. ಆ ಕಾಲದ ಸಂಸ್ಕಾರವು, ಅದಕ್ಕೆ ಮುಂದಿನ ಐದರು ದಶಕಗಳಲ್ಲೂ ಸವೆದು ನಷ್ಟಗೊಳ್ಳದೆ, ಬಾಳಿಬಂದಿದೆ.

ನಮ್ಮ ಜನತಂತ್ರವ್ಯವಸ್ಥೆಯು ಕೆಲಮಟ್ಟಿಗೆ, ಈ ದೇಶದ ಜನರ ಸಮುದಾಯ ಭಾವದಿಂದ ಆವೃತಗೊಂಡಿದೆ ಎನ್ನುವುದನ್ನು ಹೆಚ್ಚು ಸ್ಪಷ್ಟಗೊಳಿಸುವ ಯುಕ್ತಿಯಾಗಿ ನಾನು 'ಸಮುದಾಯ'ವೆಂಬ ಬಹುಸೂಕ್ಷ್ಮ ಅಮೂರ್ತ ಸಂಬಂಧ ಭಾವವನ್ನು ಒಂದು 'ಆಕೃತಿ'ಯಾಗಿ ಉತ್ಪ್ರೇಕ್ಷಿಸಿ ನಿರೂಪಿಸಿ ದ್ದೇನೆ. ಇದರಿಂದ ಸಮುದಾಯ ಸೂಕ್ಷ್ಮವನ್ನು ಸ್ಥೂಲಗೊಳಿಸಿ ದ್ದೇನೆ. ಅಲ್ಲದೆ ನನ್ನ ನಿರೂಪಣೆಯ ಧಾಟಿಯು ನಮ್ಮ ಈಗಿನ ಜನತಂತ್ರ ಆಡಳಿತ ವ್ಯವಸ್ಥೆಯನ್ನು ವೈಭವೀಕರಿಸಿದಂತೆ ಕೂಡಾ ಕಂಡೀತು. ಈ ಉದ್ದಕ್ಕೂ ನಿಜವಾಗಿ ನನ್ನ ಮಾತುಗಳು ನನಗೇ ವ್ಯಂಗ್ಯವಾಗಿ ಧ್ವನಿಸುತ್ತಿದ್ದವು. ಇಕೋ ಈಗ ನಮಗೆ ಕಾಣಿಸುತ್ತಿರುವ ಹಾಗೆ–ಕಾಣಿಸುವುದೇನು, ನಾವೇ ಅದರೊಳಗಿದದಾ ಅನುಭವಿಸುತ್ತಿರುವ ಹಾಗೆ–ಈ

ನಮ್ಮ ವ್ಯವಸ್ಥೆಯು ನಮಗೆ ಹತಾಶೆಯನ್ನು ಮಾತ್ರ ಹುಟ್ಟಿಸುವಂಥದು. 'ಜಗತ್ತಿನ ಅತ್ಯಂತ ಬೃಹತ್ತಾದ ಪ್ರಜಾಸತ್ತೆ' ಎಂದು ಪರಿಗಣಿತವಾಗುವ ಈ ರಾಷ್ಟವು ನಿಜದಲ್ಲಿ ಬೃಹತ್ ನರಕವಾಗಿದೆ.

ಇಂಥ ಈಗಿನ ದುಃಸ್ಥಿತಿಗೆ ಡೆಮೊಕ್ರಸಿಯೆಂಬ ರಾಜಕೀಯದ ಮೂಲಕಲ್ಪನೆಯಾಗಲಿ ಅಥವಾ ನಮ್ಮ ಲಿಖಿತ ಸಂವಿಧಾನದ ಅಸ್ತಿವಾರವಾಗಲೀ ಕಾರಣವಲ್ಲ. ನಮ್ಮ ಸಂವಿಧಾನದ ಚೌಕಟ್ಟು ದೀರ್ಘ ಚಿಂತನೆ ಚರ್ಚೆಗಳಲ್ಲಿ ರೂಪುಗೊಂಡಿದ್ದು ಮತ್ತು ಅದರಿಂದ ಸಾಕಷ್ಟು ಒಳ್ಳೆಯ ಮಾದರಿಯೆನ್ನುವಂತಿದೆ. ಆದರೆ ನಾವು ಅದರ ಅಪೇಕ್ಷೆ, ಸಂಕಲ್ಪ ಮತ್ತು ಸ್ಪಷ್ಟ ನಿರ್ದೇಶನಗಳನ್ನು ಕಡೆಗಣಿಸಿ ನಮ್ಮ ಆಡಳಿತವ್ಯವಸ್ಥೆಯನ್ನು ದೋಷ ಮತ್ತು ಕೊರತೆಗಳಿಂದ ಅನುಪಯುಕ್ತಗೊಳಿಸಿಕೊಂಡಿದ್ದೇವೆ, ವಿಕೃತಗೊಳಿಸಿಕೊಂಡಿದ್ದೇವೆ; ಹೆಜ್ಜೆ ಹೆಜ್ಜೆಯಲ್ಲೂ ಅದು ಮುಂದುವರಿದುಕೊಳ್ಳುತ್ತಲೇ ಬಂದಿದೆ.

ಮೊದಲನೆಯದಾಗಿ, ಸಂವಿಧಾನದ ಅಪೇಕ್ಷೆಯಂತೆ ವಿಕೇಂದ್ರೀಕೃತ ಆಡಳಿತವ್ಯವಸ್ಥೆಯನ್ನು ನಿರ್ಮಿಸಿಕೊಳ್ಳದೆ ಮತ್ತು ಕಾರ್ಯಗತಗೊಳಿಸಿಕೊಳ್ಳದೆ ಅದನ್ನು ಅತಿಕೇಂದ್ರೀತವಾಗಿಸಿದ್ದೇವೆ. ಎರಡನೆಯದಾಗಿ, ಅಭಿವೃದ್ಧಿ ರಾಜಕಾರಣದ ವ್ಯಾಪಕ ಪ್ರಕ್ರಿಯೆಯಲ್ಲಿ ಪ್ರಜಾಸಮಸ್ತರನ್ನೂ ಬಹಿಷ್ಕರಿಸಿ ಅದನ್ನು ಬೆರಳೆಣಿಕೆಯ ತಜ್ಞರ ಕೈಗೆ ಒಪ್ಪಿಸಿದ್ದೇವೆ. ಕ್ರಮೇಣ ಅದು ತಜ್ಞರು, ಬೃಹತ್ ಉದ್ಯಮಿಗಳು ಮತ್ತು ಲೋಭಿ ರಾಜಕಾರಣಿಗಳ ವಿಷವೃತ್ತವಾಗಿ ಬೆಳೆದುಕೊಂಡಿದೆ. ಪರಿಣಾಮವೆಂದರೆ, ಈ ದುಷ್ಟಕೂಟ ರಾಜಕಾರಣವು ವಿಕೇಂದ್ರೀಕರಣದ ಸಾಧ್ಯತೆಗಳನ್ನೇ ಅಸಾಧ್ಯಗೊಳಿಸಿಬಿಟ್ಟಿದೆ. ಅಂತಿಮವಾಗಿ ಇಡೀ ವ್ಯವಸ್ಥೆಯು ಆದ್ಯಂತ ಆ ದುಷ್ಟಕೂಟದ ಸೂತ್ರದ ಬೊಂಬೆಯಾಗಿದೆ.

ಇದರಮೇಲೆ, ಈಚಿನ ಒಂದೆರಡು ದಶಕಗಳಲ್ಲಿ ಜಾಗತಿಕ ರಾಜಕಾರಣದ ಪರಿಣಾಮಗಳು–ಜಾಗತಿಕ ಉದ್ಯಮಗಳ ವಿಷಕೂಟ ರಾಜಕಾರಣದ ಪರಿಣಾಮಗಳು–ಜಾಗತಿಕರಣವೆಂಬ ಹುಸಿಹೆಸರಿನಲ್ಲಿ, ಇಂಥ ವಾತಾವರಣವನ್ನು ಪೋಷಿಸಿ ಬೆಳೆಸುತ್ತಿವೆ; ಮಾತ್ರವಲ್ಲ, ತಮ್ಮ ಮೋಹಕವಂಚನೆಯಿಂದ ನಮ್ಮ ಜನತಂತ್ರದ ಮೂಲವಾದ ಪ್ರಜಾಜನರ ಮನಸ್ಸನ್ನು ಆಕರ್ಷಿಸತೊಡಗಿವೆ ಮತ್ತು ದುರ್ಬಲಗೊಳಿಸುತ್ತಿವೆ. ಈ ಸಂಗತಿಗಳನ್ನು ಗಮನಿಸಿದಾಗ, ನಮ್ಮ ಡೆಮೊಕ್ರಸಿಯೆನ್ನುವುದು ಇಲ್ಲಿನತನಕವೂ ನಾಶವಾಗದೆ ಉಳಿದಿರುವುದೇ ದೊಡ್ಡ ಸೋಜಿಗವಾಗಿ ಕಾಣಬಹುದು. ಜನಾಂಗ–ಧರ್ಮ–ಭಾಷೆ–ಪರಿಸರ–ಜಾತಿ–ನಡಾವಳಿ ಇ., ಸಂಗತಿಗಳಲ್ಲಿ ಅಸಂಖ್ಯ ಮುಖಿಯಾಗಿ ವ್ಯಾಪಕವಾಗಿರುವ ನಮ್ಮ ದೇಶವು, ಸದ್ಯದ ಸಂದರ್ಭದಲ್ಲಿ, ಡೆಮೊಕ್ರಸಿಯನ್ನು ಬಿಟ್ಟು ಬದಲಿ ರಾಜಕಾರಣವನ್ನು ಕುರಿತು ಯೋಚಿಸುವುದು ಕೂಡ ಅಸಾಧ್ಯವೇ ಸರಿ. ಈ ಅಂಶವೇ ನಮ್ಮ ಜನತಂತ್ರವು ಈವರೆಗೂ ತಾಳಿಕೊಂಡಿರುವುದಕ್ಕೆ ಕಾರಣವಿರಬಹುದು. ಆದರೆ ಒಮ್ಮೆ, ಸಂಯುಕ್ತ ರಾಜ್ಯಕೂಟವಾಗಿರುವ ನಮ್ಮ ರಾಷ್ಟವು ಯಾವುದೇ ಒಂದು ಮೂಲೆಯಿಂದ ಛಿದ್ರಗೊಳ್ಳಲು ತೊಡಗಿದರೆ ಆಗ ಜನತಂತ್ರವು ತಾನಾಗಿಯೇ ನಾಶಗೊಳ್ಳುತ್ತದೆ.

ಅನೇಕ ಪ್ರತಿಕೂಲಗಳು ಬಾಧಿಸುತ್ತಿದ್ದರೂ ಈ ತನಕ ನಮ್ಮ ಜನಪದದ ಸು. ಶೇ. ಅರುವತ್ತು–ಎಪ್ಪತ್ತು 'ಅನಕ್ಷರಸ್ಥರು' ಈ ಜನತಂತ್ರವ್ಯವಸ್ಥೆಯನ್ನು ನಾಶವಾಗದಂತೆ ರಕ್ಷಿಸಿಕೊಂಡು ಬಂದಿದ್ದಾರೆ; ಅದನ್ನು ಈ ಮೊದಲೇ ಗಮನಿಸಿದ್ದಾಗಿದೆ. ಈಗ, ಪ್ರತಿಕೂಲ ಮಾರುತಗಳೇ ಗರಿಷ್ಠವಾಗಿ ಬಾಧಿಸುತ್ತಿರುವ ನಿರ್ಣಾಯಕ ಸಂದರ್ಭದಲ್ಲಿ, ನಮ್ಮ ಜನಪದದ ಇನ್ನುಳಿದ ಸು. ಶೇ. ಮೂವತ್ತು–ನಲವತ್ತು 'ಅಕ್ಷರಸ್ಥರು' ಉಳಿದ ಜನವರ್ಗದ ಜೊತೆ ಕೈಗೂಡಿಸಿ ಕ್ರಿಯಾಶೀಲರಾದರೆ ಮಾತ್ರವೇ ನಮ್ಮ ಜನತಂತ್ರವನ್ನು ಉಳಿಸಿಕೊಳ್ಳಲು ಹಾಗೂ ದೃಢವಾಗಿ ಬೆಳೆಸಿಕೊಳ್ಳಲು ಸಾಧ್ಯ.

....

ಉಪಸಂಹಾರವಾಗಿ, 'ಸಮುದಾಯ' ಎಂಬ ನನ್ನ ಕಲ್ಪನೆಯ ಬಗ್ಗೆ ಕೆಲವು ಸಂಗತಿಗಳನ್ನು ವಿವೇದಿಸುತ್ತೇನೆ.

'ಸಮುದಾಯ' ಎಂಬ ಶಬ್ದವು ನಮ್ಮಲ್ಲಿ ತುಂಬ ಹಳೆಯದು. ಆದರೆ ಅದರ ಅರ್ಥಪರಂಪರೆಗಳು ಕಾಲಕಾಲಕ್ಕೆ ಬಹಳ ಬದಲಾಗುತ್ತ ಬಂದಿವೆ. ಸದ್ಯ ನಾವು ಬಳಸುತ್ತಿರುವ 'ಸಮುದಾಯ' ಶಬ್ದವು ಪಶ್ಚಿಮದ (ಇಂಗ್ಲಿಷ್‌ನ) ಕಮ್ಯುನಿಟಿ ಎಂಬ ಪದದ ಅನುವಾದವಾಗಿದೆ. ಅನುವಾದಕ್ಕಾಗಿ ಹೀಗೆ ನಾವು ಬಳಸಿಕೊಂಡಿರುವ ಈ ಪದವು ನಮ್ಮ ಹಿನ್ನೆಲೆಯಿಂದಾಗಿ ಮೂಲಕ್ಕಿಂತ ಭಿನ್ನವಾದ–ಬಹುಶಃ ವಿಶಾಲವೂ ಆದ–ಅರ್ಥವನ್ನು ಪಡೆದುಕೊಳ್ಳಲು ಸಾಧ್ಯ. ಭಾಷಾಂತರ ಕ್ರಿಯೆಯಲ್ಲಿ ಅದು ಸಾಧ್ಯ ಮತ್ತು ಸಹಜ. ನಮ್ಮ ಹಿನ್ನೆಲೆಯಲ್ಲಿ ಈ ಶಬ್ದಕ್ಕೆ ನಾನು ಕೊಟ್ಟುಕೊಂಡಿರುವ ಅರ್ಥವನ್ನು ಇಲ್ಲಿ ಹೇಳುತ್ತೇನೆ.

ಭಾಷೆಯಲ್ಲಿ 'ನಾನು' ಮತ್ತು 'ನಾವು' ಎಂಬ ಎರಡು ಸರ್ವನಾಮಗಳಿವೆ. ಇವುಗಳಲ್ಲಿ 'ನಾನು' ಎನ್ನುವುದು ವ್ಯಕ್ತಿಘಟಕವನ್ನು ನಿರ್ದಿಷ್ಟಗೊಳಿಸಿ ಹೇಳುತ್ತದೆ. 'ನಾವು' ಎನ್ನುವುದು ಮಾತ್ರ ಅನಿರ್ದಿಷ್ಟ ಅರ್ಥವುಳ್ಳದ್ದಾಗಿದೆ. ಅದು 'ನಾನು'ವಿನಿಂದ ಹೊರಕ್ಕಿರುವ ಅಸಂಖ್ಯಾತ ಸಮೂಹ ಘಟಕಗಳನ್ನು (ಅನೇಕ ನಾನುಗಳನ್ನು) ನನ್ನ ಜೊತೆಗೊಳಿಸಿಕೊಂಡು ನಿರ್ದೇಶಿಸಬಲ್ಲುದು' ಆಯಾ ಸಂದರ್ಭಕ್ಕೆ ಲಗತ್ತಾಗಿ, ಇಬ್ಬರಿಂದ ತೊಡಗಿ ವಿಸ್ತರಿಸುತ್ತ ಇಡೀ ಮಾನವಕುಲವನ್ನು ನಿರ್ದೇಶಿಸಬಲ್ಲದು. ಉದಾಹರಣೆಗೆ, ಮಾತಾಡುತ್ತಾ ಕೂತಿರುವ ಇಬ್ಬರು 'ನಾವು' ಆಗಬಹುದು; ಈ ಇಬ್ಬರಲ್ಲೇ ಎದುರಿನವನನ್ನು ಹೊರಗಿಟ್ಟು ನನ್ನೊಬ್ಬನ ಜತೆ ಸೇರುವೆಗೊಳ್ಳುವ ಅಪ್ರತ್ಯಕ್ಷ, ಏಕ ಅತವ ಅನೇಕ ಜನರ ಕೂಟವನ್ನು ನಿರ್ದೇಶಿಸುವ 'ನಾವು' ಆಗಬಹುದು; ಅಥವಾ, ನಮ್ಮ ಕುಟುಂದವರು, ಊರವರು, ಜಿಲ್ಲೆಯವರು, ಪ್ರಾಂತ–ರಾಜ್ಯ–ವಿಶ್ವ ಮುಂತಾದಲ್ಲಿನವರು–ಹೀಗೆ 'ನಾವು' ಎಂಬುದು ಅಸಂಖ್ಯ ಬಗೆಯಲ್ಲಿ, ಭಿನ್ನಭಿನ್ನವಾಗಿ, ಅನ್ವಯಿಸಿಕೊಳ್ಳಬಲ್ಲುದು. ಸಂದರ್ಭಾನುಸಾರ ಮಾತ್ರವೇ ಅದಕ್ಕೆ ಖಚಿತ ಅರ್ಥವು ಸಿದ್ಧಿಸುತ್ತದೆ. 'ನಾವು' ಎಂಬ ಈ ಸರ್ವನಾಮದ ಭಾವವು ಯಾವುದೋ ಅದೇ 'ಸಮುದಾಯ' ಶಬ್ದದ ಭಾವ. 'ನಾವು' ಎನ್ನುವ ಹಾಗೆ, 'ಸಮುದಾಯ' ಶಬ್ದವೂ ಮಾತಿನ ಸಂದರ್ಭಕ್ಕೆ ಲಗತ್ತಾಗಿ, ಚಮತ್ತಿನಲ್ಲಿ ನಿರ್ದಿಷ್ಟ ಅರ್ಥವನ್ನು ಸ್ಫೋಟಿಸಿ ಅನಂತರ ಚಮತ್ತಿನಲ್ಲಿ ವಿಸರ್ಜಿತಗೊಳ್ಳುತ್ತದೆ. 'ನಾವು'ನ ಅರ್ಥಪ್ರತಿಮೆಯೇ 'ಸಮುದಾಯ'ದ ಅರ್ಥಪ್ರತಿಮೆ.

ದಿ. ಕೀರ್ತಿನಾಥ ಕುರ್ತಕೋಟಿಯವರು ತಮ್ಮ 'ನಾಯಂ ಹಂತಿನ ಹನ್ಯತೇ' (೨೦೦೨ರಲ್ಲಿ ಗುಜರಾತ್‌ನಲ್ಲಿ ನಡೆದ ಹಿಂಸಾಕಾಂಡ ಕುರಿತದ್ದು) ಎಂಬ ಲೇಖನದಲ್ಲಿ, ಮಾನವ ಹಿಂಸೆಯ ಮೂಲದ ಬಗ್ಗೆ ಚಿಂತಿಸುತ್ತ, 'ಸಂಘಟನೆ'ಯೆಂಬುದು ಹಿಂಸೆಯ ಬಹುದೊಡ್ಡ ಆಕರವಾಗಿರುವುದನ್ನು ಗುರುತಿಸುತ್ತಾರೆ. ಅತ್ಯಂತ ಕಿರಿದಾದ ಮತ್ತು ಜೈವಿಕ (ರಕ್ತ) ಸಂಬಂಧವುಳ್ಳ ಕುಟುಂಬ ಸಂಘಟನೆಯಲ್ಲೇ ಕ್ರಮೇಣ ಹಿಂಸೆಯು ಪ್ರಾರಂಭಗೊಂಡು ಬಲಿಯುವುದನ್ನು ಅವರು ಕಾಣಿಸುತ್ತಾರೆ. ಈ ಕಿರುಕೂಟದಿಂದ ಮೊದಲುಗೊಂಡು, ವೃತ್ತೋಪರಿವೃತ್ತಗಳಾಗಿ ವ್ಯಾಪ್ತಗೊಳ್ಳುತ್ತ ಹೋಗುವ ಊರು–ಜಾತಿ–ಸಮಾಜ ಇ.ಇ. ಭಿನ್ನ ಭಿನ್ನ ಸಂಘಟನೆಗಳು ಅನೇಕಾನೇಕ ವಿಧಿ–ನಿಷೇಧ–ಕಟ್ಟು–ಕಟ್ಟಳೆಗಳನ್ನು ಅಳವಡಿಸುವ ಮುಖಾಂತರ ಬಲಗೊಳ್ಳುತ್ತ ಹೋಗುತ್ತವೆ. ರಾಜ್ಯ–ದೇಶ–ಸರಕಾರ ಮುಂತಾದವಂತೂ ಕಾನೂನು–ಅಪರಾಧ–ಶಿಕ್ಷೆ ಇ., ಅನುಲ್ಲಂಘನೀಯಗಳ ಮೂಲಕ ಗರಿಷ್ಠ ದಮನಕಾರಿಯಾಗಿ ಬೆಳೆಯುತ್ತದೆ ಸನ್ನಿವೇಶಗಳನ್ನು ಜಟಿಲಗೊಳಿಸುತ್ತ, ಇವು ಹೊಸ ಹೊಸ ಹಿಂಸಾತಂತ್ರಗಳನ್ನು ರೂಢಿಸುತ್ತ ಜನರನ್ನು ಹೆಚ್ಚು ಹೆಚ್ಚು ಮರ್ದಿಸುತ್ತವೆ. ಪ್ರಭುತ್ವಗಳು ತಾವು ಮತ್ತೂ ಮತ್ತೂ ಬಲಗೊಳ್ಳುತ್ತ ಮುಂದುವರಿಯುತ್ತವೆ.

ಕುರ್ತಕೋಟಿಯವರ ಮಾತನ್ನು ನಾನು ಬಹು ಮುಖ್ಯವಾದ್ದೆಂದು ಗಣಿಸಿದ್ದೇನೆ ಮತ್ತು ಅದನ್ನು ನೂರಕ್ಕೆ ನೂರು ಒಪ್ಪಿದ್ದೇನೆ. ಆದರೆ–ಸಂಘಟನೆಯು ಹಿಂಸೆಯ ದೊಡ್ಡ ಮೂಲ ಎಂಬುದು ಎಷ್ಟು ನಿಜವಾಸ್ತವವೋ ಹಾಗೇ ಅದಕ್ಕೆ ವಿರುದ್ಧವಾದ್ದೂ ವಾಸ್ತವವೇ. ವ್ಯಕ್ತಿಗಳು ಯಾವತ್ತೂ

ಭಾಷೆಯಲ್ಲಿ 'ನಾನು' ಮತ್ತು 'ನಾವು' ಎಂಬ ಎರಡು ಸರ್ವನಾಮಗಳಿವೆ. ಇವುಗಳಲ್ಲಿ 'ನಾನು' ಎನ್ನುವುದು ವ್ಯಕ್ತಿಘಟಕವನ್ನು ನಿರ್ದಿಷ್ಟಗೊಳಿಸಿ ಹೇಳುತ್ತದೆ. 'ನಾವು' ಎನ್ನುವುದು ಮಾತ್ರ ಅನಿರ್ದಿಷ್ಟ ಅರ್ಥವುಳ್ಳದ್ದಾಗಿದೆ. ಅದು 'ನಾನು'ವಿನಿಂದ ಹೊರಕ್ಕಿರುವ ಅಸಂಖ್ಯಾತ ಸಮೂಹ ಘಟಕಗಳನ್ನು (ಅನೇಕ ನಾನುಗಳನ್ನು) ನನ್ನ ಜೊತೆಗೊಳಿಸಿ ಕೊಂಡು ನಿರ್ದೇಶಿಸಬಲ್ಲುದು' ಆಯಾ ಸಂದರ್ಭಕ್ಕೆ ಲಗತ್ತಾಗಿ, ಇಬ್ಬರಿಂದ ತೊಡಗಿ ವಿಸ್ತರಿಸುತ್ತ ಇಡೀ ಮಾನವ ಕುಲವನ್ನು ನಿರ್ದೇಶಿಸಬಲ್ಲದು. ಉದಾಹರಣೆಗೆ, ಮಾತಾಡುತ್ತಾ ಕೂತಿರುವ ಇಬ್ಬರು 'ನಾವು' ಆಗಬಹುದು; ಈ ಇಬ್ಬರಲ್ಲೇ ಎದುರಿನವನನ್ನು ಹೊರಗಿಟ್ಟು ನನ್ನೊಬ್ಬನ ಜತೆ ಸೇರುವೆಗೊಳ್ಳುವ ಅಪ್ರತ್ಯಕ್ಷ, ಏಕ ಅಥವಾ ಅನೇಕ ಜನರ ಕೂಟವನ್ನು ನಿರ್ದೇಶಿಸುವ 'ನಾವು' ಆಗಬಹುದು; ಅಥವಾ, ನಮ್ಮ ಕುಟುಂದವರು, ಊರವರು, ಜಿಲ್ಲೆಯವರು, ಪ್ರಾಂತ –ರಾಜ್ಯ–ವಿಶ್ವ ಮುಂತಾದಲ್ಲಿನವರು–ಹೀಗೆ 'ನಾವು' ಎಂಬುದು ಅಸಂಖ್ಯ ಬಗೆಯಲ್ಲಿ, ಭಿನ್ನಭಿನ್ನವಾಗಿ, ಅನ್ವಯಿಸಿ ಕೊಳ್ಳಬಲ್ಲುದು. ಸಂದರ್ಭಾನುಸಾರ ಮಾತ್ರವೇ ಅದಕ್ಕೆ ಖಚಿತ ಅರ್ಥವು ಸಿದ್ಧಿಸುತ್ತದೆ.

ಕೇವಲ ಏಕಾಂಗಿಗಳಾಗಿ ಬಾಳಲಾರರು; ಕೂಡಿಕೊಳ್ಳಬೇಕಾದ್ದು ಅನಿವಾರ್ಯ. ಹೀಗಿರುವಾಗ ಜನಪದದಲ್ಲಿ ಜೈವಿಕಶ್ರದ್ಧೆ, ಮಾನವೀಯತೆ, ಮಾರ್ದವಗಳು ಸಹಜವಾಗಿ ಪ್ರಚಲಿತ ಗೊಂಡು ಕ್ರಿಯಾಶೀಲವಾದರೆ ಮಾತ್ರ ಹಿಂಸೆಯನ್ನು ನಿಯಂತ್ರಿಸಲು ಸಾಧ್ಯ. ಇದು ಅಸಾಧ್ಯ ಅಥವ ದುಃಸಾಧ್ಯ ಅನ್ನಿಸಬಹುದು; ಆದರೆ ಬೇರೆ ಸುಲಭದ ದಾರಿ ಇಲ್ಲವೇ ಇಲ್ಲ. ಈ ನೆಲೆಯಲ್ಲಿ, ಸಮುದಾಯ (ನಾವು)ಭಾವವು ಉಪಯುಕ್ತವಾಗುತ್ತದೆ. ಜನರು ತಮ್ಮೆಲ್ಲ ಬಗೆಯ ಸಂಘಟನೆಗಳನ್ನೂ ತಾನೇ ನಿರ್ಮಿಸಿರುವ ಮತ್ತು ಹಾಗಾಗಿ ತಾವೇ ನಿಯಂತ್ರಿಸಿ ನಿರ್ವಹಿಸಬೇಕಾದ ಸಮುದಾಯ ನಾವು ಸಂಘಟನೆಗಳು ಎಂದು ಭಾವಿಸಿ ಅದನ್ನು ತ್ರಿಕರಣ ನಿಷ್ಠೆಯಿಂದ ಪಾಲಿಸಬೇಕು. ನಮ್ಮ ಜನತಂತ್ರ ವ್ಯವಸ್ಥೆಗೆ ಸಂಬಂಧಿಸಿ ನಮ್ಮ ಜನರು ಈ ಕರ್ತವ್ಯವನ್ನು ಅತಿ ಕಿಂಚಿತ್ತಾದರೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಎಂದು ಕಂಡು ಕೊಂಡಿರುವುದರಿಂದ, ಇದು ಅಸಾಧ್ಯ ಎಂಬ ಭಯವಿಲ್ಲ ನನಗೆ.

ಮೂಲವಾದ) ಜೈವಿಕ ಪ್ರೇರಣೆಯು ದತ್ತವಾಗಿರುವಂಥದು.

ಕಾಳಿದಾಸಕವಿಯು (ತನ್ನ ಮೇಘದೂತದಲ್ಲಿ) ಪಕ್ಷಿಲೋಕಕ್ಕೆ ಸಂಬಂಧಿಸಿದ ಒಂದು ಚರ್ಯೆಯನ್ನು ಕುತೂಹಲದಿಂದ ಗಮನಿಸಿ ಬಣ್ಣಿಸಿದ್ದಾನೆ. ಅದು ಬೆಳ್ಳಕ್ಕಿ (ಬಲಾಕ ಪಕ್ಷಗಳನ್ನು) ಕುರಿತದ್ದು. ಆಷಾಢ ಪ್ರಾರಂಭದಲ್ಲಿ (ಮಳೆಗಾಲದ ಪ್ರಾರಂಭ), ಆಕಾಶದಲ್ಲಿ ಬಿಡಿಬಿಡಿಯಾಗಿ ಚೆದುರಿರುವ ಈ ಹಕ್ಕಿಗಳು, ತುಂಬುಮೋಡವು ಪ್ರವೇಶಿಸಿದ್ದನ್ನು ಕಂಡದ್ದೇ ಪ್ರಾಕೃತಿಕವಾದ ಬೆದೆಯು ಹುಟ್ಟಿ, ಬಿಡಿಯಾಗಿರುವ ಅಷ್ಟೂ ಕ್ಷಣಮಾತ್ರದಲ್ಲಿ ಬೆಸದು ಮಾಲೆಗೊಳ್ಳುತ್ತವೆ. (ಬೆದೆ ತೀರಿದ ಮರುಕ್ಷಣ ಅವೆಲ್ಲ ಮತ್ತೆ ಪ್ರತ್ಯೇಕಗೊಂಡು ಹಾರಿಹೋಗುತ್ತವೆ.) ಪ್ರಾಣಿ ಪ್ರಪಂಚದ ಈ ಜೈವಿಕ ಪ್ರವೃತಿಯು–ಕ್ಷಣಮಾತ್ರದಲ್ಲಿ ಕೂಡಿ ಬೇಟ ಮುಗಿದಕ್ಷಣವೇ ಬೇರೆಯಾಗುವ ಪ್ರಕ್ರಿಯೆಯು–ಮನುಷ್ಯರಲ್ಲಿ 'ನಾವು–ಭಾವ' (ಸಮುದಾಯ)ದ ಜೈವಿಕ ಮೂಲವೆಂದು ನನ್ನ ಕಲ್ಪನೆ.

ಸಂವಿಧಾನದ ಪ್ರಾರಂಭದ. 'ನಾವು ಇಂಡಿಯಾದ ಅರ್ಥಾತ್ ಭಾರತದ ಜನಗಳೆಲ್ಲ. ಒಟ್ಟುಗೂಡಿ...' ಎಂಬ ಶಬ್ದಗುಚ್ಛದ ಭಾವವನ್ನು ಅವರು ಸ್ವಯೇಚ್ಛೆ ಸಂತೋಷಗಳಿಂದ ಸ್ವೀಕರಿಸಿ ಹೃದಯಗೊಳಿಸಿಕೊಂಡಿದ್ದಾರೆ. ಅದು ಮುಖ್ಯ ಸಂಗತಿ. ನನ್ನ ಬದುಕಿನ ಉದ್ದದಲ್ಲಿ ಏನಾದರೂ ಕಲಿತುದಿದ್ದರೆ ಅದು ಈ ಸಮುದಾಯದಿಂದ, ಅದೇ ನನ್ನ ಏಕೈಕ ಪರಮಗುರು

"ನಾವು' ಭಾವದಿಂದ ಆರ್ದ್ರಗೊಂಡಿರುವ ಸಮುದಾಯಗಳಲ್ಲಿ, ಸಂಘಟನೆಗಳೆಲ್ಲವೂ ತಾತ್ಕಾಲಿಕ–ತಾತ್ಕ್ಷಣಿಕ ಸತ್ಯ (ಘಟಕ)ಗಳಾಗಿ ಅನುಭವಗೊಳ್ಳುತ್ತವೆ. ಅದರಿಂದ ಇಲ್ಲಿ 'ಸ್ವ' ಎಂಬುದಾಗಲೀ 'ಅನ್ಯ' ಎಂಬುದಾಗಲೀ ತಾತ್ಕಾಲಿಕ ಭಾವ, ಆಯಾ ಕ್ಷಣದ ಅಗತ್ಯಕ್ಕೆ ತಕ್ಕುದಾಗಿ ಸೃಜನಗೊಳ್ಳುವ ಮತ್ತು ಅಗತ್ಯ ಪೂರಯಿಸಿದ ಕ್ಷಣದಲ್ಲಿ ತಂತಾನೇ ವಿಸರ್ಜಿತಗೊಳ್ಳುವ ಒಂದು ಭಾವಪ್ರತಿಮೆ. ಇಲ್ಲಿ, 'ಸ್ವ'ಕ್ಕೆ 'ಅನ್ಯ' ಅಥವಾ 'ಪ್ರತಿ' ಎನ್ನುವಂಥ ಇನ್ನೊಂದು ಸ್ಥಿರಘಟಕ ಇರಲಾರದು; ಅದರಿಂದ, ಅನ್ಯ–ಪ್ರತಿ–ವಿರೋಧ ಇ., ಕುರಿತು ಭಯ–ಹಗೆತನಗಳು ಇಲ್ಲಿ ಸೃಷ್ಟಿಗೊಳ್ಳುವುದಿಲ್ಲ. ಸ್ವತ್ವ–ಅನ್ಯತ್ವಗಳು (ಅವುಗಳ ತೀವ್ರ ಸಂಘರ್ಷ) ಇಲ್ಲಿ ಸ್ಥಾಯಿಯಲ್ಲ, ಸಂಚಾರಿ ಕಲ್ಪನೆಗಳು ಮಾತ್ರ. ಇಂಥ 'ನಾವು ಭಾವ'ವನ್ನು ರೂಢಿಸಿಕೊಂಡಿರುವ ಸಮುದಾಯವು ಪ್ರಭುತ್ವಕೇಂದ್ರ–ಅಧಿಕಾರ ಸ್ಥಾನಗಳನ್ನು ತ್ರಿಕರಣಪೂರ್ವಕ ಮಾತ್ರವಲ್ಲ, ಜೈವಿಕನೆಲೆಯಿಂದಲೇ ಧಿಕ್ಕರಿಸುತ್ತದೆ. ಅಲ್ಲದೆ, ಇಲ್ಲಿ ಅಧಿಕಾರ ಮತ್ತು ಜ್ಞಾನ (ಪವರ್–ನಾಲೆಜ್)ಗಳು ಒಗ್ಗೂಡಿ ಅವುಗಳ ವಿಷವೃತ್ತವು ಪ್ರಬಲಿಸಲು ಅವಕಾಶವುಳಿಯುವುದಿಲ್ಲ. ಇದರ ಅರ್ಥ ಡೆಮೊಕ್ರಸಿ ಎನ್ನುವುದು ನಿಜವಾದ ಜನತಂತ್ರವಾಗಿ (ಸಮುದಾಯ ಜನತಂತ್ರ) ರೂಪಗೊಳ್ಳಬೇಕೆಂದರೆ, ಅದಕ್ಕೆ ಸಮುದಾಯ (ನಾವು) ಭಾವದ ಭದ್ರ ಅಸ್ತಿವಾರವನ್ನು ನಿರ್ಮಿಸಿಕೊಳ್ಳಬೇಕು. ಮತ್ತು, ಈಗಾಗಲೇ ಹೇಳಿದಂತೆ ಹಿಂಸೆಯ ನಿಯಂತ್ರಣ ಹಾಗೂ ಸತ್–ಭಾವ ಪ್ರಚಲಿತಗೊಳ್ಳಲು ಬೇರೆ ಸುಲಭದ ದಾರಿ ಇಲ್ಲವೇ ಇಲ್ಲ.

ಇವೆಲ್ಲ ನೀತಿ ಪಾಠ–ತತ್ತ್ವಶಾಸ್ತ್ರ–ಅಧ್ಯಾತ್ಮಕ್ಕೆ ಸಂಬಂದಪಟ್ಟವು ಅಂತ ಹುಬ್ಬೇರಿಸಬೇಕಾಗಿಲ್ಲ. ಮಾನವರಲ್ಲಿ ಮಾತ್ರವಲ್ಲದೆ ಇಡೀ ಜೀವಲೋಕದಲ್ಲಿ–ಸಾರ್ವತ್ರಿಕ ಅನಿರ್ದಿಷ್ಟವೂ ಸಾಂದರ್ಭಿಕ ನಿರ್ದಿಷ್ಟವೂ ಆದ (ನಾವು ಭಾವಕ್ಕೆ

ಇಂಥ ಜೀವಮೂಲ ಸಮುದಾಯ ಭಾವದಿಂದ ನಮ್ಮ ಬಹುಜನರು (ಹಿಂದೆ ಸೂಚಿಸಿದ ನಮ್ಮ ಶೇ.೬೦–೭೦ ಮಹಾಜನರು) ನಮ್ಮ ಹೊಸ ಜನತಂತ್ರ ಆಡಳಿತ ವ್ಯವಸ್ಥೆಯನ್ನು, ಐವತ್ತು ವರ್ಷ ಮಿಕ್ಕಿದ ಈ ದೀರ್ಘಕಾಲದಲ್ಲಿ, ನಾಶವಾಗದ ಹಾಗೆ – ಮಾತ್ರವಲ್ಲದೆ ಪ್ರಾರಂಭದ ಭೌಗೋಲಿಕ ದೇಶಕಲ್ಪನೆಯಲ್ಲಿ ಛಿದ್ರವು ಉಂಟಾಗದಂತೆ – ಸಂಗೋಪಿಸಿ ಜತನವಾಗಿ ಸಾಕಿಕೊಂಡು ಬಂದಿದ್ದಾರೆ. ನಮ್ಮ ಸಂವಿಧಾನದ ಬಗ್ಗೆ ಬಹುಶಃ ಅವರು ಹೆಚ್ಚು ತಿಳಿದುಕೊಂಡಿಲ್ಲ. ಮತ್ತು, ಅದರ ವಿಧಿಗಳನ್ನು ಎಲ್ಲೆಲ್ಲಿ ಹೇಗೆ ಹೇಗೆ ತಿದ್ದಿ ಬದಲಿಸಿಕೊಳ್ಳಬಹುದು ಎಂಬಂಥ ಚಿಂತೆಯಿಂದ ಬಂಧಿತರಾಗುವುದಿಲ್ಲ. ಸಂವಿಧಾನದ ಪ್ರಾರಂಭದ. 'ನಾವು ಇಂಡಿಯಾದ ಅರ್ಥಾತ್ ಭಾರತದ ಜನಗಳೆಲ್ಲ. ಒಟ್ಟುಗೂಡಿ...' ಎಂಬ ಶಬ್ದಗುಚ್ಛದ ಭಾವವನ್ನು ಅವರು ಸ್ವಯೇಚ್ಛೆ ಸಂತೋಷಗಳಿಂದ ಸ್ವೀಕರಿಸಿ ಹೃದಯಗೊಳಿಸಿಕೊಂಡಿದ್ದಾರೆ. ಅದು ಮುಖ್ಯ ಸಂಗತಿ. ನನ್ನ ಬದುಕಿನ ಉದ್ದದಲ್ಲಿ ಏನಾದರೂ ಕಲಿತುದಿದ್ದರೆ ಅದು ಈ ಸಮುದಾಯದಿಂದ, ಅದೇ ನನ್ನ ಏಕೈಕ ಪರಮಗುರು ಎಂಬ ನನ್ನ ಋಣವನ್ನೂ ಇಲ್ಲಿ ಹೇಳಿಕೊಳ್ಳುತ್ತೇನೆ.

....

ಅಧ್ಯಯನ–ಅಧ್ಯಾಪನ–ಸಂಶೋಧನ–ಶಾಸ್ತ್ರರಚನೆಗಳಲ್ಲಿ ಪೂರ್ಣ ತೊಡಗಿಕೊಂಡಿರುವ ನೀವು, ಯಾವುದೇ ಶಾಸ್ತ್ರ ತಜ್ಞನಲ್ಲದಿರುವ ನನ್ನ ನಿತ್ಯಾಲೋಚನೆಗಳನ್ನು ಕುತೂಹಲ ದಿಂದ ಕೂತು ಲಾಲಿಸಿದ್ದೀರಿ. ಇದಕ್ಕಾಗಿ ನಿಮಗೆ ಕೃತಜ್ಞ – ನಮಸ್ಕಾರ.

(೨೬ ನವೆಂಬರ್ ೨೦೦೪ರಂದು ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅ್ಯಂಡ್ ಎಕನಾಮಿಕ್ಸ್ ಚೇಂಜ್ ಸಂಸ್ಥೆಯಲ್ಲಿ ಮಾಡಿದ ಭಾಷಣ)

□

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧



ಏಕತೆ ಮತ್ತು ಭಿನ್ನತೆಯೊಂದಿಗೆ ಸಮಗ್ರತೆ

ಜನಕ್ಕೇ ಬೆಳಕಾದ ಬುದ್ಧನ ಕಥೆಗಳು ಅಪಾರ. ಬುದ್ಧ ತನ್ನ ಪ್ರವಾಸದ ಕಾಲದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಅವರಿಗೆ ಮಾರ್ಗದರ್ಶನ ಮಾಡಲು ಕಥೆಗಳನ್ನು ಕೇಳುತ್ತಿದ್ದ. ಇದು ಜನರನ್ನು ತಿದ್ದಲು ಅತ್ಯಂತ ಸಮರ್ಥ ಮಾರ್ಗವೆಂದೇ ಇಂದಿಗೂ ಜನ ತಿಳಿದಿದ್ದಾರೆ. ಬುದ್ಧ ಹೇಳಿದ ಇಂಥ ನೂರಾರು ಕಥೆಗಳು ಇಂದು ವಿವಿಧ ರೂಪದಲ್ಲಿ ಲಭ್ಯವಿದೆ. ಸಿ.ಎಚ್. ರಾಜಶೇಖರ್ ಅಂಥ ಹಲವು ಕಥೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು 'ಸಂವಾದ' ಓದುಗರಿಗಾಗಿ ಈ ಸಂಚಿಕೆಯಿಂದ ನೀಡುತ್ತಿದ್ದೇವೆ.

○ಸಿ.ಎಚ್.ರಾಜಶೇಖರ್

ಒಮ್ಮೆ ಬುದ್ಧನು ತನ್ನ ಶಿಷ್ಯರೊಂದಿಗೆ ಊರಿಂದ ಊರಿಗೆ ಅಲೆಯುತ್ತಿದ್ದಾಗ ಶ್ರಾವಸ್ತಿಯನ್ನು ತಲುಪಿದ. ಮಾರ್ಗ ಮಧ್ಯದಲ್ಲಿ ದಟ್ಟ ಕಗ್ಗಾಡಿನಲ್ಲಿ ದಣಿವಾರಿಸಿಕೊಳ್ಳಲು ಕೆಲ ದಿನ ತಂಗಿದ. ಅಲ್ಲಿ ಪ್ರತಿ ದಿನವು ಬೆಳಿಗ್ಗೆ ಮತ್ತು ಸಂಜೆ ತನ್ನ ಭಿಕ್ಷು ಸಹೋದರರಿಗೆ ಪ್ರವಚನ ನೀಡುತ್ತಿದ್ದ, ಅವರುಗಳು ಕೇಳಿದ ಪ್ರಶ್ನೆಗೆ ಪ್ರೀತಿ ಮತ್ತು ಶ್ರದ್ಧೆಯಿಂದ ಉತ್ತರಿಸುತ್ತಿದ್ದ.

ಆದರೆ ಬುದ್ಧ ಪ್ರತಿ ಬಾರಿಯೂ ಶೀಲಕ್ಕೆ ಒತ್ತು ಕೊಟ್ಟು ಮಾತನಾಡುತ್ತಿದ್ದ. ಪ್ರಜ್ಞೆಗಿಂತ ಶೀಲವೇ ಮುಖ್ಯವೆನ್ನುತ್ತಿದ್ದ. ಶೀಲವಿಲ್ಲದವನ ಕೈಯಲ್ಲಿ ವಿದ್ಯೆ ಸಿಲುಕಿದರೆ ಅದೊಂದು ಖಡ್ಗ ವಲ್ಲದೆ ಮತ್ತೇನೂ ಅಲ್ಲವೆನ್ನುತ್ತಿದ್ದ. ಹೀಗೆ ಬುದ್ಧನ ಪ್ರತಿ ಪದದ ಅರ್ಥವ್ಯಾಪ್ತಿಯಲ್ಲಿ ಗೊಂದಲಗೊಂಡ ಭಿಕ್ಷುವು ಬುದ್ಧನ ಬಳಿ ಬಂದು ತನ್ನ ಗುರುವಿಗೆ ವಂದಿಸಿ ಸಮೀಪವೇ ಕುಳಿತು ಹೀಗೆ ಪ್ರಶ್ನಿಸಿದ:

'ಗುರುದೇವಾ, ತಾವು ಶೀಲಕ್ಕೆ ಅಪಾರ ಒತ್ತು ಕೊಡಲು ಕಾರಣವೇನು?'

'ಎಲೈ ಸಹೋದರ, ಶೀಲವೇ ಧರ್ಮ, ಶೀಲವೇ ವಿಚಾರ, ಶೀಲವೇ ಆಚಾರ. ಶೀಲವೇ ಆದಿ ಮತ್ತು ಆಶ್ರಯ. ಶೀಲವೇ ಎಲ್ಲ ಒಳಿತಿನ ಜನನಿ. ಶೀಲವೇ ಬದುಕಿನ ಅಗ್ರಮಾನ್ಯ. ಆದ್ದರಿಂದ ನೀನು ಶೀಲವನ್ನು ಪರಿಶುದ್ಧಗೊಳಿಸಿಕೋ'

'ಗುರುದೇವಾ, ಶೀಲ ಎಂದರೆ ಏನು?'

ಎಲೈ ಸಹೋದರ, ಕೊಲ್ಲದೆ ಇರುವುದು, ಕಳ್ಳತನ ಮಾಡದೆ ಇರುವುದು, ವ್ಯಭಿಚಾರ ಮಾಡದೆ ಇರುವುದು, ಸುಳ್ಳು ಹೇಳದೆ ಇರುವುದು ಮತ್ತು ಮದ್ಯಪಾನ ಮಾಡದೆ ಇರುವುದು! ಇದನ್ನೇ ನಾನು ಪಂಚಶೀಲ ಎಂದು ಪ್ರಬಲವಾಗಿ ಮತ್ತು ಪ್ರಥಮವಾಗಿ ಪ್ರತಿಪಾದಿಸಿದ್ದು!

'ಗುರುದೇವಾ, ಇದರಿಂದ ನಾವು ಏನನ್ನು ಸಾಧಿಸಬಹುದು ಏನನ್ನು ಪಡೆಯಬಹುದು ? ಏನನ್ನು ಸೃಷ್ಟಿಸಬಹುದು? ಇದರ ಅಂತಿಮ ಗುರಿ ಏನು?'

'ಎಲೈ ಸಹೋದರ, ಈ ಜಗತ್ತು ನನ್ನ ಹಿತಕ್ಕಾಗಿ, ನನ್ನ ಸುಖಕ್ಕಾಗಿಯೇ ಸೃಷ್ಟಿಯಾಗಿದೆ ಎಂಬ ಅಜ್ಞಾನವನ್ನು ಕೊಡಬೇಕು. ನನ್ನನ್ನೂ ಒಳಗೊಂಡು ಎಲ್ಲರಿಗಾಗಿ ಎಂಬ ಅಂತಿಮ ಸತ್ಯಕ್ಕೆ ನಿರಪರಾಧಿಯಾಗಿ ಶರಣಾಗಬೇಕು. ಆಗ ನಿನ್ನನ್ನೂ ಒಳಗೊಂಡು ಇತರರನ್ನು ರಕ್ಷಿಸುವ ಸಮಷ್ಠಿತನ ಈ ಪಂಚಶೀಲತೆಗೆ ಇದೆ. ಆಗ ಮಾತ್ರ ನೀನು ನಿನ್ನನ್ನು ಅರಿಯಬಲ್ಲೇ. ನಿನ್ನಸ್ವಾರ್ಥವನ್ನು ನೀಗಿಕೊಳ್ಳಬಲ್ಲೇ, ನಿನ್ನ ಅಹಂಕಾರವನ್ನು ಕಿತ್ತು ಹೊಗೆಯಬಲ್ಲೇ. ಆಗ ನೀನು ಜ್ಞಾನವನ್ನು ಪಡೆಯುವೆ. ಪ್ರಜ್ಞೆಯನ್ನು ಪಡೆಯುವೆ. ಹೊಸದೊಂದು ಬದುಕನ್ನು ಸೃಷ್ಟಿಸಬಲ್ಲೇ. ನೈತಿಕತೆಯಲ್ಲಿ ನೆಲೆ ನಿಲ್ಲಬಲ್ಲೆ.'

'ಗುರುದೇವಾ, ಪ್ರಜ್ಞೆಮೊದಲೋ? ಶೀಲ ಮೊದಲೋ...?

'ಎಲೈ ಸಹೋದರ, ಪ್ರಜ್ಞೆ ಅಗತ್ಯ. ಆದರೆ ಶೀಲ ಇನ್ನೂ ಅಗತ್ಯ. ಶೀಲವಿಲ್ಲದ ಪ್ರಜ್ಞೆಅಪಾಯಕಾರಿ'

'ಗುರುದೇವಾ, ಅದು ಹೇಗೆ?'

'ಎಲೈ ಸಹೋದರ, ಪ್ರಜ್ಞೆ ಎನ್ನುವುದು ಮನುಷ್ಯನ ಕೈಯಲ್ಲಿನ ಖಡ್ಗ'

ಒಮ್ಮೆ ಬುದ್ಧನು ಶ್ರಾವಸ್ತಿಯ ಅನಾಥಪಿಂಡಿಕ ನಿರ್ಮಿಸಿದ ಜೇತನವನದಲ್ಲಿ ತನ್ನ ಪ್ರಥಮ ಶಿಷ್ಯರಲ್ಲಿ ಪ್ರಮುಖನಾದ ಸಾರಿಪುತ್ತನೊಂದಿಗೆ ತಂಗಿದ್ದ. ಈ ವಿಷಯ ಬುದ್ಧನ ಮತ್ತೊಬ್ಬ ಶಿಷ್ಯನಾದ ಮಹಾಕೋತ್ತಿತನಿಗೆ ತಿಳಿಯಿತು. ಈತನಿಗೆ ಕೆಲವು ವಿಷಯಗಳು ಉತ್ತರಕ್ಕೆ ಸಿಗದೇ ಗೊಂದಲಗೊಂಡಿದ್ದ. ಈ ಗೊಂದಲದ ಪರಿಹಾರಕ್ಕಾಗಿ ಬುದ್ಧನ ಬಳಿ ಹೋಗೋಣವೋ ಅಥವಾ ಪೂಜ್ಯನಾದ ಸಾರಿಪುತ್ತನ ಬಳಿಗೆ ಹೋಗುವುದೋ ಎಂದು ಚಿಂತಿಸಿದ.

ಬುದ್ಧ ತನ್ನ ಎಲ್ಲ ಚಿಂತನೆಯನ್ನು ಸಮಗ್ರವಾಗಿ ಸಾರಿಪುತ್ತನಿಗೆ ಬೋಧಿಸಿದ್ದಾನೆ ಮತ್ತು ಈ ಸಾರಿಪುತ್ತನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾನೆ ಎಂಬ ಸ್ಪಷ್ಟತೆ ಇತ್ತು. ಹಾಗಾಗಿ ಸಾರಿಪುತ್ತನ ಬಳಿ ಹೋಗಲು ತೀರ್ಮಾನಿಸಿದ.

ಒಂದು ಸಂಜೆ ತನ್ನ ಧ್ಯಾನದಿಂದ ಮೇಲೆದ್ದು ಮಹಾಕೋತ್ತಿತನು ಜೇತನವನ ತಲುಪಿದ. ಅಲ್ಲಿ ಸಾರಿಪುತ್ತನನ್ನು ಸಂಧಿಸಿ ಅವರಿಗೆ ವಂದಿಸಿದ. ಅವರಎದುರು ಕುಳಿತು ಉಭಯ ಕುಶಲೋಪರಿಯನ್ನು ವಿಚಾರಿಸಿ. ಇತ್ತೀಚ್ಚಿಗೆ ತನ್ನನ್ನು ಕಾಡುತ್ತಿದ್ದ ಸಾವು, ವಿನಾಶ, ಶಕ್ತಿ, ಪುನರ್ಜನ್ಮ ಮತ್ತು ಕರ್ಮಸಿದ್ಧಾಂತಗಳ ಬಗ್ಗೆ ಇದ್ದ ಸಂಶಯವನ್ನು ತಿಳಿಸುತ್ತಾ ಹೀಗೆ ಪ್ರಶ್ನಿಸತೊಡಗಿದ:

'' ಪೂಜ್ಯರೇ, ಧ್ಯಾನದಿಂದ ನಾವು ಏನನ್ನು ನೀಗಿಕೊಳ್ಳಬಹುದು? ಏನನ್ನು ಪಡೆದುಕೊಳ್ಳಬಹುದು ?''

'' ಸಹೋದರ, ಲಾಲಸೆ, ಕೆಡುಕು, ಜಡತೆ, ಚಿಂತೆ ಮತ್ತು ಸಂಶಯವನ್ನು ನೀಗಿಸಿಕೊಳ್ಳಬಹುದು. ಅವಲೋಕನ, ಚಿಂತನೆ, ಉತ್ಸಾಹ, ಸಂತೃಪ್ತಿ ಮತ್ತು ಹೃದಯವು ಮನಸ್ಸಿನಲ್ಲಿ ನೆಲೆ ನಿಲ್ಲುವುದನ್ನು ಪಡೆಯಬಹುದು.''

'' ಪೂಜ್ಯರೇ, ಪಂಚೇಂದ್ರಿಯಗಳಿಗೆ ಇರುವ ಪರಮ ಆಧಾರವೇನು ? ಪಂಚೇಂದ್ರಿಯಗಳ ಉಪಯೋಗ ಪಡೆಯುವವರು ಯಾರು ? ''

'' ಸಹೋದರ, ದೃಷ್ಟಿ ಶ್ರೋತ, ಘ್ರಾಣ, ರಸ ಮತ್ತು ಸ್ಪರ್ಶ ಇವುಗಳಿಂದ ಪಂಚೇಂದ್ರಿಯ ಕೂಡಿದೆ. ಪಂಚೇಂದ್ರಿಯವು ಪ್ರತಿಯೊಂದು ತನ್ನದೇ ಆದ ಸ್ವಂತಿಕೆ. ಪ್ರತ್ಯೇಕ ಕ್ಷೇತ್ರ, ಕ್ರಿಯಾ ವಿಸ್ತಾರ ಮತ್ತು ವಿಭಿನ್ನವೂ ಆಗಿದೆ. ಇದರ ಉಪಯೋಗವನ್ನು ಪಡೆಯುವುದು ಮನಸ್ಸು ಮಾತ್ರ'

'ಗುರುದೇವಾ, ಅದು ಹೇಗೆ?'

'ಎಲೈ ಸಹೋದರ, ಶೀಲವುಳ್ಳ ವ್ಯಕ್ತಿಯ ಕೈಯಿನ ಖಡ್ಗವು ಮನುಷ್ಯನನ್ನು ಅಪಾಯದಿಂದ ರಕ್ಷಿಸುತ್ತದೆ.'

'ಗುರುದೇವಾ, ಅದು ಹೇಗೆ?'

'ಎಲೈ ಸಹೋದರ, ಪ್ರಜ್ಞೆಯೊಂದಿಗೆ ಶೀಲವಿಲ್ಲದ ವ್ಯಕ್ತಿಯ ಕೈಯಿನ ಖಡ್ಗವು ವಿಚಾರವಿಲ್ಲದೆ, ವಿವೇಚನೆ ಇಲ್ಲವೆ ಕೊಲೆಗೂ ಬಳಕೆ ಯಾಗಬಹುದು. ಆದ್ದರಿಂದಲೇ ಪ್ರಜ್ಞೆಗಿಂತ ಶೀಲ ಮೊದಲೆಂದದ್ದು!'

'ಗುರುದೇವಾ, ಪ್ರಜ್ಞೆಎಂದರೆ ಏನು

ಎಲೈ ಸಹೋದರ, ಅದು ವಿಚಾರ, ವಿವೇಕ, ವಿವೇಚನೆ, ಸತ್ಯಾಸತ್ಯತೆಯ ನೆಲೆಗಟ್ಟಿನ ಮೇಲೆ ನಿಂತ ಸರಿಯಾದ ಆಲೋಚನೆ ಮತ್ತು ಅಜ್ಞಾನದಿಂದ ವಿಮೋಚನೆ ಇದುವೇ ಪ್ರಜ್ಞೆ. ಈಗ ಅರ್ಥವಾಯಿತೆ ಜ್ಞಾನಕ್ಕಿಂತ ಏಕೆ ಶೀಲಕ್ಕೆ ಬಾರೀ ಮಹತ್ವ ಕೊಟ್ಟೆ ಎಂಬುದು.

ಗುರುದೇವಾ, ಸರಿಯಾದ ಜ್ಞಾನದ ಬಳಕೆ ಏನನ್ನು ಅವಲಂಭಿಸಿರಬೇಕು

ಎಲೈ ಸಹೋದರಃ ಮನುಷ್ಯನ ಶೀಲವನ್ನು ಅವಲಂಭಿಸಿರಬೇಕು

ಗುರುದೇವಾ, ಬದುಕಿನಲ್ಲಿ ಶೀಲವನ್ನು ಹೊರತುಪಡಿಸಿದರೆ?

ಎಲೈ ಸಹೋದರ, ಜ್ಞಾನಕ್ಕೆ ಬೆಲೆ ಇಲ್ಲ, ನೆಲೆ ಇಲ್ಲ, ಸ್ಥಿರವಿಲ್ಲ. ಬದುಕು ಕಡುಕನ ಕೈಗೆ ಸಿಕ್ಕ ಕುರಿಯಂತಾಗುತ್ತದೆ. ಆದ್ದರಿಂದಲೇ ಈ ಪ್ರಪಂಚದಲ್ಲಿ ಶೀಲಕ್ಕೆ ಸರಿಸಾಟಿ ಅನ್ಯವಿಲ್ಲ ಅದುವೇ ಆದಿ, ಆಶ್ರಯ. ಒಳಿತಿನ ಜನನಿ, ಬದುಕಿನ ಪ್ರಥಮ ಅಂಗ. ಆದ್ದರಿಂದಲೇ ಪ್ರತಿಯೊಬ್ಬರು ತಮ್ಮ ಬದುಕಿನಲ್ಲಿ ಶೀಲವನ್ನು ಅಂಗೀಕರಿಸಿ, ಆಚರಿಸಿ ಮತ್ತು ಪರಿಶುದ್ಧ ಗೊಳಿಸಬೇಕು.

ಗುರುದೇವಾ, ಬದುಕಿನ ಪರಿಪೂರ್ಣತೆಗೆ ಪ್ರಜ್ಞೆ ಮತ್ತು ಶೀಲವೇ ಅಂತಿಮ ಸಾಧನೆಯೇ.

ಎಲೈ ಸಹೋದರ, ಅಗತ್ಯ ಮತ್ತು ಆದ್ಯತೆ ಅಷ್ಟೇ. ಅದರೊಂದಿಗೆ ಕರುಣೆ ಮತ್ತು ಮೈತ್ರಿ ಕೂಡಿ ಮಹತ್ವವಾದದ್ದು. ಬದುಕಿನ ಪರವೂರ್ಣತೆಗೆ ಏಕತೆ ಮತ್ತು ಭಿನ್ನತೆಯೊಂದಿಗೆ ಸಮಗ್ರತೆಯೂ ಮತ್ತು ಸಮ್ಯಕ್ ದೃಷ್ಠಿಯೂ ಅಗತ್ಯ ಬುದ್ಧನ ಈ ಬೋಧನೆಯಿಂದ ಪ್ರಭಾವಿತನಾದ ಆ ಭಿಕ್ಷುವು ತನ್ನ ಗುರುವಿಗೆ ಕೈ ಜೋಡಿಸಿ ತಲೆಬಾಗಿಸಿ ನಮನ ಸಲ್ಲಿಸಿದಃ

'' ಹೌದು ಗುರುದೇವಾ, ನೀನೇ ಪರಿಪೂರ್ಣ ! ನಿನ್ನ ವಿಚಾರ ಶೀಲತೆಯೇ ವಿನೂತನವಾದದ್ದು !! ನಿನ್ನ ಮುನ್ನೋಟ ಅಮರ ಸತ್ಯಗಳ ನೆಲೆಬೀಡು, ವಂದನೆಯು ತಂದೆ !'' ಎಂದ. □

ಧ್ಯಾನದ ಲಾಭ ನಷ್ಟ

ಪೂಜ್ಯರೇ, ಪಂಚೇಂದ್ರಿಯಗ ಶಕ್ತಿ ಸಾಮ ರ್ಥ್ಯಗೇಳು ಯಾವುದನ್ನು ಅವಲಂಭಿಸಿದೆ ?

''ಸಹೋದರ, ಚೈತನ್ಯವನ್ನು

ಪೂಜ್ಯರೇ, ಉಷ್ಣತೆಯನ್ನು ಪೂಜ್ಯರೇ ಚೈತ'ನ್ಯವು ಯಾವುದನ್ನು ಅವಲಂಭಿಸಿದೆ ? ''

''ಪೂಜ್ಯರೇ, ಉಷ್ಣತೆಯು ಯಾವು ದನ್ನು ಅವಲಂಭಿಸಿದೆ ? ''

''ಸಹೋದರ, ಚೈತನ್ಯವನ್ನು''

ಪೂಜ್ಯರೇ, ಇದಕ್ಕೊಂದು ದೃಷ್ಟಾಂತ ವನ್ನು ಕೊಟ್ಟು ವಿವರಿಸಿ.

ಸಹೋದರ, ಒಂದು ದೀಪದಲ್ಲಿ ಬೆಳಕು ಜ್ವಾಲೆಯನ್ನು ತೋರಿಸುತ್ತದೆ. ಆ ಜ್ವಾಲೆಯು ಬೆಳಕನ್ನು ತೋರಿ ಸುತ್ತದೆ. ಅದರಂತೆಯೇ ಚೈತನ್ಯವು ಉಷ್ಣತೆಯನ್ನು ಅವ ಲಂಭಿಸಿದೆ ಮತ್ತು ಉಷ್ಣತೆಯು ಚೈತನ್ಯ ವನ್ನು ಅವ ಲಂಭಿಸಿದೆ

'ಪೂಜ್ಯರೇ, ಒಂದು ನಿರ್ಜೀವಿ ಮರದ ದಿಮ್ಮಿ ಯಂತೆ ದೇಹವನ್ನು ಎಸೆದಾಗ ಅದರಿಂದ ಹೊರ ಉಳಿಯುವ ಪದಾರ್ಥಗಳ್ಯಾವುವು? ''

'' ಸಹೋದರ, ಚೈತನ್ಯ ಉಷ್ಣತೆ ಮತ್ತು ಪ್ರಜ್ಞೆ ''

'' ಪೂಜ್ಯರೇ,ಮನುಷ್ಯ ಸತ್ತ ನಂತರ ಏನಾಗುತ್ತದೆ?

'' ಸಹೋದರರೇ, ಮನುಷ್ಯ ಸತ್ತ ನಂತರ ದೇಹದ ಶಕ್ತಿ ಮಾತು, ಮನಸ್ಸು, ಚೈತನ್ಯ, ನಿಷ್ಕ್ರಿಯೆ ಆಗುತ್ತದೆ. ಜಡವಾಗುತ್ತದೆ. ಉಷ್ಣತೆಯು ತಣ್ಣಗಾಗುತ್ತದೆ. ಇಂದ್ರಿಯಗಳ ಶಕ್ತಿ ಸಾಮರ್ಥ್ಯಗಳು ಇಲ್ಲವಾಗುತ್ತವೆ.''

'' ಪೂಜ್ಯರೇ, ಸತ್ತ ಮನುಷ್ಯನಿಗೂ ಸಮಾಧಿ ಸ್ಥನಾದ ಬಿಕ್ಕುವಿಗೂ ಇರುವ ವ್ಯತ್ಯಾಸವೇನು ?

'' ಸಹೋದರ, ಸಮಾಧಿಸ್ಥನಾದ ಭಿಕ್ಷುವಿ ನಲ್ಲಿ ಉಸಿರಾಟ, ಅವಲೋಕನ ಮತ್ತು ಪ್ರತ್ಯಕ್ಷಣಗಳು ನಿಷ್ಕ್ರಿಯೇ ಮತ್ತು ಜಡವಾಗಿರುತ್ತದೆ. ಆದರೆ ಚೈತನ್ಯವು ಉಳಿ+.ದಿರುತ್ತದೆ. ಉಷ್ಣತೆಯು ತುಂಬಿರುತ್ತದೆ. ಜೊತೆಗೆ ಶಕ್ತಿ ಸಾಮ ರ್ಥ್ಯಗಳು ಜಾಗೃತವಾಗಿರುತ್ತವೆ''

'' ಪೂಜ್ಯರೇ, ಮನುಷ್ಯ ಸತ್ತ ಮೇಲೆ ಆತ್ಮದ ಸ್ವರೂಪವೇನು ? ''

'' ಸಹೋದರ, ಆ ಬಗ್ಗೆ ತಥಾಗತ ಏನನ್ನು ಹೇಳಿಲ್ಲ. ಜೀವಿ ಅಶಾಶ್ವತ. ಆದರೆ ಜೀವನ ಪ್ರವಾಹ ನಿರಂತರ. ಅದನ್ನು ಅವ ಲಂಭಿಸಿದ ಶಕ್ತಿ ಪ್ರವಾ ಹವೂ ನಿರಂತರ.

'ಪೂಜ್ಯರೇ, ಹಾಗಾ ದರೆ ಪುನರ್ಜನ್ಮದ ಸ್ವರೂಪವೇನು? ಅದರ ಅಸ್ಥಿತ್ವ ವೇನು?

'ಸಹೋದರ, ಆ ಬಗ್ಗೆ ತಥಾಗತ ಏನನ್ನು ಸ್ಪಷ್ಟವಾಗಿ ಹೇಳಿಲ್ಲ ಎಂದ.

ಆಗ ಮಹಾ ಕೋತ್ತಿತನು ಪೂಜ್ಯ ಸಾರಿಪುತ್ತರನ್ನು ಉದ್ದೇಶಿಸಿಃ

'ಪೂಜ್ಯರೇ, ತಾವು ಗುರುವಿಗೆ ತಕ್ಕ ಶಿಷ್ಯರೇ ಸರಿ ! ಇಹವೇ ಸಾಕೆಂದ ತಥಾಗತರ ಪರಿಕಲ್ಪನೆ ಅಪಾರ ದೂರದೃಷ್ಟಿ ಉಳ್ಳದ್ದು! ಪರದ ಗೊಡವೆಗೆ ಕೈ ಹಾಕದ ಆ ಮಹಾತ್ಮ ನಿಜಕ್ಕೂ ಮನುಕುಲದ ಉದ್ಧಾರಕನೇ ಸರಿ! ಎಂದ' □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣ ವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದ ರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

'SAMVADA' Kannada Monthly. AUGUST.2005 RNI-KAR KAN/2002/9246 CPMG/KA/BGW-706/2003-05

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ

ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ

ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ